

GOVERNMENT OF TAMILNADU

ಕನ್ನಡ ಸಿರಿ

KANNADA READER

ಒಂಬತ್ತನೆಯ ತರಗತಿ

IX STANDARD

Department Of School Education

Untouchability is Inhuman and a Crime

9th_Kannada_Reader Term I.indd 1 29-01-2019 16:29:30

Government of Tamil Nadu

First Edition - 2018

Revised Edition - 2019

Reprint - 2020, 2021, 2022, 2023, 2024

(Published under New Syllabus)

Content Creation

State Council of Educational Research and Training

© SCERT 2018

Printing & Publishing

Tamil NaduTextbook and Educational Services Corporation

www.textbooksonline.tn.nic.in

9th_Kannada_Reader Term I.indd 2 29-01-2019 16:29:30



ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ಪುಟಾಣಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.



9th_Kannada_Reader Term I.indd 3 29-01-2019 16:29:30

ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯಹೇ!
ಭಾರತ ಭಾಗ್ಯವಿಧಾತ!!
ಪಂಜಾಬ ಸಿಂಧು ಗುಜರಾತ ಮರಾಠಾ!
ದ್ರಾವಿಡ ಉತ್ಕಲ ವಂಗ!!
ವಿಂಧ್ಯ ಹಿಮಾಚಲ ಯಮುನಾ ಗಂಗಾ!
ಉಚ್ಚಲ ಜಲಧಿ ತರಂಗಾ!!
ತವಶುಭ ನಾಮೆ ಜಾಗೇ!
ತವಶುಭ ಆಶಿಷಮಾಗೆ!!
ಗಾಹೇ ತವ ಜಯ ಗಾಥಾ!!
ಜನ ಗಣ ಮಂಗಳ ದಾಯಕ ಜಯಹೇ!
ಭಾರತ ಭಾಗ್ಯ ವಿಧಾತಾ!!
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯ ಹೇ!!

–ಮಹಾಕವಿ ರವೀಂದ್ರನಾಥ್ ಠಾಗೂರ್.

ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮವು ಪಂಜಾಬ್ , ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ (ಒರಿಸ್ಸಾ) ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ. ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ ಜಯವಾಗಲಿ! ಜಯವಾಗಲಿ! ಜಯವಾಗಲಿ!



9th_Kannada_Reader Term I.indd 4 29-01-2019 16:29:30

ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕಿಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಪಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ
ತಮಿಳಣಂಗೇ!
ಉನ್ ಸೀರಿಳಮ್ಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿ–
ರುವ ದಕ್ಷನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ
ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ
ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ
ಮೈಮರೆತು ಹಾಡಿ ಹೊಗಳುತ್ತೇನೆ.

9th_Kannada_Reader Term I.indd 5 29-01-2019 16:29:31



ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.



9th_Kannada_Reader Term I.indd 6 29-01-2019 16:29:31

ನಾಡ ಗೀತೆ

ಜಯ ಹೇ ಕರ್ನಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು

9th_Kannada_Reader Term I.indd 7 29-01-2019 16:29:31

ಅಭಿಜಾತ ಭಾಷೆಯಾದ ಕನ್ನಡ ಭಾಷೆಯ ಹಿರಿಮೆ ಗರಿಮೆಗಳನ್ನು ಇಂದಿನ ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವ ಉದ್ದೇಶದಿಂದ ಈ ಪಠ್ಯ ಪುಸ್ತಕ ವಿನ್ಯಾಸಗೊಳಿಸಲಾಗಿದೆ.



ಪ್ರತಿಯೊಂದು ಘಟಕವನ್ನು ಆಸಕ್ತಿಯಿಂದ ಆಲಿಸಲು ಗದ್ಯಲೋಕ, ಕಾವ್ಯ ಕಣಜ ಮುಂತಾದ ಉಪ ಪಠ್ಯ ಶೀರ್ಷಿಕೆ.



ಕಾಲದ ವೇಗಕ್ಕೆ ಹೊಂದಾಣಿಕೆಯಾಗುವಂತೆ ಅಂತರ್ಜಾಲದ ಮೂಲಕ



ಪಠ್ಯ ವಿಷಯದ ಅರ್ಥವನ್ನು ವಿವರಿಸುವ ಅಮೂಲ್ಯವಾದ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲು ಜ್ಞಾನ ಸಂಪಾದನೆ



ವಿಷಯಕ್ಕೆ ಪೂರಕವಾದ ಘಟಕದ ಪ್ರಾರಂಭದಲ್ಲಿ ಕಲಿಕಾ ಉದ್ದೇಶಗಳು

ಸೃಜನಶೀಲ ಅಧ್ಯಾಪಕರಿಗೂ, ಕ್ರಿಯಾ ಶೀಲ ಮನಸ್ಸಿನ ವಿದ್ಯಾರ್ಥಿಗಳಿಗೂ...



ಕಲಿತ ವಿಷಯಗಳ ಕುರಿತಾದ ಚಿಂತನೆಗಳನ್ನು ಕಲಿಕಾ ಚಟುವಟಿಕೆಗಳ ಮೂಲಕ



ಘಟಕದ ಕೊನೆಯಲ್ಲಿ ಇನ್ನೂ ಹೆಚ್ಚು ಕಲಿಯಬೇಕೆಂಬ ಉತ್ಸಾಹದೊಂದಿಗೆ

ವಿದ್ಯಾರ್ಥಿಗಳು ಸ್ವಯಂ ಮೌಲ್ಯಮಾಪನಕ್ಕೆ ಪೂರಕವಾಗುವಂತೆ ಮೌಲ್ಯೀಕರಿಸುವುದು.



ಚಿಂತನಾ ಸಾಮರ್ಥ್ಯಗಳಿಸಲು, ಚಟುವಟಿಕೆಯ ಮಾರ್ಗದಲ್ಲಿ ಜೀವಿನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಲು, ಓದಿ ಆನಂದಿಸಲು, ಭಾಷಾ ಕ್ರೀಡೆಯಲ್ಲಿ ತೊಡಗಲು



ಸಾಹಿತ್ಯದ ಮೂಲಕ ಭಾಷಾ ಕಲಿಕೆ, ತಾಂತ್ರಿಕವಾಗಿ ಮನನ ಮಾಡಲು ಭಾಷಾ ಪ್ರೌಢಿಮೆಯನ್ನು ಗಳಿಸುವುದು



ಮಾತೃ ಭಾಷೆಯೊಂದಿಗೆ ಇತರ ವಿಷಯಗಳನ್ನು, ಹೊಸ ಅರ್ಥಗಳನ್ನು ಗ್ರಹಿಸಲು, ತರ್ಕದಲ್ಲಿ ತೊಡಗಲು... ಈ ಪಠ್ಯ ಪುಸ್ತಕವು ಹೊಸ ವಿನ್ಯಾಸ ಹಾಗೂ ವರ್ಣರಂಜಿತವಾಗಿದ್ದು ಪರಿವಿಡಿಯೊಂದಿಗೆ ಈ ಪಠ್ಯ ಪುಸ್ತಕವು ನಿಮ್ಮ ಕೈಗಳಲ್ಲಿ....

9th_Kannada_Reader Term I.indd 8 29-01-2019 16:29:31

ಪರಿವಿಡಿ

ಘಟಕ	ಶೀರ್ಷಿಕೆ		ಪುಟ ಸಂಖ್ಯೆ
1. ಸವಿಗನ್ನಡ			
	ಗದ್ಯ ವಿಹಾರ	: ಕನ್ನಡವೇ ನನ್ನ ಧರ್ಮ	02
	ಕಾವ್ಯ ಕಣಜ	: ಕಾಣಿಕೆ *	05
	ಉಪಪಠ್ಯ	: ರಾಜರಾಜ ಚೋಳನ್	08
	ವ್ಯಾಕರಣ	: ಕನ್ನಡ ವರ್ಣಮಾಲೆ	10
2. ಪ್ರಕೃತಿ			
	ಗದ್ಯ ವಿಹಾರ	: ವನ್ಯಜೀವಿಗಳು ಮತ್ತು ಪರಿಸರ	12
	ಕಾವ್ಯ ಕಣಜ	: ಹಸುರು	17
	ಪೂರಕ ಪದ್ಯ	: ಭರವಸೆ	21
	ಉಪಪಠ್ಯ	: ಪರಿಸರ ಮಾಲಿನ್ಯ	23
	ವ್ಯಾಕರಣ	: ನಾಮಪದಗಳು	28
3. ಜನಪದ			
	ಗದ್ಯ ವಿಹಾರ	: ಜನಪದ ಕಲೆಗಳ ವೈಭವ	30
	ಕಾವ್ಯ ಕಣಜ	: ಹಾಡುವುದೆಂದರೆ	37
	ಉಪಪಠ್ಯ	: ಪ್ರೇಕ್ಷಣೀಯ ಸ್ಥಳ – ಮಧುರೈ	41
	ವ್ಯಾಕರಣ	: ಲಿಂಗ–ವಚನ	45
4. ವಿಜ್ಞಾನ–ತಂತ್ರಜ್ಞಾನ			
	ಗದ್ಯ ವಿಹಾರ	: ಯಂತ್ರೋಪಕರಣಗಳು – ಉಪಯೋಗಗಳು	47
	ಕಾವ್ಯ ಕಣಜ	: ಅಂತರಿಕ್ಷ ಮಾಂತ್ರಿಕ	53
	ಉಪಪಠ್ಯ	: ಮೈಕೆಲ್ ಫ್ಯಾರಡೆ	56
	ವ್ಯಾಕರಣ	: ಸಂಧಿಗಳು	59

9th_Kannada_Reader Term I.indd 9 29-01-2019 16:29:31

5. ಅರಿವು – ಶಿಕ್ಷಣ			
	ಗದ್ಯ ವಿಹಾರ	: ಮಹಿಳಾ ಸಾಧಕಿಯರು	62
	ಕಾವ್ಯ ಕಣಜ	: ಪುಟ್ಟ ವಿಧವೆ	68
	ಪೂರಕ ಪದ್ಯ	: ಅರಿವೇ ದೇವರು!	72
	ಉಪಪಠ್ಯ	: ಪುಸ್ತಕ ಸಂಸ್ಕೃತಿ	73
	ವ್ಯಾಕರಣ	: ಸಂಯುಕ್ತಾಕ್ಷರ, ನಾಮಪದ	78
6. ನಾಗರಿಕತೆ–ವೃತ್ತಿ–ವಾಣಿಜ್ಯ			
	ಗದ್ಯ ವಿಹಾರ	: ವಾಣಿಜ್ಯ ವೈಶಿಷ್ಟ್ಯ	81
	ಕಾವ್ಯ ಕಣಜ	: ಗಿರಣಿ ವಿಸ್ತಾರ ನೋಡಮ್ಮ *	86
	ಪೂರಕ ಪದ್ಯ	: ಕಾಡಿದ್ದರೆ ನಾಡು	90
	ಉಪಪಠ್ಯ	: ಸಂತೆ	91
	ವ್ಯಾಕರಣ	: ಸಂಸ್ಕೃತ ಸಂಧಿಗಳು	94
7. ಕಲೆ–ಸೌಂದರ್ಯಮೀಮಾಂಸೆ–ಆಧುನಿಕತೆ			
	ಗದ್ಯ ವಿಹಾರ	: ಪಲ್ಲವ ಶಿಲ್ಪಕಲೆ	97
	ಕಾವ್ಯ ಕಣಜ	: ರಮ್ಯ ಸೃಷ್ಟಿ	103
	ಪೂರಕ ಪದ್ಯ	: ಶುಕಭಾಷಿಣಿ	107
	ಉಪಪಠ್ಯ	: ಬೇವಿನ ಮರ	108
	ವ್ಯಾಕರಣ	: ಸಮಾಸಗಳು	113
8. ಜೀವನ ಸಾರ್ಥಕ್ಯ			
	ಗದ್ಯ ವಿಹಾರ	: ವಿಜಯನಗರ ಸಾಮ್ರಾಜ್ಯ: ಉದಯ–ಉನ್ನತಿ–ಅವನತಿ	117
	ಕಾವ್ಯ ಕಣಜ	: ಕರುಣಾಳು ರಾಘವನಲ್ಲಿ ತಪ್ಪಿಲ್ಲ	124
	ಪೂರಕ ಪದ್ಯ	: ಕೋರಿಕೆ	128
	ಉಪಪಠ್ಯ	: ನಮ್ಮ ಸೈನಿಕರು	131
	ವ್ಯಾಕರಣ	: ಅಲಂಕಾರ	136

9th_Kannada_Reader Term I.indd 10 29-01-2019 16:29:31

9. ನೀತಿ–ತತ್ವ–ಚಿಂತನೆ			
	ಗದ್ಯ ವಿಹಾರ	: ಡಾ॥ ಅಂಬೇಡ್ಕರರ ಚಿಂತನೆ	140
	ಕಾವ್ಯ ಕಣಜ	: ಆನಂದಮಯ ಈ ಜಗಹೃದಯ *	144
	ಪೂರಕ ಪದ್ಯ	: ನೀತಿ	148
	ಉಪಪಠ್ಯ	: ಮಗಳಿಗೆ ಹುಟ್ಟಿದ ಹಬ್ಬದ ಪತ್ರ	150
	ವ್ಯಾಕರಣ	: ಛಂದಸ್ಸು	155
10. ಮಾನವೀಯತೆ–ವ್ಯಕ್ತಿತ್ವ			
	ಗದ್ಯ ವಿಹಾರ	: ನಿನ್ನಲ್ಲೂ ಅದ್ಭುತ ಶಕ್ತಿಯಿದೆ	159
	ಕಾವ್ಯ ಕಣಜ	: ನೆನಪಿದೆಯೆ ನಿನಗೆ?	164
	ಪೂರಕ ಪದ್ಯ	: ಭೂಮಿತಾಯಿ	167
	ಉಪಪಠ್ಯ	: ಮಾಸ್ತಿಯವರ ಮಾತೃಪ್ರೇಮ	168
	ವ್ಯಾಕರಣ	: ಕಾಲ ಸೂಚಕ ಕ್ರಿಯಾಪದ	171

* ಈ ಚಿಹ್ನೆಯು ಕಂಠಪಾಠ ಮಾಡಬೇಕಾದ ಪದ್ಯಗಳನ್ನು ಸೂಚಿಸುತ್ತದೆ.

9th_Kannada_Reader Term I.indd 11 29-01-2019 16:29:32

ಕನ್ನಡ ಸಿರಿ

ಒಂಬತ್ತನೆಯ ತರಗತಿ

9th_Kannada_Reader Term I.indd 12 29-01-2019 16:29:32

ಘಟಕ
ಒಂದು

ಸವಿಗನ್ನಡ



9th_Kannada_Reader Term I.indd 1 29-01-2019 16:29:32

ಘಟಕ ಒಂದು

ಗದ್ಯ ವಿಹಾರ

ಕನ್ನಡವೇ ನನ್ನ ಧರ್ಮ

–ಜಯದೇವಿ ತಾಯಿ ಲಿಗಾಡೆ

ಯಾವ ಜನಾಂಗದಲ್ಲಿ ತಾನು ಹುಟ್ಟಿದ ಮಣ್ಣಿನ ಬಗ್ಗೆ ಘನವಾದ ಅಭಿಮಾನ ಮತ್ತು ಅದನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವಿದೆಯೋ ಆ ಜನಾಂಗ ಜೀವಂತ ಜನಾಂಗವೆನ್ನಿಸಿಕೊಳ್ಳುತ್ತದೆ. ಅಖಂಡ ಗಿರಿಪಂಕ್ತಿ, ಮಂಜುಳ ನದ–ನದಿಗಳು, ವಿಸ್ತಾರವಾದ ಬಯಲು ಸೀಮೆ, ನಿಡಿದಾದ ಕರಾವಳಿ ಪ್ರದೇಶ, ನಿರಂತರ ಸಮೃದ್ಧಿಯ ತವರಾಗಿರುವ ಮಲೆನಾಡು, ಕಲ್ಪವೃಕ್ಷದ ಪ್ರತೀಕವಾಗಿ ಸದಾ ಹಸಿರು ಮೈಮುರಿವ ಕಾಡು ಕಣಿವೆ, ಶ್ರೇಷ್ಠ ವಸ್ತುಗಳಾದ ಚಿನ್ನ, ಶ್ರೀಗಂಧ, ತೆಂಗು, ಬಾಳೆ, ಮಾವು, ಮಲ್ಲಿಗೆ, ಪಕ್ಷಿ ಸಂಕುಲ, ವಿವಿಧ ಭಾಷೆ, ವೇಷ, ಕಲೆ, ಶಿಲ್ಪ, ಸಂಗೀತ, ದರ್ಶನ, ಅನುಭಾವ ಸಂಪತ್ತು ಇವೆಲ್ಲವುಗಳಿಂದ ಶ್ರೀಮಂತ ಸಂಸ್ಕೃತಿಗೆ ಸಾಕಾರವಾದ ಈ ನಾಡನ್ನು ಪ್ರೀತಿಸದವರು ಯಾರು? ತಲೆತಲಾಂತರದಿಂದ ಶೌರ್ಯ ಸಾಹಸಗಳನ್ನು ತೋರಿ, ಔದಾರ್ಯ ವೈಶಾಲ್ಯಗಳನ್ನು ಉಸಿರಾಗಿಸಿಕೊಂಡು ಉನ್ನತ ಸಾಧನೆಗಳನ್ನು ಮೆರೆದ ತುಂಬು ಜೀವನವನ್ನು ಬದುಕಿ ಬಾಳಿದ ನಮ್ಮ ಪ್ರಾಚೀನ ಕನ್ನಡಿಗರು, ಇಂದು ಇದನ್ನು ಸರ್ವ ರೀತಿಯಿಂದಲೂ ರಕ್ಷಿಸಿಕೊಳ್ಳಲು ಭದ್ರಬಾಹುಗಳನ್ನು ಪಡೆಯಬೇಕು. ನಮ್ಮ ನಾಡನ್ನು ರಕ್ಷಿಸಿಕೊಂಡು ಅಖಂಡ ಭಾರತವನ್ನೂ ಸಮೃದ್ಧಗೊಳಿಸುವ ರಾಷ್ಟ್ರ ಪ್ರೇಮವನ್ನು, ರಾಷ್ಟ್ರಧರ್ಮವನ್ನು ಬೆಳೆಸಿಕೊಳ್ಳಬೇಕು.

ಸ್ವಾತಂತ್ರ್ಯವನ್ನು ದೊರಕಿಸುವುದು ಮೊದಲ ಘಟ್ಟ. ಆದರೆ ಅದನ್ನು ಉಳಿಸಿ, ಬೆಳೆಸಿಕೊಳ್ಳುವುದು ಅದಕ್ಕಿಂತ ಮಹತ್ವದ ಘಟ್ಟವಾಗಿದೆ. ಆ ಹೊಣೆಗಾರಿಕೆಯನ್ನು ನಿರ್ವಹಿಸುವ ಉನ್ನತ ಆದರ್ಶಗಳ ಪರಿಸರವನ್ನು ಒದಗಿಸುವಲ್ಲಿ ನಾವು ಅಸಮರ್ಥರಾಗಿದ್ದೇವೆ. ಅದರ ಫಲವಾಗಿಯೇ ನಮ್ಮ ರಾಷ್ಟ್ರೀಯ ಜೀವನವು ಅಸ್ತವ್ಯಸ್ತಗೊಂಡಿದೆ. ದುಡಿಮೆಯಿಲ್ಲದ ಸಂಬಳವನ್ನು ಬಯಸುವುದು, ಸತತ ಅಭ್ಯಾಸ



ಪರಿಶ್ರಮಗಳಿಲ್ಲದೆ ಸಾಹಿತ್ಯಕ್ಕೆ ಗಂಟು ಬೀಳುವುದು, ಅರ್ಹತೆಗಳಿಲ್ಲದೆ ಅಧಿಕಾರಕ್ಕೆ ಹಾತೊರೆಯುವುದು, ಚಾರಿತ್ರ್ಯವಿಲ್ಲದೆ ಗೌರವಗಳಿಗೆ ಕೈಚಾಚುವುದು ಇವೆಲ್ಲ ಎಲ್ಲೆಂದರಲ್ಲಿ ಇಂದು ಕಂಡು ಬರುತ್ತಿವೆ. ಇದರ ಪರಿಣಾಮವಾಗಿ ಪ್ರಜಾಪ್ರಭುತ್ವಕ್ಕೆ ಭಾರವಾಗುವಷ್ಟು ಶಿಸ್ತು, ಸಂಘಟನೆಗಳಿಲ್ಲದೆ ರಾಜಕೀಯ ಪಕ್ಷಗಳು ಹುಟ್ಟಿಕೊಂಡಿವೆ.

ಪಂಡಿತರ ಹಿಡಿತದಲ್ಲಿ, ಪಂಡಿತರ ಮೆಚ್ಚುಗೆಗಾಗಿ ರಚಿತವಾದ ಸಾಹಿತ್ಯ ಜನತೆಯಿಂದ ದೂರ ಸರಿದಾಗ, ಜನಹಿತವನ್ನು ಅಲಕ್ಷಿಸಿದಾಗ ಜನ ಬದುಕಬೇಕೆಂದು ಸಂಪ್ರದಾಯ ಪರಂಪರೆಗಳ ವಿರುದ್ಧ ಬಂಡೆದ್ದ ಸಾಹಿತ್ಯಕ ಆಂದೋಲನಗಳು ರಾಷ್ಟ್ರದ ಎಲ್ಲ ಕಡೆಯೂ ಆಗಾಗ ನಡೆದಿವೆ. ಕನ್ನಡ ನಾಡಿನಲ್ಲಿ ಜರುಗಿದ ಅಂತಹ ಆಂದೋಲನಗಳು ಮಾನವ ಕಲ್ಯಾಣವನ್ನಲ್ಲದೆ ಬೇರೆ ಯಾವ ಮನ್ನಣೆಯನ್ನೂ ಬಯಸಲಿಲ್ಲ. ಈ ಆಂದೋಲನದ ಅನುಭವಿಗಳು ಜನ ಸಾಮಾನ್ಯರಾಗಿದ್ದು

9th_Kannada_Reader Term I.indd 2 29-01-2019 16:29:32

ಬದುಕಿ, ತಮ್ಮ ಜೀವನವನ್ನು ಹಸನು ಮಾಡಿಕೊಂಡು, ನಡೆದಂತೆ ನುಡಿದು, ಅನುಭವದ ಅಡುಗೆಯನ್ನು ಎಲ್ಲರಿಗೂ ಉಣಬಡಿಸಿದ್ದರು. ಸಕಲ ಜೀವಾತ್ಮರಿಗೆ ಲೇಸನೇ ಬಯಸಿದರು. ಇದು ಸಾಹಿತ್ಯದಲ್ಲಿ ನಡೆದ ಜನಸಾಮಾನ್ಯರ ಆಂದೋಲನ. ಇದರಲ್ಲಿ ಜನಪದ ಸಾಹಿತ್ಯವು ಕನ್ನಡ ನಾಡಿನ ಮನೆಮನೆಗಳಲ್ಲಿ ಬಾಯಿಂದ ಬಾಯಿಗೆ ಉಳಿದುಕೊಂಡು ಬಂದಿದೆ. ಜಾನಪದ ಕಲೆ, ಸಾಹಿತ್ಯಗಳನ್ನು ಹುಡುಕಿ ಸಂಗ್ರಹಿಸಿ, ಸಂಪಾದಿಸುವ ಕಾರ್ಯ ಭರದಿಂದ ನಡೆದಿದೆ. ಈ ಜನಪದ ಸಾಹಿತ್ಯ ಅನುಭವ ಪದಗಳ ಆಳವಾದ ಅಧ್ಯಯನ ಮಾಡಿ ಅದರ ಸತ್ವವನ್ನು ಜೀರ್ಣಿಸಿಕೊಂಡರೆ ಇಂದಿಗೂ ನಮ್ಮ ಜನ, ಅದರಲ್ಲೂ ವಿಶೇಷವಾಗಿ ಮಹಿಳೆಯರು ಜನಪದ ಸಾಹಿತ್ಯವನ್ನು ಸಹಜವಾಗಿ ನಿರ್ಮಿಸಬಲ್ಲರು. ಮಹಿಳೆಯರು ತಮಗೆ ಸಿಕ್ಕ ಸದವಕಾಶಗಳನ್ನೂ, ಸಮಯವನ್ನೂ ವ್ಯರ್ಥವಾಗಿ ಕಳೆದುಕೊಳ್ಳಬಾರದು.

ಇಂದು ಕನ್ನಡ ಭಾಷೆ ಮತ್ತೊಂದು ಸವಾಲನ್ನು ಎದುರಿಸಬೇಕಾಗಿದೆ. ಅಪಾರವಾಗಿ ಬೆಳೆಯುತ್ತಿರುವ ವೈಜ್ಞಾನಿಕ ತಾಂತ್ರಿಕ ಕೃಷಿಕ ವೈದ್ಯಕೀಯ ಜ್ಞಾನವನ್ನು ಅಳವಡಿಸಿಕೊಂಡು, ಕನ್ನಡದಲ್ಲಿ ಗ್ರಂಥ ರಚಿಸಿ ನಮ್ಮ ಭಾಷೆ ಯಾವುದೇ ವಿಧದ ಜ್ಞಾನವನ್ನು ವ್ಯಕ್ತಗೊಳಿಸುವ ಕಸುವನ್ನು ಪಡೆದಿದೆ ಎನ್ನುವುದನ್ನು ತೋರಿಸಿಕೊಡಬೇಕಾಗಿದೆ. ಸಂಸ್ಕೃತ ಮೊದಲುಗೊಂಡು ಭಾರತದ ವಿವಿಧ ಪ್ರಾದೇಶಿಕ ಭಾಷೆಯ ಶಬ್ದಗಳು ನಮಗೆ ಒಗ್ಗುವಂತಿದ್ದರೆ ಅವುಗಳಿಗೂ ಕನ್ನಡದ ಅಚ್ಚೊತ್ತಿ ಬಳಸಬೇಕು; ಭಾಷೆಯನ್ನು ಬಲಿಸಬೇಕು. ಈ ದಿಸೆಯಲ್ಲಿ ಈಗಾಗಲೇ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಕಾರ್ಯ ಪ್ರವೃತ್ತವಾಗಿವೆ. ಇದು ಸಂತೋಷದ ವಿಷಯ. ಕನ್ನಡ ಭಾಷೆಯ ಮೇಲೆ ಯಾವುದೇ ರೀತಿಯ ಭಾರವನ್ನು ಹಾಕಿದರೂ ಅದನ್ನು ತಡೆದುಕೊಳ್ಳಬಲ್ಲುದು ಎನ್ನುವ ಭರವಸೆ ಇದೆ.

ನಾವು ಜನತೆಗೆ ಮೊದಲು ಅನ್ನ, ಅರಿವೆ, ಆಸರೆ, ಅಕ್ಷರ, ಔಷಧ – ಈ ಐದೂ ಅವಶ್ಯಕತೆಗಳನ್ನೂ ಪೂರೈಸುವುದರಲ್ಲಿ ಸಮರ್ಥರಾಗದೆ ದೊಡ್ಡ ದೊಡ್ಡ ಮಾತುಗಳನ್ನು ಆಡಿ, ಕೇವಲ ಸಾಹಿತ್ಯಕ ಸಮಸ್ಯೆಗಳನ್ನು ಎದುರಿಸುವುದು ಸಾಧ್ಯವಿಲ್ಲ. ಸಾಹಿತಿಯಾದವರಿಗೆ ಸಾಮಾಜಿಕ ಪ್ರಜ್ಞೆ ಇರಬೇಕು. ನಮ್ಮ ಕವಿತೆಗಳ ಹಿಂದೆ ಸಂವೇದನೆಗಳಿರುವಂತೆ ಹಸಿದವನ ಹೊಟ್ಟೆಯಲ್ಲಿ ವೇದನೆ ಇದೆ. ಆ ವೇದನೆಯನ್ನು ಅವನು ಹೊರಗೆಡವಲು ನಾಲ್ಕು ಜನಗಳ ಮುಂದೆ ಹೇಳುವಂತೆ ಆಗಲು ಅಕ್ಷರವೇ ಅಸ್ತ್ರವಾಗಬೇಕು. ಈ ಸಮಸ್ಯೆಯನ್ನು ಕುರಿತು ಬಹಳಷ್ಟು ಆಲೋಚನೆ ಮಾಡಿದಾಗಲೆಲ್ಲಾ ನನಗೆ ಈ ಅನ್ನ ಅಕ್ಷರ ಇತ್ಯಾದಿಗಳನ್ನು ಕುರಿತು ಅವುಗಳ ನಿವಾರಣೆಯಲ್ಲಿ ನಮ್ಮ ಸಾಹಿತ್ಯವು ಎಷ್ಟರ ಮಟ್ಟಿಗೆ ಮೂಡುತ್ತದೆ, ಸಾಹಿತಿಗಳ ಕವಿಗಳ ಸಾಹಿತ್ಯ ಪರಿಷತ್ತುಗಳ ಸಾಂಸ್ಕೃತಿಕ ಸಂಘ–ಸಂಸ್ಥೆಗಳ ಧಾರ್ಮಿಕ ಮಠಮಾನ್ಯಗಳ ಹೊಣೆಯು ದೊಡ್ಡದಾಗಿದೆ. ಸರ್ಕಾರವು ಸಾಧಿಸಲಾರದ್ದನ್ನು ಸಾಹಿತಿಗಳು, ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿ, ಕೈಗೆತ್ತಿಕೊಂಡು ಮುನ್ನಡೆದು ಸರ್ಕಾರವನ್ನು ಜೊತೆಯಲ್ಲಿ ಕೊಂಡೊಯ್ದು ಒಂದು ಸಾಂಸ್ಕೃತಿಕ ಹಾಗೂ ಬೌದ್ಧಿಕ ಆಂದೋಲನವನ್ನು ಹಮ್ಮಿಕೊಳ್ಳಬೇಕು.

ಕೃತಿ–ಕರ್ತೃ ಪರಿಚಯ



ಆಧುನಿಕ ಕನ್ನಡ ಕವಯಿತ್ರಿಯರಲ್ಲಿ ಜಯದೇವಿ ತಾಯಿ ಲಿಗಾಡೆಯವರು ಪ್ರಸಿದ್ಧರು. ಅವರು ಸಾಮಾಜಿಕ ಜೀವನದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಶ್ರೀಮತಿ ಲಿಗಾಡೆಯವರು ನಿರಾಶ್ರಿತರಿಗೆ ಆಶ್ರಯ ಕೊಟ್ಟಿದ್ದರಿಂದ 'ತಾಯಿ' ಎಂದೇ ಪ್ರಸಿದ್ಧರಾದರು.

ಇವರ ಮಾತೃಭಾಷೆ ಮರಾಠಿಯಾದರೂ ಸ್ವತಃ ಕನ್ನಡ ಕಲಿತು, ಕಾವ್ಯ ರಚಿಸುವಷ್ಟು ಪರಿಣತಿ ಪಡೆದರು. ಜಯಗೀತೆ, ತಾಯಿಯ ಪದಗಳು, ಸಿದ್ಧರಾಮಪುರಾಣ, ಅರಿವಿನಾಗರದಲ್ಲಿ ಮೊದಲಾದ ಕೃತಿಗಳನ್ನು ಕನ್ನಡದಲ್ಲೂ; ಬಸವ ದರ್ಶನ, ಮಹಾಯೋಗಿನಿ, ಬಸವ ವಚನಾಮೃತ ಮೊದಲಾದ ಕೃತಿಗಳನ್ನು ಮರಾಠಿಯಲ್ಲೂ ರಚಿಸಿದ್ದಾರೆ. ತ್ರಿಪದಿಯಲ್ಲಿ 'ಸಿದ್ಧರಾಮ ಪುರಾಣ' ಎನ್ನುವ ಬೃಹತ್ ಕಾವ್ಯವನ್ನು ರಚಿಸಿರುವ ಅಗ್ಗಳಿಕೆ ಲಿಗಾಡೆ ಅವರದು. ಈ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

9th_Kannada_Reader Term I.indd 3 29-01-2019 16:29:33

1974ರಲ್ಲಿ ಮಂಡ್ಯದಲ್ಲಿ ನಡೆದ 48ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಅಧ್ಯಕ್ಷರಾಗಿದ್ದರು.

ಪದಗಳ ಅರ್ಥ

ಮಂಜುಳ ರವ–ಇಂಪಾದ ಧ್ವನಿ, ಮಧುರವಾದ ಧ್ವನಿ; ನದ–ಗಂಡುನದಿ; ಅಣಿಮಾಡು–ಸಿದ್ಧಮಾಡು; ಬಿರುಸು–ತೀಕ್ಷ್ಣತೆ; ಕಸು–ಶಕ್ತಿ, ಸಾಮರ್ಥ್ಯ; ಅಲಕ್ಷಿಸು–ಉದಾಸೀನ ಮಾಡು; ಆಂದೋಲನ–ಚಳವಳಿ, ಹೋರಾಟ; ಹೊಣೆ–ಜವಾಬ್ದಾರಿ; ವಿಕಾಸ–ಬೆಳವಣಿಗೆ, ವೇದನೆ–ದುಃಖ, ನೋವು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಯಾವುದು ಜೀವಂತ ಜನಾಂಗ ಎನ್ನಿಸಿಕೊಳ್ಳುತ್ತದೆ?
2. ಕನ್ನಡ ನಾಡನ್ನು ಪ್ರೀತಿಸಲು ಕಾರಣವಾದ ಅಂಶಗಳು ಯಾವುವು?
3. ರಾಷ್ಟ್ರೀಯ ಜೀವನ ಅಸ್ತವ್ಯಸ್ತಗೊಳ್ಳಲು ಕಾರಣವೇನು?
4. ಕನ್ನಡ ನಾಡಿನಲ್ಲಿ ನಡೆದ ಆಂದೋಲನಗಳು ಏನನ್ನು ಬಯಸಿದವು?
5. ಯಾವುದರಿಂದ ಸಾಹಿತ್ಯಕ ಸಮಸ್ಯೆಗಳನ್ನು ಎದುರಿಸುವುದು ಸಾಧ್ಯವಿಲ್ಲ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವಲ್ಲಿ ಲಿಗಾಡೆಯವರು ಕೊಡುವ ಸಲಹೆಗಳಾವುವು?
2. ಯಾವುದರಿಂದ ಜನಪದ ಸಾಹಿತ್ಯದಂತಹ ಹೊಸ ಲೋಕವೇ ಹೊರಬರುತ್ತದೆ?
3. ಕನ್ನಡ ಕಟ್ಟುವ ಮಾರ್ಗದಲ್ಲಿ ಯಾರ ಯಾರ ನೆರವನ್ನು ಲಿಗಾಡೆಯವರು ಅಪೇಕ್ಷಿಸುತ್ತಾರೆ?

ಭಾಷಾಭ್ಯಾಸ

1. ಈ ಕೆಳಕಂಡ ಪದಗಳನ್ನು ಬಹುವಚನ ರೂಪಕ್ಕೆ ಬದಲಾಯಿಸಿ.

ನದಿ, ಕನ್ನಡಿಗ, ಸೋದರ, ಹೋರಾಟ, ತಾಯಿ, ಅಣ್ಣ

2. ಈ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

ಆಕಾಶ, ಮುಕ್ತ, ಸಂತೋಷ, ಧರ್ಮ, ಅಕ್ಷರ, ವಿಸ್ತಾರ, ವರ್ಷ, ಸಾವಿರ.

3. ಈ ಕೆಳಕಂಡ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿ.

ಕೈವಶ, ಸದವಕಾಶ, ಕೃಷಿಕ, ಮುನ್ನಡೆ, ಅಸ್ತವ್ಯಸ್ತ.

4. ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಪದ್ಯದಿಂದ ಆರಿಸಿ ಬರೆಯಿರಿ.

ಗಿರಿ, ರವ, ವೃಕ್ಷ, ಸನ್ಮಾನ, ಪ್ರಜ್ಞೆ, ಆಂದೋಲನ.

5. ಈ ಕೆಳಕಂಡ ಪದಗಳನ್ನು ಬಿಡಿಸಿ ಸಂಧಿಗಳ ಹೆಸರುಗಳನ್ನು ತಿಳಿಸಿ.

ಜೀವಾತ್ಮ, ತಲಾಂತರ, ದಾಸ್ಯವನ್ನು, ಅಚ್ಚೊತ್ತಿ, ಇತ್ಯಾದಿ.

ಚಟುವಟಿಕೆ

1. ವಿವಿಧ ಕವಿಗಳ, ಲೇಖಕರ ಪ್ರಬಂಧಗಳನ್ನು ಸಂಗ್ರಹಿಸಿ ಓದಿರಿ.
2. ಕನ್ನಡ ಅಭಿಮಾನವನ್ನು ಸಾರುವ ಕವಿತೆಗಳನ್ನು ತರಗತಿಯಲ್ಲಿ ಹಾಡಿ.

ಉದಾಹರಣೆಗೆ,

ಪರ್ಪಂಚ್ ಇರೋತನಕ

ಕನ್ನಡ ಪದಗೋಳ್ ನುಗ್ಲಿ

– ಜಿ.ಪಿ.ರಾಜರತ್ನಂ

9th_Kannada_Reader Term I.indd 4 29-01-2019 16:29:33

ಕಾವ್ಯ ಕಣಜ

ಘಟಕ ಒಂದು

ಕಾಣಿಕೆ

–ಬಿ.ಎಂ.ಶ್ರೀಕಂಠಯ್ಯ

ಮೊದಲು ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿ ನುಡಿದು
ಗೆಳೆಯರೊಡನೆ ಬೆಳೆದು ಬಂದ
ಮಾತದಾವುದು
ನಲ್ಲೆಯೊಲವ ತೆರೆದು ತಂದ
ಮಾತದಾವುದು.

ಸವಿಯ ಹಾಡ ಕಥೆಯ ಕಟ್ಟಿ
ಕಿವಿಯಲೆರೆದು ಕರುಳ ತಟ್ಟಿ
ನಮ್ಮ ಜನರು ನಮ್ಮ ನಾಡು
ಎನಿಸಿತಾವುದು
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು.

ಕನ್ನಡ ನುಡಿ ನಮ್ಮ ಹೆಣ್ಣು
ನಮ್ಮ ತೋಟದಿನಿಯ ಹಣ್ಣು
ಬಳಿಕ ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು.

ಪಡುವ ಕಡಲ ಹೊನ್ನ ಹೆಣ್ಣು
ನನ್ನ ಜೀವದುಸಿರ ಕಣ್ಣು
ನಲಿಸಿ–ಕಲಿಸಿ ಮನವನೊಲಿಸಿ
ಕುಣಿಸುತಿರುವಳು
ಒಮ್ಮೆ ಇವಳು, ಒಮ್ಮೆ ಅವಳು
ಕುಣಿಸುತಿರುವಳು.

ಹೀಗೆ ನನಗೆ ಹಬ್ಬವಾಗಿ
ಇನಿಯರಿಬ್ಬರನ್ನು ತೂಗಿ
ಇವಳ ಸೊಬಗನವಳು ತೊಟ್ಟು
ನೋಡಬಯಸಿದೆ
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ.

ಬಲ್ಲವರಿಗೆ ಬೆರಗೆ ಇಲ್ಲಿ ?
ಅರಿಯದವರು ನಾಲ್ವರಲ್ಲಿ
ಕಳೆಯ ಬೆಳಕು ಹೊಳೆಯಲಂದು
ದಣಿದು ಹೋದೆನು
ಬಡವನಳಿಲು ಸೇವೆಯೆಂದು
ಧನ್ಯನಾದೆನು.

9th_Kannada_Reader Term I.indd 5 29-01-2019 16:29:33

ಕವಿ–ಕಾವ್ಯ ಪರಿಚಯ



'ಶ್ರೀ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು ಬಿ.ಎಂ.ಶ್ರೀಕಂಠಯ್ಯನವರು. 'ಕಾಣಿಕೆ' ಕವನವನ್ನು ಇವರ 'ಇಂಗ್ಲಿಷ್ ಗೀತೆಗಳು' ಎನ್ನುವ ಕವನ ಸಂಗ್ರಹದಿಂದ ಆರಿಸಲಾಗಿದೆ. ಇವರು ನಾಗಮಂಗಲ ತಾಲೂಕಿನ ಬೆಳ್ಳೂರು ಗ್ರಾಮದಲ್ಲಿ 1884ರಲ್ಲಿ ಜನಿಸಿದರು. ಇವರು ಆಧುನಿಕ ಕನ್ನಡ ಸಾಹಿತ್ಯದ ಆದ್ಯ ಪ್ರವರ್ತಕರು. ಹಲವು ಭಾಷೆಗಳನ್ನು ಅರಿತ ಅದ್ವಿತೀಯ ಪಂಡಿತರು. ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿಯೂ, ಗೌರವ ಕನ್ನಡ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಮೈಸೂರು ಮಹಾರಾಜರು 'ರಾಜಸೇವಾಸಕ್ತ' ಎನ್ನುವ ಬಿರುದನ್ನು ನೀಡಿ ಗೌರವಿಸಿದರು. ಇವರು ಹಲವು ವರ್ಷಗಳ ಕಾಲ ಬಿಡುವಿಲ್ಲದೆ ಕನ್ನಡ ನಾಡಿನಲ್ಲಿ ಸಂಚರಿಸಿ ಕನ್ನಡಿಗರಲ್ಲಿ ಕನ್ನಡದ ಬಗ್ಗೆ ಕ್ರಿಯಾಶೀಲ ಅಭಿಮಾನವನ್ನು ಮೂಡಿಸಲು ಶ್ರಮಿಸಿ, 1946ರಲ್ಲಿ ನಿಧನರಾದರು.

ಪ್ರಮುಖವಾಗಿ ಇವರ 'ಇಂಗ್ಲಿಷ್ ಗೀತೆಗಳು' ಆಂಗ್ಲ ಭಾಷೆಯ ಪ್ರಸಿದ್ಧ ಕವಿಗಳ ಕವಿತೆಗಳ ಭಾವಾನುವಾದ. ಇಂಗ್ಲಿಷ್ ಗೀತೆಗಳು ಕವನ ಸಂಗ್ರಹದಲ್ಲಿರುವ ಇವರ ಸ್ವತಂತ್ರ ಕವನಗಳಲ್ಲಿ 'ಕಾಣಿಕೆ'ಯೂ ಒಂದು. ಆಂಗ್ಲರ ಭಾವಗೀತೆಯ ಶೈಲಿಗೆ ಮಾರು ಹೋದ ಶ್ರೀಯವರು ಕನ್ನಡ ಕಾವ್ಯದಲ್ಲೂ ವಿವಿಧ ಛಂದಸ್ಸುಗಳನ್ನು ತರಲು ಪ್ರಯತ್ನಿಸಿದರು. ಆಂಗ್ಲ ಹಾಗೂ ಕನ್ನಡ ಸಾಹಿತ್ಯಗಳೊಳಗಿನ ಸಂಬಂಧ ಸೌಹಾರ್ದಯುತವಾಗಿರಬೇಕೆಂಬುದೇ ಇವರ 'ಕಾಣಿಕೆ' ಕವನದ ಆಶಯ. ಸಾಹಿತ್ಯ ಸೇವೆಯಲ್ಲಿ ತಮಗುಂಟಾದ ಧನ್ಯತಾ ಭಾವವನ್ನು ಶ್ರೀಯವರು ಈ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ಪದಗಳ ಅರ್ಥ

ಲಲ್ಲೆ–ಪ್ರೀತಿ; ಕೆಳೆಯ–ಗೆಳೆಯ; ಒಲವು–ಪ್ರೀತಿ, ಆಸೆ, ಆಸಕ್ತಿ; ಇನಿಯ ಹಣ್ಣು–ಮಧುರವಾದ ಹಣ್ಣು, ಸಿಹಿಯಾದ ಹಣ್ಣು; ಸೊಬಗು–ಸೌಂದರ್ಯ; ಹೊನ್ನು–ಚಿನ್ನ; ತೊಡಿಗೆ–ವೇಷ ಭೂಷಣ, ಆಭರಣ; ಪಡುವ–ಪಡುವಣ, ಪಶ್ಚಿಮ ದಿಕ್ಕು; ಇನಿಯರು–ಅತ್ಯಂತ ಪ್ರೀತಿ ಪಾತ್ರರು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮೊದಲು ತಾಯ ಹಾಲ ಕುಡಿದು ನುಡಿದ ಭಾಷೆ ಯಾವುದು?
2. ನಮ್ಮ ಜನರು–ನಮ್ಮ ನಾಡು ಎನಿಸುವುದು ಯಾವುದರಿಂದ?
3. ಪಡುವ ಕಡಲ ಹೊನ್ನ ಹೆಣ್ಣು ಯಾವುದು?
4. ಕವಿ ಏನನ್ನು ಹಾಡ ಬಯಸಿದರು?
5. ಕವಿಗೆ ಧನ್ಯತಾ ಭಾವ ಯಾವಾಗ ಮೂಡಿತು?

9th_Kannada_Reader Term I.indd 6 29-01-2019 16:29:34

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಾತೃಭಾಷೆಯ ಮಹತ್ವವನ್ನು ಕುರಿತು ಬಿ.ಎಂ.ಶ್ರೀ.ಯವರ ಅಭಿಪ್ರಾಯವೇನು?
2. ಕನ್ನಡ ಭಾಷೆ ಹಾಗೂ ಆಂಗ್ಲ ಭಾಷೆಗಳನ್ನು ಬಿ.ಎಂ.ಶ್ರೀಯವರು ಹೋಲಿಸಿರುವ ರೀತಿಯ ಬಗ್ಗೆ ಬರೆಯಿರಿ.
3. 'ಶ್ರೀ'ಯವರ ಜೀವನ ಧನ್ಯವಾಗಲು ಕಾರಣವೇನು?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. 'ಕಾಣಿಕೆ' ಕವನದ ಆಶಯವೇನು? ನಿಮ್ಮ ಮಾತುಗಳಲ್ಲಿ ವಿವರಿಸಿ.

ಭಾಷಾಭ್ಯಾಸ

1. ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.

1. ಪ್ರೀತಿ x
2. ಸವಿ x
3. ಬೆಳಕು x
4. ಬಡವ x

2. ಈ ಕೆಳಕಂಡ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಹಬ್ಬವಾಗಿ
ನಲ್ಲೆಯೊಲವ
ಜೀವದುಸಿರು
ಲಲ್ಲೆಯಿಂದ

3. ಈ ಪದ್ಯದಲ್ಲಿ ಬಂದಿರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿ.

ಉದಾಹರಣೆಗೆ : ಕುಡಿದು–ನುಡಿದು.

1. ಕಟ್ಟಿ –
2. ಹೆಣ್ಣು –
3. ನಾಡು –
4. ಹಬ್ಬವಾಗಿ –
5. ಇಲ್ಲಿ –

4. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಗೆಳೆಯ
ಕಥೆ
ನಮ್ಮ ನಾಡು
ಕಡಲು

ಚಟುವಟಿಕೆ

1. ಈ ಪದ್ಯವನ್ನು ತರಗತಿಯಲ್ಲಿ ರಾಗವಾಗಿ ಹಾಡಿ.
2. ಬಿ.ಎಂ.ಶ್ರೀ.ಯವರ ಇಂಗ್ಲಿಷ್ ಗೀತೆಗಳು ಕೃತಿಯನ್ನು ಸಂಗ್ರಹಿಸಿ ಓದಿ.



9th_Kannada_Reader Term I.indd 7 29-01-2019 16:29:34

ಉಪಪಠ್ಯ

ಘಟಕ ಒಂದು

ರಾಜರಾಜ ಚೋಳನ್

ಭಾರತದ ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದಲ್ಲಿ ತಿರುಪತಿಯವರೆಗೆ ಇರುವ ಪ್ರದೇಶವನ್ನು ಹಿಂದಿನ ಕಾಲದಿಂದಲೂ ತಮಿಳುನಾಡು ಎಂದು ಕರೆಯುತ್ತಿದ್ದರು. ಪ್ರಾಚೀನ ಕಾಲದಲ್ಲಿ ತಮಿಳುನಾಡು ಮೂರು ಭಾಗಗಳಾಗಿತ್ತು. ಆ ಮೂರು ಭಾಗಗಳನ್ನೂ ಮೂರು ಅರಸುಮನೆತನಗಳು ಆಳುತ್ತಿದ್ದವು. ತಮಿಳು ಮೂವೇಂದರ್ ಎಂದು ಪ್ರಸಿದ್ಧವಾದ ಅರಸು ಮನೆತನಗಳಿಗೆ ಚೇರ, ಚೋಳ, ಪಾಂಡ್ಯ ಎಂದು ಹೆಸರು. ಇವರು ಆಳುತ್ತಿದ್ದ ಭಾಗಗಳು ಚೇರ ಮಂಡಲಂ, ಚೋಳ ಮಂಡಲಂ ಹಾಗೂ ಪಾಂಡ್ಯ ಮಂಡಲಂ ಎಂದು ಹೆಸರು ಪಡೆದಿದ್ದವು. ಈ ಮೂರು ಅರಸು ಮನೆತನಗಳಲ್ಲಿ ಚೋಳರ ಇತಿಹಾಸ ವಿಶೇಷವಾದುದು. ಚೋಳರು ಎಷ್ಟು ಪ್ರಾಚೀನರೆಂಬುದನ್ನು ತಿಳಿಯಲಾಗಿಲ್ಲ. ಇವರು ಉರೈಯೂರು, ತಂಜಾವೂರು, ಗಂಗೈಕೊಂಡ ಚೋಳಪುರಂ ಮುಂತಾದ ಊರುಗಳನ್ನು ತಮ್ಮ ರಾಜಧಾನಿಯಾಗಿಸಿಕೊಂಡು ಆಡಳಿತ ನಡೆಸಿದ್ದಾರೆ. ಚೋಳರ ಧ್ವಜ ಮತ್ತು ಲಾಂಛನಗಳಲ್ಲಿ ಹುಲಿಯ ಚಿತ್ರ ಇರುತ್ತದೆ.

ಚೋಳ ಪರಂಪರೆಯಲ್ಲಿ ಬಹು ಸಾಮರ್ಥ್ಯಶಾಲಿಯೂ, ರಾಜ್ಯಾಡಳಿತ ನಿಪುಣನೂ ಆದ ಅರಸ ರಾಜರಾಜ ಚೋಳನ್. ರಾಜರಾಜನ ತಂದೆ ಪರಾಂತಕ ಚೋಳನ್. ತಾಯಿ ಮಹಾರಾಣಿ ವಾನವನ್ ಮಾದೇವಿ. ಇವನಿಗೆ ತಂದೆ–ತಾಯಿ ಇಟ್ಟ ಹೆಸರು ಅರುಳ್‌ಮೊಳಿ ವರ್ಮ. ಇವನು ಪಟ್ಟಕ್ಕೆ ಬಂದ ಮೂರೇ ವರ್ಷಗಳಲ್ಲಿ ಚೇರರನ್ನೂ, ಪಾಂಡ್ಯರನ್ನೂ ಸೋಲಿಸಿದನು. ಮುಂದೆ ರಾಜರುಗಳ ರಾಜ ಎಂಬ ಅರ್ಥದಲ್ಲಿ ಅವನನ್ನು ರಾಜರಾಜ ಚೋಳ ಎಂದು ಕರೆಯಲಾಯಿತು.



ರಾಜರಾಜ ಚೋಳನು ಕ್ರಿ.ಶ.1010ರಲ್ಲಿ ಕಟ್ಟಿಸಿದ ಬೃಹದೇಶ್ವರ ದೇವಾಲಯಕ್ಕೆ ರಾಜರಾಜೇಶ್ವರ ದೇವಾಲಯ ಎಂಬ ಹೆಸರೂ ಇದೆ. ಚೋಳರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ ಕಡೆಯಲ್ಲೆಲ್ಲಾ ದ್ರಾವಿಡ ಶೈಲಿಯಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಬೃಹದೇಶ್ವರ ದೇವಾಲಯವು ಬೃಹದಾಕಾರದ್ದಾಗಿದೆ. ಕೆತ್ತನೆ ಕೆಲಸ ಬಲು ಸೊಗಸಾಗಿದೆ. ಪ್ರಪಂಚದಲ್ಲೇ ಅದ್ಭುತವಾಗಿರಬೇಕೆಂಬ ದೃಷ್ಟಿಕೋನದಿಂದ ಈ ಶಿವ ಮಂದಿರವನ್ನು ಬಹು ಶ್ರಮವಹಿಸಿ ಈತ ಕಟ್ಟಿಸಿದ್ದಾನೆ. ಇದರ ವಿನ್ಯಾಸ 500 ಅಡಿ ಎತ್ತರವಿದೆ. ಪ್ರವೇಶ ದ್ವಾರದಲ್ಲಿರುವ ದ್ವಾರಪಾಲಕ ವಿಗ್ರಹಗಳು ಸಂದರ್ಶಕರನ್ನು ಬಹಳ ಆಕರ್ಷಿಸುತ್ತವೆ. ದೇವಾಲಯದ ಒಳಗಿನ ಮಾಡದಲ್ಲಿ ವೈಶಿಷ್ಟ್ಯಪೂರ್ಣವಾದ ವರ್ಣಚಿತ್ರಗಳನ್ನು

9th_Kannada_Reader Term I.indd 8 29-01-2019 16:29:34

ಬಿಡಿಸಲಾಗಿದೆ. ಶಿಖರ ಭಾಗ ಅಥವಾ ವಿಮಾನ ಈ ದೇವಾಲಯದ ಅತ್ಯಂತ ಮುಖ್ಯವಾದ ಅಂಗವಾಗಿದೆ. ಒಂದೇ ಕಲ್ಲಿನಲ್ಲಿ ಕೆತ್ತಲಾಗಿರುವ ಈ ವಿಮಾನವನ್ನು ಮೇರು ವಿಮಾನ ಅಥವಾ ದ್ರಾವಿಡ ವಿಮಾನ ಎಂದು ಕರೆಯುತ್ತಾರೆ. ಹನ್ನೆರಡು ಅಡಿ ಎತ್ತರದ ಬಹುದೊಡ್ಡ ನಂದಿಯೂ ಈ ದೇವಾಲಯದಲ್ಲಿದೆ.

ರಾಜರಾಜನನ್ನು ಸಾಕಿ ಬೆಳೆಸಿದವಳು ಅವನ ಅಕ್ಕ ಕುಂದವ್ವೈ ಪಿರಾಟ್ಟಿ. ಆಕೆ ರಾಜರಾಜನಿಗೆ ಚಿಕ್ಕಂದಿನಿಂದ ಶಿವಭಕ್ತಿ, ಧರ್ಮಚಿಂತನೆಗಳನ್ನು ಬೋಧಿಸಿ ಬೆಳೆಸಿದ್ದಳು. ಆದುದರಿಂದ ತನ್ನ ಆಡಳಿತ ಕಾಲದಲ್ಲಿ ಶೈವ ಧರ್ಮದ ಬೆಳವಣಿಗೆಗೂ, ಶಿಲ್ಪ, ಚಿತ್ರ, ಸಂಗೀತ ಕಲೆಗಳ ಅಭಿವೃದ್ಧಿಗೂ ಕಾರಣನಾದನು.

ರಾಜ ರಾಜನು ತನ್ನ ಸಾಮ್ರಾಜ್ಯವನ್ನು ಬಹಳವಾಗಿ ವಿಸ್ತರಿಸಿಕೊಂಡು ಆಡಳಿತ ನಡೆಸಿದನು. ಇವನು ದಕ್ಷಿಣ ಭಾರತವನ್ನೆಲ್ಲ ಗೆದ್ದು, ಹಿಮಾಲಯದವರೆಗೂ ದಂಡೆತ್ತಿ ಹೋದನೆಂದು ಇತಿಹಾಸ ತಿಳಿಸುತ್ತದೆ. ಇಂದಿನ ಶ್ರೀಲಂಕೆಯನ್ನೂ ರಾಜರಾಜನು ಗೆದ್ದು ತನ್ನ ಆಡಳಿತಕ್ಕೊಳಪಡಿಸಿಕೊಂಡಿದ್ದನು.

ತಂಜಾವೂರು ದೇವಾಲಯ ಇಂದಿಗೂ ಪ್ರಾಚೀನ ತಮಿಳು ಸಂಸ್ಕೃತಿಯನ್ನು ಜಗತ್ತಿಗೆ ತಿಳಿಸುತ್ತಾ ನಿಂತಿದೆ. ಇಂತಹ ದೇವಾಲಯವನ್ನು ಕಟ್ಟಿಸಿದ ರಾಜರಾಜನನ್ನು ನಾವೆಂದೂ ಮರೆಯಲಾಗದು.



ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಪ್ರಾಚೀನ ಕಾಲದಲ್ಲಿ ತಮಿಳುನಾಡು ಎಲ್ಲಿಂದ ಎಲ್ಲಿಯವರೆಗೆ ಹಬ್ಬಿತ್ತು ?
2. ಪ್ರಾಚೀನ ಕಾಲದಲ್ಲಿ ತಮಿಳುನಾಡು ಎಷ್ಟು ಭಾಗಗಳಿಂದ ಕೂಡಿತ್ತು ?
3. ಪ್ರಾಚೀನ ತಮಿಳುನಾಡನ್ನು ಆಳುತ್ತಿದ್ದ ರಾಜಮನೆತನಗಳಾವುವು ?
4. ಮೂರು ಅರಸು ಮನೆತನಗಳಲ್ಲಿ ಯಾರ ಇತಿಹಾಸ ವಿಶೇಷವಾದುದು ?
5. ಚೋಳರ ಧ್ವಜದ ಲಾಂಛನ ಯಾವುದು ?
6. ತಂಜಾವೂರಿನ ದೇವಸ್ಥಾನವನ್ನು ಯಾರು ಕಟ್ಟಿಸಿದರು ?

II. ಕೆಳಗಿನ ಪ್ರಶ್ನೆಗಳಿಗೆ ಐದು ವಾಕ್ಯಗಳಲ್ಲಿ ಉತ್ತರಿಸಿ.

1. ಪ್ರಾಚೀನ ತಮಿಳುನಾಡಿನ ಇತಿಹಾಸವನ್ನು ತಿಳಿಸಿರಿ.
2. ರಾಜರಾಜನ ಬಾಲ್ಯವನ್ನು ಹಾಗೂ ಅವನ ಪರಾಕ್ರಮವನ್ನು ತಿಳಿಸಿ.
3. ತಂಜಾವೂರಿನ ದೇವಸ್ಥಾನವನ್ನು ಕುರಿತು ಬರೆಯಿರಿ.
4. ರಾಜರಾಜನ ಅಕ್ಕನ ಪ್ರಭಾವ ಹೇಗೆ ಅವನ ಅಭಿವೃದ್ಧಿಗೆ ಸಹಾಯವಾಯಿತು ?

III. ಹೊಂದಿಸಿ ಬರೆಯಿರಿ.

1. ರಾಜರಾಜನ ತಂದೆ – ಚೇರ, ಚೋಳ, ಪಾಂಡ್ಯ
2. ರಾಜರಾಜನ ತಾಯಿ – ಪರಾಂತಕ ಚೋಳನ್
3. ರಾಜರಾಜನ ಅಕ್ಕ – ವಾನವನ್ ಮಾದೇವಿ
4. ಮೂವೇಂದರು – ಕುಂದವ್ವೈ ಪಿರಾಟ್ಟಿ

9th_Kannada_Reader Term I.indd 9 29-01-2019 16:29:35

ವ್ಯಾಕರಣ

ಘಟಕ ಒಂದು

ಕನ್ನಡ ವರ್ಣಮಾಲೆ

ಮಾನವ ತನ್ನ ಮನಸ್ಸಿನ ಭಾವನೆಗಳನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತಾನೆ. ಆಡಿದ, ಆಡಬೇಕಾದ ಮಾತುಗಳನ್ನು ಲಿಪಿಯ (ಲಿಖಿತ) ರೂಪಕ್ಕಿಳಿಸುವುದೇ ಬರವಣಿಗೆ. ಪದ ಮತ್ತು ಪದಗಳ ಸಂಬಂಧವನ್ನು ಖಚಿತವಾಗಿ ತಿಳಿಸುವುದೇ ವ್ಯಾಕರಣಶಾಸ್ತ್ರ. ಆದ್ದರಿಂದ ಭಾಷೆಯನ್ನು ಕಲಿಯುವವರು ಆ ಭಾಷೆಯ ವ್ಯಾಕರಣವನ್ನು ಕಲಿಯುವುದು ಉತ್ತಮ. ಕ್ರಿಯಾತ್ಮಕ ವ್ಯಾಕರಣದ ಕಲಿಕೆಯಿಂದ ಭಾಷೆಯನ್ನು ಸ್ಪಷ್ಟ ಹಾಗೂ ನಿಖರವಾಗಿ ಬಳಸಲು ಸಾಧ್ಯ.

ಕನ್ನಡ ವರ್ಣಮಾಲೆಯನ್ನು ಪ್ರಧಾನವಾಗಿ ಸ್ವರ, ವ್ಯಂಜನ ಮತ್ತು ಯೋಗವಾಹ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

ರೂಢಿಯಲ್ಲಿರುವ ಒಟ್ಟು ಕನ್ನಡ ಅಕ್ಷರಗಳು – 49

ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು

ವರ್ಣಮಾಲೆ

ಸ್ವರಗಳು–13		**ವ್ಯಂಜನಗಳು–34**			**ಯೋಗವಾಹಗಳು–2**	
ಹ್ರಸ್ವ–6	ದೀರ್ಘ–7	ವರ್ಗೀಯ–25			ಅವರ್ಗೀಯ–9	ಅನುಸ್ವಾರ–1 ವಿಸರ್ಗ–1
		ಅಲ್ಪಪ್ರಾಣ	ಮಹಾಪ್ರಾಣ	ಅನುನಾಸಿಕ		
ಅ	ಆ	ಕ ಗ	ಖ ಘ	ಙ	ಯ	ಂ ಃ
ಇ	ಈ	ಚ ಜ	ಛ ಝ	ಞ	ರ	
ಉ	ಊ	ಟ ಡ	ಠ ಢ	ಣ	ಲ	
ಋ	ೠ	ತ ದ	ಥ ಧ	ನ	ವ	
ಎ	ಏ	ಪ ಬ	ಫ ಭ	ಮ	ಶ	
ಒ	ಐ				ಷ	
	ಓ				ಸ	
	ಔ				ಹ	
					ಳ	

I. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ ?
2. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಬರೆಯಿರಿ.
3. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳನ್ನು ಬರೆಯಿರಿ.
4. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ಅಕ್ಷರಗಳನ್ನು ತಿಳಿಸಿ.
5. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಗಳನ್ನು ಪಟ್ಟಿ ಮಾಡಿ.

9th_Kannada_Reader Term I.indd 10 29-01-2019 16:29:35

ಘಟಕ
ಎರಡು

ಪ್ರಕೃತಿ



9th_Kannada_Reader Term I.indd 11 29-01-2019 16:29:35

ಗದ್ಯ ವಿಹಾರ

ಘಟಕ ಎರಡು

ವನ್ಯಜೀವಿಗಳು ಮತ್ತು ಪರಿಸರ

–ಅ.ಕೃಷ್ಣಸ್ವಾಮಿ



ಮಾನವನು ಪಳಗಿಸಿ, ಸಾಕಿ ಬೆಳೆಸುವ ಜೀವಿಗಳ ಹೊರತಾಗಿ ಉಳಿದೆಲ್ಲಾ ಜೀವಿಗಳನ್ನೂ 'ವನ್ಯಜೀವಿಗಳು' (**Wild Animals**) ಎಂದು ಪರಿಗಣಿಸಬಹುದು. ತಾವೇ ಬೆಳೆದು ಬಾಳುವ ಮೀನುಗಳು ಹಾಗೂ ಇನ್ನಿತರ ಅನೇಕ ಜಲಚರಗಳು, ವಾಯುವಿಹಾರಿಗಳಾದ ಪಕ್ಷಿಗಳು, ಬಾವಲಿಗಳು, ಹಾರುವ ಕೀಟಗಳು, ಭೂಚರಗಳಾಗಿ ಬದುಕು ಸಾಗಿಸುವ ಹುಳುಹುಪ್ಪಟೆಗಳು, ಉಭಯಜೀವಿಗಳು, ಸರೀಸೃಪಗಳು, ನೆಲಪಕ್ಷಿಗಳು, ಸಸ್ತನಿಗಳು... ಇವೆಲ್ಲವೂ ವನ್ಯಜೀವಿಗಳೇ.

ವನ್ಯಜೀವಿಗಳ ನೆಲೆ (Habitat)

ಸಾಮಾನ್ಯವಾಗಿ ನಾಗರಿಕತೆಯ ಮೊದಲು ಆದಿ ಮಾನವನು ವನ್ಯಪ್ರಾಣಿಗಳೊಂದಿಗೆ ಬೆಳೆದು ಬಂದ ಜೀವಿಯಾಗಿದ್ದನು. ನಾಗರಿಕತೆಯ ಮೊದಲ ಹೆಜ್ಜೆ ಕೃಷಿ. ಅಲ್ಲಿಂದ ಅರಣ್ಯಗಳ ಪರಿವರ್ತನೆಗೆ ಪ್ರಾರಂಭವಾಯಿತು. ಹಲವಾರು ಅರಣ್ಯಗಳು ನಾಶವಾಗತೊಡಗಿದವು. ಇದರಿಂದ ವನ್ಯಪ್ರಾಣಿಗಳ ನೈಸರ್ಗಿಕ ನೆಲೆಗಳಿಗೆ ಧಕ್ಕೆಯಾಗತೊಡಗಿತು. ಬೇಟೆಗಾಗಿ, ಆಹಾರಕ್ಕಾಗಿ, ಚರ್ಮಕ್ಕಾಗಿ ಮೃಗಗಳ ನಾಶವಾಗತೊಡಗಿತು. ಆಹಾರಕ್ಕಾಗಿ ಸಸ್ಯಾಹಾರಿ ಪ್ರಾಣಿಗಳ, ಪಕ್ಷಿಗಳ ನಾಶ ಮೊದಲುಗೊಂಡಿತು. ಇವೆಲ್ಲವುಗಳ ಕಾರಣದಿಂದ ಪ್ರಕೃತಿಯ ಸಮತೋಲನದಲ್ಲಿ ಏರುಪೇರಾಗತೊಡಗಿತು. ಅನೇಕ ವನ್ಯಜೀವಿಗಳು ಅಳಿದು ಹೋಗುವ ಪರಿಸ್ಥಿತಿ ಎದುರಾಯಿತು. ಕೆಲವಂತೂ ಅಳಿದೇ ಹೋದವು. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬಂತೆ ಪ್ರಕೃತಿಯ ಕೋಟ್ಯಾನುಕೋಟಿ ವರ್ಷಗಳ ಸಾಧನೆಯ ಫಲದ ವಿಫಲತೆಗೆ ಮಾನವನಿಗೆ ಒಂದು ಶತಮಾನವೂ ಬೇಡವಾಯಿತು.

ಪ್ರಾಣಿ ಜೀವನದಲ್ಲಿ ಎರಡು ಮುಖ್ಯ ಉದ್ದೇಶಗಳಿರುತ್ತವೆ. ಒಂದು : ತಮ್ಮ ಸ್ವಂತ ರಕ್ಷಣೆ. ಇನ್ನೊಂದು : ತಮ್ಮ ವಂಶೋದ್ಧಾರಕ್ಕಾಗಿ ಮರಿಗಳ

9th_Kannada_Reader Term I.indd 12 29-01-2019 16:29:36

ಪಾಲನೆ. ಯಾವ ಜೀವಿಯೂ ತಾನೇ ತಾನಾಗಿ ಜೀವಿಸಲಾಗುವುದಿಲ್ಲ. ತನ್ನ ಜಾತಿಯ ಹಾಗೂ ಪರಜಾತಿಯ ಜೀವಿಗಳೊಂದಿಗೆ ತಾನಿರುವ ಪರಿಸರಕ್ಕೆ ಹೊಂದಿಕೊಂಡು ಬಾಳುವೆ ಮಾಡಬೇಕು. ಈ ವಿಶಾಲ ಸಮೂಹದಲ್ಲಿ ಅನೇಕ ಜೀವಿಗಳು ಅಳಿಯಬಹುದು. ಕೆಲವಾರು ಉಳಿಯಬಹುದು. ಸೋತಲ್ಲಿ ಸತ್ತು, ಬದುಕಿದಲ್ಲಿ ತಮ್ಮ ಸಹನೆ, ಧೈರ್ಯ, ಸ್ಥೈರ್ಯ, ಚರ್ಯೆಗಳಿಂದ ಬಾಳುವೆ ಮಾಡಬೇಕು.



ಒಂದು ಜೀವಿಯು ತನ್ನ ಬದುಕಿನಲ್ಲಿ ಎದುರಿಸಬೇಕಾದ ಸನ್ನಿವೇಶಗಳು ವಿಧವಿಧವಾಗಿರುತ್ತವೆ. ಅದು ಇರುವ ನೆಲೆ, ಬಳಸುವ ಭೂಗುಣ, ನೀರು, ಆಹಾರ ಮತ್ತು ಎದುರಿಸಬೇಕಾದ ರೋಗ ರುಜಿನಗಳು, ಪರಾವಲಂಬಿಗಳು, ಇತರ ಪ್ರಾಣಿಗಳು ಹಾಗೂ ಮಾನವ – ಇವೆಲ್ಲವುಗಳ ಅನುಕೂಲ ಅನಾನುಕೂಲಗಳನ್ನು ಒಟ್ಟುಗೂಡಿಸಿ ಪರಿಸರ ಎಂದು ಪರಿಗಣಿಸಲಾಗಿದೆ. ಅಂತೆಯೇ ಸಸ್ಯಕೂಟ ಹಾಗೂ ಪ್ರಾಣಿರಾಶಿಗಳಲ್ಲಿ ದೀರ್ಘಕಾಲದ ಪರಸ್ಪರ ಆಂತರಿಕ ಸಂಬಂಧ ಬೆಳೆದು ಅವುಗಳಿಗೂ ಅವು ಇರುವ ಪರಿಸರಕ್ಕೂ ಸಂಬಂಧ ಬೆಳೆದು ಈ ಹೊಂದಾಣಿಕೆಯನ್ನು ಜೀವಪರಿಸ್ಥಿತಿಶಾಸ್ತ್ರ(**Ecology**) ಎಂದು ಕರೆಯಲಾಗಿದೆ.

ತಾವಿರುವ ವಾತಾವರಣಕ್ಕೂ ಹೊಂದಿಕೊಂಡು ಇತರ ಪ್ರಾಣಿಗಳೊಂದಿಗೆ ಸಹಜೀವನ ನಡೆಸಲು ಜೀವಿಗಳಲ್ಲಿ ಅನೇಕ ಮಾರ್ಪಾಡುಗಳು (**Adaptations**) ಉಂಟಾಗಿವೆ. ಕೆಲವು ಆದಿಮ (**Primitive**) ಪ್ರಾಣಿಗಳು ತಾವಿರುವ ವಾತಾವರಣಕ್ಕೆ ಮಾತ್ರ ಹೊಂದಿಕೊಳ್ಳಲು ಸಾಧ್ಯವಾದರೆ, ವಿಕಸನದಲ್ಲಿ ಉಚ್ಚ ಮಟ್ಟಕ್ಕೇರಿರುವ ಕೆಲವಾರು ಪ್ರಾಣಿಗಳು ತಮ್ಮ ದೈಹಿಕ ಮಾನಸಿಕ ಬೆಳವಣಿಗೆಗಳಿಂದ ಇನ್ನಿತರ ವಿಧವಿಧವಾದ ವಾತಾವರಣಗಳಿಗೂ ಹೊಂದಿಕೊಂಡು ಬದುಕು ಸಾಗಿಸುವ ಸಾಮರ್ಥ್ಯವನ್ನು ಪಡೆದಿರುತ್ತವೆ. ಈ ರೀತಿ ಯಾವುದೇ ಒಂದು ಜೀವಿ ತನ್ನ ಪರಿಸರದಲ್ಲಿದ್ದ ಎಡರು ತೊಡರುಗಳನ್ನು ನಿಗ್ರಹಿಸಿಕೊಂಡು ತಾನು ಅಳಿಯದೆ ತನ್ನ ವಂಶೋದ್ಧಾರವನ್ನು ಮಾಡಿಕೊಂಡು ಬರುವ ಅಂತಃಶಕ್ತಿಗೆ 'ಜೀವೋತ್ಪನ್ನ ಸಾಮರ್ಥ್ಯ' (**Bioticpotential**) ಎಂದು ಹೇಳಬಹುದು. ಈ ಸಾಮರ್ಥ್ಯ ಕೆಲವು ಜೀವಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದು ಇನ್ನು ಕೆಲವು ಜೀವಿಗಳಲ್ಲಿ ಇದು ಕ್ಷೀಣವಾಗಿದ್ದು, ಕ್ರಮೇಣ ಆ ಅಬಲಜೀವಿಗಳೂ ನಿರ್ನಾಮವಾಗುವ ಪರಿಸ್ಥಿತಿಯೂ ಬರಬಹುದು.

ಇದೇ ರೀತಿ ಇನ್ನೊಂದು ದಿಸೆಯಲ್ಲಿ ಪ್ರಬಲ ಜೀವಿಗಳು ತಮ್ಮ ಸಾಮರ್ಥ್ಯದಿಂದ ಮಿತಿಮೀರಿದ ಸಂಖ್ಯೆಯಲ್ಲಿ ತಮ್ಮ ಬಳಗವನ್ನು ವೃದ್ಧಿಪಡಿಸಿಕೊಂಡಾಗ ಆಗುವ ಅನಾಹುತವನ್ನು ತಡೆಗಟ್ಟಲು ಪರಿಸರದಲ್ಲಿ ಕೆಲವಾರು 'ಧ್ವಂಸಕ ಶಕ್ತಿ'ಗಳು ಉದ್ಭವಿಸುವುವು. ಇವನ್ನೇ ನಿಯಂತ್ರಣಾಂಶಗಳೆಂದು ಕರೆಯಲಾಗಿದೆ. ಇವುಗಳ ಒಟ್ಟಾರೆ ಫಲಿತಾಂಶ ನಿಸರ್ಗದಲ್ಲಿ ಕಾಣ ಬರುವ ಪ್ರಕೃತಿ ಸಮತೋಲನ.

ಉಷ್ಣಾಂಶ, ತೇವಾಂಶ ಇನ್ನಿತರ ಹವಾಗುಣಗಳ ವೈಪರೀತ್ಯ, ಆಹಾರ ಅಭಾವ, ರೋಗರುಜಿನಗಳು, ಹಿಂಸ್ರಕ ಜೀವಿಗಳು (ಉದಾಹರಣೆಗೆ ಕೀಟಗಳಿಗೆ ಕಪ್ಪೆಗಳು, ಕಪ್ಪೆಗಳಿಗೆ ಹಾವುಗಳು, ಹಾವುಗಳಿಗೆ ಹದ್ದುಗಳು, ಜಿಂಕೆ ಕಡವೆಗಳಿಗೆ ಚಿರತೆ ಹುಲಿಗಳು... ಇತ್ಯಾದಿ) ಇವೆಲ್ಲ ಪ್ರಕೃತಿ ನಿಯಮಿತ ಘಟನೆಗಳು.

ಜೀವಿ ಸಂತತಿಗಳು ಕೋಟ್ಯಂತರ ವರ್ಷಗಳು ಬಾಳಿದಾಗ ಅದೆಷ್ಟೋ ಜೀವಿಗಳು ಒಂದು ಕಾಲದಲ್ಲಿ ಶ್ರೇಷ್ಠತೆಯನ್ನು ಪಡೆದು ತಮಗೆ ಸಾಟಿಯಿಲ್ಲವೆನಿಸಿಕೊಂಡು, ಪರಿಸರದಲ್ಲಿನ ಆಗು ಹೋಗುಗಳು ಧ್ವಂಸಕ ಶಕ್ತಿಗಳ ಸ್ವಭಾವಕ್ಕೆ ಸಿಲುಕಿ ಅಳಿದೇ ಹೋಗಿವೆ(ಉದಾಹರಣೆಗೆ : ಡೈನೋಸಾರ್‌ಗಳು). ಗತಕಾಲದ ಪಳಯುಳಿಕೆಗಳು ಇದಕ್ಕೆ ಸಾಕ್ಷೀಭೂತವಾಗಿವೆ.

9th_Kannada_Reader Term I.indd 13 29-01-2019 16:29:36

ಸಸ್ತನಿಗಳಲ್ಲಿಯೂ ನೂರಾರು ಒಳಜಾತಿಗಳು ಅಳಿದು ಹೋಗಿವೆ. ಈಗಿರುವುವು ಅವುಗಳ ಒಂದು ಸಣ್ಣ ಭಾಗಾಂಶ ಮಾತ್ರ. ಆದರೆ ಅವು ತಮ್ಮ ಮೆದುಳಿನ ಶಕ್ತಿಯ ಕಾರಣದಿಂದಾಗಿ ತಮ್ಮ ಪರಿಸರದ ಎಡರು ತೊಡರುಗಳನ್ನು ಇತರ ಜೀವಿಗಳಿಗಿಂತ ಹೆಚ್ಚಿನ ಸಫಲತೆಯಿಂದ ನಿವಾರಿಸಿಕೊಂಡು ಸೃಷ್ಟಿಯ ಏಣಿಯಲ್ಲಿ ಮೇಲೆ ಮೇಲೆ ಏರಲು ಸಾಧ್ಯವಾಗಿದೆ. ಇಂದು ಮಾನವ ಅದರ ತುತ್ತ ತುದಿಯಲ್ಲಿದ್ದಾನೆ. ಮಾನವನು ಮೀನಿನಷ್ಟು ಸರಾಗವಾಗಿ ಈಜು ಬಲ್ಲವನಲ್ಲ, ಹಾವಿನಂತೆ ಹರಿಯಬಲ್ಲವನಲ್ಲ, ಹುಲಿಯ ಶಕ್ತಿಯನ್ನು ಹೊಂದಿದವನಲ್ಲ, ಆನೆಯ ಬಲವನ್ನಂತೂ ಪಡೆದವನಲ್ಲ. ಆದರೂ ಮೆದುಳು ಶಕ್ತಿಯಲ್ಲಿ ಅವನದು ಸೃಷ್ಟಿಯ ಪರಿಪೂರ್ಣತೆ ಎನ್ನಬಹುದು. ಈ ಬಲದಿಂದ ಅವನು ತನ್ನ ಪರಿಸರದಲ್ಲಿನ ಅನೇಕ ಅಡ್ಡಿ ಆತಂಕಗಳನ್ನು ಜಯಿಸಿ, ಇಂದು ಅಂತರ್‌ಗ್ರಹ ಸಂಚಾರಿಯಾಗಿದ್ದಾನೆ. ಆದರೆ ತನ್ನ ಇರವಿಗೆ ಎಡೆ ಕೊಟ್ಟ ಪರಿಸರವನ್ನು ಮರೆತ ಮಾನವನ ವಿಪರೀತ ಬುದ್ಧಿ ವಿನಾಶಕ್ಕೆ ಎಡೆ ಕೊಡದಂತೆ ಈಗ ಎಚ್ಚೆತ್ತುಕೊಳ್ಳಬೇಕಾಗಿದೆ.

ವನ್ಯ ಜೀವಿಗಳ ಅವನತಿಯನ್ನು ತಡೆಗಟ್ಟಲು ಅವುಗಳ ನೆಲೆಗಳನ್ನು ಉಳಿಸುವುದು ಒಂದು ಸರಳ ಸೂತ್ರ. ನೆಲೆಗಳೇ ಅವುಗಳ ತವರು. ಈ ನೆಲೆಗಳು ವಿಸ್ತಾರವಾಗಿದ್ದು ವನ್ಯ ಜೀವಿಗಳು ತಮ್ಮ ಚಲನವಲನಗಳು, ಆಗಮನ ನಿರ್ಗಮನಗಳ ವಿನಾ ಬೇರೆಡೆ ವಲಸೆ ಹೋಗುವುದು ವಿರಳ. ತವರಿನಲ್ಲಿ ನೆಲೆಸುವ ಶಕ್ತಿ ಕುಂದಿದಾಗ ಅಥವಾ ಇನ್ನಾವುದೇ ಬಾಹ್ಯ ಕಾರಣಗಳಿಂದ ಅವು ತಮ್ಮ ನೆಲೆಗಳನ್ನು ಬದಲಾಯಿಸಬೇಕಾಗಬಹುದು. ಒಗ್ಗಿದ ತವರೆಂದರೆ ಅಲ್ಲಿನ ಭೂಗುಣ, ಹವಾಗುಣ, ಮೇಲ್ಮೈ ಲಕ್ಷಣ, ಸಸ್ಯಕೂಟ, ಮರೆ, ಆಹಾರ ಇವುಗಳು ಉತ್ತಮವಾಗಿರುವ ಹಾಗೂ ಸಮೃದ್ಧಿಯಾಗಿರುವ ಸ್ಥಳ.

ಒಂದು ಸ್ವಾಭಾವಿಕ ನೆಲೆಯಲ್ಲಿ, ನೆಲೆಯಿಂದ ಹೊರಬರಬಲ್ಲ ಶಕ್ತಿಯ ಪರಿಮಿತಿಯೊಳಗೆ ವನ್ಯಜೀವಿಗಳು ಆಹಾರವನ್ನು ಸಂಪಾದಿಸುವ ಶಕ್ತಿಯನ್ನು ಬೆಳೆಸಿಕೊಂಡಾಗ ಅವುಗಳಿಗೆ ಪ್ರಕೃತಿಯ ನೆರವೂ ಇರುತ್ತದೆ. ಇಂತಲ್ಲಿ ಬೆಳೆಯುವ ಗಿಡಮರಗಳ ಚಿಗುರುಗುಣ ಅಸಾಧಾರಣವಾಗಿದ್ದು, ಕಡಿದ ಕೊಡಿ ಮತ್ತೆ ಚಿಗುರಿ ಬೆಳವಣಿಗೆ ಚುರುಕಾಗಿ ಜಾನುವಾರುಗಳ ಎಟುಕಿಗೆ ತಾಗದೆ ಮರವಾಗಿ ಬಾಳುವುದು. ಪೃಕೃತಿಯ ವ್ಯವಸ್ಥೆಯನ್ನು ಇನ್ನೂ ಒಂದು ತರಹದಲ್ಲಿ ಕಾಣಬಹುದು. ಸಸ್ಯಾಹಾರಿ ಪ್ರಾಣಿಗಳಾದ ಜಿಂಕೆ, ಕಡವೆ ಇತ್ಯಾದಿಗಳು ಒಟ್ಟಾರೆ ನೆಲೆಯಲ್ಲಿ ಮಿತಿಮೀರಿದ ಸಂಖ್ಯೆಯಲ್ಲಿ ವೃದ್ಧಿಗೊಂಡಾಗ ಮತ್ತು ಕಲೆತಾಗ ಹಿಂಸ್ರಕ ಪ್ರಾಣಿಗಳಾದ ಹುಲಿ, ಚಿರತೆ, ಸೀಳು ನಾಯಿಗಳು ಮೊದಲಾದವು ಈ ಸಸ್ಯಾಹಾರಿ ಪ್ರಾಣಿಗಳು ಸದಾ ಸಂಚರಿಸುತ್ತಿರುವಂತೆ ಮಾಡಿ ಅವುಗಳ ಸಂಖ್ಯೆ ಹೆಚ್ಚಾಗದಂತೆ ನಿಯಂತ್ರಿಸುವುವು.

ನೆಲೆಯಲ್ಲಿನ ಆಹಾರದ ಸಮೃದ್ಧತೆ, ಹವಾಮಾನ ಅನುಕೂಲತೆ ಇತ್ಯಾದಿಗಳಿಗೆ ಅನುಸರಿಸಿಕೊಂಡ ವನ್ಯಜೀವಿಗಳು, ತಮ್ಮ ಸಂತಾನೋತ್ಪತ್ತಿ ಕ್ರಮವನ್ನು ಅಳವಡಿಸಿಕೊಳ್ಳುವುದೂ ಕೂಡ ಒಂದು ವೈಶಿಷ್ಟ್ಯ. ಸಸ್ಯಾಹಾರಿ ಪ್ರಾಣಿಗಳು ಮರಿಗಳನ್ನು ಈಯುವುದು, ಮೇವು ಸಮೃದ್ಧಿಯಾಗಿ ದೊರಕುವ ಮಳೆಗಾಲದ ಪ್ರಾರಂಭದಲ್ಲಿ. ಹಿಂಸ್ರಕ ಪ್ರಾಣಿಗಳು ಸಾಮಾನ್ಯವಾಗಿ ಬೇಸಿಗೆಯಲ್ಲಿ ತಮ್ಮ ಮರಿಗಳನ್ನು ಹಾಕಿ, ಬಯಲಾದ ಕಾಡಿನಲ್ಲಿ ಬೇಸಿಗೆಯ ತಾಪಕ್ಕೆ ನೀರಿಗೆ ಧಾವಿಸುವ ಬಲಿ ಪ್ರಾಣಿಗಳನ್ನು ಸುಲಭದಲ್ಲಿ ಬೇಟೆಯಾಡಿ ಮರಿಗಳಿಗೂ ಒದಗಿಸುವುವು.

* * *



ಯಾವುದೋ ಕಾರಣಕ್ಕಾಗಿ ನೆಲೆಯ ಭೂಗುಣಗಳ ಹಾಗೂ ಸ್ಥಳಗುಣಗಳ ಅವನತಿಯಾದರೆ ಅದು ಭರಿಸಿರುವ ಜೀವಿಗಳೂ ಅವನತಿಗೊಳ್ಳುವುವು. ವನ್ಯಜೀವಿಗಳು ಎಲ್ಲಿಯಾದರೂ ಎಂತಾದರೂ ಊರ್ಜಿತವಾಗಬಲ್ಲವು ಎಂಬ ಅಭಿಪ್ರಾಯವಿದ್ದಲ್ಲಿ

9th_Kannada_Reader Term I.indd 14 29-01-2019 16:29:36

ಅದು ಸರಿಯಲ್ಲ. ಅವುಗಳಿಗೂ ಕೆಲವು ಕನಿಷ್ಠ ಅವಶ್ಯಕತೆಗಳಿರುವುವು. ಅವನ್ನು ಉಳಿಸಿ ಕೊಡುವುದು ಮಾನವನ ಹೊಣೆ.

* * * *

ವನ್ಯ ಜೀವಿಗಳಿಂದ ಮಾನವನಿಗೆ ಏನು ಉಪಕಾರ, ಅವುಗಳ ರಕ್ಷಣೆಯ ಬಗ್ಗೆ ಏಕೆ ಇಷ್ಟು ಆತಂಕ ಎಂಬ ಪ್ರಶ್ನೆಗೂ ಉತ್ತರವಿರಬೇಕು. ವನ್ಯಜೀವಿಗಳು ನಿಸರ್ಗದಲ್ಲಿನ ಸಮತೋಲನ ಹಾಗೂ ಪರಿಸರದ ರಕ್ಷಣೆಗೆ ನೆರವಾಗುವುವಲ್ಲದೆ, ಮನರಂಜನೆ, ತನ್ಮೂಲಕ ಪ್ರವಾಸೋದ್ಯಮದ ಬೆಳವಣಿಗೆಗೆ ಸಹಾಯಕವಾಗುವುವು. ಕೆಲವು ಆಹಾರದ ರೂಪದಲ್ಲಿ ಒದಗುವುವು. ಕೆಲವು ವೈಜ್ಞಾನಿಕ ಮುನ್ನಡೆಯಲ್ಲಿ ಮಾನವನಿಗೆ ನೆರವಾಗುತ್ತಲಿವೆ.

ಕೃತಿ–ಕರ್ತೃ ಪರಿಚಯ



ಅಜ್ಜಂಪುರ ಕೃಷ್ಣಸ್ವಾಮಿಯವರು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಅಜ್ಜಂಪುರದವರು. ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಕೃತಿ ಶಾಸ್ತ್ರದ ಅಧ್ಯಯನ ಮಾಡಿ, ಪ್ರಾಣಿ ಶಾಸ್ತ್ರದಲ್ಲಿ ವಿಶೇಷ ಪದವಿ ಪಡೆದಿದ್ದಾರೆ. ಭಾರತೀಯ ಅರಣ್ಯ ಸೇವಾ ಸದಸ್ಯರಾಗಿದ್ದು, ಕರ್ನಾಟಕದ ಅರಣ್ಯ ಇಲಾಖೆಯ ಮುಖ್ಯ ಸಂರಕ್ಷಣಾಧಿಕಾರಿಯಾಗಿದ್ದು ಈಗ ನಿವೃತ್ತರಾಗಿದ್ದಾರೆ.

'ಅರಣ್ಯ ಶಾಸ್ತ್ರ' ಮತ್ತು 'ಖಗ ಸಿರಿ' ಇವು ಇವರ ಪ್ರಕಟಿತ ಕೃತಿಗಳು. ಅರಣ್ಯಶಾಸ್ತ್ರವನ್ನು ಅಧಿಕಾರಯುತವಾಗಿಯೂ, ಪಾರಿಭಾಷಿಕವಾಗಿಯೂ ಬರೆಯುವುದರಲ್ಲಿ ಈ ಲೇಖಕರು ಪರಿಣತರು. ಇವರ 'ವನಸಿರಿ' ಎಂಬ ಗ್ರಂಥದಿಂದ 'ವನ್ಯಜೀವಿಗಳು ಮತ್ತು ಪರಿಸರ' ಎನ್ನುವ ಭಾಗವನ್ನು ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಜಲಚರ–ನೀರಿನಲ್ಲಿ ವಾಸಿಸುವ ಮೀನು, ಮೊಸಳೆ, ತಿಮಿಂಗಿಲ ಮೊದಲಾದ ಪ್ರಾಣಿಗಳು; ಸರೀಸೃಪಗಳು–ನೆಲದ ಮೇಲೆ ಹರಿದಾಡುವ ಹಾವು, ಚೇಳು ಮೊದಲಾದ ಪ್ರಾಣಿಗಳು; ನೈಸರ್ಗಿಕ–ನಿಸರ್ಗದತ್ತವಾದ, ಸಹಜವಾದ; ಧಕ್ಕೆ–ಅಪಾಯ, ತೊಂದರೆ; ಚರ್ಯೆ–ನಡತೆ, ನಡವಳಿಕೆ; ಪರಾವಲಂಬಿ–ಬೇರೆಯವರನ್ನು ಆಶ್ರಯಿಸಿರುವ; ವಿಕಸನ–ವಿಕಾಸ, ವೃದ್ಧಿ, ಬೆಳೆಯುವುದು; ನಿಗ್ರಹಿಸು–ಹೋಗಲಾಡಿಸು; ಧ್ವಂಸಕ–ನಾಶಮಾಡುವ; ವೈಪರೀತ್ಯ–ವಿರೋಧ, ಪ್ರತಿಕೂಲತೆ; ಹಿಂಸ್ರಕ–ಕೊಲ್ಲುವ, ಕೆಡುಕನ್ನುಂಟು ಮಾಡುವ, ಹಿಂಸಿಸುವ; ನೆಲೆ–ಆವಾಸ, ಆಶ್ರಯ; ಭರಿಸು–ಹೊರು; ಅವನತಿ–ಅಳಿವು, ನಾಶ; ಕಡವೆ–ಜಿಂಕೆಯ ಜಾತಿಗೆ ಸೇರಿದ ಪ್ರಾಣಿ; ಊರ್ಜಿತ–ಏಳಿಗೆ, ಅಭಿವೃದ್ಧಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯದಲ್ಲಿ ಉತ್ತರಿಸಿ.

1. ವನ್ಯಜೀವಿಗಳು ಎಂದರೆ ಯಾವುವು ?
2. ವನ್ಯಜೀವಿಗಳ ನೆಲೆ ಯಾವುದು ?
3. ನಾಗರಿಕತೆಯ ಮೊದಲ ಹೆಜ್ಜೆ ಯಾವುದು ?
4. ಪ್ರಾಣಿ ಜೀವನದ ಎರಡು ಮುಖ್ಯ ಉದ್ದೇಶಗಳಾವುವು ?
5. ಜೀವೋತ್ಪನ್ನ ಸಾಮರ್ಥ್ಯ ಎಂದರೇನು ?
6. ವನ್ಯಜೀವಿಗಳ ವಿಚಾರದಲ್ಲಿ ಮಾನವನ ಹೊಣೆ ಯಾವುದು ?

9th_Kannada_Reader Term I.indd 15 29-01-2019 16:29:37

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಪ್ರಕೃತಿಯ ಸಮತೋಲನದ ಏರುಪೇರಿಗೆ ಮಾನವ ಹೇಗೆ ಕಾರಣನಾದ ?
2. ಜೀವಪರಿಸ್ಥಿತಿಶಾಸ್ತ್ರ ಎಂದು ಯಾವುದನ್ನು ಕರೆಯಲಾಗಿದೆ ?
3. ವನ್ಯಜೀವಿಗಳು ತಮ್ಮ ನೆಲೆಯನ್ನು ಏಕೆ ಬದಲಾಯಿಸಿಕೊಳ್ಳಬೇಕಾಗುತ್ತದೆ ?
4. ವನ್ಯಜೀವಿಗಳು ಯಾವ ಯಾವ ರೀತಿಯಲ್ಲಿ ಮಾನವನಿಗೆ ನೆರವಾಗುತ್ತಲಿವೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಾನವನ ವಿಪರೀತ ಬುದ್ಧಿ ವನ್ಯಜೀವಿಗಳ ವಿನಾಶಕ್ಕೆ ಎಡೆ ಕೊಡದಂತೆ ಏಕೆ ಎಚ್ಚೆತ್ತುಕೊಳ್ಳಬೇಕಾಗಿದೆ ?
2. ವನ್ಯಜೀವಿಗಳು ಮತ್ತು ಮಾನವ ಪರಸ್ಪರ ಹೇಗೆ ಸಹಾಯಕರಾಗಿದ್ದಾರೆ? ವಿವರಿಸಿ.

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿರಿ.

ನಾಗರಿಕತೆ, ಪರಿವರ್ತನೆ, ಸನ್ನಿವೇಶ, ಪರಿಸರ, ಏರುಪೇರು.

2. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಸಫಲ, ಧೈರ್ಯ, ಪರಾವಲಂಬಿ, ಅನುಕೂಲ, ಸಾಮರ್ಥ್ಯ, ಪ್ರಬಲ, ಆಗಮನ, ಉಪಕಾರ.

3. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

1. ಪಕ್ಷಿ –
2. ಮೃಗ –
3. ವರುಷ –
4. ದಿಸೆ –
5. ವಿಸ್ತಾರ –

4. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಸಸ್ಯಾಹಾರಿ, ವಂಶೋದ್ಧಾರ, ಜೀವೋತ್ಪನ್ನ, ಕೋಟ್ಯಂತರ, ಭಾಗಾಂಶ, ನೂರಾರು ಸಂತಾನೋತ್ಪತ್ತಿ, ಪ್ರವಾಸೋದ್ಯಮ.

ಚಟುವಟಿಕೆ

1. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ – ಈ ಗಾದೆ ಮಾತಿನ ಅರ್ಥವನ್ನು ತಿಳಿಯಿರಿ.
2. ಮೃಗಾಲಯಗಳಿಗೆ ಭೇಟಿ ನೀಡಿ ಹೆಚ್ಚಿನ ವಿವರ ತಿಳಿಯಿರಿ.



9th_Kannada_Reader Term I.indd 16 29-01-2019 16:29:37

ಘಟಕ ಎರಡು

ಹಸುರು

–ಕುವೆಂಪು

ಮೊದಲು ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನದಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ !

ಹಸುರಾಗಸ ಹಸುರು ಮುಗಿಲು
ಹಸುರು ಗದ್ದೆಯಾ ಬಯಲು
ಹಸುರಿನ ಮಲೆ, ಹಸುರು ಕಣಿವೆ
ಹಸುರು ಸಂಜೆಯೀ ಬಿಸಿಲು !

ಅಶ್ವೀಜದ ಶಾಲಿವನದ
ಗಿಳಿಯೆದೆ ಬಣ್ಣದ ನೋಟ
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ !

ಅದೊ, ಹುಲ್ಲಿನ ಮಕಮಲ್ಲಿನ
ಹೊಸ ಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿದೆ
ಬೇರೆ ಬಣ್ಣವನೆ ಕಾಣೆ !

ಹೊಸ ಹೂವಿನ ಕಂಪು ಹಸುರು
ಎಲರಿನ ತಂಪೂ ಹಸುರು
ಹಕ್ಕಿಯ ಕೊರಲಿಂಪು ಹಸುರು
ಹಸುರು ಹಸುರಿಳೆಯುಸಿರು

ಹಸುರತ್ತಲ್ ಹಸುರಿತ್ತಲ್
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್‌ನೆತ್ತರ್ ಒಡಲಿನಲಿ !

9th_Kannada_Reader Term I.indd 17 29-01-2019 16:29:37



ಕವಿ–ಕಾವ್ಯ ಪರಿಚಯ



ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ ಎಂಬಲ್ಲಿ 1904ರಲ್ಲಿ ಜನಿಸಿದರು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ವೃತ್ತಿಯನ್ನು ಆರಂಭಿಸಿದ ಇವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಮಕ್ಕಳ ಕಥನ ಕವನವಾದ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ'ಯಿಂದ ತೊಡಗಿ, 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದವರೆಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕುವೆಂಪು ಅವರು ವೈವಿಧ್ಯಮಯವಾದ ಕೃತಿಗಳನ್ನು ರಚಿಸಿದರು. ನವಿಲು, ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಕಲಾಸುಂದರಿ, ಜೇನಾಗುವಾ ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. 'ನನ್ನ ದೇವರು ಮತ್ತು ಇತರ ಕಥೆಗಳು', 'ಸಂನ್ಯಾಸಿ ಮತ್ತು ಇತರ ಕಥೆಗಳು' ಇವು ಇವರ ಕಥಾ ಸಂಕಲನಗಳು. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಇವರ ಬೃಹತ್ ಕಾದಂಬರಿಗಳು. ರಕ್ತಾಕ್ಷಿ, ಬೆರಳ್ಗೆ ಕೊರಳ್, ಬಿರುಗಾಳಿ, ಯಮನ ಸೋಲು, ಜಲಗಾರ, ಧನ್ವಂತರಿಯ ಚಿಕಿತ್ಸೆ ಮೊದಲಾದವು ಅವರ ನಾಟಕಗಳು. 'ನೆನಪಿನ ದೋಣಿಯಲ್ಲಿ' ಎಂಬುದು ಅವರ ಆತ್ಮಕಥನ. 'ದ್ರೌಪದಿಯ ಶ್ರೀಮುಡಿ' ಮೊದಲಾದ ವಿಮರ್ಶಾ ಕೃತಿಗಳನ್ನೂ ರಚಿಸಿದ್ದಾರೆ.

9th_Kannada_Reader Term I.indd 18 29-01-2019 16:29:37

'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ 1955ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1968ರಲ್ಲಿ ಭಾರತೀಯ 'ಜ್ಞಾನಪೀಠ ಪ್ರಶಸ್ತಿ' ಮತ್ತು 1988ರಲ್ಲಿ ಪಂಪ ಪ್ರಶಸ್ತಿಗಳು ಲಭಿಸಿವೆ. 1957ರಲ್ಲಿ ಧಾರವಾಡದಲ್ಲಿ ನಡೆದ 39ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸರ್ಕಾರವು ಇವರಿಗೆ 'ಪದ್ಮಭೂಷಣ' ಹಾಗೂ 'ಪದ್ಮವಿಭೂಷಣ' ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರವು 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ನಾಡೋಜ, ರಾಷ್ಟ್ರಕವಿ ಎಂಬ ಬಿರುದುಗಳೂ ಕೂಡ ಇವರಿಗೆ ದೊರಕಿವೆ. ಮೈಸೂರು, ಕರ್ನಾಟಕ, ಬೆಂಗಳೂರು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿವೆ. ಇವರು 9.11.1994ರಂದು ನಿಧನರಾದರು.

ಪ್ರಸ್ತುತ ಕವನವನ್ನು ಕುವೆಂಪು ಅವರ ಪಕ್ಷಿಕಾಶಿ ಎನ್ನುವ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. 'ಹಸುರು' ಕವನವು ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಅಚ್ಚಹಸುರಿನಿಂದ ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ಹುಟ್ಟೂರಾದ ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಅವರಿಗುಂಟಾದ ಸೌಂದರ್ಯಾನುಭವವಾಗಿದೆ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಅವರು ಹೊಂದಿದ್ದ ಒಡನಾಟ ಇದರಿಂದ ತಿಳಿಯುತ್ತದೆ. ಸಸ್ಯಸಮೃದ್ಧಿಯ ಹಸುರೇ ಆಗಸ,ಮುಗಿಲು,ಗದ್ದೆ,ಬಯಲು,ಸಂಜೆ,ಹೂಗಂಪು, ಹಕ್ಕಿಯ ದನಿ, ಸಮುದ್ರದವರೆಗೂ ವ್ಯಾಪಿಸುವ ಮಟ್ಟಿಗೆ ಕವಿ ಹಸುರಿನಲ್ಲಿ ತಲ್ಲೀನರಾಗಿರುವುದನ್ನು ಈ ಕವನದಲ್ಲಿ ಕಾಣಬಹುದಾಗಿದೆ. ಕುವೆಂಪು ಅಪಾರ ಪ್ರಕೃತಿ ಪ್ರೇಮಿ. ಪ್ರಕೃತಿಯಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಗಳನ್ನೂ ಇವರು ಸೂಕ್ಷ್ಮವಾಗಿ ಕಂಡು ಅನುಭವಿಸಿದವರು. ತಾವು ಕಂಡ ಪ್ರಕೃತಿ ಸೌಂದರ್ಯವನ್ನು ಹಾಗೇ ಕಾವ್ಯದಲ್ಲಿ ಸೆರೆಹಿಡಿಯುವ ಅದ್ಭುತ ಸಾಮರ್ಥ್ಯ ಅವರಿಗಿತ್ತು. ಇವರನ್ನು ಕನ್ನಡದ ವರ್ಡ್ಸ್‌ವರ್ತ್ ಎಂದೂ ಕರೆಯುವುದುಂಟು.

ಪದಗಳ ಅರ್ಥ

ನವಧಾತ್ರಿ–ಹೊಸದಾಗಿ ಕಾಣುವ ಭೂಮಿ; ಶ್ಯಾಮಲ–ಕಪ್ಪು, ಕಡುನೀಲ ವರ್ಣ; ವನಧಿ–ಹಸುರಿನಿಂದ ತುಂಬಿರುವ ಕಾನನ, ವನ, ಕಾಡು; ಮುಗಿಲು–ಮೋಡ, ಆಕಾಶ; ಮಲೆ–ಬೆಟ್ಟ; ಕಣಿವೆ–ಎರಡು ಬೆಟ್ಟಗಳ ನಡುವಿನ ಇಳಿಜಾರಾದ, ಆಳವಾದ, ಕಠಿಣವಾದ ಪ್ರದೇಶ; ಆಶ್ವೀಜ–ಅಶ್ವಯುಜ ತಿಂಗಳು, ಚೈತ್ರದಿಂದ ಏಳನೆಯ ಮಾಸ; ಶಾಲಿವನ–ಬತ್ತದ ಗದ್ದೆ; ಬನ–ವನ, ಕಾಡು; ಕೊನೆ–ಗೊನೆ; ಮಕಮಲ್ಲು–ನಯವಾದ ಬಟ್ಟೆ; ಹುಲ್ಲಿನ ಮಕಮಲ್ಲು–ಹುಲ್ಲುಹಾಸು; ಹೊಸಪಚ್ಚೆ–ಹೊಸಹಸಿರು, ಎಳೆಯ ಚಿಗುರು; ಜಮಖಾನೆ–ದಪ್ಪವಾದ ನೂಲಿನಿಂದ ತಯಾರಿಸಿದ ನೆಲಹಾಸು, ರತ್ನಗಂಬಳಿ, ನೂಲುಗಂಬಳಿ, ಹೊಸ ಹಸುರಿನ ಹಾಸಿಗೆ; ಪಸರಿಸು–ಹರಡು; ತಿರೆ–ಭೂಮಿ; ಕಂಪು–ಸುಗಂಧ; ಎಲರು–ಗಾಳಿ; ಇಂಪು–ಸವಿ; ಕೊರಲು–ಧ್ವನಿ, ಕುತ್ತಿಗೆ; ಇಳೆ–ಭೂಮಿ; ನೆತ್ತರು–ರಕ್ತ, ಒಡಲು–ಶರೀರ, ಹೊಟ್ಟೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿಯ ಆತ್ಮವು ಎಲ್ಲಿ ಹಸುರಾಯಿತು ?
2. ಸಂಜೆಯ ಬಿಸಿಲು ಹೇಗಿದೆ ?
3. ಅಶ್ವಯುಜದ ಬತ್ತದ ಗದ್ದೆಯು ಯಾವ ಬಣ್ಣದಿಂದ ಕೂಡಿದೆ ?
4. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?
5. ಕವಿಗೆ ಹುಲ್ಲಿನ ಹಾಸು ಹೇಗೆ ಕಂಡಿತು ?

9th_Kannada_Reader Term I.indd 19 29-01-2019 16:29:37

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಕವಿಯ ಆತ್ಮಕ್ಕೆ ರಸಪಾನ ಸ್ನಾನ ಹೇಗಾಯಿತು?
2. ಕವಿಗೆ ಯಾವ ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸಿರು ಕಾಣುತ್ತಿದೆ?
3. ಭೂಮಿಯ ಮೈ ಯಾವುದರಿಂದ ಮುಚ್ಚಿ ಹೋಗಿದೆ ಎಂದು ಹಸುರು ಕವನದಲ್ಲಿ ಕವಿ ಹೇಳಿದ್ದಾರೆ?
4. ಕವಿಯ ಆತ್ಮವು ಹಸಿರುಗಟ್ಟಲು ಕಾರಣವಾದ ಹಿನ್ನೆಲೆಯೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹಸುರು ವ್ಯಾಪಿಸಿರುವ ಪರಿಯನ್ನು ಕವಿಯು ಹಸುರು ಕವನದಲ್ಲಿ ಹೇಗೆ ವರ್ಣಿಸಿದ್ದಾರೆ ?
2. ಹಸುರು ಕವನದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ನವ, ರಾತ್ರಿ, ಬಿಸಿಲು, ಮುಚ್ಚು, ಕೊನೆ, ತಂಪು.

2. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ಕವಿ, ಸ್ನಾನ, ಸಂಜೆ, ಬನ, ಬಣ್ಣ, ಹಕ್ಕಿ, ಆಗಸ.

3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ವನಧಿಯಲಿ, ಹಸುರಾಗಸ, ಗಿಳಿಯೆದೆ, ಬನದಂಚಲಿ, ಕೊಳಲಿಂಪು.

ಚಟುವಟಿಕೆ

1. ಇತರ ನವೋದಯ ಕವಿಗಳ ಪ್ರಕೃತಿ ವರ್ಣನೆಯ ಕವನಗಳನ್ನು ಓದಿರಿ.



9th_Kannada_Reader Term I.indd 20 29-01-2019 16:29:38

ಪೂರಕ ಪದ್ಯ

ಘಟಕ ಎರಡು

ಭರವಸೆ

–ಬಿ.ಟಿ.ಲಲಿತಾ ನಾಯಕ್

ಅರಳಿ ಮಲ್ಲಿಗೆ ಮೊಗ್ಗು ಸುತ್ತ ಗಂಧವ ಚೆಲ್ಲಿ
ವಸಂತನಾಗಮನ ಸಾರಿದಾಗ
ಮಾಮರದ ರೆಂಬೆಯಲಿ ಕುಳಿತಿದ್ದ
ಕೋಗಿಲೆಯು
ಬೆರೆಸಿತದರೊಳಗೊಂದು ಕುಕಿಲ ರಾಗ
ಬಳುಕಾಡಿ ಮಲ್ಲಿಗೆಯು ಕೋಗಿಲೆಯ
ಕರೆದಿತ್ತು
'ಪ್ರಿಯ ಗೆಳತಿ, ಹಾಡೊಂದ ಹಾಡೇ
ಬಾನ ಸಂಚಾರಿಣಿಯೆ ಅನುಭವದ
ಹೊನ್ನಣಿಯೆ
ಲೋಕವಾರ್ತೆಯದೇನು ಅರುಹೆ?'
'ಏನೆಂದು ಹಾಡಲಿ, ನಾನು ಏನ ಅರುಹಲಿ
ಚೆಲುವೆ
ಬಣ್ಣ ಬೆಡಗಿನ ಮಾತನರಿಯೆ
ಕೃತಕತೆಯ ಜಾಲದಲಿ ಸಿಲುಕಿಕೊಂಡಿದೆ
ಜಗವು
ನೈಜತೆಗೆ ಇಲ್ಲ ಬೆಲೆಯು
ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ
ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡ ಬಳ್ಳಿ ಚಿತ್ತಾರ
ಮರೆತೇ ಬಿಟ್ಟಿಹನು ಮಣ್ಣ ಸೊಗಡ
ಮಾವು ಮಲ್ಲಿಗೆ ಭ್ರಮರ ಮತ್ತದರ
ಝೇಂಕಾರ
ಕವಿ ಕಲ್ಪನೆಯ ಗಾನ ಲಹರಿ
ನಲುಗದಿರು ಇದರ ಕೇಳಿ ಬರಡಲ್ಲ
ಈ ಬುವಿಯು
ಅಮರ ಪ್ರೇಮದ ಒರತೆ ಹರಿಯುವುದು



9th_Kannada_Reader Term I.indd 21 29-01-2019 16:29:38

ಕವಿ–ಕಾವ್ಯ ಪರಿಚಯ



ಶ್ರೀಮತಿ ಬಿ.ಟಿ.ಲಲಿತಾ ನಾಯಕ್ ಅವರು ಚಿಕ್ಕಮಗಳೂರು ಜಿಲ್ಲೆಯ ತಂಗಲಿ ತಾಂಡ್ಯದಲ್ಲಿ 1945ರಲ್ಲಿ ಜನಿಸಿದರು. ಬಂಡಾಯ ಹಾಗೂ ಸ್ತ್ರೀ ಸಂವೇದನೆಯ ಬರಹಗಳ ಮೂಲಕ ಖ್ಯಾತರಾದ ಇವರು ಹಲವಾರು ಮೌಲಿಕ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. 'ಚಂದ್ರ ಪರಾಭವ', 'ಭಟ್ಟನ ಕನಸು', 'ನೆಲೆ ಬೆಲೆ', 'ನಂ ರೂಪ್ಲಿ', 'ಗತಿ', 'ಹಬ್ಬ ಮತ್ತು ಬಲಿ', 'ಇದೇ ಕೂಗು ಮತ್ತೆ ಮತ್ತೆ', 'ದೇವದುರ್ಗ ತಾಲೂಕು ದರ್ಶನ', 'ಒಡಲ ಬೇಗೆ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಕಥೆ, ರೇಡಿಯೋ ನಾಟಕಗಳನ್ನೂ ರಚಿಸಿರುವರು. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯೆಯಾಗಿಯೂ, ಕರ್ನಾಟಕ ಸರ್ಕಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿಯೂ ಇವರು ಕಾರ್ಯ ನಿರ್ವಹಿಸಿದ್ದಾರೆ.

ಪ್ರಸ್ತುತ ಕವನವನ್ನು ಬಿ.ಟಿ.ಲಲಿತಾ ನಾಯಕ್ ಅವರ 'ಬಿದಿರು ಮೆಳೆ ಕಂಟಿಯಲಿ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಸಾರು–ಸಮೀಪಿಸು; ಗಂಧ–ಸುವಾಸನೆ; ಕುಕಿಲು–ಕೋಗಿಲೆಯ ಕೂಗು;, ಅರುಹು–ತಿಳಿಸು; ಬಾನು–ಆಕಾಶ; ಕೃತಕತೆ–ಅಸಹಜತೆ, ವಾರ್ತೆ–ಸುದ್ದಿ, ಮಾತು; ಮೋಸ; ಮಾಮರ–ಮಾವಿನಮರ; ಹೊನ್ಗಣಿ–ಚಿನ್ನದ ಗಣಿ; ಪೂರ–ಪೂರ್ತಿಯಾಗಿ; ಭಿತ್ತಿ=ಗೋಡೆ; ಚಿತ್ತಾರ–ಚಿತ್ರ; ಸೊಗಡು–ಕಂಪು, ಗಾನ–ಹಾಡು, ಸಂಗೀತ; ವಾಸನೆ; ಭ್ರಮರ–ದುಂಬಿ; ಝೇಂಕಾರ–ದುಂಬಿಯ ಧ್ವನಿ; ಬರಡು–ನಿಸ್ಸಾರ, ಒಣಗಿ ಹೋದ; ಬುವಿ–ಭೂಮಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕೋಗಿಲೆ ಕುಕಿಲ ರಾಗವನ್ನು ಯಾವಾಗ ಬೆರೆಸಿತು ?
2. ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದವರು ಯಾರು ?
3. ಮನುಷ್ಯ ಏನನ್ನು ಮರೆತು ಬಿಟ್ಟಿರುವನು ?
4. ಕವಯಿತ್ರಿಯು ಕವನದ ಕೊನೆಯಲ್ಲಿ ನೀಡುವ ಭರವಸೆ ಏನು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಮಲ್ಲಿಗೆಯು ಕೋಗಿಲೆಯನ್ನು ಕರೆದು ಏನು ಹೇಳಿತು ?
2. ಮಲ್ಲಿಗೆಯ ಕೋರಿಕೆಗೆ ಕೋಗಿಲೆಯು ಪ್ರಕೃತಿಯ ಬಗೆಗೆ ಏನೆಂದು ಉತ್ತರ ನೀಡಿತು ?
3. ಕೋಗಿಲೆಯ ಆಶಾವಾದವೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಲ್ಲಿಗೆ ಮತ್ತು ಕೋಗಿಲೆಯ ನಡುವಿನ ಸಂಭಾಷಣೆಯನ್ನು ಬರೆಯಿರಿ.
2. ಕೋಗಿಲೆ ತಿಳಿಸಿದ ಲೋಕವಾರ್ತೆಯೇನು ? ವಿವರಿಸಿ.

9th_Kannada_Reader Term I.indd 22 29-01-2019 16:29:38

ಘಟಕ ಎರಡು

ಉಪಪಠ್ಯ

ಪರಿಸರ ಮಾಲಿನ್ಯ

–ಕೆ. ವಿಶ್ವನಾಥ

'ಪರಿಸರ' ಎನ್ನುವ ಶಬ್ದವು ಒಂದು ಪ್ರದೇಶದ ಗಾಳಿ, ನೀರು, ಜಲ ಇವುಗಳನ್ನೆಲ್ಲ ಒಳಗೊಳ್ಳುತ್ತದೆ. ಮಾಲಿನ್ಯ ಎನ್ನುವ ಪದವನ್ನು ವ್ಯಾಖ್ಯಾನಿಸುವುದಕ್ಕಿಂತ ಅದನ್ನು ವಿವರಿಸುವುದು ಸುಲಭ. ಮನುಷ್ಯಕೃತವಾದ ಕ್ರಿಯೆಗಳಿಂದ ನಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಾಗುವ ಕೆಟ್ಟ ಬದಲಾವಣೆಗಳನ್ನು ಪರಿಸರ ಮಾಲಿನ್ಯ ಎಂದು ಕರೆಯಲಾಗುತ್ತದೆ. ಮಾಲಿನ್ಯವು ಕೆಲವು ಬಾರಿ ಕಣ್ಣಿಗೆ ಕಾಣುವಂತಹ ಹಾನಿಗಳನ್ನುಂಟು ಮಾಡುತ್ತದೆ. ಕೆಲವು ಬಾರಿ ಅದು ನೀರು, ಭೂಮಿ, ಗಾಳಿಯನ್ನು ಹಾಳುಗೆಡವುತ್ತದೆ. ಗಾಳಿ, ನೀರು ಹಾಗೂ ಮಣ್ಣಿನ ಗುಣಮಟ್ಟ ಕೆಡುವುದು ಇವೆಲ್ಲವೂ ಮಾಲಿನ್ಯವೆಂಬ ಶಬ್ದದ ವ್ಯಾಪ್ತಿಯಲ್ಲಿ ಬರುತ್ತವೆ. ನಾವಿದನ್ನು ಹತೋಟಿಗೆ ತರದಿದ್ದಲ್ಲಿ ಮಾಲಿನ್ಯವು ಈ ಜಗತ್ತನ್ನೇ ವಾಸಕ್ಕೆ ಅಯೋಗ್ಯವನ್ನಾಗಿ ಮಾಡಿ ಬಿಡುವ ಸಾಧ್ಯತೆಯಿದೆ. ಮಾಲಿನ್ಯಗಳಲ್ಲಿ ವಾಯುಮಾಲಿನ್ಯ, ಜಲ ಮಾಲಿನ್ಯ ಮಣ್ಣು ಮತ್ತು ನೆಲದ ಮಾಲಿನ್ಯ ಮತ್ತು ಶಬ್ದ ಮಾಲಿನ್ಯಗಳು ಮುಖ್ಯವಾದವುಗಳು.

ವಾಯು ಮಾಲಿನ್ಯ

ನಾವು ಉಸಿರಾಡುವ ಗಾಳಿ ಹಲವಾರು ಅನಿಲಗಳ ತೇವ ಮತ್ತು ಅವುಗಳಲ್ಲಿರುವ ವಸ್ತುಗಳ ಮಿಶ್ರಣವಾಗಿದೆ. ಆದ್ದರಿಂದ ಶುದ್ಧ ಗಾಳಿ ಎನ್ನುವುದನ್ನು ನಾವು ಜಗತ್ತಿನ ಯಾವ ಕಡೆಯಲ್ಲಿಯೂ ಕಾಣುವುದು ಕಷ್ಟ ಸಾಧ್ಯ. ಉಸಿರಾಡುವಾಗ ಆಮ್ಲಜನಕ ಮಾತ್ರವಲ್ಲದೆ ಇತರ ಅನಿಲಗಳು ನಮ್ಮ ಶ್ವಾಸಕೋಶವನ್ನು ಪ್ರವೇಶಿಸುತ್ತವೆ. ನಮ್ಮ ಆರೋಗ್ಯಕ್ಕೆ ಹಾನಿಯನ್ನುಂಟು ಮಾಡುವಷ್ಟು ಇತರ ಮಿಶ್ರಣಗಳು ನಾವು ಉಸಿರಾಡುವ ಗಾಳಿಯಲ್ಲಿದ್ದರೆ ನಮ್ಮ ಉಸಿರಾಟದ ಪರಿಸರ ವಾಯುಮಾಲಿನ್ಯಕ್ಕೆ ಒಳಗಾಗಿದೆ ಎನ್ನಬೇಕಾಗುತ್ತದೆ.

ವಾಯುಮಾಲಿನ್ಯಕ್ಕೆ ಕಾರಣಗಳು ಹಲವಾರು. ದಿನೇ ದಿನೇ ವೃದ್ಧಿಗೊಳ್ಳುತ್ತಿರುವ ಕೈಗಾರಿಕೀಕರಣ ಇದರಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಕೈಗಾರಿಕೆಯ ವಿವಿಧ ಹಂತಗಳಲ್ಲಿ ನಾನಾ ರೀತಿಯ ಕಷ್ಮಲಗಳು ವಾತಾವರಣವನ್ನು ಪ್ರವೇಶಿಸುತ್ತವೆ. ಸಿಮೆಂಟ್ ಮತ್ತು ಉಕ್ಕಿನ ಕಾರ್ಖಾನೆಗಳಿಂದ ಹೊರಬರುವ ಕಷ್ಮಲಗಳನ್ನು ನಿಯಂತ್ರಿಸುವುದು ಕಷ್ಟವಾದ್ದರಿಂದ ಇದು ವಾತಾವರಣ ಮಾಲಿನ್ಯಕ್ಕೆ ಕಾರಣವಾಗುತ್ತದೆ. ಮನುಷ್ಯನಿಗೆ ಬೇಡವಾದ ಕಾರ್ಬನ್ ಮೊನಾಕ್ಸೈಡ್ ಕಾರ್ಖಾನೆಯ ಯಂತ್ರಗಳು ಹಾಗೂ ವಾಹನಗಳಿಂದ ಬಿಡುಗಡೆಯಾಗುವ ಹೊಗೆಯ ಮೂಲಕವಾಗಿ ವಾತಾವರಣವನ್ನು ಪ್ರವೇಶಿಸುತ್ತದೆ. ತೇವ ರೂಪದ ತ್ಯಾಜ್ಯ ವಸ್ತುಗಳು ಪಟ್ಟಣ ಪ್ರದೇಶದಲ್ಲಿ ವಾಯುಮಾಲಿನ್ಯಕ್ಕೆ ಪ್ರಮುಖ ಕಾರಣವಾಗಿವೆ. ಇಂತಹ ತ್ಯಾಜ್ಯ ವಸ್ತುಗಳನ್ನು ಸುಡುವುದರಿಂದ ಹೊಗೆ, ಕಾರ್ಬನ್ ಮೊನಾಕ್ಸೈಡ್, ನೈಟ್ರೋಜನ್ ಮುಂತಾದ ಅನಿಲಗಳು ಉಸಿರಾಟದ ಗಾಳಿಯೊಡನೆ ಮಿಶ್ರಣಗೊಳ್ಳುತ್ತವೆ. ಇಂಧನದ ಉದ್ದೇಶಕ್ಕೆ ಅಣುಶಕ್ತಿಯನ್ನು ಬಳಸುವಾಗ ಮತ್ತು ಅಣು ಶಕ್ತಿಯಿಂದ



9th_Kannada_Reader Term I.indd 23 29-01-2019 16:29:38

ಮಾಡಿದ ಅಸ್ತ್ರಗಳ ಪರೀಕ್ಷೆಯ ಸಂದರ್ಭದಲ್ಲಿ ವಾತಾವರಣ ಮಲಿನಗೊಳ್ಳುತ್ತದೆ. ಅಣು ಸ್ಥಾವರಗಳು, ರಾಸಾಯನಿಕ ಪರಿಷ್ಕರಣೆಯ ಸ್ಥಾವರಗಳು, ಸಂಶೋಧನಾ ಸಂಸ್ಥೆಗಳು, ಆಸ್ಪತ್ರೆಗಳು ಮುಂತಾದವುಗಳು ವಾಯುಮಾಲಿನ್ಯಕ್ಕೆ ಬಹುಮಟ್ಟಿಗೆ ಕಾರಣವಾಗುತ್ತವೆ.

ವಾಯು ಮಾಲಿನ್ಯವು ಮಾನವನ ಉಸಿರಾಟದ ಅಂಗಗಳ ಮೇಲೆ ಕೆಟ್ಟ ಪರಿಣಾಮವನ್ನು ಉಂಟು ಮಾಡುತ್ತದೆ. ಕಾರ್ಬನ್ ಮೊನಾಕ್ಸೈಡ್ ಶ್ವಾಸಕೋಶವನ್ನು ಪ್ರವೇಶಿಸಿದಾಗ ಅದು ಹಿಮೋಗ್ಲೋಬಿನ್ ಜೊತೆಗೆ ಸೇರಿ ಕಾರ್ಬನ್ಸ್ ಹಿಮೋಗ್ಲೋಬಿನ್ ಆಗಿ ದೇಹಕ್ಕೆ ಬೇಕಾದ ಆಮ್ಲಜನಕದ ಕೊರತೆಯನ್ನುಂಟು ಮಾಡುತ್ತದೆ. ಸಲ್ಫರ್ ಡೈ ಆಕ್ಸೈಡ್‌ನಿಂದ ಕೆಮ್ಮು, ಕಣ್ಣಿನಲ್ಲಿ ಉರಿ ಇತ್ಯಾದಿ ಉಂಟಾಗುತ್ತದೆ. ಹೈಡ್ರೋಜನ್ ಸಲ್ಫೈಡ್ ಪಟ್ಟಣಗಳಲ್ಲಿ ದುರ್ವಾಸನೆಯ ಸಮಸ್ಯೆಯನ್ನುಂಟು ಮಾಡುತ್ತದೆ. ಹೈಡ್ರೋಕಾರ್ಬನ್‌ಗಳಿಂದ ಶ್ವಾಸಕೋಶದ ಕ್ಯಾನ್ಸರ್ ಬರುವ ಸಾಧ್ಯತೆಯಿದೆ. ವಾಹನಗಳ ಹೊಗೆಯಿಂದ ವಾತಾವರಣವನ್ನು ಪ್ರವೇಶಿಸುವ ಸೀಸವು ಮಕ್ಕಳಲ್ಲಿ ಮಾನಸಿಕ ಆಘಾತವನ್ನುಂಟು ಮಾಡಬಲ್ಲದು. ಮಾಲಿನ್ಯಗೊಂಡ ಗಾಳಿ ಮಾನವನ ಮೇಲೆ ಮಾತ್ರವಲ್ಲದೆ ಪ್ರಾಣಿಗಳು ಮೊದಲಾದ ಇತರ ಜೀವರಾಶಿಗಳ ಮೇಲೂ, ಸಸ್ಯಸಂಪತ್ತಿನ ಮೇಲೂ ಒಟ್ಟು ವಾತಾವರಣದ ಮೇಲೂ ಸಾಕಷ್ಟು ಕೆಟ್ಟ ಪ್ರಭಾವವನ್ನು ಬೀರುತ್ತದೆ. ನದಿ, ಕೆರೆಗಳಲ್ಲಿರುವ ಮೀನು ಮತ್ತಿತರ ಜೀವರಾಶಿಗೆ ಅದು ವಿಷಪ್ರಾಯವಾಗುತ್ತದೆ.

ಕೈಗಾರಿಕೆಗಳಿಗೆ ಸೂಕ್ತವಾದ ಸ್ಥಳವನ್ನು ಆಯ್ದುಕೊಳ್ಳುವುದು, ಜನ ನಿಬಿಡವಾದ ಪ್ರದೇಶಗಳಿಂದ ಅವುಗಳನ್ನು ದೂರವಿಡುವುದು, ಕಾರ್ಖಾನೆ ಮತ್ತು ಪಟ್ಟಣಗಳಿಗೆ ಸರಿಯಾದ ಯೋಜನೆಯನ್ನು ರೂಪಿಸುವುದು, ಇಂಧನ ಬಳಕೆಯ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ನೀಡುವುದು, ಸಾರ್ವಜನಿಕ ಆರೋಗ್ಯ ಕೇಂದ್ರಗಳ ನಿರ್ವಹಣೆಯನ್ನು ಚೆನ್ನಾಗಿ ಮಾಡುವುದು ಮುಂತಾದವುಗಳ ಮೂಲಕ ವಾಯುಮಾಲಿನ್ಯವನ್ನು ಹತೋಟಿಯಲ್ಲಿಡಬಹುದು.



ಜಲ ಮಾಲಿನ್ಯ

ಜೀವ ರಾಶಿಗಳಿಗೆ ಗಾಳಿಯಷ್ಟೇ ಅಗತ್ಯವಾದ ವಸ್ತು ನೀರು. ನೀರು ಜಲಜನಕ ಮತ್ತು ಆಮ್ಲಜನಕಗಳ ಮಿಶ್ರಣವಾಗಿದೆ. ಸಹಜವಾಗಿರುವುದಕ್ಕಿಂತ ಭಿನ್ನವಾದ ಮಿಶ್ರಣಗಳನ್ನು ನೀರು ಒಳಗೊಂಡಿದ್ದರೆ ಅಂತಹ ನೀರು ಕಶ್ಮಲಗೊಂಡಿದೆ ಎಂದು ಹೇಳಬೇಕಾಗುತ್ತದೆ. ಇದರಿಂದ ಅಂತಹ ನೀರು ಸಹಜವಾದ ನೀರಿನಷ್ಟು ಉಪಯುಕ್ತವಾಗಿರುವುದಿಲ್ಲ. ಸಾರ್ವಜನಿಕ ಆರೋಗ್ಯಕ್ಕೆ ಹಾಗೂ ಪ್ರಾಕೃತಿಕ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಉತ್ತಮ ನೀರಿನ ಅವಶ್ಯಕತೆ ಇದೆ.

ಬೇರೆ ಬೇರೆ ಕಾರಣಗಳಿಂದಾಗಿ ಜಲ ಮಾಲಿನ್ಯ ಉಂಟಾಗುತ್ತದೆ. ವಾಯುಮಾಲಿನ್ಯದ ಹಾಗೆಯೇ ಇದರಲ್ಲೂ ಕಾರ್ಖಾನೆಗಳ ಪಾತ್ರ ಹಿರಿದು. ಸಾಮಾನ್ಯವಾಗಿ ಕಾರ್ಖಾನೆಗಳ ದ್ರವರೂಪದ ತ್ಯಾಜ್ಯ ಪದಾರ್ಥಗಳನ್ನೆಲ್ಲ ನದಿಯ ನೀರಿಗೆ ಹರಿಯ ಬಿಡಲಾಗುತ್ತದೆ. ಇಂತಹ ತ್ಯಾಜ್ಯ ಪದಾರ್ಥಗಳನ್ನು ಸಂಸ್ಕರಿಸದೆ ಬಿಡುಗಡೆ ಮಾಡಿದಾಗ ಕೆರೆ ಅಥವಾ ನದಿ ನೀರಿನಲ್ಲಿರುವ ಜೀವ ರಾಶಿಗಳನ್ನು ಅವು ನಾಶಗೊಳಿಸುತ್ತವೆ. ಕೆಲವು ಬಾರಿ ವಿಷಕಾರಿಯೂ ಆಗಿರುವ ಇಂತಹ ತ್ಯಾಜ್ಯ ಪದಾರ್ಥಗಳು ನದಿ ನೀರನ್ನು ಜೀವಿಗಳಿಗೆ ಅಪಾಯಕಾರಿಯನ್ನಾಗಿ ಮಾಡುತ್ತವೆ. ನದಿ ನೀರನ್ನು ಹಾಳುಗೆಡಹುವ ಇನ್ನೊಂದು ಪ್ರಮುಖ ಸಾಧನ ಪಟ್ಟಣದ ಕೊಳಚೆ ನೀರು. ದೊಡ್ಡ ಪಟ್ಟಣಗಳಾಗಲೀ ಅಥವಾ ಸಣ್ಣ ಪಟ್ಟಣಗಳಾಗಲೀ ಅವುಗಳಿಗೆ ಬೇಕಾದಷ್ಟು ಉತ್ತಮ

9th_Kannada_Reader Term I.indd 24 29-01-2019 16:29:39

ಗುಣಮಟ್ಟದ ನೀರನ್ನು ಒದಗಿಸುವ ಸೌಕರ್ಯವಿರಬೇಕು. ಅಂತೆಯೇ ಅಲ್ಲಿಂದ ತ್ಯಾಜ್ಯವಾದ ನೀರನ್ನು ಹೊರಕ್ಕೆ ಸಾಗಿಸಲು ಸರಿಯಾದ ವ್ಯವಸ್ಥೆ ಇರಬೇಕು. ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಾದಾಗ ಅಂತಹ ತ್ಯಾಜ್ಯ ನೀರು ಸುತ್ತಮುತ್ತಲಿನ ವಾತಾವರಣವನ್ನು ಕೆಡಿಸುತ್ತದೆ. ತ್ಯಾಜ್ಯ ನೀರನ್ನು ರಾಸಾಯನಿಕ ಕ್ರಿಯೆಗೆ ಒಳಪಡಿಸಿ ಅದನ್ನು ತೋಟಗಾರಿಕೆ ಮುಂತಾದ ಇತರ ಉದ್ದೇಶಗಳಿಗೆ ಬಳಸಿಕೊಳ್ಳುವಂತೆ ಮಾಡಬೇಕು.

ವ್ಯವಸಾಯದಲ್ಲಿ ಬಳಸುವ ರಾಸಾಯನಿಕ ಗೊಬ್ಬರಗಳೂ ಜಲಮಾಲಿನ್ಯಕ್ಕೆ ಕಾರಣವಾಗುತ್ತವೆ. ಇಂತಹ ಗೊಬ್ಬರಗಳಲ್ಲಿ ನೈಟ್ರೋಜನ್, ಪಾಸ್‌ಪರಸ್, ಪೊಟಾಷಿಯಂ ಮುಂತಾದ ಅಂಶಗಳಿದ್ದು ಅವುಗಳಿಂದ ಜಲಮಾಲಿನ್ಯವುಂಟಾಗುತ್ತದೆ. ಬೆಳೆಯ ರಕ್ಷಣೆಗಾಗಿ ಬಳಸುವ ಕ್ರಿಮಿನಾಶಕಗಳು ರೈತನ ಪರಿಸರದ ನೀರನ್ನು ವಿಷಯುಕ್ತಗೊಳಿಸುವುದರ ಜೊತೆಗೆ ಅವನಿಗೆ ಉಪಕಾರಿ ಜೀವಿಗಳಾದ ಕಪ್ಪೆ, ಎರೆಹುಳ ಮುಂತಾದವುಗಳ ನಾಶಕ್ಕೆ ಕಾರಣವಾಗುತ್ತವೆ. ಸಮುದ್ರಯಾನದಲ್ಲಿ ಹಡುಗುಗಳು ಅಪಘಾತಕ್ಕೀಡಾದಾಗ ಅಥವಾ ಯುದ್ಧದ ಸಂದರ್ಭದಲ್ಲಿ ಹಡುಗುಗಳ ಮೇಲೆ ನಡೆಯುವ ದಾಳಿಯಿಂದ ಅಥವಾ ಟ್ಯಾಂಕರ್ ಮುಂತಾದ ತೈಲ ವಾಹನಗಳನ್ನು ತೊಳೆಯುವ ಸಂದರ್ಭದಲ್ಲಿ ಸಮುದ್ರದ ನೀರು ಅತಿಯಾದ ಮಾಲಿನ್ಯಕ್ಕೊಳಗಾಗುತ್ತದೆ. ಇಂತಹ ಸ್ವಯಂಕೃತ ಅಪರಾಧಗಳನ್ನು ಎಸಗದಿದ್ದಲ್ಲಿ ಜಲಮಾಲಿನ್ಯದ ದುಷ್ಪರಿಣಾಮಗಳಿಂದ ಮಾನವನು ಮುಕ್ತನಾಗಬಹುದು.

ಮಣ್ಣು ಮತ್ತು ನೆಲದ ಮಾಲಿನ್ಯ



ವ್ಯವಸಾಯ ಮತ್ತು ಅವ್ಯವಸ್ಥಿತ ನೈರ್ಮಲ್ಯ ಕ್ರಮಗಳಿಂದ ಸೃಷ್ಟಿಯಾಗುವ ಘನ ಮತ್ತು ಅರ್ಧ ಘನ ರೂಪದ ತ್ಯಾಜ್ಯ ವಸ್ತುಗಳು ಮಣ್ಣಿನ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಮಣ್ಣು ಮತ್ತು ನೆಲದ ಮಾಲಿನ್ಯದಲ್ಲಿ ಅದಕ್ಕೆ ಕಾರಣವಾದ ವಸ್ತುಗಳು ತುಂಬಾ ಅವಧಿಯ ತನಕ ಇರುವುದರಿಂದ ಅದು ವಾಯು ಮತ್ತು ನೀರಿನ ಮಾಲಿನ್ಯಕ್ಕಿಂತ ಭಿನ್ನವಾಗಿದೆ. ಆಯಾ ದೇಶದ ಜೀವನ ಮಟ್ಟಕ್ಕೆ ಅನುಗುಣವಾಗಿ ವರ್ಷದಿಂದ ವರ್ಷಕ್ಕೆ ಘನ ರೂಪದ ತ್ಯಾಜ್ಯ ವಸ್ತುಗಳೂ ಹೆಚ್ಚಾಗುತ್ತವೆ. ಅತಿ ವೇಗದ ನಗರೀಕರಣದಿಂದ ಕಟ್ಟಡಗಳ ಸಂಖ್ಯೆ ಅಧಿಕಗೊಂಡು ನಗರಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಹಾಕುವುದಕ್ಕೆ ಜಾಗವಿಲ್ಲದಂತಾಗಿದೆ. ಈ ತ್ಯಾಜ್ಯ ವಸ್ತುಗಳು ನೆಲ ಮಾಲಿನ್ಯವನ್ನುಂಟು ಮಾಡುವುದಲ್ಲದೆ ನೀರು ಮತ್ತು ವಾಯ ಮಾಲಿನ್ಯಕ್ಕೂ ಕಾರಣಗಳಾಗಿವೆ. ನಗರದ ತ್ಯಾಜ್ಯಗಳ ರಾಶಿಯಿಂದ ವಿಷಯುಕ್ತವಾದ ರಸಗಳು ಭೂಮಿಯ ಆಳಕ್ಕಿಳಿದು ಅಂತರ್ಜಲವನ್ನು ಕೆಡಿಸುತ್ತದೆ. ವ್ಯವಸಾಯದಲ್ಲಿ ಬಳಸುವ ರಸಗೊಬ್ಬರಗಳೂ, ಕ್ರಿಮಿನಾಶಕಗಳೂ ಕೂಡ ಮಣ್ಣಿನ ಸತ್ವದ ನಾಶಕ್ಕೆ ಕಾರಣವಾಗುತ್ತದೆ. ಅಣು ವಿಕಿರಣದಿಂದಲೂ ಮಣ್ಣಿನ ಮಾಲಿನ್ಯ ಉಂಟಾಗುತ್ತದೆ.

ಶಬ್ದ ಮಾಲಿನ್ಯ

ಮನುಷ್ಯನ ಭೌತಿಕ ಪರಿಸರದಲ್ಲಿ ಅವನನ್ನು ಎಚ್ಚರಿಸುವ ಪರಿಣಾಮಕಾರಿಯಾದ ಮಾಧ್ಯಮವೆಂದರೆ ಶಬ್ದ ಅಥವಾ ಧ್ವನಿ. ಈ ಶಬ್ದ ಕರ್ಕಶವಾಗಿ ಸಹಿಸುವುದಕ್ಕೇ ಅಸಾಧ್ಯವಾದಾಗ ಅದು ಶಬ್ದ ಮಾಲಿನ್ಯವೆನ್ನಿಸುತ್ತದೆ. ಮನುಷ್ಯಕೃತವಾದ ಶಬ್ದವು ಕೈಗಾರಿಕೆ ಮತ್ತು ವಾಹನಗಳಿಂದ ಉಂಟಾಗುತ್ತದೆ. ಆಧುನಿಕ ನಾಗರಿಕತೆಯ ಕಾರಣದಿಂದ ಉಂಟಾಗುವ ಅತಿಯಾದ ಶಬ್ದವು ನಮ್ಮ ಪರಿಸರವನ್ನು ಮಲಿನಗೊಳಿಸುತ್ತದೆ. ಕಾರ್ಖಾನೆಗಳಿಂದ, ಅದರಲ್ಲೂ ಮುಖ್ಯವಾಗಿ ಯಾಂತ್ರೀಕೃತ ಗರಗಸಗಳಿಂದ, ಕೊರೆಯುವ ಯಂತ್ರಗಳಿಂದ ಉಂಟಾಗುವ ಶಬ್ದವು ಸಾರ್ವಜನಿಕರಿಗೆ ಉಪಟಳಕಾರಿಯಾಗಿದೆ.

ವಾಹನಗಳಿಂದಾಗಿ ಅತಿ ಹೆಚ್ಚಿನ ಶಬ್ದ ಮಾಲಿನ್ಯ

9th_Kannada_Reader Term I.indd 25 29-01-2019 16:29:39

ಉಂಟಾಗುತ್ತದೆ. ಏರುತ್ತಿರುವ ಜನ ಸಂಖ್ಯೆಯ ಜೊತೆಗೆ ವಾಹನಗಳ ಸಂಖ್ಯೆಯೂ ದಿನೇದಿನೇ ವೃದ್ಧಿಯಾಗುತ್ತಿದೆ. ದೊಡ್ಡದಾದ ಮತ್ತು ವೇಗದ ಜೆಟ್ ವಿಮಾನಗಳು ಈಗ ಸಿದ್ಧವಾಗಿವೆ. ವಾಯು ಯಾನದಿಂದ ಹಾನಿ ಎಷ್ಟು ಹೆಚ್ಚಾಗಿದೆಯೆಂದರೆ ವಿಮಾನ ನಿಲ್ದಾಣದ ಆಸುಪಾಸಿನಲ್ಲಿ ವಾಸಿಸುವುದಕ್ಕೆ ಯಾರೂ ಬಯಸುವುದಿಲ್ಲ. ವಿಮಾನವು ವೇಗಾಧಿಕ್ಯವನ್ನು ಪಡೆಯುವಾಗ ಇದ್ದಕ್ಕಿದ್ದ ಹಾಗೆ ಅಧಿಕ ಶಬ್ದವುಂಟಾಗುತ್ತದೆ. ಇದು ಮಾನಸಿಕ ತುಮುಲವನ್ನುಂಟು ಮಾಡುವುದರ ಜೊತೆಗೆ ಪ್ರಾಣಿ ಪಕ್ಷಿಗಳಿಗೂ ಭಯವನ್ನುಂಟು ಮಾಡುತ್ತದೆ. ಆದ್ದರಿಂದ ವಿಮಾನದಿಂದ ಉಂಟಾಗುವ ಶಬ್ದವು ಬಹಳ ಹಾನಿಕಾರಿಯಾಗಿದೆ.

ಆರೋಗ್ಯದ ಮೇಲೆ ಶಬ್ದ ಮಾಲಿನ್ಯದಿಂದಾಗಿ ಹಲವು ರೀತಿಯ ಪರಿಣಾಮವುಂಟಾಗುತ್ತದೆ. ನೇರವಾದ ಪರಿಣಾಮವು ಶ್ರವಣ ಶಕ್ತಿಯ ಮೇಲಾಗುತ್ತದೆ. ಅನಿರೀಕ್ಷಿತವಾದ ದೊಡ್ಡ ಸದ್ದುಗಳಿಂದ ಕಿವಿಯ ತಮಟೆ ಹಾಳಾಗುತ್ತದೆ. ಇದ್ದಕ್ಕಿದ್ದ ಹಾಗೆ ದಿಢೀರನೆ ಕೇಳಿಸುವ ದೊಡ್ಡ ಸದ್ದುಗಳಿಂದ ಒಳಕಿವಿಗೆ ಮತ್ತು ಕೂದಲಿನ ಮೂಲಕ್ಕೆ ಬಹಳ ಹಾನಿಯಾಗುತ್ತದೆ. ಎದೆ ಬಡಿತದಲ್ಲಿ ಏರುಪೇರಾಗುತ್ತದೆ. ರಕ್ತದೊತ್ತಡ ಹೆಚ್ಚಾಗುತ್ತದೆ. ಮಾತ್ರವಲ್ಲದೆ, ರಕ್ತ ದಪ್ಪಗೊಳ್ಳುವ ಸಾಧ್ಯತೆಯೂ ಇದೆಯೆಂದು ಇತ್ತೀಚಿನ ಅಧ್ಯಯನಗಳು ತಿಳಿಸುತ್ತವೆ.

ಶಬ್ದ ಮಾಲಿನ್ಯವನ್ನು ಪೂರ್ಣವಾಗಿ ತಡೆಗಟ್ಟಲು ಅಸಾಧ್ಯವಾದರೂ ಅದನ್ನು ಹತೋಟಿಯಲ್ಲಿಡಬೇಕಾದ ಅನಿವಾರ್ಯತೆ ಇದೆ.



ಸಾರ್ವಜನಿಕ ಜೀವನದ ನೆಮ್ಮದಿಗಾಗಿ ಈ ಪ್ರಯತ್ನವನ್ನು ಕೈಗೊಳ್ಳಬೇಕು. ಮುಖ್ಯವಾಗಿ ಕೈಗಾರಿಕಾ ಸಂಬಂಧಿತವಾದ ಶಬ್ದವನ್ನು ಅದರ ಮೂಲದಲ್ಲೇ ಕಡಿಮೆ ಮಾಡಬೇಕು. ಅತಿ ಹೆಚ್ಚು ಸದ್ದನ್ನುಂಟು ಮಾಡುವ ಯಂತ್ರಗಳನ್ನು ಬದಲಿಸಬೇಕು. ಹೆಚ್ಚು ಸದ್ದು ಉಂಟು ಮಾಡುವ ಫ್ಯಾನ್‌ಗಳ ಬ್ಲೇಡುಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಅಥವಾ ತಿರುಗುವ ವೇಗವನ್ನು ಕಡಿಮೆಗೊಳಿಸುವುದರಿಂದ ಶಬ್ದ ಮಾಲಿನ್ಯವನ್ನು ಕಡಿಮೆ ಮಾಡಬಹುದಾಗಿದೆ. ಶಬ್ದ ಹೊರಕ್ಕೆ ಕೇಳಿಸದ ಹಾಗೆ ಕಾರ್ಖಾನೆಯ ಒಳಗೆ ಯಂತ್ರಗಳಿಗೆ ಆವರಣವನ್ನು ನಿರ್ಮಿಸುವ ಮೂಲಕವೂ ಶಬ್ದ ಮಾಲಿನ್ಯವನ್ನು ತಡೆಗಟ್ಟಬಹುದು. ಕಾರ್ಖಾನೆಯಲ್ಲಿ ಕೆಲಸ ಮಾಡುವ ನೌಕರರು ನಿರಂತರ ಶಬ್ದ ಮಾಲಿನ್ಯದ ಬಾಧೆಗೆ ಒಳಗಾಗುವರು. ಕಿವಿಯ ರಂಧ್ರವನ್ನು ತಾತ್ಕಾಲಿಕವಾಗಿ ಮುಚ್ಚಿಕೊಳ್ಳುವ ಸಾಧನಗಳಿಂದಲೂ ರಕ್ಷಣೆಯನ್ನು ಪಡೆದುಕೊಳ್ಳಬಹುದು.

ಪರಿಸರ ಮಾಲಿನ್ಯದಿಂದ ಮನುಷ್ಯನ ಮೇಲೆ, ಪ್ರಾಣಿಗಳ ಮೇಲೆ, ಗಿಡ ಮರ ಬಳ್ಳಿಗಳ ಮೇಲಾಗುವ ದುಷ್ಪರಿಣಾಮಗಳು ಅಪಾರ. ಪರಿಸರ ಮಾಲಿನ್ಯದ ಎಷ್ಟೋ ಜಾಗತಿಕ ಪರಿಣಾಮಗಳು ತಿಳಿದಿದ್ದರೂ, ಅವುಗಳಿಂದಾಗುವ ದೀರ್ಘಾವಧಿಯ ಪರಿಣಾಮಗಳು ಏನೆಂದು ಸಂಪೂರ್ಣವಾಗಿ ನಮಗೆ ತಿಳಿದಿಲ್ಲ. ವಾತಾವರಣದಲ್ಲಿ ನಡೆಯುವ ಭೌತಿಕ ಹಾಗೂ ರಾಸಾಯನಿಕ ಪ್ರಕ್ರಿಯೆಗಳ ಕುರಿತು ಹಾಗೂ ಗಾಳಿ ಮತ್ತು ಸಮುದ್ರದ ಮುಖಾಮುಖಿಯ ಪರಿಣಾಮಗಳ ಕುರಿತು ನಮ್ಮ ಜ್ಞಾನ ಇನ್ನೂ ಅಪೂರ್ಣವಾದುದು, ದೀರ್ಘಾವಧಿಯಲ್ಲಿ ನಡೆಯುವ ಪ್ರಾಕೃತಿಕ ಬದಲಾವಣೆಗಳ ಬಗ್ಗೆ ಸಾಕಷ್ಟು ಜ್ಞಾನವಿಲ್ಲದೆ ವಾತಾವರಣದ ಮೇಲೆ ಮಾಲಿನ್ಯದ ಪರಿಣಾಮ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಅಂದಾಜು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ಇನ್ನೂ ಸಂಶೋಧನೆಗಳು ನಡೆಯಬೇಕಾದ ಅಗತ್ಯವಿದೆ.

9th_Kannada_Reader Term I.indd 26 29-01-2019 16:29:39

ಕೃತಿ–ಕರ್ತೃ ಪರಿಚಯ

ಈ ಪಾಠವನ್ನು ಶ್ರೀ. ಕೆ. ವಿಶ್ವನಾಥ ಅವರು ರಚಿಸಿದ್ದಾರೆ. ಇವರು ಚೆನ್ನೈ ಸಮೀಪದ ತಾಂಬರಂನಲ್ಲಿರುವ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಹಲವಾರು ಲೇಖನಗಳನ್ನು ರಚಿಸಿದ್ದಾರೆ. ತಮಿಳಿನಿಂದ ಕನ್ನಡಕ್ಕೆ ಅನುವಾದಗಳನ್ನೂ ಮಾಡಿದ್ದಾರೆ.

ಪರಿಸರವನ್ನು ವಿಷಗೊಳಿಸುವುದೇ ಮಾಲಿನ್ಯ. ಪ್ರಸ್ತುತ ಪಾಠದಲ್ಲಿ ವಾಯು, ಜಲ, ಮಣ್ಣು–ನೆಲ, ಶಬ್ದ ಮಾಲಿನ್ಯಗಳ ನಾನಾ ಮುಖಗಳನ್ನು ಅವುಗಳ ಪರಿಣಾಮ ಸಮೇತ ವಿವರಿಸಲಾಗಿದೆ. ಪ್ರತಿಯೊಬ್ಬ ಪ್ರಜೆಯೂ ಪರಿಸರ ಮಾಲಿನ್ಯವನ್ನು ತಡೆಗಟ್ಟುವಲ್ಲಿ ಸರಿಯಾದ ಪಾತ್ರ ವಹಿಸ ಬೇಕೆಂಬುದು ಈ ಪಾಠದ ಉದ್ದೇಶವಾಗಿದೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಪರಿಸರ ಮಾಲಿನ್ಯ ಎಂದರೇನು ?
2. ವಾಯು ಮಾಲಿನ್ಯಕ್ಕೆ ಕಾರಣಗಳೇನು ? ಅದನ್ನು ಹೇಗೆ ಹತೋಟಿಯಲ್ಲಿಡಬಹುದು ?
3. ವಾಯುಮಾಲಿನ್ಯದಿಂದ ಮಾನವನ ಮೇಲಾಗುವ ಪರಿಣಾಮಗಳೇನು ?
4. ನದಿಗಳ ನೀರು ಮಾಲಿನ್ಯಕ್ಕೆ ಒಳಗಾಗಲು ಕಾರಣವೇನು ?
5. ಅಂತರ್ಜಲ ಕೆಡುವುದಕ್ಕೆ ಕಾರಣವೇನು ?
6. ಶಬ್ದ ಮಾಲಿನ್ಯ ಹೇಗೆ ಉಂಟಾಗುತ್ತದೆ. ?
7. ಮನುಷ್ಯನ ಮೇಲೆ ಶಬ್ದ ಮಾಲಿನ್ಯದ ಪರಿಣಾಮವೇನು ?
8. ಶಬ್ದ ಮಾಲಿನ್ಯವನ್ನು ಹೇಗೆ ನಿಯಂತ್ರಿಸಬಹುದು ?
9. ಮಣ್ಣು–ನೆಲದ ಮಾಲಿನ್ಯಕ್ಕೆ ಕಾರಣಗಳೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ವಾಯು ಮಾಲಿನ್ಯಕ್ಕೆ ಕಾರಣಗಳು ಹಾಗೂ ಅದರ ತಡೆಗಟ್ಟುವಿಕೆಯ ಕುರಿತು ಬರೆಯಿರಿ.
2. ಪರಿಸರ ಮಾಲಿನ್ಯದ ನಾನಾ ಮುಖಗಳನ್ನೂ ಅದರ ಪರಿಣಾಮಗಳನ್ನೂ ಪರಿಚಯಿಸಿರಿ.
3. ಶಬ್ದ ಮಾಲಿನ್ಯಕ್ಕೆ ಕಾರಣಗಳೇನು ? ಈ ಶಬ್ದ ಮಾಲಿನ್ಯದಿಂದ ಮನುಜ ಕುಲ ಹೇಗೆ ಪಾರಾಗಬಹುದು ?

ಚಟುವಟಿಕೆಗಳು

1. ನೀವು ವಾಸಿಸುವ ಪರಿಸರದಲ್ಲಿ ಮಾಲಿನ್ಯ ಉಂಟಾಗಲು ಕಾರಣವಾಗುವ ಅಂಶಗಳನ್ನು ಸಂಗ್ರಹಿಸಿ ಒಂದು ಪ್ರಬಂಧ ಬರೆಯಿರಿ.
2. ನಿಮ್ಮ ಬೀದಿಯನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಅಭಿಯಾನ ಒಂದನ್ನು ಏರ್ಪಡಿಸಿ ಎಲ್ಲರನ್ನೂ ಜಾಗೃತಗೊಳಿಸಿರಿ.



9th_Kannada_Reader Term I.indd 27 29-01-2019 16:29:40

ವ್ಯಾಕರಣ

ಘಟಕ ಎರಡು

ನಾಮಪದಗಳು

ನಾಮ ಎಂದರೆ ಹೆಸರು. ನಾಮಪದ ಎಂದರೆ ವಸ್ತುಗಳ ಹೆಸರನ್ನು ಸೂಚಿಸುವ ಪದ. ಆದ್ದರಿಂದ ಇದನ್ನು ವಸ್ತುವಾಚಕವೆಂದೂ ಕರೆಯಬಹುದು. ಉದಾಹರಣೆಗೆ : ಅರ್ಜುನ, ಮನೆ, ಸೀತೆ, ನಾಯಿ, ತಾಳವಾಡಿ, ದಾರವಾಡ... ಇತ್ಯಾದಿ. 'ವಸ್ತುಗಳ ಹೆಸರುಗಳನ್ನು ಹೇಳುವ ಶಬ್ದಗಳೆಲ್ಲ ವಸ್ತುವಾಚಕ 'ನಾಮಪದಗಳು'. ವ್ಯಕ್ತಿ, ವಸ್ತು, ಪ್ರಾಣಿ, ಸ್ಥಳ ಹಾಗೂ ಭಾವಗಳ ಹೆಸರುಗಳನ್ನು ಇವು ತಿಳಿಸುತ್ತವೆ. ವಸ್ತುವಾಚಕ ನಾಮಪದಗಳಲ್ಲಿ ಪ್ರಮುಖವಾದವು ಮೂರು. ಅವುಗಳು, ರೂಢನಾಮ, ಅಂಕಿತ ನಾಮ ಹಾಗೂ ಅನ್ವರ್ಥ ನಾಮ.

ರೂಢ ನಾಮ : ಬಹುಕಾಲದಿಂದ ರೂಢಿಯಿಂದ ಬಂದ ಒಂದು ವರ್ಗದ ಹೆಸರುಗಳನ್ನು ತಿಳಿಸುವ ಸಾಮಾನ್ಯವಾಚಕಗಳು ರೂಢನಾಮ ಎನ್ನಿಸುವುವು.

ಉದಾಹರಣೆಗೆ : ಅರಸ, ಬೆಟ್ಟ, ಮನುಷ್ಯ, ಗಿಡ, ಮರ, ಪ್ರಾಣಿ, ಹೆಂಗಸು, ದೇಶ, ನದಿ ಇತ್ಯಾದಿ.

ಅಂಕಿತ ನಾಮ : ವ್ಯವಹಾರದ ಅನುಕೂಲಕ್ಕಾಗಿ ಪ್ರತಿಯೊಂದು ವಸ್ತುವನ್ನೂ ಪ್ರತ್ಯೇಕವಾಗಿ ಗುರುತಿಸಲು ಇಟ್ಟ ಹೆಸರುಗಳು ಅಂಕಿತ ನಾಮಗಳು.

ಉದಾಹರಣೆಗೆ : ಪುಲಿಕೇಶಿ, ಚಾಮುಂಡಿ ಬೆಟ್ಟ, ಭೀಮ, ಮಲ್ಲಿಗೆ, ಮಾವು, ನಾಯಿ, ಜಾನಕಿ, ಭಾರತ ದೇಶ, ಗಂಗಾನದಿ ಇತ್ಯಾದಿ.

ಅನ್ವರ್ಥ ನಾಮ : ವಸ್ತುವಿನ, ವ್ಯಕ್ತಿಯ ಗುಣ ಲಕ್ಷಣ ಸ್ವಭಾಗಳಿಗನುಗುಣವಾಗಿ ಇಡಲಾದ ಹೆಸರುಗಳೇ ಅನ್ವರ್ಥನಾಮಗಳು.

ಉದಾಹರಣೆಗೆ : ಕುರುಡ, ಕುಂಟ, ಬಿಳಿಯ, ದಡಿಯ, ಸೊಣಕಲ, ಕಿರಿಯ, ವೈದ್ಯ, ಅಂಬಿಗ, ಯೋಗಿ, ವಿಜ್ಞಾನಿ, ಚಾಲಕ ಇತ್ಯಾದಿ.

ಸರ್ವನಾಮಗಳು

ನಾಮ ಪದಕ್ಕೆ ಬದಲಾಗಿ ಉಪಯೋಗಿಸುವ ಪದಗಳಿಗೆ ಸರ್ವನಾಮ ಎಂದು ಹೆಸರು.

ಉದಾಹರಣೆಗೆ : 'ಶಾಮಣ್ಣ ಪೇಟೆಯಿಂದ ಮನೆಗೆ ಬಂದನು. ಅವನು ತುಂಬಾ ಬಳಲಿದಂತೆ ತೋರುತ್ತಿತ್ತು'.

ಇಲ್ಲಿ 'ಅವನು' ಎಂಬುದು ಶಾಮಣ್ಣ ಎಂಬುದಕ್ಕೆ ಬದಲಾಗಿ ಬಳಸಲಾಗಿರುವ ಪದ. ಹೀಗೆ ನಾಮ ಪದಗಳಿಗೆ ಬದಲಾಗಿ ಬಳಸಲಾಗುವ ಅವನು, ಅವಳು, ಇವನು, ಇವಳು, ನೀನು, ನೀವು, ಅದು, ಅವು, ಇದು, ನಾನು, ನಾವು ಮೊದಲಾದ ಪದಗಳನ್ನು ಸರ್ವನಾಮಗಳೆಂದು ಕರೆಯಲಾಗುವುದು.

9th_Kannada_Reader Term I.indd 28 29-01-2019 16:29:40

ಘಟಕ
ಮೂರು

ಜನಪದ



9th_Kannada_Reader Term I.indd 29 29-01-2019 16:29:42

ಘಟಕ ಮೂರು

ಜನಪದ ಕಲೆಗಳ ವೈಭವ



ಜನಪದ ಕಲೆಗಳು ಮನುಷ್ಯನಷ್ಟೇ ಪ್ರಾಚೀನವಾದವು. ಪರಿಸರ ವೀಕ್ಷಣೆ ಮತ್ತು ಅನುಕರಣೆಯಿಂದ ಅರಿತದ್ದನ್ನು ರೂಪಿಸಿಕೊಂಡಿರುವುದು ಮಾನವನ ಸಹಜ ಗುಣ. ಹಾಗಾಗಿ ಇಂತಹ ಕಲೆಗಳು ಅಸ್ತಿತ್ವಕ್ಕೆ ಬಂದವು. ಕಲೆ ಮನಸ್ಸಿಗೆ ನೆಮ್ಮದಿ ಸಂತೋಷ ನೀಡುವುದಲ್ಲದೆ ಮುಂದಿನ ಪೀಳಿಗೆಗೆ ಆಕರವೂ ಆಗುತ್ತದೆ. ಜನಪದ ಸಂಸ್ಕೃತಿಯ ಪ್ರತಿ ಹೆಜ್ಜೆಯಲ್ಲೂ ಜನಪದ ಕಲೆಗಳನ್ನು ಕಾಣಬಹುದು. ಜನಪದರ ಬದುಕೇ ಒಂದು ಕಲೆ. ಮುಗ್ಧ ಜನರಿಗೆ ತಿಳಿದೋ, ತಿಳಿಯದೆಯೋ ಅವರ ಬದುಕಿನಲ್ಲಿ ಕಲೆ ಹಾಸು ಹೊಕ್ಕಾಗಿದೆ. ಜನಪದ ಕಲೆಗಳಿಗೂ, ಜೀವನಕ್ಕೂ ನಿಕಟ ಸಂಬಂಧವಿದೆ. ನಿತ್ಯ ದುಡಿಮೆಯ ಆಯಾಸ, ಬದುಕಿನ ಏಕತಾನತೆ, ಆಸರಿಕೆ, ಬೇಸರಿಕೆಯನ್ನು ನಿವಾರಿಸಿಕೊಳ್ಳಲು ಮನುಷ್ಯ ಕಲೆಗಳ ಮೊರೆ ಹೋಗಿದ್ದಾನೆ. ಇವುಗಳನ್ನು ಜತನವಾಗಿ ರಕ್ಷಿಸಿ ಬೆಳೆಸಿಕೊಂಡು ಬಂದಿದ್ದಾನೆ. ಪ್ರಾರಂಭದಲ್ಲಿ ಆಂಗಿಕ ಸಂಜ್ಞೆಗಳಿಂದ ಕೂಡಿದ್ದ ಕಲೆಗಳು ಕ್ರಮೇಣ ಚಿತ್ರ, ಶಿಲ್ಪ, ಹಾಡು, ಕುಣಿತ ಮೊದಲಾದ ಆಯಾಮಗಳನ್ನು ಪಡೆದುಕೊಂಡಿವೆ. ಜನಪದ ನೃತ್ಯಗಳು ಕರ್ನಾಟಕದಾದ್ಯಂತ ಪ್ರಚಲಿತವಿದ್ದು ನಲವತ್ತಕ್ಕೂ ಹೆಚ್ಚು ಪ್ರಕಾರಗಳು ರೂಢಿಯಲ್ಲಿವೆ. ಕೆಲವು ಪ್ರಾದೇಶಿಕವಾಗಿ ಪ್ರಚಲಿತವಾಗಿದ್ದು ಜನಪ್ರಿಯತೆ ಪಡೆದಿವೆ. ಅವುಗಳಲ್ಲಿ ಕೆಲವು ಕಲೆಗಳ ಪರಿಚಯವನ್ನು ಇಲ್ಲಿ ನೀಡಲಾಗಿದೆ.

ವೀರಗಾಸೆ

ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ವೀರನೃತ್ಯ. ಇದು ಸಾಮೂಹಿಕ ನೃತ್ಯವನ್ನೊಳಗೊಂಡ ಕರ್ನಾಟಕದ ಜನಪದ ಕಲೆ. ಇಬ್ಬರಿಂದ ಮೂವತ್ತು ಮಂದಿ ಇದರಲ್ಲಿ ಭಾಗವಹಿಸುತ್ತಾರೆ. ಪಂಚವಾದ್ಯಗಳಾದ ತಾಳ, ಶೃತಿ, ಚಮಾಳ, ಓಲಗ, ಕರಡೆಗಳನ್ನು ಇದರಲ್ಲಿ ಬಳಸಲಾಗುತ್ತಿದೆ. ಕರಡೆಯು ಕುಣಿತದಲ್ಲಿ ಅನಿವಾರ್ಯ ವಾದ್ಯವಾಗಿರುತ್ತದೆ.

ವೀರಗಾಸೆ ಕುಣಿತದವರ ವೇಷಭೂಷಣಗಳು ವಿಶೇಷವಾಗಿರುತ್ತವೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಹರಿಷಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ, ಕಾಲ್ಗೆಜ್ಜೆಗಳನ್ನು ಇವರು ಧರಿಸುತ್ತಾರೆ.



9th_Kannada_Reader Term I.indd 30 29-01-2019 16:29:42

'ಅಹಹಾ... ರುದ್ರ, ಅಹಹಾ... ದೇವಾ!' ಎಂದು ವೀರಗಾಸೆಯ ನರ್ತಕ ಹೇಳುವ ಒಡಪಿನೊಂದಿಗೆ ಕುಣಿತ ಪ್ರಾರಂಭವಾಗುತ್ತದೆ. ಈ ಕುಣಿತದಲ್ಲಿ ವೀರಭದ್ರ ಹುಟ್ಟಿದ ಸಂದರ್ಭದ ವರ್ಣನೆ ಹೀಗಿದೆ : 'ವೀರಭದ್ರ ದೇವರು ಹುಟ್ಟಿದ ರೂಪ ಎಂದು ಎಂತೆಂದೊಡೆ ಹುಟ್ಟಿದಾಗಲೇ ಹೂವಿನಗಾಸೆ, ಮಂಜುಳಗಾಸೆ, ಬ್ರಹ್ಮಗಾಸೆ, ವಿಷ್ಣುಗಾಸೆ, ರುದ್ರಗಾಸೆ, ಮೆಟ್ಟಿದ ಹೊನ್ನಾವಿಗೆ, ಸಾವಿರ ಶಿರ, ಎರಡು ಸಾವಿರ ಭುಜ, ಮೂರು ಸಾವಿರ ನಯನ, ಕೆಕ್ಕರಿಸಿದ ಕಣ್ಣು, ಜುಂಜು ಮಂಡೆ ಇಂತಪ್ಪ ಶ್ರೀ ವೀರಭದ್ರ ದೇವರು ಹೋಮದ ಕುಂಡದ ಒಳಗೆ ಹೇಗೆ ಬರುತ್ತಾರೆಂದರೆ...'

ಚಮಾಳ ಹಾಗೂ ಕರಡೆಯ ಬಡಿತ ಇವರ ಕುಣಿತಕ್ಕೆ ಸ್ಫೂರ್ತಿ ನೀಡುತ್ತವೆ. ನಾಲ್ಕೈದು ಗತಿಗಳಿರುವ ವೀರಗಾಸೆಯ ಕುಣಿತದಲ್ಲಿ ಒಂದೊಂದು ಗತಿಯ ಕುಣಿತದ ನಂತರ ಮತ್ತೊಬ್ಬ ನರ್ತಕ ಒಡಪು ಹೇಳುತ್ತಾನೆ. ಒಡಪು ಮುಗಿಯುತ್ತಿದ್ದಂತೆ ವಾದ್ಯಗಳ ಭೋರ್ಗರೆತದೊಂದಿಗೆ ಮುಂದಿನ ಗತಿಯ ಕುಣಿತ ಪ್ರಾರಂಭವಾಗುತ್ತದೆ. ಗತಿಯಿಂದ ಗತಿಗೆ ಕುಣಿತ, ಬಡಿತಗಳ ವೇಗ ಹೆಚ್ಚುತ್ತಾ ಹೋಗುತ್ತದೆ.

ವೀರಗಾಸೆ ಸಾಮಾಜಿಕ ನೃತ್ಯ. ವೀರಭದ್ರ ಕುಣಿತಕ್ಕೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಲಿಂಗಬಾರ, ಲಿಂಗಧೀರ, ಲಿಂಗವೀರ ಕುಣಿತಗಳೆಂಬ ಹೆಸರೂ ಇದೆ. ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದು ಇದು ಜನಪ್ರಿಯವಾಗಿದೆ. ವೀರಶೈವ ಸಂಪ್ರದಾಯದವರು ವಂಶ ಪಾರಂಪರ್ಯವಾಗಿ ಈ ವೃತ್ತಿಯನ್ನು ಮುನ್ನಡೆಸುತ್ತಾ ಬರುತ್ತಿದ್ದಾರೆ. ವೀರಭದ್ರ ವೇಷಧಾರಿಯು ದಕ್ಷಯಾಗ, ವೀರಭದ್ರನ ಜನನ ಮತ್ತು ವೀರಭದ್ರನ ವಿಜಯ ಮುಂತಾದ ಒಡಪುಗಳನ್ನು ಹೇಳುತ್ತಾನೆ. ಇದಕ್ಕೆ 'ಖಡ್ಗ' ಎಂದೂ ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಇದನ್ನು 'ಒಡಪು' ಎನ್ನುವರು. ಮತ್ತೊಬ್ಬ ವ್ಯಕ್ತಿ, 'ಭಲರೇ ವೀರ, ಆಹಹಾ... ವೀರ' ಎಂದು ಕಾಕು ಹೇಳುತ್ತಾ ಜಾಗಟೆ ಬಡಿಯುತ್ತಾ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ.

ಸಾಮಾನ್ಯವಾಗಿ ಮದುವೆ, ಗೃಹಪ್ರವೇಶ, ಜಾತ್ರೆ, ಉತ್ಸವ, ಹಬ್ಬ ಹರಿದಿನಗಳಲ್ಲಿ ವೀರಭದ್ರನ ಕುಣಿತವನ್ನು ಏರ್ಪಡಿಸುತ್ತಾರೆ. ಸಾಮಾಜಿಕ ಸಂದರ್ಭಗಳಲ್ಲಿ ಮನರಂಜನೆಗಾಗಿಯೂ ವೀರಗಾಸೆ ನೃತ್ಯವನ್ನು ಏರ್ಪಾಡು ಮಾಡಲಾಗುತ್ತದೆ. ಕುಣಿತವನ್ನು ನೋಡುವವರಿಗೆ ಇದು ರೋಮಾಂಚನವನ್ನುಂಟು ಮಾಡುತ್ತದೆ.

ಕಂಸಾಳೆ

ಕೂಗೋ ಕೂಗೋ ಮಾದೇವನಾ .
ಕೂಗಯ್ಯಾ ದುಂಡು ಮಾದೇವನಾ
ಕೂಗಿದರೆ ಕುಣಿಯುತ್ತಾ ಬರುವನು
ಮಾದೇವಾ...
ಕೂಗಯ್ಯಾ ಮುದ್ದು ಮಾದೇವನಾ...



ದಕ್ಷಿಣ ಕರ್ನಾಟಕದ ಜನ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಹದೇಶ್ವರನ ಕಾವ್ಯವನ್ನು ಹೀಗೆ ಹಾಡುತ್ತಾ ಕಂಸಾಳೆಯೊಂದಿಗೆ ಕುಣಿಯುತ್ತಾ ಮಹದೇಶ್ವರನ ಬೆಟ್ಟಕ್ಕೆ ಹೋಗುವುದು ವಾಡಿಕೆ. ಕಂಸಾಳೆಯು ಮಲೆಯ ಮಾದೇಶ್ವರನ ಭಕ್ತರಾದ ದೇವರ ಗುಡ್ಡರು ಎನ್ನುವ ಧಾರ್ಮಿಕ ವೃತ್ತಿ ಗಾಯಕರು ಬಳಸುವ ಕಂಚಿನ ತಾಳಗಳು. ಇದೊಂದು ಧಾರ್ಮಿಕ ಜನಪದ ವಾದ್ಯ. 'ಕಾಂಸ ತಾಲ್ಯ' ಎನ್ನುವ ಪದದ ತದ್ಭವ ರೂಪವೇ ಕಂಸಾಳೆ. ದೇವರ ಗುಡ್ಡರು ಇದನ್ನು ಬಿರುದು ಎಂದೂ ಕರೆಯುವರು. ಸಾಧಾರಣವಾಗಿರುವ ಬಟ್ಟು ತಾಳಗಳಿಗಿಂತ ಕಂಸಾಳೆ ದೊಡ್ಡದು.

9th_Kannada_Reader Term I.indd 31 29-01-2019 16:29:43

ಆಕೃತಿಯಲ್ಲೂ ಇದು ವಿಶಿಷ್ಟವಾದುದು. ಅಂಗೈ ಅಗಲದ ಚಕ್ರಾಕಾರದ ಬಟ್ಟಲು, ಚಿಕ್ಕ ಜಾಗಟೆಯಂತಿರುವ ಮಟ್ಟಸವಾದ ಮೇಲು ತಾಳ, ಮೇಲು ತಾಳಕ್ಕೆ ಸೇರಿದಂತೆ ಹಿಡಿದುಕೊಳ್ಳಲು ಮಾಡಿಕೊಂಡಿರುವ ಗೊಂಡೇವದ ಕಲಾತ್ಮಕ ಹುರಿ, ಇವು ಕಂಸಾಳೆಯ ಮುಖ್ಯ ಭಾಗಗಳು. ಬಟ್ಟಲನ್ನು ಮೇಲುಮುಖವಾಗಿ ಎಡ ಅಂಗೈ ಮೇಲೆ ಇರಿಸಿಕೊಂಡು ಬಲಗೈಯಲ್ಲಿ ಹಿಡಿದ ಮೇಲು ತಾಳವನ್ನು ಅದರ ಮೇಲೆ ಕುಟ್ಟುತ್ತಾರೆ. ಈ ನಾದದ ಹಿನ್ನೆಲೆಯಲ್ಲಿ ಗುಡ್ಡರು ಹಾಡುತ್ತಾರೆ. ವೃತ್ತಿ ಗಾಯಕರು ಬಳಸುವ ವಾದ್ಯಗಳಲ್ಲೆಲ್ಲಾ ಕಾಣಿಕೆ ಪಡೆಯುವ ಪಾತ್ರೆಯಾಗಿಯೂ ಬಳಕೆಯಾಗುವ ಏಕಮಾತ್ರ ಸಾಧನ ಕಂಸಾಳೆ. ಗುಡ್ಡರು ಕಾಣಿಕೆಯನ್ನು ಸ್ವೀಕರಿಸುವಾಗ ಕಂಸಾಳೆಯ ಬಟ್ಟಲನ್ನು ಮಾತ್ರ ಮುಂದೆ ಒಡ್ಡಿ ಪಡೆದು ಅನಂತರ ಜೋಳಿಗೆಗೆ ಸುರಿದುಕೊಳ್ಳುತ್ತಾರೆ. ಇದೊಂದು ಪವಿತ್ರ ಸಾಧನವಾದುದರಿಂದ ಅರ್ಪಿಸುವ ಕಾಣಿಕೆ ಮಲೆಯ ಮಹದೇಶ್ವರನಿಗೇ ಸಮರ್ಪಿತವಾದಂತೆಯೇ ಎನ್ನುವ ಭಾವನೆ ಗುಡ್ಡರಿಗೂ ದಾನಿಗೂ ಇರುತ್ತದೆ. ಕಂಸಾಳೆಯ ಮಹಿಮೆ ಅಪಾರ ಎಂದು ಭಾವಿಸುವ ಗುಡ್ಡರು ಅದನ್ನು ಪೂಜಿಸುತ್ತಾರೆ. ಕೈಗೆತ್ತಿಕೊಳ್ಳುವ ಮೊದಲು 'ಏಳುಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿ ಕಣಪ್ಪಾ... ಶರಣು ಶರಣಾರ್ಥಿ' ಎಂದು ನಮಸ್ಕರಿಸಿ ಕಣ್ಣಿಗೊತ್ತಿಕೊಂಡು ಅನಂತರ ಬಾರಿಸಲು ಪ್ರಾರಂಭಿಸುತ್ತಾರೆ.

ಡೊಳ್ಳುಕುಣಿತ

ಡೊಳ್ಳು ಕುಣಿತ ಜನಪದ ಕಲೆಗಳಲ್ಲಿ ವಿಶಿಷ್ಟವಾದುದು. ಇದು ವಾದ್ಯ ಪ್ರಧಾನವಾದ ಕಲೆ. ಬೀರೇಶ್ವರ ಸಂಪ್ರದಾಯಕ್ಕೆ ಸೇರಿದ ಹಾಲು ಮತ ಸಂಪ್ರದಾಯದವರ ಕುಣಿತ ಇದು. 'ಡೊಳ್ಳು' ಎಂಬುದು ಚರ್ಮವಾದ್ಯ. ಪೊಳ್ಳು ಪಡಗದ ಎರಡೂ ಬಾಯಿಗಳಿಗೆ ತೊಗಲು ಹೊದಿಸಿದ ಎರಡು ಕರಡೆಗಳನ್ನಿಟ್ಟು ಹಗ್ಗದಿಂದ ಬಿಗಿದಿರುತ್ತಾರೆ. ಇದನ್ನು ಎರಡೂ ಕೈಗಳಿಂದ ಬಾರಿಸಬಹುದು. ಬಲಗೈಯಲ್ಲಿ ಬಾರಿಸುವ 'ಗುಣಿ' ಇರುತ್ತದೆ. ಗುಣಿಯಿಂದ ಬಾರಿಸಿದ ಗತ್ತಿಗೆ ಹೊಂದಿಕೆಯಾಗುವಂತೆ ಎಡಗೈಯಿಂದ ಛಾಪು ಹಾಕಲಾಗುತ್ತದೆ. ಭರಮ ದೇವರ ಬ್ರಹ್ಮ ಪಲ್ಲಕ್ಕಿ ಉತ್ಸವ ಕಾಲಕ್ಕೆ ಡೊಳ್ಳು ಬಾರಿಸುತ್ತಾರೆ. ಸಾಮಾನ್ಯವಾಗಿ ಡೊಳ್ಳು ಬಾರಿಸುವವರು ದೇಹದ ಮೇಲು ಭಾಗಕ್ಕೆ ಕರಿಯ ಕಂಬಳಿಯನ್ನೂ, ಸೊಂಟದ ಭಾಗಕ್ಕೆ ಮೊಣಕಾಲಿನ ಮೇಲೆ ಬರುವಂತೆ ಕಚ್ಚೆ ಪಂಚೆಯನ್ನೂ ಉಡುತ್ತಾರೆ. ಕೆಲವೊಮ್ಮೆ ಹುಲಿಯ ಚರ್ಮದ ರೀತಿಯ ಉಡುಪನ್ನೂ ಧರಿಸುತ್ತಾರೆ.

ಕುಣಿಯುವ ಕಾಲದಲ್ಲಿ ವಾದ್ಯಗಾರರು ಹಸಿರು ಅಥವಾ ಕೆಂಪು ಬಣ್ಣದ ಗಗ್ಗರಿ, ಅಂಗಿ, ಟೊಪ್ಪಿ ತೊಡುತ್ತಾರೆ. ಎರಡೂ ಕೈಗಳಲ್ಲೂ ಅದೇ ಬಣ್ಣದ ಕರವಸ್ತ್ರ ಹಿಡಿದಿರುತ್ತಾರೆ. ಕುಣಿತಕ್ಕೆ ಹಿನ್ನೆಲೆಯಾಗಿ ಡೊಳ್ಳು, ತಾಳ ಮತ್ತು ಕೊಳಲು ಇರುತ್ತದೆ. ಶ್ರಾವಣ ಸೋಮವಾರ, ಅಮಾವಾಸ್ಯೆಯ ದಿನ ಮತ್ತು ಯುಗಾದಿಯಂದು ಪಲ್ಲಕ್ಕಿ ಉತ್ಸವದ ತರುವಾಯ ಭರಮ ದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯುತ್ತದೆ. ಅದರಂತೆ ಭಕ್ತರು ದೇವರ ಮುಮ್ಮೇಳದವರಾಗಿ ಒಬ್ಬರು ಡೊಳ್ಳು ಬಾರಿಸುತ್ತಾ ಹಾಡು ಹೇಳುತ್ತಾರೆ. ಹಿಮ್ಮೇಳದಲ್ಲಿ ಹಲವರು ತಾಳ ಮತ್ತು ಕೊಳಲು ನುಡಿಸುತ್ತಾ, ಮುಮ್ಮೇಳದವರು ಹೇಳಿಕೊಟ್ಟ ಹಾಡಿನ ಭಾಗವನ್ನು ಹೇಳುತ್ತಾರೆ. ಸಾಮಾನ್ಯವಾಗಿ ಹಾಡಿನ ವಿಷಯ ದೈವ ಮಹಿಮೆ ಅಥವಾ ದೈವ ಭಕ್ತರ ಕಥೆಯಾಗಿರುತ್ತದೆ. ಈ ಕಥನ ಕವನಕ್ಕೆ ರಗಳೆಯೇ ತಕ್ಕ ಧಾಟಿ. ಡೊಳ್ಳಿನ ಹಾಡು ಹೀಗೆ ಆರಂಭವಾಗುತ್ತದೆ.



9th_Kannada_Reader Term I.indd 32 29-01-2019 16:29:43

'ಸ್ವಾಮೀ... ನಮ್ಮಯ ದೇವರು ಬಂದಾನಾ... ಬನ್ನಿರೇ
ಗುರುವೇ ನಮ್ಮಯ ದೇವರು ಬಂದಾನಾ... ಬನ್ನಿರೇ'

ಬೀರೇಶ್ವರ ದೇವರಿಗಾಗಿ ಬಹಳ ಹಿಂದಿನಿಂದಲೂ ಭಕ್ತರು ಮೌಖಿಕವಾಗಿ ಜತನವಾಗಿ ಕಾಯ್ದುಕೊಂಡು ಬಂದಿರುವ ಉತ್ತಮ ಕಾವ್ಯಗೀತೆ, ಡೊಳ್ಳಿನ ಹಾಡುಗಳು. ಬಾಳೇ ಮುಖ್ಯವೆಂದೂ ಅದಕ್ಕೆ ಬೀರ ದೇವರೇ ಬೆನ್ನಾಧಾರವೆಂದೂ ಸಾರಿ, ಸಕಲ ಜನರಿಗೆ ಸುಖವಾಗಲೆಂದು ಇದು ಸಂದೇಶ ನೀಡುತ್ತದೆ.

ಡೊಳ್ಳು ಕುಣಿತದಲ್ಲಿ ಹಲವಾರು ಕಸರತ್ತುಗಳೇ ಅಲ್ಲದೆ ಕುದುರೆ ಕುಣಿತ, ಕೋಲು ಕುಣಿತ, ಸಾರುಕುಣಿತ, ಹುಚ್ಚೆಳ್ಳು ಬಡಿತ, ಕೈಬಾರಿಕೆ, ಒಂದ್ಹೆಜ್ಜೆ, ಎರಡೆಜ್ಜೆ ಕುಣಿತ, ಜೋಡುಗಾಲಿನ ಜಗ್ಗಿನ ಕೈಯಿ... ಮೊದಲಾದ ವೈವಿಧ್ಯಮಯ ಕುಣಿತಗಳಿವೆ. ಭೀರಪ್ಪನ ಡೊಳ್ಳು ಎಂದೇ ಬೆಳೆದು ಬಂದ ಈ ಅದ್ಭುತ ಪ್ರದರ್ಶನ ಕಲೆ ಇಂದು ಧಾರ್ಮಿಕತೆಯ ಆವರಣದಿಂದ ಹೊರ ಬಂದು ಲೌಕಿಕ ಉತ್ಸವಗಳಿಗೆ ತೆರೆದುಕೊಂಡಿದೆ.

ಯಕ್ಷಗಾನ

ಯಕ್ಷಗಾನ ನೃತ್ಯಪ್ರಧಾನ ಕಲೆ. ಪ್ರಾರಂಭದಲ್ಲಿ ಇದು ದೇಸೀ ಕಲೆಯಾಗಿದ್ದು, ಅನಂತರ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯನ್ನುಳ್ಳ ಕಲೆ. ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ. ಅದರಲ್ಲಿ ಮುಖ್ಯವಾದ ಮೂರು ಶೈಲಿಗಳು – ತೆಂಕುತಿಟ್ಟು, ಬಡಗು ತಿಟ್ಟು ಮತ್ತು ಬಡ ಬಡಗು ತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರುಗಳೂ ಇವೆ. ಸಾಮಾನ್ಯವಾಗಿ ಬಯಲಾಟ ಪ್ರದರ್ಶಿತವಾಗುವುದು ಹಳ್ಳಿಯ ಬಯಲಿನಲ್ಲಿ. ಆದ್ದರಿಂದ ಅದು ಬಯಲಾಟ. ಯಕ್ಷಗಾನ ಕಲಿಸುವವನೇ ಭಾಗವತನಾದ್ದರಿಂದ ಭಾಗವತರಾಟ ಎಂಬ ಹೆಸರೂ ಇದಕ್ಕಿದೆ.

ಗೀತ, ಕುಣಿತ, ವೇಷ ಭೂಷಣ, ಮಾತುಗಾರಿಕೆ, ವಾದ್ಯ ಇವು ಬಯಲಾಟ(ಮ್ಯಾಳ ಅಥವಾ ಅಟ್ಟದಾಟ) ದ ಪಂಚ ಅಂಗಗಳು.



ಆಟ ಆಡಿಸುವ ಸ್ಥಳ ರಂಗಸ್ಥಳ. ಆರಂಭದ ಕಾಲದಲ್ಲಿ ಬಿದಿರು ಅಥವಾ ಕಂಬಗಳನ್ನು ಕಟ್ಟಿ ಮಾವಿನತೋರಣಗಳಿಂದ ಅಲಂಕರಿಸುತ್ತಿದ್ದರು. ಈಗ ಸಿದ್ಧಪಡಿಸಿದ ರಂಗಸ್ಥಳದಲ್ಲಿ ಪ್ರದರ್ಶನ ನೀಡಲಾಗುತ್ತದೆ. ಹಿಮ್ಮೇಳದವರಿಗೆ ಆಸನ ವ್ಯವಸ್ಥೆ ಇರುತ್ತದೆ. ತೆಂಕುತಿಟ್ಟಿನ ಚಂಡೆ ವಾದಕನಿಗೆ ಆಸನ ವ್ಯವಸ್ಥೆ ಇರುವುದಿಲ್ಲ. ಪಾತ್ರಧಾರಿಗಳಿಗೆ ಒಂದು ಸಿಂಹಾಸನವಿರುತ್ತದೆ. ಬಡಗುತಿಟ್ಟಿನಲ್ಲಿ ಇದರ ಬದಲಿಗೆ ರಥದ ಆಕೃತಿಯ ಆಸನವನ್ನು ಸಾಂಪ್ರದಾಯಿಕವಾಗಿ ಬಳಸುತ್ತಿದ್ದರು. ಹಿಮ್ಮೇಳದ ಪ್ರಮುಖ ವಾದ್ಯ ಪರಿಕರಗಳೆಂದರೆ ಚಂಡೆ, ಮದ್ದಳೆ, ಶೃತಿ, ತಾಳ ಅಥವಾ ಜಾಗಟೆ. ಯಕ್ಷಗಾನದಲ್ಲಿ ಬಳಸುವ ವೇಷಭೂಷಣಗಳು ತಿಟ್ಟು ಮತ್ತು ಪಾತ್ರಕ್ಕನುಗುಣವಾಗಿ ವೈವಿಧ್ಯಮಯವಾಗಿರುತ್ತವೆ. ತೆಂಕಿನಲ್ಲಿ ಅರ್ಥಗಾರಿಕೆಗೆ ಪ್ರಾಧಾನ್ಯ ಇದ್ದು, ದೊಡ್ಡ ದೊಡ್ಡ ಹೆಜ್ಜೆ ಹಾಕಿ ಗಿರಕಿ ಹೊಡೆಯುವುದು ಇದರ ವೈಶಿಷ್ಟ್ಯ. ಬಡಗಿನಲ್ಲಿ ಕುಣಿತ ಹಾಗೂ ಅಭಿನಯಕ್ಕೇ ಪ್ರಾಧಾನ್ಯ ಇದ್ದು, ಇದರಲ್ಲಿ ಚಕ್ರಮಂಡಿ ಕುಣಿತವಿರುತ್ತದೆ. ಹಾಡುಗಾರಿಕೆ ಹಾಗೂ ಕುಣಿತ ಯಕ್ಷಗಾನದ ಪ್ರಮುಖ ಅಂಗಗಳು. ಕುಣಿತಕ್ಕೆ ತಕ್ಕಂತೆ ಅಭಿನಯ, ಜಿಗಿತ, ಸಂಭಾಷಣೆ, ಹುಬ್ಬುಗಳ ಚಲನೆ ಪ್ರೇಕ್ಷಕರನ್ನು ತನ್ಮಯಗೊಳಿಸುತ್ತವೆ. ಇದರಲ್ಲಿ ನವರಸಗಳ ಅಭಿವ್ಯಕ್ತಿಗೆ ಅವಕಾಶವಿದೆ. ರಾಮಾಯಣ, ಮಹಾಭಾರತ ಮತ್ತು ಭಾಗವತದ ಪ್ರಸಂಗಗಳನ್ನು ಆಡಲಾಗುತ್ತದೆ.

9th_Kannada_Reader Term I.indd 33 29-01-2019 16:29:43

ಸಾಮಾನ್ಯವಾಗಿ ಕಾಳಗ, ಸಂಹಾರ ಮತ್ತು ಕಲ್ಯಾಣಗಳಿಗೆ ಸಂಬಂಧಿಸಿದ ಪ್ರಸಂಗಗಳೇ ಹೆಚ್ಚು. ಕಾಳಗವಿಲ್ಲದೆ ಯಕ್ಷಗಾನವಾಗಲೀ ಬಯಲಾಟವಾಗಲೀ ಇಲ್ಲ.

ರಂಗಸ್ಥಳದ ಸಮೀಪವಿರುವ ನೇಪಥ್ಯವೇ ಚೌಕಿ ಅಥವಾ ಬಣ್ಣದ ಮನೆ. ಭಾಗವತರು ಹಿಮ್ಮೇಳ ಹಾಗೂ ಪಾತ್ರಧಾರಿಗಳೊಂದಿಗೆ ಇಲ್ಲಿಗೆ ಆಗಮಿಸುತ್ತಾರೆ. ಪಾತ್ರಧಾರಿಗಳು ತಮ್ಮ ಬಣ್ಣಗಳನ್ನು ತಾವೇ ಹಚ್ಚಿಕೊಳ್ಳುತ್ತಾರೆ. ಮೊದಲು ಚೌಕಿಯಲ್ಲಿ ಗಣಪತಿ ಪೂಜೆ ನಡೆಯುತ್ತದೆ. ತದ ನಂತರ ಕೋಡಂಗಿಗಳು ರಂಗ ಪ್ರವೇಶಿಸುವರು. ಗಣಪತಿಯ ಸ್ತುತಿಯ ಬಳಿಕ ವಿಷ್ಣು, ಪರಮೇಶ್ವರ, ದುರ್ಗೆ ಮೊದಲಾದ ದೇವತೆಗಳ ಸ್ತುತಿಯನ್ನು ಭಾಗವತರು ಮಾಡುತ್ತಾರೆ. ಹಾಡಿನ ಅನಂತರ ಭಾಗವತರಿಂದ ಸಭಾ ವಂದನೆ, ಅನಂತರ ಕೋಡಂಗಿಗಳು ಕುಣಿದು ಕುಪ್ಪಳಿಸಿ ಪ್ರೇಕ್ಷಕರನ್ನು ರಂಜಿಸುತ್ತಾರೆ. ಅನಂತರ ಬಾಲಗೋಪಾಲನ ಆಗಮನ ಹಾಗೂ ಸ್ತ್ರೀ ವೇಷಗಳ ಕುಣಿತ. ಪುರುಷರೇ ಸ್ತ್ರೀ ವೇಷ ಹಾಕುವುದು ಯಕ್ಷಗಾನದ ವೈಶಿಷ್ಟ್ಯ. ಯಕ್ಷಗಾನದ ಪೂರ್ವ ರಂಗ ಎಂದು ಕರೆಯಲಾಗುವ ಬಾಲಗೋಪಾಲ, ಸ್ತ್ರೀ ವೇಷಗಳ ಪ್ರವೇಶದ ಉದ್ದೇಶ ಮುಂದಿನ ಕಥಾ ಪ್ರಸಂಗಕ್ಕೆ ಪ್ರೇಕ್ಷಕರನ್ನು ಮಾನಸಿಕವಾಗಿ ಅಣಿಗೊಳಿಸುವುದೇ ಆಗಿದೆ. ಪುನಃ ದೇವತಾ ಸ್ತುತಿ ಆದ ನಂತರ ಅಂದಿನ ಪ್ರಸಂಗಕ್ಕೆ ಸಂಬಂಧಿಸಿದಂತೆ ಒಡ್ಡೋಲಗ ಪ್ರಾರಂಭವಾಗುತ್ತದೆ. ಪಾತ್ರಧಾರಿಗಳು ಭಾಗವತರಿಗೆ ಅನಂತರ ರಂಗಸ್ಥಳಕ್ಕೆ ವಂದಿಸಿ, ಕುಣಿದು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಾರೆ.

ಕೃಷ್ಣಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಬಭ್ರುವಾಹನ ಕಾಳಗ, ಸುಧನ್ವಾರ್ಜುನ ಕಾಳಗ ಮೊದಲಾದವು ವೀರ ರಸ ಪ್ರಧಾನವಾದವುಗಳು. ಚಂದ್ರಾವಳಿ ವಿಲಾಸ, ರತಿ ಕಲ್ಯಾಣ, ರತ್ನಾವತಿ ಕಲ್ಯಾಣ ಮೊದಲಾದವು ಶೃಂಗಾರ ರಸ ಪ್ರಧಾನ ಪ್ರಸಂಗಗಳು. ಇವಲ್ಲದೆ ಪ್ರಸಿದ್ಧ ಕ್ಷೇತ್ರಗಳ ಕ್ಷೇತ್ರ ಮಹಾತ್ಮೆಗಳೂ ಇವೆ. ಯಕ್ಷಗಾನದ ಎಲ್ಲಾ ಪ್ರಸಂಗಗಳಲ್ಲಿಯೂ ಹಾಸ್ಯ ಕಂಡು ಬರುತ್ತದೆ. ವಿಡಂಬನೆ ಕೂಡ ಹಾಸ್ಯದ ಒಂದು ಅಂಗ. ಹನುಮನಾಯಕ, ಕುಬ್ಜ, ಚಾರಕ, ವನಪಾಲಕ ಮೊದಲಾದ ಪಾತ್ರಗಳಲ್ಲಿ ಹಾಸ್ಯ ಕಾಣಿಸಿಕೊಳ್ಳುತ್ತದೆ.

ಯಕ್ಷಗಾನದಲ್ಲಿ ತುಂಬಾ ಕಲಾತ್ಮಕವಾದದ್ದು ಬಣ್ಣದ ವೇಷ. ಇಂತಹ ಬಣ್ಣದ ವೇಷಗಳು ಸಾಮಾನ್ಯವಾಗಿ ಬರುವುದು ನಡುರಾತ್ರಿಯಲ್ಲಿ. ರಾಕ್ಷಸ ವೇಷಗಳು ಒಮ್ಮೊಮ್ಮೆ ಪ್ರೇಕ್ಷಕರ ಮಧ್ಯದಿಂದ ರಂಗ ಪ್ರವೇಶಿಸುವುದುಂಟು. ಈ ಪಾತ್ರ ಪ್ರವೇಶಿಸುವಾಗ ಎರಡೂ ಬದಿಗೆ ದೀವಟಿಗೆಗಳನ್ನು ಹಿಡಿದು ರಾಳದ ಪುಡಿಯನ್ನು ಎರಚಿ, ಜ್ವಾಲೆಯನ್ನು ಎಬ್ಬಿಸಿ ಭಯಾನಕ ವಾತಾವರಣವನ್ನು ಸೃಷ್ಟಿಸುತ್ತಾರೆ. ಚಂಡೆಯ ಬಡಿತ, ರಾಕ್ಷಸರ ಕೂಗು, ಅರೆ ನಿದ್ರೆಯಲ್ಲಿರುವ ಪ್ರೇಕ್ಷಕರನ್ನು ಬಡಿದೆಬ್ಬಿಸುತ್ತದೆ. ಪ್ರಧಾನ ಪಾತ್ರಗಳು ಭಾಗವತರ ಮೂಲಕ ತಮ್ಮ ಪರಿಚಯವನ್ನು ಮಾಡಿಕೊಳ್ಳುತ್ತವೆ.

ಯಕ್ಷಗಾನ ಜನರಲ್ಲಿ ಧಾರ್ಮಿಕ ಮತ್ತು ನೀತಿ ಪ್ರಜ್ಞೆಗಳನ್ನು ಬೆಳೆಸಲು ಸಹಕಾರಿಯಾಗಿದೆ. ಯಕ್ಷಗಾನ ಪ್ರಸಂಗ ರಚಿಸಿದವರು ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆ ತತ್ವಗಳನ್ನು ಪ್ರಸಂಗಗಳಲ್ಲಿ ಅಳವಡಿಸಿರುತ್ತಾರೆ.

* * * *

ಆಶಯ ಭಾವ

ಜನಪದ ಕಲೆ ಅತ್ಯಂತ ಪ್ರಾಚೀನವಾದುದು. ಇದು ಪರಂಪರೆಯಿಂದ ಉಳಿದು ಬಂದಿರುವ ಸಂಪ್ರದಾಯವಾಗಿದ್ದು ಆಂಗಿಕ ಅಭಿನಯದ ಮೂಲಕ ವ್ಯಕ್ತವಾಗುವ ಕಲೆಯಾಗಿದ್ದು, ಹೆಚ್ಚು ಜನಪ್ರಿಯವಾಗಿದೆ. ವಿವಿಧ ಪ್ರಕಾರಗಳಲ್ಲಿ ವಿವಿಧ ಆಯಾಮಗಳಲ್ಲಿ ವ್ಯಕ್ತವಾಗುವ ಈ ಕಲೆ ಪ್ರಾದೇಶಿಕ ಮಹತ್ವವನ್ನು ಪಡೆದುಕೊಂಡಿದೆ. ಇಂದು ಆಧುನಿಕತೆಯ ಪ್ರಭಾವದಿಂದ ಜನಪದ ಕಲೆಗಳು ನಶಿಸುತ್ತಿವೆ. ಇದರಿಂದ ಎಷ್ಟೋ ಕಲಾ ಪ್ರಕಾರಗಳು ಕಣ್ಮರೆಯಾಗಿವೆ. ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದ್ದ ಕಲೆ ಮನರಂಜನೆಯ ಮಾಧ್ಯಮವೂ, ಕ್ರಿಯಾಶೀಲತೆಯ ಸಂಕೇತವೂ ಆಗಿರುವುದು ಗಮನಾರ್ಹ ಅಂಶ. ವಿಶಿಷ್ಟ ನಂಬಿಕೆ, ಆಚರಣೆಯ ಪ್ರಾತಿನಿಧಿಕ ರೂಪವಾಗಿ ಜನಪದ ಕಲೆಗಳು ರೂಪುಗೊಂಡಿದ್ದು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇವು ಮಹತ್ವವನ್ನು ಪಡೆದುಕೊಂಡಿವೆ. ಅದರ ಕಿರುಪರಿಚಯವೇ ಈ 'ಜನಪದ ಕಲೆಗಳ ವೈಭವ' ಪಾಠ.

9th_Kannada_Reader Term I.indd 34 29-01-2019 16:29:43

ಪದಗಳ ಅರ್ಥ

ಏಕತಾನತೆ–ಒಂದೇ ರೀತಿಯ; ಕಾಳಗ–ಯುದ್ಧ; ಗಿರಕಿ–ತಿರುಗು; ಗೊಂಡೇವ–ಬಣ್ಣಬಣ್ಣದ ದಾರದ ಗೊಂಚಲುಚಂಡೆ–ಚರ್ಮವಾದ್ಯ; ದೀವಟಿಗೆ–ಪಂಜು; ಬಟ್ಟು–ವೃತ್ತಾಕಾರ; ರಾಳ–ಬೆಂಕಿಯ ಜ್ವಾಲೆ ಹೆಚ್ಚಿಸಲು ಬಳಸುವ ಪುಡಿ; ವಾಡಿಕೆ–ರೂಢಿ; ವೈಖರಿ–ರೀತಿ; ಕಥನ ಕವನ–ಹಾಡಿನ ಮೂಲಕ ಹೇಳುವ ಕಥೆ; ಗುಣಿ–ಡೊಳ್ಳು ಬಾರಿಸುವ ಮರದ ತುಂಡು; ಛಾಪು–ವರ್ಚಸ್ಸು; ನೇಪಥ್ಯ–ತೆರೆಯ ಹಿಂಭಾಗ; ಮಂತ್ರ ಮುಗ್ಧ–ಪರವಶ; ಹಾಸುಹೊಕ್ಕು–ಆವರಿಸು; ಹೊನ್ನಾವಿಗೆ–ಚಿನ್ನದ ಪಾದುಕೆ, ಚಪ್ಪಲಿ, ಪಾದರಕ್ಷೆ; ಚಕ್ರಮಂಡಿ–ಯಕ್ಷಗಾನದಲ್ಲಿ ಮಂಡಿ ಹಾಕಿಕೊಂಡು ತಿರುಗುತ್ತಾ ಮಾಡುವ ನೃತ್ಯದ ಒಂದು ಹೆಜ್ಜೆ; ಕುಬ್ಜ–ಕುಳ್ಳಗಿರುವವನು.

ಟಿಪ್ಪಣಿ

ದೇವರ ಗುಡ್ಡರು: ದೇವರನ್ನು ವಂಶಪಾರಂಪರ್ಯವಾಗಿ ಪೂಜಿಸುವಮನೆತನದವರು, ಭಕ್ತರು.

ಏಳುಮಲೆ ಹೆತ್ತಯ್ಯ: ಮಲೆ ಮಹದೇಶ್ವರ ಸ್ವಾಮಿಯು ಏಳು ಬೆಟ್ಟಗಳ ಮೇಲಿರುವ ಮಹದೇಶ್ವರ ಬೆಟ್ಟದಲ್ಲಿದ್ದಾನೆಂಬುದು ಭಕ್ತರ ನಂಬಿಕೆ.

ದಮ್ಮಡಿ: ಕಂಸಾಳೆಯವರು ಕಥೆ ಹೇಳುವಾಗ ಹಿಮ್ಮೇಳದವರು ಬಾರಿಸುವ ವೃತ್ತಾಕಾರದ ಚರ್ಮವಾದ್ಯ.

ಏಕತಾರಿ: ಒಂದೇ ತಂತಿಯುಳ್ಳ ಸಂಗೀತ ವಾದ್ಯ.

ಜೋಳಿಗೆ: ಕಾಣಿಕೆಯಾಗಿ ಪಡೆದ ದವಸ ಧಾನ್ಯಗಳನ್ನು ಹಾಕಿಕೊಳ್ಳಲು ಹೆಗಲಿಗೆ ನೇತು ಹಾಕಿಕೊಳ್ಳುವ ಉದ್ದನೆಯ ಚೀಲ.

ಜನಪದ ಮಹಾಕಾವ್ಯ: ಮೌಖಿಕ ಸಾಹಿತ್ಯದ ಸುದೀರ್ಘ ಕಥನ.

ಗಗ್ಗರಿ: ಡೊಳ್ಳು ಕುಣಿತದ ವಾದ್ಯಗಾರರು ಉಡುವ ಹಸುರು ಅಥವಾ ಕೆಂಪು ಬಣ್ಣದ ಬಹಳ ನಿರಿಗೆಯುಳ್ಳ ಲಂಗದಾಕಾರದ ಉಡುಪು.

ಒಡಪು: ಒಗಟು, ಇದು ಕರ್ನಾಟಕದ ವಿಶಿಷ್ಟ ಜನಪದ ಸಾಹಿತ್ಯ ಪ್ರಕಾರ. ಶ್ರಮಿಕ ವರ್ಗದವರು ಆಯಾಸವನ್ನು ಮರೆಯಲು ನೆನಪಿನ ಶಕ್ತಿಯನ್ನು ಇಮ್ಮಡಿಸಿಕೊಳ್ಳಲು ಬೌದ್ಧಿಕ ಕೌಶಲವನ್ನು ಮೆರೆಯಲು ಬಳಸುವ ಚಾಣಾಕ್ಷ ನುಡಿಗಡಣ.

ಜನಪದ: ಜನಾಂಗದ ಸಂಸ್ಕೃತಿ, ಬದುಕು, ಸಮಾಜದ ಒಟ್ಟಾರೆ ಸಹಜ ಕ್ರಿಯಾತ್ಮಕತೆಯೇ ಜನಪದ. ಸಾಮಾನ್ಯ ಜನತೆ ತಾವಾಡುವ ಭಾಷೆಯಲ್ಲಿಯೇ ಕಟ್ಟಿಕೊಂಡು ಉಳಿಸಿ, ಬೆಳೆಸಿಕೊಂಡು ಬಂದಿರುವ ಸಾಹಿತ್ಯ ಸಂಪನ್ಮೂಲವೇ ಜನಪದ ಸಾಹಿತ್ಯ. ಇದು ಮೌಖಿಕ ಪರಂಪರೆಯ ಅಭಿವ್ಯಕ್ತ ರೂಪ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯದಲ್ಲಿ ಉತ್ತರಿಸಿ

1. ವೀರಗಾಸೆಯಲ್ಲಿ ಬಳಸುವ ವಾದ್ಯಗಳು ಯಾವುವು ?
2. ಕಂಸಾಳೆ ಎಂಬ ಹೆಸರು ಹೇಗೆ ಬಂದಿದೆ ?
3. ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ ?
4. ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಯಾವಾಗ ನಡೆಯುತ್ತದೆ ?
5. ಯಕ್ಷಗಾನದ ಮೂರು ಶೈಲಿಗಳು ಯಾವುವು ?

II. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ ? ವಿವರಿಸಿ.

9th_Kannada_Reader Term I.indd 35 29-01-2019 16:29:43

2. ಯಕ್ಷಗಾನದಲ್ಲಿ ತೆಂಕುತಿಟ್ಟು ಹಾಗೂ ಬಡಗುತಿಟ್ಟುಗಳ ವೈಶಿಷ್ಟ್ಯವೇನು ? ವಿವರಿಸಿ.
3. ಚೌಕಿಯಲ್ಲಿ ನಡೆಯುವ ವಿಶೇಷಗಳೇನು ? ವಿವರಿಸಿ.

III. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ವೀರಗಾಸೆ ನರ್ತಕನ ಒಡಪಿನೊಂದಿಗಿನ ಕುಣಿತ ಹೇಗಿರುತ್ತದೆ ?
2. ಕಂಸಾಳೆಯ ಆಕೃತಿ ಹಾಗೂ ಅದರ ವಿಶೇಷತೆಯನ್ನು ವಿವರಿಸಿ.
3. ಡೊಳ್ಳು ಬಾರಿಸುವ ಕಲಾವಿದರ ವೇಷಭೂಷಣಗಳು ಹೇಗಿರುತ್ತವೆ ?
4. ಯಕ್ಷಗಾನದ ವೈಶಿಷ್ಟ್ಯ ಹಾಗೂ ಪೂರ್ವರಂಗದ ಉದ್ದೇಶವೇನು ?

IV. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. 'ಅಹಹಾ... ರುದ್ರ, ಅಹಹಾ... ದೇವಾ'
2. 'ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿ ಕಣಪ್ಪಾ'
3. 'ಸ್ವಾಮೀ, ನಮ್ಮಯ ದೇವರು ಬಂದಾನಾ ಬನ್ನಿರೇ'
4. 'ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆ'

ಭಾಷಾಭ್ಯಾಸ

1. ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ತಿಳಿಸಿ.

ಬೀರೇಶ್ವರ, ಬಯಲಾಟ, ಕೃಷ್ಣಾರ್ಜುನ, ಚಳಿಗಾಲ, ನಮ್ಮೂರು, ನೂರಾರು, ಕುಲವೊಂದು, ಬೆಳೆಯನ್ನು

2. ಮೊದಲೆರಡು ಪದಗಳಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

1. ನಿತ್ಯ : ಅನಿತ್ಯ :: ಸತ್ಯ : _____
2. ನಮ್ಮುಸಿರು : ಲೋಪಸಂಧಿ :: ಸೀಮೆಯಾಚೆ : _____
3. ರಥ : ತೇರು :: ಪಥ : _____
4. ದೀವಟಿಗೆ : ಪಂಜು :: ಕಾಳಗ : _____
5. ಶೃಂಗಾರ : ಸಿಂಗಾರ :: ರಾಕ್ಷಸಿ : _____

3. ವಿರುದ್ಧ ಪದಗಳನ್ನು ಬರೆಯಿರಿ

ಜಯ, ಸ್ವೀಕಾರ, ಹಿಂದೆ, ಸುಖ, ಹಲವು, ಆಚಾರ, ಧರ್ಮ, ದಯೆ, ಅಂತರಂಗ, ಸಜ್ಜನ

ಚಟುವಟಿಕೆ

1. ಜಾನಪದ ಒಗಟುಗಳನ್ನು ಸಂಗ್ರಹಿಸಿ.
2. ಜಾನಪದ ಹಾಡುಗಳನ್ನು ಸಂಗ್ರಹಿಸಿ ಹಾಡಿರಿ.
3. ನಿಮ್ಮ ಸುತ್ತಲಿನ ಊರಿನ ಜನಪದ ಆಚರಣೆಗಳನ್ನು ತಿಳಿದುಕೊಳ್ಳಿ.



9th_Kannada_Reader Term I.indd 36 29-01-2019 16:29:44

ಕಾವ್ಯ ಕಣಜ

ಘಟಕ ಮೂರು

ಹಾಡುವುದೆಂದರೆ

–ವೈದೇಹಿ

ಪೀಠಿಕೆ

ನಮ್ಮ ನಾಡಿನಲ್ಲಿ ಜನಪದ ಸಾಹಿತ್ಯದ ಬಹು ದೊಡ್ಡ ಪರಂಪರೆಯಿದೆ. ಜನಪದರು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಮಾತಿನಂತೆ ಅವಿದ್ಯಾವಂತರಾಗಿದ್ದರೂ ಹಾಡುಗಳನ್ನು ರಚಿಸುತ್ತಿದ್ದರು. ಹಿಂದಿನ ಕಾಲದಲ್ಲಿ ಹಾಡುಗಳನ್ನು ರಚಿಸುತ್ತಿದ್ದ ಅದೆಷ್ಟೋ ಜನಪದರು ಅನಕ್ಷರಸ್ಥರೇ ಆಗಿದ್ದರು. ಬದುಕಿನ ಅನುಭವಗಳನ್ನೇ ಮೂಲಾಧಾರವಾಗಿಟ್ಟುಕೊಂಡು ಅವರು ಕಾವ್ಯ ರಚನೆ ಮಾಡಿದರು. ಕಾವ್ಯದ ಹುಟ್ಟಿಗೆ ವಿದ್ಯಾಭ್ಯಾಸವೇ ಮೂಲ ದ್ರವ್ಯವಾಗಬೇಕಿಲ್ಲ.



9th_Kannada_Reader Term I.indd 37 29-01-2019 16:29:45

ಹಾಡು ಕಟ್ಟುವ ಬದಲು ಬತ್ತ ಕುಟ್ಟಿದರು...
ಹಾಡಾಯಿತದುವೇ ಹೊದಲಿನಂತೆ.
ಹಾಡು ಹೇಳಲು ಏಕೆ ಶಬ್ದಾಲಂಕಾರ
ಹಾಡುವುದೇ ಹಕ್ಕಿ ರಾಗ
ಪ್ರಸ್ಥಾರದನುಸಾರ ?
ಭಾವಕೋಶವ ಒಡೆದು ಸ್ವರ
ಹೊಮ್ಮಿದಾಗ
ಅದುವೇ ಹಾಡಾಗುವುದು, ತನ್ನತನ್ನಂತೆ!
ಹಾಡು ಹೊಸೆಯಲಿಕೆಲ್ಲಿ ಗೊತ್ತಿತ್ತು
ಹಿರಿಯರಿಗೆ – ಮಾತು
ಆಡುತ್ತಾ ಅರೆದರು ಕೇರಿದರು ಹೆಕ್ಕಿದರು –
ಮೌನ
ತೇಯುತ್ತಾ ತೆತ್ತರು ಅತ್ತರು ಸಂಭ್ರಮಿಸಿದರು.
ಹಾಡು ಕಟ್ಟುವ ಬದಲು ಬತ್ತ ಕುಟ್ಟಿದರು
ಹಾಂ ಹೂಂ ಹೆ... ನಡುವೆ ವಿಜೃಂಭಿಸಿದರು
ಹಾಡಾಯಿತದುವೇ ಹೊದಲಿನಂತೆ
ಹಾಡಿಗೆಲ್ಲಿದೆ ಕೊರತೆ ನಮಗೆ ನಾರಿಯರಿಗೆ
ಬೀಸಿ ತೂಗಲು ಪುಟ್ಟ ಕೂಸು ಮರಿಯ
ತೊದಲು
ನುಡಿಯೊಂದೇ ಸಾಲದೇ, ಕಡೆವಾಯಿ
ನಗೆಯೊಂದೇ ಸಾಲದೇ
ಹಾಡು ಹೊಮ್ಮುವ ಸಣ್ಣ ಉದಾಹರಣೆಗೆ
'ಕಟ್ಟ'ಲಾಗದು ಹಾಡನೆಂದಿಗೂ
ಹಾಡೆಂದರೇನು ಕಾಗದದ ಕುಸುಮವೇ?
ಕತ್ತರಿಸಿ ಅಂಟಿನ ನಂಟು ಸವರಿ
ಸರಿಗೆ ಸುರಿದು ಎಸಳು ಬಿಗಿದು ಬಲವಂತ
ಹೂದಾನಿಯಲಿ ತುರುಕಿ ಮೂಲೆಗಿಡಲು ?
ಆಡು ಮಾತೇ ಸಾಕು ಹಾಡಾಗಲು
ಜಾಗಟೆಯ ದನಿ ನಡುವೆ ನಗಾರಿ ಗಾಬರಿ
ನಾನು ನಾನೆಂಬ ಹಾರಾಟ ಬಿಟ್ಟು
ಗಂಟಿ ಕೊರಳಿನ ಗಂಟೆ ಕಿಣಿಕಿಣಿಯ
ನಾದ
ಬಂತದೋ ತೇಲಿ ಗೋವಳ ಕೊಳಲು
ಎಲ್ಲಿಂದ ?
ಕೇಳುತಿದೆ ಜೀವ ನಿಮಿರಿ
..... ಮಂದ ಸಾಗುವ ಕುರಿಮಂದೆ
ಎಂದೋ ಕಂಡ
ನೆನಪೊಂದೆ ಸಾಲದೆ
ಹಾಡಾಗಲು ಹಾಡು ಹೊದಲಾಗಲು ?
ಹೊನಲ ನಡುವಿನ ಬಾಳ ದೋಣಿಮನೆ
ನಾವು
ನೋವು ನಲಿವಾದಾಗ ನರಳುವೆವು
ಬಿರಿಯುವೆವು
ನರಳು ಬಿರಿವುಗಳೇ ಹಾಡಾಗಿ
ಘಮಿಸಿದರೆ
ಕಾವ್ಯದೇವತೆಗೆಂದು ಅರ್ಪಿಸುವೆವು.

9th_Kannada_Reader Term I.indd 38 29-01-2019 16:29:45

ಕವಿ–ಕಾವ್ಯ ಪರಿಚಯ



ವೈದೇಹಿ ಎನ್ನುವ ಕಾವ್ಯ ನಾಮದಿಂದ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಶ್ರೀಮತಿ ಜಾನಕಿ ಶ್ರೀನಿವಾಸ ಮೂರ್ತಿಯವರು ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ 12.02.1945ರಲ್ಲಿ ಜನಿಸಿದರು.

ಐದು ಮಕ್ಕಳ ನಾಟಕಗಳು, ಮಲ್ಲಿನಾಥನ ಧ್ಯಾನ ಮೊದಲಾದವು ಇವರ ಕೃತಿಗಳು. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕರ್ನಾಟಕ ಸರ್ಕಾರದ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಇತರ ಅನೇಕ ಪ್ರಶಸ್ತಿಗಳು ಸಂದಿವೆ. 'ಬಿಂದು ಬಿಂದಿಗೆ' ಎನ್ನುವ ಕವನ ಸಂಕಲನ; 'ಅಂತರಂಗದ ಪುಟಗಳು', 'ಗೋಲ', 'ಮರಗಿಡ ಬಳ್ಳಿ' 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು' ಮೊದಲಾದ ಕಥಾ ಸಂಕಲನಗಳು; 'ಅಸ್ಪೃಶ್ಯರು'(ಕಾದಂಬರಿ) ಮುಂತಾದ ಮುವ್ವತ್ತಕ್ಕೂ ಹೆಚ್ಚಿನ ಕೃತಿಗಳನ್ನು ಇವರು ರಚಿಸಿದ್ದಾರೆ. ಪ್ರಾದೇಶಿಕ ಭಾಷಾ ಪ್ರಯೋಗ, ಆತ್ಮೀಯ ಶೈಲಿಯ ನಿರೂಪಣೆ ವೈದೇಹಿಯವರನ್ನು ಭಿನ್ನ ನೆಲೆಯಲ್ಲಿ ನಿಲ್ಲಿಸಿದೆ. ಪ್ರಸ್ತುತ ಕವನವನ್ನು ಅವರ 'ಪಾರಿಜಾತ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ಕವನದ ಆಶಯ

ಹಕ್ಕಿಗಳ ಹಾಡಿಗೆ ಹೇಗೆ ಶಬ್ದಾಲಂಕಾರ, ಛಂದಸ್ಸು ಇಲ್ಲವೋ ಹಾಗೆಯೇ ನಮ್ಮ ಹಾಡುಗಳೂ ಅವೆಲ್ಲವನ್ನೂ ಮೀರಿ ತಾವಾಗಿಯೇ ಹುಟ್ಟಿಕೊಳ್ಳಬೇಕು. ನಮ್ಮ ಹಿರಿಯ ತಲೆಮಾರಿನವರು ಅಕ್ಕಿಯನ್ನು ಕೇರುತ್ತಾ, ಬತ್ತ ಕುಟ್ಟುತ್ತಾ ಆಡಿದ್ದೆಲ್ಲವೂ ಹಾಡಾದವು. ಹಾಡುವುದು ಎಂದರೆ ಅದನ್ನು ಕಟ್ಟುವುದಲ್ಲ, ಅದು ಕಾಗದ ಕತ್ತರಿಸಿ ಹೂ ಮಾಡಿ ಹೂದಾನಿಯಲ್ಲಿ ಇಡುವ ರೀತಿಯ ಕ್ರಿಯೆಯಲ್ಲ. ಆಡುಮಾತು ಕೂಡ ಹಾಡಾಗಬಲ್ಲುದು. ಹಾಡು ಜಾಗಟೆಯ ದನಿಯಂತೆ. ಅದರ ಮುಂದೆ ನಗಾರಿಯ ಗದ್ದಲ, ಗಾಬರಿ ಹುಟ್ಟಿಸುತ್ತದೆ. ಅಹಂಕಾರವನ್ನು ಮರೆತು, ತನ್ನ ಗಂಟಲ ಸದ್ದನ್ನು ಬಳಸಿ ಹಾಡಿದರೆ ಕೊಳಲನೂದುವ ಕೃಷ್ಣನೂ ಒಲಿದಾನು. ನಿಧಾನ ಗತಿಯಲ್ಲಿ ಸಾಗುವ ಕುರಿ ಮಂದೆಯ ನೆನಪೂ ನಮ್ಮ ಮನಸ್ಸಿನಲ್ಲಿ ಹಾಡಿನ ಬೀಜ ಬಿತ್ತಬಲ್ಲದು.

ಪ್ರವಾಹದ ನಡುವಿನ ದೋಣಿಮನೆಯಲ್ಲಿರುವಂತೆ ಇರುವ ನಮ್ಮ ಬದುಕಿನಲ್ಲಿ ನೋವು ನಲಿವು ಬರುತ್ತಲೇ ಇರುತ್ತದೆ. ಹಾಗಾದಾಗ ನಾವು ನರಳುತ್ತೇವೆ ಅಥವಾ ಅರಳುತ್ತೇವೆ. ಆ ಅನುಭವವೇ ಹಾಡಾಗಿ ಪರಿಮಳ ಕೊಡುವ ಪುಷ್ಪವಾಗುತ್ತದೆ. ಅದನ್ನು ಕಾವ್ಯದೇವತೆಗೆ ಅರ್ಪಿಸೋಣ ಎಂಬುದು ಕವಿಯ ಆಶಯ.

ಪದಗಳ ಅರ್ಥ

ಶಬ್ದಾಲಂಕಾರ–ಶಬ್ದಗಳ ಅಲಂಕಾರ; ಪ್ರಸ್ತಾರ–ಗುರು ಲಘುಗಳಾಗಿ ವಿಂಗಡಿಸುವುದು; ಭಾವಕೋಶ–ಭಾವನೆಗಳ ಭಂಡಾರ; ಹೊಸೆ–ಕಟ್ಟು; ಕೇರು–ಮೊರದಲ್ಲಿ ಧಾನ್ಯವನ್ನು ಹಾಕಿಕೊಂಡು ಶುದ್ಧಗೊಳಿಸುವುದು; ಹೊದಲು–ಅರಳು; ಕಡೆವಾಯಿ–ಬಾಯಿಯ ಅಂಚು, ತುದಿ; ಗಂಟಿ–ಜಾನುವಾರು; ಗೋವಳ(ದ್ಭ)–ಗೋಪಾಲ(ಸಂ); ಹೊನಲು–ಪ್ರವಾಹ; ಘಮಿಸು–ಪರಿಮಳಿಸು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಶಬ್ದಾಲಂಕಾರ ಯಾವುದಕ್ಕೆ ಬೇಡ ?
2. ಭಾವಕೋಶ ಒಡೆದು ಸ್ವರ ಹೊಮ್ಮಿದಾಗ ಏನಾಗುತ್ತದೆ ?
3. ಹಿರಿಯರು ಹಾಡು ಕಟ್ಟುವ ಬದಲು ಏನು ಮಾಡುತ್ತಿದ್ದರು ?
4. ಯಾವುದನ್ನು ಕಟ್ಟಲು ಸಾಧ್ಯವಿಲ್ಲ ?
5. ಕಾವ್ಯ ದೇವತೆಗೆ ಏನನ್ನು ಅರ್ಪಿಸುವುದಾಗಿ ಕವಯಿತ್ರಿ ಹೇಳುತ್ತಾರೆ ?
6. ವೈದೇಹಿಯವರ ನಿಜವಾದ ಹೆಸರೇನು ?

9th_Kannada_Reader Term I.indd 39 29-01-2019 16:29:45

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಹಾಡು ಹೊದಲಾಗಿ ಅರಳಿದ ಕ್ರಮವನ್ನು ಕವಿ ಹೇಗೆ ನಿರೂಪಿಸಿದ್ದಾರೆ ?
2. 'ಹಾಡು ಕಾಗದದ ಹೂವಲ್ಲ' – ಈ ಮಾತನ್ನು ವಿವರಿಸಿ.

III. ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. 'ಹಾಡುವುದೆಂದರೆ' ಕವನದ ಆಶಯವನ್ನು ತಿಳಿಸಿ.

ಭಾಷಾಭ್ಯಾಸ

1. ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಪುಟ್ಟ, ಎಸಳು, ಕುಸುಮ, ನಾದ.

2. ಈ ಕೆಳಕಂಡ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಶಬ್ದಾಲಂಕಾರ, ನಾನೆಂಬ, ಹಾಡಾಯಿತು, ಮೂಲೆಗಿಡು, ಹೊನಲಾಗು.

3. ಗುಂಪಿಗೆ ಸೇರದ ಪದಗಳನ್ನು ತಿಳಿಸಿರಿ.

1. ಜಾಗಟೆ, ನಗಾರಿ, ಕೊಳಲು, ನಾದ.
2. ಅರೆಯುವುದು, ಕೇರು, ಮೌನ, ತಿನ್ನು.
3. ಕಾಗದ, ಕತ್ತರಿ, ಅಂಬು, ಭಾವಕೋಶ.
4. ಹಾಡು, ಬತ್ತ, ರಾಗ, ಶಬ್ದ.
5. ಅಸ್ಪೃಶ್ಯರು, ಮರಳಿ ಮಣ್ಣಿಗೆ, ಪಾರಿಜಾತ, ಗೋಲ.

4. ಹೊಂದಿಸಿ ಬರೆಯಿರಿ.

1. ಹಕ್ಕಿ	– ಅ. ಹೂದಾನಿ
2. ಬತ್ತ	– ಆ. ನಗಾರಿ
3. ಕಾಗದದ ಕುಸುಮ	– ಇ. ಹಾಡು
4. ಜಾಗಟೆ	– ಈ. ಕಡೆವಾಯಿ ನಗೆ
5. ಕೂಸುಮರಿ	– ಉ. ಹೊದಲು
	ಊ. ಹೊನಲು

ಚಟುವಟಿಕೆಗಳು

1. ಕವನ ಹಾಗೂ ಹಾಡುಗಳ ನಡುವಿನ ವ್ಯತ್ಯಾಸವನ್ನು ತಿಳಿಯಿರಿ.
2. ಬತ್ತ, ಕತ್ತರಿ, ಹೂ, ಕೊಳಲು – ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಕವನ ಬರೆಯಿರಿ.



9th_Kannada_Reader Term I.indd 40 29-01-2019 16:29:46

ಉಪಪಠ್ಯ

ಘಟಕ ಮೂರು

ಪ್ರೇಕ್ಷಣೀಯ ಸ್ಥಳ – ಮಧುರೈ

–ಡಾ. ಹರಿಕೃಷ್ಣ ಭರಣ್ಯ



ಪ್ರವಾಸವು ಶಿಕ್ಷಣದ ಪ್ರಮುಖ ಅಂಗ. 'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎನ್ನುವ ನಾಣ್ನುಡಿಯಂತೆ ಪ್ರವಾಸ ಅಥವಾ ದೇಶ ಸಂಚಾರ ಕೈಗೊಳ್ಳುವುದು ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಯಲ್ಲಿ ಪ್ರವಾಸವು ಅತಿ ಮುಖ್ಯ ಪಾತ್ರವನ್ನು ವಹಿಸುತ್ತದೆ.

ವಿದ್ಯಾರ್ಥಿಗಳು ಶಾಲೆಗೆ ಹೋಗಿ ಗುರುಗಳಿಂದ ಪಾಠ ಕಲಿಯುವುದು, ಹೆಚ್ಚಿನ ಜ್ಞಾನ ಪಡೆಯಲು ಪುಸ್ತಕಾಲಯಗಳಿಗೆ ಹೋಗಿ ಪುಸ್ತಕಗಳನ್ನು ಓದುವುದು, ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದು, ವೃತ್ತಿ ಪರ ಶಿಕ್ಷಣದ ತರಬೇತಿ ಪಡೆಯುವುದು, 'ಸ್ಕೌಟ್ಸ್ ಅಂಡ್ ಗೈಡ್ಸ್', 'ರೆಡ್ ಕ್ರಾಸ್', 'ಎನ್.ಎಸ್.ಎಸ್.' – ಮುಂತಾದ ಸ್ವಯಂ ಸೇವಾ ಸಂಘಗಳ ಮೂಲಕ ಸಮಾಜ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅತ್ಯವಶ್ಯಕ. ಹೀಗೆಯೇ ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದರ ಮೂಲಕ ದೇಶದ ಇತಿಹಾಸ ಸಂಸ್ಕೃತಿ, ಕಲೆ, ವಿಜ್ಞಾನ, ಸಾಮಾಜಿಕ ಜನಜೀವನ ಮುಂತಾದವುಗಳನ್ನು ತಿಳಿದುಕೊಳ್ಳಬಹುದು.

ಪ್ರವಾಸದಲ್ಲಿ ಹಲವು ಬಗೆಗಳಿವೆ. ಶೈಕ್ಷಣಿಕ ಪ್ರವಾಸ, ಉಲ್ಲಾಸ ಪಯಣ, ತೀರ್ಥಕ್ಷೇತ್ರ ಯಾತ್ರೆ, ವಿದೇಶ ಪ್ರವಾಸ, ಐತಿಹಾಸಿಕ ಸ್ಥಳಗಳ ಸಂದರ್ಶನ ಹೀಗೆ ಹಲವು ಬಗೆಗಳಿವೆ. ಕಲಿತ ವಿಷಯಗಳ ಕುರಿತಂತೆ ಹೆಚ್ಚಿನ ಮಾಹಿತಿ ಸಂಗ್ರಹಕ್ಕಾಗಿ ಶೈಕ್ಷಣಿಕ ಪ್ರವಾಸಗಳನ್ನು ವಿದ್ಯಾರ್ಥಿಗಳು ಕೈಗೊಳ್ಳುತ್ತಾರೆ. ಉಲ್ಲಾಸ ಪಯಣವು ಮನಸ್ಸಿನ ಸಂತೋಷಕ್ಕಾಗಿ ಕೈಗೊಳ್ಳುವ ಪ್ರಯಾಣ. ಮನಸ್ಸಿಗೆ ಹೆಚ್ಚು ಉತ್ತೇಜನ ದೊರೆಯುವುದಕ್ಕಾಗಿ ಪ್ರಯಾಣದ ಅವಶ್ಯಕತೆ ಕೆಲವೊಮ್ಮೆ ಇರುತ್ತದೆ. ಈ ಬಗೆಯ ಪ್ರಯಾಣವನ್ನು ಉಲ್ಲಾಸ ಪ್ರವಾಸ ಎನ್ನಬಹುದು. ಜೀವನದ ಎಲ್ಲಾ ಸುಖ ಸಂತೋಷಗಳನ್ನೂ ಅನುಭವಿಸಿ, ಜೀವನದ ಅಂತಿಮ ಘಟ್ಟದಲ್ಲಿ ಕೈಗೊಳ್ಳುವ ತೀರ್ಥ ಕ್ಷೇತ್ರ ಯಾತ್ರೆಯು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ವಿದೇಶ ಪ್ರವಾಸವಂತೂ ಬಹಳ ದುಬಾರಿ. ಇಂದಿನ ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಗಳಿಗೆ ಹೋಗಿ ಅಲ್ಲೇ ಶಿಕ್ಷಣ ಪಡೆಯುತ್ತಿದ್ದಾರೆ. ಉದ್ಯೋಗವನ್ನರಸಿ ಹೋಗುವವರ ಸಂಖ್ಯೆಯಂತೂ ಅಪಾರವಾಗಿದೆ. ಶ್ರೀಮಂತರು ರಜಾ ದಿನಗಳಲ್ಲಿ ಕುಟುಂಬ ಸಮೇತ ವಿದೇಶ ಪ್ರವಾಸ ಕೈಗೊಳ್ಳುವುದು ಸಾಮಾನ್ಯ.

ಶಾಲಾ ಮಕ್ಕಳಿಗೋ ಪ್ರವಾಸವೆಂದರೆ ಸಂಭ್ರಮವೋ ಸಂಭ್ರಮ. ಪ್ರವಾಸ ಮಾಡುವಾಗ ವಿಷಯ ಸಂಗ್ರಹಿಸಲು ಪುಸ್ತಕ ಹಾಗೂ ಇತರ ಲೇಖನ ಸಾಮಗ್ರಿಗಳನ್ನು ಸಿದ್ಧ ಪಡಿಸಿಕೊಳ್ಳುವುದು, ಪ್ರವಾಸದ ಸಮಯದಲ್ಲಿ ಗೆಳೆಯರೊಂದಿಗೆ ಮಾತನಾಡುವುದು ಮುಂತಾದವುಗಳಲ್ಲಿ ಹೆಚ್ಚು ಆಸಕ್ತರಾಗಿರುತ್ತಾರೆ.

ಹೀಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ತಮಿಳುನಾಡಿನ ಇತಿಹಾಸ ಪ್ರಸಿದ್ಧ ಮಧುರೈ ನಗರದ ಕಿರು ವಿವರ ಇಲ್ಲಿದೆ.

9th_Kannada_Reader Term I.indd 41 29-01-2019 16:29:46



ತಮಿಳುನಾಡಿನ ಪ್ರತ್ಯೇಕವಾದ ಹಾಗೂ ವಿಶಿಷ್ಟವಾದ ಸಂಸ್ಕೃತಿಯನ್ನು ತಿಳಿಯಬೇಕಾದರೆ ಮಧುರೈಗೆ ಹೋಗಬೇಕು ಎನ್ನುವ ಒಂದು ಭಾವನೆ ಜನರ ಮನಸ್ಸಿನಲ್ಲಿದೆ. ತಮಿಳುನಾಡಿನಲ್ಲಿ ಚೆನ್ನೈ ಮಹಾನಗರವನ್ನು ಬಿಟ್ಟರೆ ಮಧುರೆಯು ಎರಡನೆಯ ಮಹಾನಗರವಾಗಿದೆ. ಮಧುರೆಯನ್ನು ಕದಂಬ ವನ, ಕೂಡಲ ನಗರ, ಮಧುರಂ, ಮರುದೈ ಮೊದಲಾದ ಹೆಸರುಗಳಿಂದ ಕರೆಯುತ್ತಿದ್ದರು. ತಮಿಳಿನಲ್ಲಿ ಇದನ್ನು ಮಧುರೈ ಎಂದು ಈಗ ಜನರು ಕರೆಯುತ್ತಾರೆ. ಈ ನಗರವು 1971ರಿಂದ ಈಚೆಗೆ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದೆ. ಸಾಂಸ್ಕೃತಿಕ ಪುರಾತನತೆಯೊಂದಿಗೆ ಈಗ ಕೈಗಾರಿಕೆ, ವ್ಯಾಪಾರ, ಉದ್ದಿಮೆ ಹಾಗೂ ಶೈಕ್ಷಣಿಕ ಕೇಂದ್ರವಾಗಿ ಈ ನಗರವು ಬೆಳವಣಿಗೆ ಹೊಂದಿದೆ.

ಇತಿಹಾಸದ ಪುಟಗಳಲ್ಲಿ ಮಧುರೆಯ ಚರಿತ್ರೆಯು ಆರನೇ ಶತಮಾನಕ್ಕೂ ಹಿಂದೆ ಹೋಗುತ್ತದೆ. ವೈಗೈ ನದಿಯ ತೀರದಲ್ಲಿ ಕಂಗೊಳಿಸುತ್ತಿರುವ, ತಮಿಳು ಸಂಸ್ಕೃತಿಯ ತೊಟ್ಟಿಲೆಂದು ಕರೆಯಲಾಗುವ ಮಧುರೆಯ ಪ್ರತಿಯೊಂದು ಕಲ್ಲು ಕಂಬಗಳೂ ಹಳೆಯ ಕಾಲದ ಕಟ್ಟಡಗಳೂ ಪ್ರಾಚೀನ ಕಾಲದ ಎಷ್ಟೆಷ್ಟೋ ಕಥೆಗಳನ್ನೂ ಚರಿತ್ರೆಯನ್ನೂ ನಮಗೆ ತಿಳಿಸುತ್ತವೆ.

ಸಂಗಂ ಸಾಹಿತ್ಯವೆಂಬುದು ಪ್ರಪಂಚದ ಸಾಹಿತ್ಯ ರಚನೆಯಲ್ಲೇ ವಿಶಿಷ್ಟವೆನಿಸಿದೆ. ಇದು ಮಧುರೆಯ ಕೊಡುಗೆಯಾಗಿದೆ. ತಮಿಳುನಾಡಿನಲ್ಲಿ ಮಾತ್ರವಲ್ಲ, ಇಡೀ ಭಾರತ ದೇಶದಲ್ಲೇ ಅತ್ಯಂತ ಮಹತ್ವದ ಚರಿತ್ರೆಯುಳ್ಳ ಕೆಲವೇ ನಗರಗಳಲ್ಲಿ ಮಧುರೆಯೂ ಒಂದು. ಚೋಳರು, ಪಾಂಡ್ಯರು, ನಾಯಕರು ಮೊದಲಾಗಿ ಅನೇಕ ಅರಸು ಮನೆತನಗಳು ಮಧುರೆಯನ್ನಾಳಿ ಉತ್ತಮ ಸಂಸ್ಕೃತಿಯನ್ನು ನೆಟ್ಟು ಹೋಗಿದ್ದಾರೆ. ಇದು ಸಾಹಿತ್ಯಕ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾಗಿರುವ ನಗರವಾಗಿದೆ.

ಮಧುರೆಯು ಹಲವಾರು ದೇವಾಲಯಗಳಿಂದ ಕಂಗೊಳಿಸುವ ನಗರವಾಗಿದೆ. ಇದಕ್ಕೆ 'ದೇವಾಲಯಗಳ ನಗರ' ಎನ್ನುವ ಹೆಸರೂ ಇದೆ. ಮಾತ್ರವಲ್ಲ, ಇಲ್ಲಿಯ ದೇವಾಲಯಗಳಲ್ಲೆಲ್ಲಾ ಆಗಾಗ ಉತ್ಸವಗಳು ನಡೆಯುತ್ತಿರುವುದರಿಂದ 'ಉತ್ಸವಗಳ ನಗರ'ವೆಂಬ ಹೆಸರನ್ನೂ ಇದು ಪಡೆದಿದೆ.

ಮಧುರೆಯು ಒಂದು ಪ್ರಸಿದ್ಧವಾದ ಯಾತ್ರಾ ಸ್ಥಳವೂ ಆಗಿದೆ. ಇಲ್ಲಿನ ಮೀನಾಕ್ಷಿ ಸುಂದರೇಶ್ವರ ದೇವಾಲಯವಂತೂ ಅತ್ಯಂತ ದೊಡ್ಡದು. ಹಳೆಯದೂ, ಕಾರಣಿಕತೆಯುಳ್ಳದ್ದೂ ಆಗಿದೆ. ಈ ದೇವಾಲಯವು ಮಧುರೈ ನಗರದ ಕೇಂದ್ರ ಬಿಂದುವೂ ಆಗಿದೆ. ಈ ದೇವಾಲಯದ ಪೂರ್ವ ಪಶ್ಚಿಮ ದಕ್ಷಿಣ ಹಾಗೂ ಉತ್ತರದ ನಾಲ್ಕೂ ದಿಕ್ಕುಗಳಲ್ಲಿ ಸಮಾನಾಂತರವಾಗಿ ಸುತ್ತಿಕೊಂಡಿರುವ ರಸ್ತೆಗಳನ್ನು ನೋಡಬಹುದು. ಈ ರಸ್ತೆಗಳಿಗೆ ತಮಿಳು ತಿಂಗಳುಗಳ ಹೆಸರಾದ ಆವಣಿ, ಚಿತ್ತಿರೈ, ಮಾಸಿ ಮುಂತಾದ ಹೆಸರುಗಳನ್ನಿಡಲಾಗಿದೆ. ಈ ದೇವಾಲಯವನ್ನು ಹೊರಗಿನ ಎಲ್ಲಾ ಪ್ರಧಾನ ಗೋಪುರಗಳ ಮೂಲಕ ಪ್ರವೇಶಿಸಬಹುದಾಗಿದೆ.

ಮಧುರೆಯ ಇತರ ಅನೇಕ ಪ್ರಸಿದ್ಧ ಸ್ಥಳಗಳಲ್ಲಿ ಪೆರುಮಾಳ್ ದೇವಾಲಯ, ಮಾರಿಯಮ್ಮನ ತೆಪ್ಪಕೊಳ, ಅಳಗರ್ ದೇವಸ್ಥಾನ, ತಿರುಪ್ಪರ ಕುನ್ರಂ, ಸುಬ್ರಹ್ಮಣ್ಯ

9th_Kannada_Reader Term I.indd 42 29-01-2019 16:29:46

ಸ್ವಾಮಿ ದೇವಾಲಯ, ತಿರುಮಲ ನಾಯಕರ ಅರಮನೆ, ಗಾಂಧೀ ಮ್ಯೂಸಿಯಂ ಮುಖ್ಯವಾದವುಗಳು. ಗಗನ ಚುಂಬಿಗಳಾದ ಗೋಪುರಗಳು, ಕಾವ್ಯಗಳನ್ನೇ ಹಾಡಿ ಉಲಿಯುವ ಶಿಲ್ಪಕಲಾ ವೈಭವ, ಸೆಂದಮಿಳಿನ ಭಾಷಾ ಸೌಗಂಧ ಮೊದಲಾದ ವಿಶೇಷತೆಗಳೇ ಮಧುರೆಯ ಹೃದಯ ಸಂಪತ್ತಾಗಿವೆ.

ಒಂದೊಂದನ್ನೂ ಮನಸ್ಸು ಮಾಡಿದರೆ, ಮಧುರೆಯಿಂದ ರಾಮೇಶ್ವರಂ, ಕೊಡೈಕ್ಕೆನಾಲ್, ಕನ್ಯಾಕುಮಾರಿ, ಪಳನಿ, ತಿರುಚ್ಚೆಂದೂರು, ಶ್ರೀವಿಲ್ಲಿಪುತ್ತೂರು, ತೆನ್‌ಕಾಸಿ, ರಾಜಪಾಳೆಯಂ, ಕುಟ್ರಾಲಂ ಜಲಪಾತ, ಶಿವಕಾಶಿ, ವೈಗೈ ಅಣೆಕಟ್ಟು, ತೇಕ್ಕಡಿ ಅಭಯಾರಣ್ಯ ಮೊದಲಾದ ಪ್ರಸಿದ್ಧ ತಾಣಗಳಿಗೂ ಒಂದೇ ದಿನದಲ್ಲಿ ಹೋಗಿ ನೋಡಿಕೊಂಡು ಮಧುರೈಗೆ ಹಿಂದಿರುಗಬಹುದಾಗಿದೆ. ಇವಕ್ಕೆಲ್ಲಾ ಕೇಂದ್ರ ಬಿಂದುವಿನಂತೆ ಮಧುರೆಯು ವ್ಯವಸ್ಥಿತವಾಗಿದೆ.

ಚಿತ್ತಿರೈ ಉತ್ಸವ

ಮಧುರೆಯ ಮೀನಾಕ್ಷಿಸುಂದರೇಶ್ವರ ದೇವಾಲಯದಲ್ಲಿ ಪ್ರತಿ ವರ್ಷವೂ ಚೈತ್ರ ಪೂರ್ಣಿಮೆಯಂದು ನಡೆಯುವ ಉತ್ಸವವೇ 'ಚಿತ್ತಿರೈ ಉತ್ಸವ'ವೆಂದು ಪ್ರಸಿದ್ಧವಾಗಿದೆ. ಇದು ದೇವಿ ಮೀನಾಕ್ಷಿ ಹಾಗೂ ಸುಂದರೇಶ್ವರರ ವಿವಾಹೋತ್ಸವವಾಗಿದೆ. ಈ ಸಂದರ್ಭದಲ್ಲಿ ಲಕ್ಷೋಪಲಕ್ಷ ಭಕ್ತ ಜನರು ವೈಗೈ ನದಿಯ ತೀರದಲ್ಲಿ ಸೇರುತ್ತಾರೆ. ಪಾಂಡ್ಯ ರಾಜರ ಕಾಲದಿಂದಲೇ ಈ ಉತ್ಸವ ಪ್ರಸಿದ್ಧಿ ಪಡೆದಿದೆ. ಈ ಉತ್ಸವವು ಶೈವ ಹಾಗೂ ವೈಷ್ಣವ ಸಂಪ್ರದಾಯದವರನ್ನು ಒಂದುಗೂಡಿಸುವ ವಿಶಿಷ್ಟವಾದ ಹಬ್ಬವಾಗಿದೆ. ಈ ಉತ್ಸವದಲ್ಲಿ ಮೀನಾಕ್ಷಿ ಕಲ್ಯಾಣ ಮತ್ತು ಅಳಗರ್ ದೇವನು ವೈಗೈ ನದಿಯಲ್ಲಿ ಇಳಿಯುವುದು ಎಂಬ ಎರಡು ಪ್ರಧಾನ ಭಾಗಗಳಿವೆ. ಮೀನಾಕ್ಷಿಯ ಕಲ್ಯಾಣವನ್ನು ಮೂರು ದಿನಗಳಲ್ಲಿ ನಡೆಸುತ್ತಾರೆ. ಮೊದಲು ಪಟ್ಟಾಭಿಷೇಕ, ಆನಂತರ ದಿಗ್ವಿಜಯ, ಕೊನೆಯಲ್ಲಿ ಮೀನಾಕ್ಷಿ ಸುಂದರೇಶ್ವರರ ಕಲ್ಯಾಣಗಳು ನಡೆಯುತ್ತವೆ.

ಚಿತ್ತಿರೈ ಉತ್ಸವದ ದಿನವು ತುಂಬ ಪ್ರಶಸ್ತವಾದುದರಿಂದ ಜನರು ತಮ್ಮ ಹರಕೆಗಳಾದ ಕಿವಿ ಚುಚ್ಚುವುದು, ಕೂದಲು ಕೊಡುವುದು ಮುಂತಾದುವನ್ನು ಮಾಡುತ್ತಾರೆ. ತಮಿಳುನಾಡು ಸರ್ಕಾರವು ಈ ಸಂದರ್ಭದಲ್ಲಿ ವಸ್ತು ಪ್ರದರ್ಶನ ಮತ್ತು ಬೇರೆ ಸಾಂಸ್ಕೃತಿಕ ಹಾಗೂ ಮನೋರಂಜನೆಯ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತದೆ. ಇದು ಸುಮಾರು ಒಂದು ತಿಂಗಳ ಕಾಲ ನಡೆಯುತ್ತದೆ. ಎಲ್ಲಾ ಮನೆಗಳಲ್ಲೂ ಬಂಧು ಬಾಂಧವರು ಬಂದು ಸೇರುತ್ತಾರೆ. ಚಿತ್ತಿರೈ ಉತ್ಸವವು ಮಧುರೈ ನಗರದ ಒಂದು ಮಹತ್ತರವಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಾಮರಸ್ಯಗಳನ್ನು ಪ್ರಕಟಪಡಿಸುವ ವಿಶೇಷವಾದ ಮಹೋತ್ಸವವಾಗಿದೆ.

ಸಾಮಾನ್ಯವಾಗಿ ಭಾರತದ ಎಲ್ಲಾ ಮುಖ್ಯ ನಗರಗಳಲ್ಲೂ ಕಾಣಿಸುವಂತೆ ಇಲ್ಲೂ ಬೇರೆ ಬೇರೆ ಭಾಷೆಗಳನ್ನಾಡುವ ಜನರು ವಾಸವಾಗಿದ್ದಾರೆ. ಪ್ರಧಾನ



9th_Kannada_Reader Term I.indd 43 29-01-2019 16:29:46

ಭಾಷೆಯಾದ ತಮಿಳನ್ನು ಬಿಟ್ಟರೆ ತೆಲುಗು, ಕನ್ನಡ, ಸೌರಾಷ್ಟ್ರ, ಮರಾಠಿ, ಮಲೆಯಾಳಂ, ಉರ್ದು, ಹಿಂದಿ ಮೊದಲಾದ ಭಾಷೆಗಳನ್ನಾಡುವವರೂ ಇಲ್ಲಿ ಸಾಕಷ್ಟು ಮಂದಿ ಇದ್ದಾರೆ. ಆಯಾಯಾ ಭಾಷೆಗಳನ್ನಾಡುವ ಜನರು ತಮ್ಮ ತಮ್ಮ ಭಾಂಧವರೊಂದಿಗೆ ವ್ಯವಹರಿಸುವುದಕ್ಕಾಗಿ ಸಾಹಿತ್ಯ, ಸಾಂಸ್ಕೃತಿಕ ವಿನಿಮಯ ಹಾಗೂ ಮನರಂಜನೆಗಳಿಗಾಗಿ ಸಂಘಗಳನ್ನು ಮಾಡಿಕೊಂಡಿದ್ದಾರೆ. ಅಂತಹವುಗಳಲ್ಲಿ ಮಧುರೆಯ ಕರ್ನಾಟಕ ಸಂಘವೂ ಒಂದು. ಮಧುರೈ ನಗರದಿಂದ ಸುಮಾರು ಹದಿಮೂರು ಕಿ.ಮೀ.ಗಳ ದೂರದಲ್ಲಿ ಮಧುರೈಯ ಕಾಮರಾಜ ವಿಶ್ವವಿದ್ಯಾನಿಲಯವಿದೆ. ಇಲ್ಲಿ ತಮಿಳು, ತೆಲುಗು, ಮಲೆಯಾಳಂ ಭಾಷಾ ವಿಭಾಗಗಳೊಂದಿಗೆ ಕನ್ನಡ ವಿಭಾಗವೂ ಶೈಕ್ಷಣಿಕ ಸಂಶೋಧನಾ ಕಾರ್ಯಗಳನ್ನು ನಡೆಸುತ್ತಿದೆ.

ಕೃತಿ–ಕರ್ತೃ ಪರಿಚಯ

ಈ ಲೇಖನದ ಕರ್ತೃ ಡಾ.ಹರಿಕೃಷ್ಣ ಭರಣ್ಯ. ಇವರು ಮಧುರೈ ಕಾಮರಾಜ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿ ಈಗ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಕನ್ನಡದಲ್ಲಿ ಸಾಹಿತ್ಯ, ಸಂಶೋಧನೆ ಹಾಗೂ ಸೃಜನಶೀಲ ಬರಹಗಾರರಾಗಿ ಕೃಷಿ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಮಧುರೈ ನಗರದ ಐತಿಹಾಸಿಕ ವೈಭವ ಹಾಗೂ ಅದು ಹೇಗೆ ವಿಶಿಷ್ಟ ಸಾಂಸ್ಕೃತಿಕ ಕೇಂದ್ರವಾಗಿ ಮೆರೆಯುತ್ತಾ ಬಂದಿದೆ ಎಂಬುದನ್ನು ವಿವರಿಸಿದ್ದಾರೆ.

ಪದಗಳ ಅರ್ಥ

ಸಾಹಿತ್ಯಕ–ಸಾಹಿತ್ಯಕ್ಕೆ ಸಂಬಂಧಿಸಿದ; ಮಹಾನಗರ ಪಾಲಿಕೆ–ಕಾರ್ಪೋರೇಷನ್; ಸಮಾನಾಂತರ–ಸಮಾನವಾದ ದೂರ; ಪೆರುಮಾಳ್–ವಿಷ್ಣು; ತಾಣ–ಸ್ಥಳ; ಚಿತ್ರಾ ಪೌರ್ಣಮಿ–ಚೈತ್ರ ಮಾಸದ ಹುಣ್ಣಿಮೆ; ಉಲ್ಲಾಸ–ಸಂತೋಷ; ತೀರ್ಥಕ್ಷೇತ್ರ–ಪುಣ್ಯಕ್ಷೇತ್ರ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸ್ವಯಂ ಸೇವಕ ಸಂಘಟನೆಗಳಾವುವು ?
2. ಶೈಕ್ಷಣಿಕ ಪ್ರವಾಸದ ಮುಖಾಂತರ ಏನನ್ನು ತಿಳಿದುಕೊಳ್ಳಬಹುದು ?
3. ಪ್ರವಾಸದಲ್ಲಿರುವ ಬಗೆಗಳಾವುವು ?
4. ಪ್ರವಾಸದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಯಾವುದರಲ್ಲಿ ಆಸಕ್ತರಾಗಿರುತ್ತಾರೆ ?
5. ಮಧುರೆಯ ಇತರ ಹೆಸರುಗಳಾವುವು ?
6. ಇತಿಹಾಸದಲ್ಲಿ ಮಧುರೆಯ ಚರಿತ್ರೆ ಯಾವಾಗಿನಿಂದ ದೊರಕುತ್ತದೆ ?
7. ಮಧುರೆಗೆ 'ಉತ್ಸವಗಳ ನಗರ' ಎಂಬ ಹೆಸರು ಹೇಗೆ ಬಂದಿದೆ ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ವಿದ್ಯಾರ್ಥಿಗಳು ಶಾಲೆಯಲ್ಲಿ ತಮ್ಮನ್ನು ಯಾವುದರಲ್ಲಿ ತೊಡಗಿಸಿಕೊಳ್ಳಬೇಕು ?
2. ಮೀನಾಕ್ಷಿ ಸುಂದರೇಶ್ವರ ದೇವಾಲಯದ ವೈಶಿಷ್ಟ್ಯವೇನು ?
3. ಚಿತ್ತಿರೈ ಉತ್ಸವ ಎಂದರೇನು ? ಇದರ ಮಹತ್ವವೇನು ?

ಚಟುವಟಿಕೆ

1. ಕನ್ನಡ ಹಾಗೂ ತಮಿಳು ತಿಂಗಳುಗಳ ಹೆಸರುಗಳನ್ನು ಕಲಿಯಿರಿ.
2. ಶಾಲೆಯಿಂದ ಪ್ರವಾಸ ಕೈಗೊಂಡು ಆ ಕುರಿತಂತೆ ಲೇಖನ ಬರೆಯಿರಿ.



9th_Kannada_Reader Term I.indd 44 29-01-2019 16:29:47

ವ್ಯಾಕರಣ

ಘಟಕ ಮೂರು

ಲಿಂಗ–ವಚನ

ಲಿಂಗ

ಲಿಂಗ ಎಂದರೆ ಗುರುತು ಎಂದು ಅರ್ಥ. ಗಂಡಸು ಅಥವಾ ಹೆಂಗಸು ಅಥವಾ ಇವೆರಡೂ ಅಲ್ಲದ್ದು ಎಂಬ ಗುರುತನ್ನು ಸೂಚಿಸುವ ನಾಮಪ್ರಕೃತಿಯನ್ನು ಲಿಂಗವೆಂದು ಕರೆಯುತ್ತಾರೆ.

ಉದಾಹರಣೆಗೆ : * ರಮೇಶನು ಗಿರೀಶನಿಗೆ ಬುದ್ಧಿ ಹೇಳಿದನು
* ಗೌರಿ ತನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು.
* ಆಡು ಸೊಪ್ಪನ್ನು ತಿನ್ನುತ್ತದೆ.

– ಈ ವಾಕ್ಯಗಳಲ್ಲಿರುವ ರಮೇಶ, ಗಿರೀಶ ಎನ್ನುವ ಪದಗಳು ಗಂಡಸರಿಗೂ; ಗೌರಿ, ತಂಗಿ ಪದಗಳು ಹೆಂಗಸರಿಗೂ; ಆಡು, ಸೊಪ್ಪು ಪದಗಳು ಗಂಡಸೂ ಅಲ್ಲದ ಹೆಂಗಸೂ ಅಲ್ಲದ ಬೇರೆ ಯಾವುದಕ್ಕೋ ಸಂಬಂಧಿಸಿದ ಪದಗಳೆಂದೂ ತಿಳಿಯುತ್ತವೆ. ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳೆಂದು ಮೂರು ವಿಧಗಳಿವೆ.

1. **ಪುಲ್ಲಿಂಗ :** ಪುರುಷರನ್ನು ಕುರಿತು ಹೇಳುವ ಪದಗಳನ್ನು ಪುಲ್ಲಿಂಗ ಎಂದು ಕರೆಯುತ್ತಾರೆ.
ಉದಾಹರಣೆಗೆ : ಗೋವಿಂದ, ಶಂಕರ, ಅಣ್ಣ, ಅಪ್ಪ, ಮಗ ಇತ್ಯಾದಿ.

2. **ಸ್ತ್ರೀಲಿಂಗ :** ಸ್ತ್ರೀಯರನ್ನು ಕುರಿತು ಹೇಳುವ ಪದಗಳನ್ನು ಸ್ತ್ರೀಲಿಂಗ ಎಂದು ಕರೆಯುತ್ತಾರೆ.
ಉದಾಹರಣೆಗೆ : ಗೀತಾ, ರಾಣಿ, ಅತ್ತಿಗೆ, ಚಿಕ್ಕಮ್ಮ, ಸೊಸೆ, ಅವಳು ಇತ್ಯಾದಿ.

3. **ನಪುಂಸಕ ಲಿಂಗ :** ಪುಲ್ಲಿಂಗವೂ ಅಲ್ಲದ ಸ್ತ್ರೀಲಿಂಗವೂ ಅಲ್ಲದ ಪದಗಳೇ ನಪುಂಸಕಲಿಂಗಗಳು. ಪ್ರಾಣಿಗಳನ್ನೂ, ವಸ್ತುಗಳನ್ನೂ ಹೇಳುವ ಪದಗಳನ್ನು ನಪುಂಸಕ ಲಿಂಗವೆಂದು ಕರೆಯುತ್ತೇವೆ.
ಉದಾಹರಣೆಗೆ : ಗಿರಿ, ಆಕಾಶ, ನದಿ, ಮಗು, ಕುರ್ಚಿ, ಮರ ಇತ್ಯಾದಿ.

ವಚನ

ವ್ಯಾಕರಣದಲ್ಲಿ ವಚನ ಎಂದರೆ ಎಣಿಕೆ ಅಥವಾ ಸಂಖ್ಯೆ ಎಂದು ಅರ್ಥ. ವಸ್ತುಗಳು, ಮನುಷ್ಯರು, ಪ್ರಾಣಿಗಳು ಮುಂತಾದವುಗಳ ಸಂಖ್ಯೆಯನ್ನು ತಿಳಿಸುವುದಕ್ಕೆ ವಚನ ಎಂದು ಕರೆಯುತ್ತೇವೆ.

ವಚನಗಳಲ್ಲಿ ಎರಡು ವಿಧಗಳಿವೆ. ಅವು, 1. ಏಕವಚನ 2. ಬಹುವಚನ.

1. **ಏಕವಚನ :** ಯಾವುದೇ ನಾಮಪದವು ಒಂದೇ ಒಂದು ಸಂಖ್ಯೆಯನ್ನು ಮಾತ್ರ ಸೂಚಿಸುವಂತಿದ್ದರೆ ಅದನ್ನು ಏಕವಚನ ಎಂದು ಕರೆಯುತ್ತೇವೆ. ಉದಾಹರಣೆಗೆ: ರಾಧಾ, ಮಗು, ತಾಯಿ, ಕಲ್ಲು, ಮರ, ಹುಡುಗ ಇತ್ಯಾದಿ.

2. **ಬಹುವಚನ :** ಯಾವುದೇ ನಾಮ ಪದವು ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಸಂಖ್ಯೆಗಳನ್ನು ಸೂಚಿಸುವಂತಿದ್ದರೆ ಅದನ್ನು ಬಹುವಚನ ಎಂದು ಕರೆಯುತ್ತೇವೆ. ಉದಾಹರಣೆಗೆ : ರಾಜರು, ಮಕ್ಕಳು, ತಾಯಂದಿರು, ಕಲ್ಲುಗಳು, ಮರಗಳು, ಹುಡುಗರು ಇತ್ಯಾದಿ.

9th_Kannada_Reader Term I.indd 45 29-01-2019 16:29:47

ಘಟಕ
ನಾಲ್ಕು

ವಿಜ್ಞಾನ–ತಂತ್ರಜ್ಞಾನ



9th_Kannada_Reader Term I.indd 46 29-01-2019 16:29:47

ಘಟಕ ನಾಲ್ಕು

ಯಂತ್ರೋಪಕರಣಗಳು – ಉಪಯೋಗಗಳು



ಮಾನವನು ತನ್ನ ವೈಜ್ಞಾನಿಕ ಸಂಶೋಧನೆಗಳಿಂದ ಅನೇಕ ವಸ್ತುಗಳನ್ನು ಕಂಡು ಹಿಡಿದಿದ್ದಾನೆ. ಈಗ ಯಂತ್ರೋಪಕರಣಗಳು ಇಲ್ಲದ ಮನುಷ್ಯ ಜೀವನವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಸಂಪರ್ಕ ಸಾಧನಗಳ ಉಪಯೋಗ, ಮನುಷ್ಯನ ಜೀವನವನ್ನು ಸುಲಭಗೊಳಿಸಿ ಸಮಯವನ್ನೂ, ಶ್ರಮವನ್ನೂ ವ್ಯರ್ಥ ಮಾಡದೆ ತಡೆಯುತ್ತದೆ. ಇದರಿಂದ ಹಲವಾರು ರೀತಿಯ ಬದಲಾವಣೆಗಳನ್ನೂ, ಅಭಿವೃದ್ಧಿಯನ್ನೂ ಕಾಣಲು ಸಾಧ್ಯವಾಗಿದೆ. ಆಧುನಿಕ ಜೀವನ ವಿಧಾನದಲ್ಲೂ, ಕಛೇರಿಗಳಲ್ಲೂ ತೀವ್ರವಾಗಿ ಬಳಕೆಯಾಗುತ್ತಿರುವ ವಿವಿಧ ಬಗೆಯ ಯಂತ್ರೋಪಕರಣಗಳ ಪರಿಚಯವನ್ನು ನಾವಿಲ್ಲಿ ಮಾಡಿಕೊಳ್ಳೋಣ. ನಮ್ಮ ಭವಿಷ್ಯದಲ್ಲಿ ಒಳ್ಳೆಯದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಸಂಪರ್ಕ ಸಾಧನಗಳನ್ನು ಸರಿಯಾದ ರೀತಿ ಬಳಸಿಕೊಂಡು ಜೀವನದಲ್ಲಿ ಅಭಿವೃದ್ಧಿ ಹೊಂದೋಣ.



ದೊಡ್ಡ ದೊಡ್ಡ ಕಛೇರಿಗಳಲ್ಲಿ ನಡೆಯುವ ಅನೇಕ ದೈನಂದಿನ ಕೆಲಸಗಳು ಪುನರಾವರ್ತನೆಯಾಗುವಂತ ಹವು. ಅವನ್ನೆಲ್ಲ ಮತ್ತೆ ಮತ್ತೆ ಮಾನವನೇ ಮಾಡುವ ಬದಲಿಗೆ ಅವುಗಳನ್ನು ಮಾಡಲು ಅನುಕೂಲವಾಗುವಂತೆ ಯಂತ್ರೋಪಕರಣಗಳನ್ನು ಬಳಸಿಕೊಂಡರೆ ಅದರಿಂದ ಹಲವು ಬಗೆಯ ಉಪಯೋಗಗಳಾಗುತ್ತವೆ. ಎಲ್ಲ ಬಗೆಯ ಯಂತ್ರೋಪಕರಣಗಳ ಬಳಕೆಯ ಉದ್ದೇಶ ಶ್ರಮ ಮತ್ತು ಸಮಯದ ಉಳಿತಾಯವೇ ಆಗಿದೆ. ಶೀಘ್ರತೆ, ಆಯಾಸ ನಿವಾರಣೆ, ಸ್ಪಷ್ಟತೆ ಮತ್ತು ನಿಷ್ಕೃಷ್ಟತೆ ಇವು ಇದರ ನಾಲ್ಕು ಮುಖ್ಯ ಸೌಲಭ್ಯಗಳು. ಹಲವರು ಮಾಡುವ ಕೆಲಸವನ್ನು ಒಂದು ಯಂತ್ರ ಶೀಘ್ರವಾಗಿ ಮಾಡಿ ಮುಗಿಸುತ್ತದೆ. ಯಂತ್ರೋಪಕರಣಗಳನ್ನು ಬಳಸುವುದರಿಂದ ಎಷ್ಟು ಉಪಯೋಗವಿದೆಯೋ ಅಷ್ಟೇ ಮಟ್ಟಿನ ಹೊಣೆಗಾರಿಕೆಯೂ ಇದೆಯೆಂಬುದನ್ನು ಮರೆಯಬಾರದು.

ವಿದ್ಯುನ್ಮಾನ ಉಪಕರಣಗಳಲ್ಲಿ ಗಣಕ ಯಂತ್ರ (ಕಂಪ್ಯೂಟರ್)ಗಳು ಮಾನವನ ಜೀವನ ವಿಧಾನದ ಮೇಲೆ ಬಹಳಷ್ಟು ಪರಿಣಾಮ ಬೀರಿವೆ. ಇದನ್ನು ಕ್ರಿ.ಶ. 1820ರಲ್ಲಿ ಚಾರ್ಲ್ಸ್ ಬ್ಯಾಬೇಜ್ ಎಂಬ ಬ್ರಿಟೀಷ್

9th_Kannada_Reader Term I.indd 47 29-01-2019 16:29:47



ವಿಜ್ಞಾನಿಯು ಮೊದಲ ಬಾರಿಗೆ ಕಂಡು ಹಿಡಿದನು. ಡಿಫರೆನ್ಸ್ ಇಂಜಿನ್ ಹಾಗು ಅನಲಿಟಿಕಲ್ ಇಂಜಿನ್ ಎಂಬ ಹೆಸರಿನ ಕಂಪ್ಯೂಟರುಗಳನ್ನು ವಿನ್ಯಾಸಗೊಳಿಸಿದ ಚಾರ್ಲ್ಸ್ ಬ್ಯಾಬೇಜ್‌ನನ್ನು ಕಂಪ್ಯೂಟರ್‌ನ ಪಿತಾಮಹ ಎಂದು ಕರೆಯಲಾಗುವುದು. ಇದನ್ನು ರೂಪಿಸಿದವರಲ್ಲಿ ಅಲನ್ ಟ್ಯೂರಿಂಗ್, ಜಾನ್ ನ್ಯೂಮನ್ ಅವರ ಪಾತ್ರವೂ ಗಣನೀಯವಾದ್ದಾಗಿದೆ. ಕಂಪ್ಯೂಟರ್ ವಿದ್ಯುನ್ಮಾನ ಸಾಧನವಾಗಿದ್ದು ಸೂಚನೆಗಳ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತದೆ.

ಮಾನಿಟರ್, ಮೌಸ್, ಕೀಬೋರ್ಡ್, ಕಂಪ್ಯೂಟರ್ ಡೇಟಾ ಸಂಗ್ರಹ, ಹಾರ್ಡ್ ಡ್ರೈವ್ ಡಿಸ್ಕ್, ಸಿಸ್ಟಂ ಯೂನಿಟ್ ಮುಂತಾದ ಭಾಗಗಳು ಇದರಲ್ಲಿ ಇರುತ್ತವೆ.

ವಿದ್ಯಾ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕ್‌ಗಳು, ವಿಮಾ ಸಂಸ್ಥೆಗಳು, ರೈಲ್ವೆ ಹಾಗೂ ಬಸ್‌ಗಳಲ್ಲಿ ಅಸನ ಕಾದಿರಿಸಲು... ಹೀಗೆ ಹಲವು ಕ್ಷೇತ್ರಗಳಲ್ಲಿ ಇದು ನಾನಾ ರೀತಿಯಲ್ಲಿ ಉಪಯೋಗವಾಗುತ್ತಿದೆ.

ಸಾಮಾನ್ಯ ಮೂಲ ಗಣಿತ ಕ್ರಿಯೆಗಳಿಂದ ಹಿಡಿದು ಸಾವಿರಾರು ಹಂತಗಳಲ್ಲಿ ಮಾಡಬೇಕಾದ ಅತಿ ಕಠಿಣ ಸಮಸ್ಯೆಗಳವರೆಗೂ ವಿವಿಧ ಬಗೆಯ ಲೆಕ್ಕಾಚಾರಗಳನ್ನು ಗಣಕ ಯಂತ್ರವು ಮಾಡಬಲ್ಲದು. ಅವು, ಪ್ರಯಾಸಕರವಾದ ಲೆಕ್ಕಾಚಾರಗಳನ್ನು ಯಾವ ತಪ್ಪೂ ಇಲ್ಲದೆ, ಆಯಾಸಕ್ಕೊಳಗಾಗದೆ ಎಷ್ಟು ಬಾರಿ ಬೇಕಾದರೂ ಮಾಡಬಲ್ಲವು.

ವೇಗ, ಸ್ವಯಂ ಚಾಲನೆ, ನಿಷ್ಕೃಷ್ಟತೆ, ಮತ್ತು ಸಂಗ್ರಹಗಳು ಗಣಕ ಯಂತ್ರದ ಮುಖ್ಯ ಗುಣಗಳಾಗಿವೆ. ಇದರೊಡನೆ ಗಣಕ ಯಂತ್ರಗಳಿಗೆ ಕೆಲವು ಮಿತಿಗಳೂ ಇವೆ. ಉದಾಹರಣೆಗೆ ಅದಕ್ಕೆ ಸ್ವಯಂ ಆಲೋಚನೆ ಇಲ್ಲ. ಮಾನವನು ಸೂಚಿಸುವ ಸೂಚನೆಗಳ ಮೇರೆಗೆ ಮಾತ್ರ ಅದು ಕಾರ್ಯ ನಿರ್ವಹಿಸುತ್ತದೆ.

ಅಂತರ್ಜಾಲ (ಇಂಟರ್ನೆಟ್)

ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಇಡೀ ಜಗತ್ತನ್ನು ಸುತ್ತಲಾರ. ಇಡೀ ಜಗತ್ತನ್ನು ಅತೀ ಚಿಕ್ಕದಾಗಿ ನಮಗೆ ಎಲ್ಲಿ ಬೇಕೆಂದರಲ್ಲಿ ದರ್ಶನ ಮಾಡಲು ಸಹಾಯ ಮಾಡುವುದೇ ಅಂತರ್ಜಾಲ. ಇಂಟರ್‌ನೆಟ್ ವಿಶ್ವದಾದ್ಯಂತ ಸಂಪರ್ಕ ಸಾಧಿಸುತ್ತದೆ. ನಾವಿದ್ದೆಡೆಯಿಂದಲೇ ಎಲ್ಲಿಗೆ ಬೇಕಾದರೂ ಈ ಜಾಲತಾಣದ ಮೂಲಕ ಸಂಪರ್ಕ ಸಾಧಿಸಬಹುದು. ಅನೇಕ ಕಂಪ್ಯೂಟರ್ ನೆಟ್‌ವರ್ಕ್‌ಗಳ ಮಹಾಜಾಲಕ್ಕೆ ಅಂತರ್ಜಾಲ ಎಂದು ಕರೆಯಲಾಗುವುದು.

ಇಂಟರ್‌ನೆಟ್ ಒಂದು ತೆರೆದ ಜಗತ್ತು. ಕುಳಿತಲ್ಲಿಂದಲೇ ಜಗತ್ತಿನಾದ್ಯಂತ ನಮಗೆ ಆಸಕ್ತಿ ಇರುವವರ ಜೊತೆ ಮಾತನಾಡಬಹುದು. ಜಗತ್ತಿನ ಯಾವುದೇ ಮೂಲೆಯಲ್ಲಿರುವ ಗ್ರಂಥಾಲಯಕ್ಕೆ ಹೋಗಿ ನಮಗೆ ಬೇಕಾದ ಮಾಹಿತಿಗಳನ್ನು ಪಡೆಯಬಹುದು. ನಮ್ಮ ಬ್ಯಾಂಕಿನಲ್ಲಿರುವ ಅಕೌಂಟಿನ ಮಾಹಿತಿಯನ್ನು ನಾವಿದ್ದಲ್ಲಿಂದಲೇ ಪಡೆಯಬಹುದು.

ಇಂಟರ್‌ನೆಟ್ ಪಡೆಯಲು ಬೇಕಾದ ಹಾರ್ಡ್‌ವೇರ್‌ಗಳೆಂದರೆ ಕಂಪ್ಯೂಟರ್, ಕೀಬೋರ್ಡ್, ಮಾನಿಟರ್(ದರ್ಶನ ಫಲಕ), ಮೋಡೆಮ್(ದೂರವಾಣಿ ಸಂಪರ್ಕ)ಗಳು. ಒಂದು ಕಂಪ್ಯೂಟರ್‌ಗೆ ಒಂದು



9th_Kannada_Reader Term I.indd 48 29-01-2019 16:29:47

ಮೋಡೆಮ್ ಮೂಲಕ ಇಂಟರ್‌ನೆಟ್ ಜೋಡಣೆಯನ್ನು ಪಡೆಯಬಹುದು. ಮೋಡೆಮ್‌ಗಳಲ್ಲಿ ಆಂತರಿಕ ಮತ್ತು ಬಾಹ್ಯ (ಇಂಟರ್‌ನಲ್ ಮತ್ತು ಎಕ್ಸಟರ್ನಲ್) ಮೋಡೆಮ್ ಎನ್ನುವ ಎರಡು ಮೋಡೆಮ್‌ಗಳಿವೆ. ಇಂದು ಇದರ ಉಪಯೋಗ ಬಹಳವಾಗಿದೆ. ಬ್ಯಾಂಕ್‌ಗಳು, ಶಾಲೆಗಳು, ವಾಣಿಜ್ಯ ಕೇಂದ್ರಗಳು, ವ್ಯಾಪಾರಿಗಳಿಗೆ, ಉದ್ಯಮಿಗಳಿಗೆ, ಮಾರುಕಟ್ಟೆಯ ವಸ್ತುಗಳನ್ನು ಕೊಳ್ಳಲು, ಕೊಡಲು ಬೇಕಾದ ರೀತಿಯಲ್ಲಿ ಇದು ಸಹಾಯವಾಗುತ್ತದೆ. ಒಂದು ಹಳ್ಳಿಯಲ್ಲಿ ಕುಳಿತುಕೊಂಡು ವಿಶ್ವದಲ್ಲಿ ನಡೆಯುವ ಕಾರ್ಯಕ್ರಮಗಳನ್ನು, ಆಟೋಟಗಳನ್ನು ಶೈಕ್ಷಣಿಕಕ್ಕೆ ಸಂಬಂಧಿಸಿದ ವಿಷಯಗಳನ್ನೂ ನೋಡಬಹುದು, ಬೇಕಾದ ಮಾಹಿತಿ ತಿಳಿದುಕೊಳ್ಳಬಹುದು.

ಜೆರಾಕ್ಸ್ ಯಂತ್ರ (ಫೋಟೋ ಕಾಪಿಯರ್)

ಅನೇಕ ವಿದ್ಯಾಸಂಸ್ಥೆಗಳು, ವಾಣಿಜ್ಯ–ಸರ್ಕಾರಿ ಮತ್ತು ಖಾಸಗಿ ಕಛೇರಿಗಳ ಎಲ್ಲಾ ವಿಭಾಗಗಳಲ್ಲೂ ನಕಲು ಮಾಡುವುದಕ್ಕೆ ಉಪಯೋಗಿಸುತ್ತಿರುವ ಸಾಧನವೇ ಫೋಟೋ ಕಾಪಿಯರ್ ಅಥವಾ ಜೆರಾಕ್ಸ್ ಯಂತ್ರ.

1881ರಲ್ಲಿ ನ್ಯೂಯಾರ್ಕ್‌ಗೆ ಸೇರಿದ ಗೆಸ್ಟನರ್ ಕಾರ್ಲ್‌ಸನ್ ಎನ್ನುವಾತ ನಕಲು ಪ್ರತಿಗಳನ್ನು ಮಾಡಲು ನಕಲು ಯಂತ್ರವನ್ನು ಮೊದಲ ಬಾರಿಗೆ ಕಂಡು ಹಿಡಿದ. ಇದು ಜೆರೋಗ್ರಫಿ ವಿದ್ಯುತ್ ಜನಕಗಳು ಎಂಬ ತಂತ್ರಜ್ಞಾನವನ್ನು ಬಳಸಿ ಕಂಡು ಹಿಡಿದುದಾಗಿದೆ. ಇದು ಒಣ ಪ್ರಕ್ರಿಯೆಯಾಗಿದ್ದು ಬೆಳಕಿನ ಸೆನ್ಸಿಟಿವ್ ಫೋಟೋ ರಿಪ್ಲೆಕ್ಷನ್ ಆಕರ್ಷಣೆಗೆ ಒಳಗಾಗುತ್ತದೆ. ನಂತರ ಚಿತ್ರರೂಪದಲ್ಲಿ ಟೋನರ್‌ಗಳಿಗೆ ಅದನ್ನು ವರ್ಗಾಯಿಸುತ್ತದೆ. ನಂತರ ಕಾಪಿ ತೆಗೆಯುತ್ತದೆ. 1959ರಲ್ಲಿ ಈ ಉಪಕರಣ ಇಡೀ ವಿಶ್ವಕ್ಕೆ ಪರಿಚಯಿಸಲ್ಪಟ್ಟಿತು. ಇಂದು ಅನೇಕ ರೀತಿಯ ನಕಲು ಯಂತ್ರಗಳು ಹಾಗೂ ಬಣ್ಣದ ನಕಲು ಯಂತ್ರ(ಕಲರ್ ಜೆರಾಕ್ಸ್)ಗಳನ್ನು ಬಳಸುವುದು ರೂಢಿಯಲ್ಲಿದೆ.



ಫ್ಯಾಕ್ಸ್

ಫ್ಯಾಕ್ಸ್ ಮೂಲಕ ಕಛೇರಿಯಲ್ಲಿ ಅನೇಕ ಕಡತಗಳನ್ನೂ, ಚಿತ್ರಗಳನ್ನೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೂಡಲೇ ರವಾನಿಸಬಹುದು.

1846ರಲ್ಲಿ ಸ್ಕಾಟ್‌ಲ್ಯಾಂಡ್‌ಗೆ ಸೇರಿದ ಅಲೆಕ್ಸಾಂಡರ್ ಬೆಯಿನ್ ಎಂಬುವವರು ಇದನ್ನು ಕಂಡು ಹಿಡಿದರು. ಇಟಲಿ ದೇಶಕ್ಕೆ ಸೇರಿದ ಜಿಯೋವಾನ್ನಿ ಕಾಸಿಲ್ವಿ 1865ರಲ್ಲಿ ಪ್ಯಾರಿಸ್‌ನಿಂದ ವಿಯೆನ್ನಾಗೆ ಮೊದಲ ಬಾರಿಗೆ ಫ್ಯಾಕ್ಸ್ ಕಳುಹಿಸಿದರು. 1985ರಲ್ಲಿ ಅಮೇರಿಕಾದ ಹಾಂಕ್ ಮಾನ್ ನನ್ಕಿ ಎನ್ನುವವರು ಕಂಪ್ಯೂಟರ್ ಸಹಾಯದಿಂದ ಕಂಡು ಹಿಡಿದ ವಸ್ತುವಿಗೆ ಗಾಮಾ ಫ್ಯಾಕ್ಸ್ ಎಂದು ಹೆಸರಿಟ್ಟು ಅದನ್ನು ಪ್ರಚಾರಕ್ಕೆ ತಂದರು.

ಸ್ವಯಂಚಾಲಿತ ಟೆಲ್ಲರ್ ಯಂತ್ರ

(ಆಟೋಮ್ಯಾಟಿಕ್ ಟೆಲ್ಲರ್ ಮೆಷಿನ್– ಎಟಿಎಂ)

ತಾವು ಶೇಖರಿಸಿಟ್ಟ ಹಣವನ್ನು ಬ್ಯಾಂಕ್‌ಗಳಲ್ಲಿ ಹಾಕಿಟ್ಟು, ನಮಗೆ ಬೇಕಾದ ಸಮಯದಲ್ಲಿ ಅದನ್ನು ತೆಗೆದುಕೊಳ್ಳುವುದಕ್ಕೆ ಉಪಯೋಗಿಸುವುದೇ ಸ್ವಯಂ ಚಾಲಿತ ತಳ್ಳುವ ಯಂತ್ರಗಳು.

ಇಂಗ್ಲೆಂಡ್‌ಗೆ ಸೇರಿದ ಜಾನ್ ಷೆಪರ್ಡ್ ಬಾರೆನ್ ಎಂಬುವವರು 1967ರಲ್ಲಿ ಇದನ್ನು ಕಂಡು ಹಿಡಿದರು.

ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಒಂದು ಹಣದ ಹುಂಡಿಯನ್ನು (ಚೆಕ್) ನೀಡುತ್ತಿದ್ದವು. ಅದನ್ನು

9th_Kannada_Reader Term I.indd 49 29-01-2019 16:29:47

ಒಂದು ಬಾರಿ ಉಪಯೋಗಿಸಬಹುದಾಗಿತ್ತು. ಇತ್ತೀಚೆಗೆ ಕಾರ್ಡ್‌ಗಳನ್ನು ನೀಡಲಾಗುತ್ತಿದೆ. ಇದರ ಮೂಲಕ ನಮಗೆ ಹಣ ಬೇಕಾದಾಗ ನಾವು ಎಟಿಎಂಗಳಿಗೆ ಹೋಗಿ ನಮಗೆ ಬೇಕಾದಷ್ಟು ಹಣ ತೆಗೆದುಕೊಳ್ಳಬಹುದು, ಪಾವತಿ ಮಾಡಬಹುದು. ಈಗ ಗ್ರಾಹಕರು ತಮ್ಮ ಮೊಬೈಲ್ ಫೋನ್ ಮೂಲಕವೇ ತಮ್ಮ ಅಕೌಂಟಿನಲ್ಲಿರುವ ಹಣವನ್ನು ಇನ್ನೊಬ್ಬರ ಅಕೌಂಟಿಗೆ ವರ್ಗಾವಣೆ ಮಾಡಬಹುದು. ಮಾನವರಿಗೆ ಇದು ಅನೇಕ ರೀತಿಯಲ್ಲಿ ಉಪಯೋಗವಾಗಿದೆ. ಇತ್ತೀಚೆಗೆ ಎಟಿಎಂ ಕಾರ್ಡ್‌ಗಳನ್ನು ಮೋಸ ಮಾಡಿ ಗ್ರಾಹಕರ ಹಣವನ್ನು ನುಂಗಿ ಹಾಕುವಂತಹ ಸಮಸ್ಯೆಗಳೂ ಕಾಣಿಸುತ್ತಿವೆ.



ಬಯೋಮೆಟ್ರಿಕ್ ಡಿವೈಸ್

ಇದು ಮಾನವನ ಕೈರೇಖೆ, ಮುಖ, ಕಣ್ಣಿನ ನೋಟದ ಮೂಲಕ ಎಲ್ಲವನ್ನೂ ಮೊದಲೇ ಮುದ್ರಿಸಿಕೊಂಡು ಅದನ್ನು ಸಂಗ್ರಹ ಮಾಡಿಕೊಳ್ಳುತ್ತದೆ. ನಂತರ ಆ ವ್ಯಕ್ತಿಯನ್ನು ಗುರುತಿಸಲು ಸಹಾಯವಾಗುತ್ತದೆ. ಆಧಾರ್ ಕಾರ್ಡ್‌ಗಳಲ್ಲಿ ನಮ್ಮ ಕಣ್ಣುಗಳ ಗುರುತು, ಕೈರೇಖೆಗಳ ಗುರುತುಗಳನ್ನು ಸಂಗ್ರಹಿಸಲಾಗುತ್ತದೆ.



ಇದು ಸರ್ಕಾರಿ ಕಛೇರಿಗಳಲ್ಲಿ, ಖಾಸಗಿ ಕ್ಷೇತ್ರಗಳಲ್ಲಿ, ನೌಕರರ ಹಾಜರಾತಿಯನ್ನು ತೆಗೆದುಕೊಳ್ಳಲೂ ಸಹಾಯವಾಗುತ್ತದೆ.

ತಮಿಳುನಾಡು ಸರ್ಕಾರದ ನ್ಯಾಯ ಬೆಲೆ ಅಂಗಡಿ –ಸ್ಮಾರ್ಟ್‌ಕಾರ್ಡ್‌ಗಳು

ತಮಿಳುನಾಡಿನ ಜನರು ಬಳಸುವ ಕುಟುಂಬದ ರೇಷನ್ ಕಾರ್ಡ್‌ಗಳಿಗೆ ಪ್ರತಿಯಾಗಿ ಸ್ಮಾರ್ಟ್ ಕಾರ್ಡ್‌ಗಳನ್ನು ಇತ್ತೀಚೆಗೆ ಬಳಸಲಾಗುತ್ತಿದೆ. ಈ ಕಾರ್ಡ್‌ಗಳಲ್ಲಿ ಆ ಕುಟುಂಬದಲ್ಲಿರುವ ಸದಸ್ಯರುಗಳ ಸಂಖ್ಯೆ, ಮನೆಯ ಸಂಖ್ಯೆ, ಆಧಾರ್ ಸಂಖ್ಯೆ, ದೂರವಾಣಿ ಸಂಖ್ಯೆಯ ವಿಳಾಸಗಳನ್ನು ಮುದ್ರಿಸಿ ಈ ಕಾರ್ಡ್‌ಗಳನ್ನು ನೀಡಿರುತ್ತಾರೆ.

ಕುಟುಂಬದ ಸದಸ್ಯರು ನ್ಯಾಯಬೆಲೆ ಅಂಗಡಿಗೆ ಹೋಗಿ ಆ ಕಾರ್ಡ್‌ಗಳನ್ನು ಕೊಟ್ಟಾಗ ಅಂಗಡಿಯವರು ಆ ಕಾರ್ಡನ್ನು ಯಂತ್ರಕ್ಕೆ ಜೋಡಿಸಿದಾಗ ಅವರಿಗೆ ನೀಡಲಾಗುವ ವಸ್ತುಗಳ ವಿವರವಾದ ಪಟ್ಟಿಯನ್ನು ಅದು ತೋರಿಸುತ್ತದೆ. ವಸ್ತುಗಳ ಬೆಲೆಯ ವಿವರಗಳನ್ನು ಗುರುತಿಸಿಕೊಂಡು, ಅವರಿಗೆ ನೀಡಲಾದ ವಸ್ತುಗಳ ವಿವರವು ಅವರ ಮೊಬೈಲ್ ನಂಬರ್‌ಗೆ ಬರುತ್ತದೆ.

ಇ–ಮೆಯಿಲ್ (ಎಲೆಕ್ಟ್ರಾನಿಕ್ ಅಂಚೆ, ಮಿಂಚಂಚೆ)

ಕಾಗದ, ಪೆನ್ನು, ಅಂಚೆ ಕಛೇರಿ, ಅಂಚೆ ಚೀಟಿ, ಅಂಚೆ ಕಾರ್ಡ್‌ಗಳು... ಯಾವುವೂ ಇಲ್ಲದೆ ಇಂಟರ್‌ನೆಟ್ ಮೂಲಕ ಕಳಿಸುವ ಎಲೆಕ್ಟ್ರಾನಿಕ್ ವ್ಯವಸ್ಥೆಗೆ ಇ–ಮೆಯಿಲ್ ಎನ್ನುವರು.

9th_Kannada_Reader Term I.indd 50 29-01-2019 16:29:48



ಒಂದೇ ವಿಷಯವನ್ನೊಳಗೊಂಡ ಪತ್ರಗಳನ್ನು ಬೇರೆ ಬೇರೆ ವ್ಯಕ್ತಿಗಳಿಗೆ ಕಳುಹಿಸಬೇಕಾದಾಗ ಅಥವಾ ಒಂದು ಕಂಪನಿಯ ಮುಖ್ಯಸ್ಥ ತನ್ನ ಎಲ್ಲಾ ನೌಕರರಿಗೆ ಒಂದೇ ಮೆಮೋ ಕಳುಹಿಸಬೇಕಾದಾಗ ಇಮೆಯಿಲ್ ವ್ಯವಸ್ಥೆ ತುಂಬಾ ಸಹಾಯಕವಾಗಿರುತ್ತದೆ. ವಿವಿಧ ವಿಭಾಗಗಳ ವಿಳಾಸ ಬರೆದು ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿಟ್ಟರೆ ಬೇಕೆಂದಾಗ ಒಂದೇ ಸಂದೇಶವನ್ನು ಏಕಕಾಲದಲ್ಲಿ ಎಲ್ಲರಿಗೂ ಕಳುಹಿಸಬಹುದು. ಜಗತ್ತಿನ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯನ್ನು ತಕ್ಷಣ ಸಂಪರ್ಕಿಸಲು ಇಮೆಯಿಲ್ ತುಂಬಾ ಸಹಕಾರಿಯಾಗಿದೆ.

ಆನ್‌ಲೈನ್ (ಕ್ಷಿಪ್ರಸೇವೆ)

ಇದು ಬಹಳ ರೀತಿಯಲ್ಲಿ ಉಪಯೋಗವಾಗುತ್ತಿದೆ. ಇದು ಸಮಯವನ್ನು ಸಾಕಷ್ಟು ಉಳಿತಾಯ ಮಾಡುತ್ತದೆ. ರೈಲ್ವೇ ಟಿಕೆಟ್‌ಗಳನ್ನು ಕಾದಿರಿಸಲು, ಬಸ್‌ಗಳಲ್ಲಿ ಆಸನ ವ್ಯವಸ್ಥೆ ಕಾದಿರಿಸಲು, ಹೋಟೆಲ್‌ಗಳಲ್ಲಿ ಕೋಣೆಗಳನ್ನು ಕಾದಿರಿಸಲು ಮೊದಲಾದವುಗಳಿಗೆ ಇದು ತುಂಬಾ ಉಪಯುಕ್ತವಾಗಿದೆ.

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಫಲಿತಾಂಶಗಳನ್ನು ತಿಳಿದುಕೊಳ್ಳಲು ಇದು ಸಹಾಯಕವಾಗಿದೆ. ಹೊಸದಾಗಿ ಸೇರಿದ ಶಾಲಾ ಕಾಲೇಜುಗಳಿಗೆ ನೋಂದಣಿ ಮಾಡಲು, ಶುಲ್ಕ ಕಟ್ಟಲು, ಪ್ರವೇಶ ಶುಲ್ಕ ಕಟ್ಟಲು ಇಂದು ಆನ್‌ಲೈನ್ ನೆರವಾಗುತ್ತದೆ.

ಈ ಮೇಲಿನ ಎಲ್ಲಾ ಆವಿಷ್ಕಾರಗಳಿಂದ ಮನುಷ್ಯನಿಗೆ ಪ್ರಪಂಚವೇ ಒಂದು ಅಂಗೈಯಲ್ಲಿದ್ದಂತೆ ತೋರುತ್ತದೆ. ಈ ಮಾಧ್ಯಮಗಳನ್ನು ಬಳಸುವುದರಿಂದ ಎಲ್ಲೋ ಒಂದು ಜಾಗದಲ್ಲಿ ಕುಳಿತು ವಿಶ್ವದ ಎಲ್ಲಾ ವಿಷಯಗಳನ್ನೂ ತಿಳಿದುಕೊಳ್ಳಬಹುದು. ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳಬಹುದು. ಅಡುಗೆ ಅನಿಲವನ್ನು ನೋಂದಣಿ ಮಾಡುವುದರಿಂದ ಪ್ರಾರಂಭಿಸಿ, ಬ್ಯಾಂಕ್‌ಗಳಿಗೆ ಸಂಬಂಧಿಸಿದ ವಿಷಯದವರೆಗೂ ವ್ಯವಹಾರ ಮಾಡಬಹುದು. ಈ ಯಾಂತ್ರಿಕ ವಸ್ತುಗಳನ್ನು ಸರಿಯಾಗಿ ಬಳಸಿಕೊಳ್ಳಬೇಕಾದುದು ನಮ್ಮ ಕೈಯಲ್ಲಿದೆ.

ಪದಗಳ ಅರ್ಥ

ವೈಜ್ಞಾನಿಕ–ವಿಜ್ಞಾನಕ್ಕೆ ಸಂಬಂಧಿಸಿದ; ವಿದ್ಯುನ್ಮಾನ–ವಿದ್ಯುತ್ತಿಗೆ ಸಂಬಂಧಿಸಿದ; ಆವಿಷ್ಕಾರ–ಕಂಡು ಹಿಡಿಯುವಿಕೆ; ಪ್ರಯಾಸಕರ–ಕಷ್ಟಕರವಾದ, ಕಠಿಣವಾದ; ನಿಷ್ಕೃಷ್ಟತೆ–ನಿರ್ದಿಷ್ಟವಾದ, ಸರಿಯಾದ ಲೆಕ್ಕಾಚಾರನ್ನೊಳಗೊಂಡ; ದರ್ಶನ–ನೋಡುವುದು; ಉಲ್ಬಣ–ಹೆಚ್ಚು; ವಾಣಿಜ್ಯ–ವ್ಯಾಪಾರ; ಶೈಕ್ಷಣಿಕ–ಶಿಕ್ಷಣಕ್ಕೆ ಸಂಬಂಧಿಸಿದ; ನಕಲು–ಪ್ರತಿ ಕೃತಿ; ಅಭಿವೃದ್ಧಿ–ಬೆಳವಣಿಗೆ; ಇಂಟರ್‌ನೆಟ್–ಅಂತರ್‌ಜಾಲ; ಪ್ರಚಲಿತ–ಇತ್ತೀಚಿನ, ಸದ್ಯಕ್ಕೆ ನಡೆಯುತ್ತಿರುವ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಗಣಕ ಯಂತ್ರ ಎಂದರೇನು ?
2. ಗಣಕ ಯಂತ್ರದ ಕಾರ್ಯ ಭಾಗಗಳಾವುವು ?
3. ಅಂತರ್‌ಜಾಲದ ಉಪಯೋಗವೇನು ?
4. ಫೋಟೋ ಕಾಪಿಯರ್(ಜೆರಾಕ್ಸ್) ಯಂತ್ರವನ್ನು ಯಾರು ಕಂಡು ಹಿಡಿದರು ?
5. ಫ್ಯಾಕ್ಸ್‌ನ ಉಪಯೋಗವೇನು ?
6. ಸ್ವಯಂಚಾಲಿತ ಟೆಲ್ಲರ್ ಮೆಷಿನ್ನನ್ನು(ಎ.ಟಿ.ಎಂ) ಯಾರು, ಯಾವಾಗ ಕಂಡು ಹಿಡಿದರು ?
7. ಬಯೋಮೆಟ್ರಿಕ್ ಡಿವೈಸ್‌ನ ಉಪಯೋಗವೇನು ?
8. ಇ–ಮೆಯಿಲ್ ಎಂದರೇನು ?

9th_Kannada_Reader Term I.indd 51 29-01-2019 16:29:48

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಗಣಕಯಂತ್ರದ ಉಪಯೋಗವೇನು ?
2. ಇಂಟರ್‌ನೆಟ್ ಎಂದರೇನು ? ಅದರ ಉಪಯೋಗವೇನು ?
3. ಫೋಟೋ ಕಾಪಿಯರ್ ಯಂತ್ರದ ಉಪಯೋಗವೇನು ?
4. ಸ್ವಯಂಚಾಲಿತ ಯಂತ್ರ ಎಂದರೇನು ? ಅದರ ಉಪಯೋಗವೇನು ?
5. ತಮಿಳುನಾಡು ಸರ್ಕಾರದ ನ್ಯಾಯಬೆಲೆ ಅಂಗಡಿಯ ಸ್ಮಾರ್ಟ್‌ಕಾರ್ಡ್ ಬಗ್ಗೆ ಟಿಪ್ಪಣಿ ಬರೆಯಿರಿ.
6. ಆನ್‌ಲೈನ್‌ನ ಉಪಯೋಗವೇನು ? ಟಿಪ್ಪಣಿ ಬರೆಯಿರಿ.

ಭಾಷಾಭ್ಯಾಸ

1. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಅನೇಕ, ಸಮೂಹ, ವಿಶ್ವದಾದ್ಯಂತ, ಕ್ರಮ, ಆವಿಷ್ಕಾರ.

2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ವೈಜ್ಞಾನಿಕ, ನಿಯಂತ್ರಣ, ಉಪಯೋಗ, ಅಭಿವೃದ್ಧಿ.

3. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ವಿದ್ಯುನ್ಮಾನ, ಜೋಡಣೆಯನ್ನು, ಹಣದಿಂದ, ವಿಶ್ವದಾದ್ಯಂತ.

ಚಟುವಟಿಕೆ

1. ಕಂಪ್ಯೂಟರ್ ಕೇಂದ್ರಗಳಿಗೆ ಭೇಟಿ ನೀಡಿ ಕಂಪ್ಯೂಟರ್ ಉಪಯೋಗಿಸುವ ಅಭ್ಯಾಸ ಮಾಡಿ.
2. ಎಟಿಎಂಗಳಿಗೆ ಹೋಗಿ ಹಣ ತೆಗೆಯುವ ಅಭ್ಯಾಸ ಮಾಡಿಕೊಳ್ಳಿ.



9th_Kannada_Reader Term I.indd 52 29-01-2019 16:29:48

ಘಟಕ ನಾಲ್ಕು

ಅಂತರಿಕ್ಷ ಮಾಂತ್ರಿಕ

–ಡಾ. ತಮಿಳ್ ಸೆಲ್ವಿ





ಭಾರತದ ಜನಪ್ರಿಯ ರಾಷ್ಟ್ರಪತಿಗಳಲ್ಲಿ ಅಬ್ದುಲ್ ಕಲಾಂ ಅವರ ಹೆಸರನ್ನು ಯಾರೂ ಮರೆಯಲಾಗದು. ಬಾಹ್ಯಾಕಾಶ ವಿಜ್ಞಾನಿಯಾಗಿ ಅವರು ಮಾಡಿದ ಸಾಧನೆಗಳು ಅಜರಾಮರವಾಗಿರುವಂತಹವು. ಮಕ್ಕಳೆಂದರೆ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ಅಪರಿಮಿತ ಪ್ರೀತಿ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಮುಂದುವರೆಯಲು ಅವರು ಹಲವು ರೀತಿಯ ಮಾರ್ಗದರ್ಶನ ನೀಡಿದ್ದಾರೆ. ಭವಿಷ್ಯದ ಬಗೆಗೆ ಕನಸನ್ನು ಕಂಡು ಅದು ನನಸಾಗಲು ಕನಸು ಕಾಣುತ್ತಿದ್ದವರು ಅವರು. ಭಾರತೀಯ ಯುವಕರು, ಮಕ್ಕಳ ಮನಸ್ಸಿನಲ್ಲಿ ನಂಬಿಕೆಯ ಬೀಜವನ್ನು ಬಿತ್ತಿದ ಅಬ್ದುಲ್ ಕಲಾಂ ಅವರು ಇಂದು ಅಂತರಿಕ್ಷದಲ್ಲಿ ಲೀನವಾಗಿದ್ದಾರೆ. 'ನಿದ್ರಿಸುವಾಗ ಬರುವುದಲ್ಲ ಕನಸು, ನಿನ್ನನ್ನು ಯಾವುದು ನಿದ್ರಿಸದಂತೆ ಮಾಡುತ್ತದೆಯೋ ಅದೇ ಕನಸು' ಎಂದವರು ಅವರು. ಅವರು ತಮ್ಮ ಕನಸುಗಳನ್ನು ದೇಶದ ಯುವಕರಲ್ಲೂ ಮಕ್ಕಳಲ್ಲೂ ಹಂಚಿ ಹೋಗಿದ್ದಾರೆ. ಕಲಾಂ ಅವರು ತಮ್ಮ ಉನ್ನತವಾದ ಚಿಂತನೆಗಳಿಂದಲೂ, ಕಾರ್ಯಗಳಿಂದಲೂ ಜನರ ಹೃದಯವನ್ನು ಗೆದ್ದವರು. ದೇಶ, ಭಾಷೆ, ಜಾತಿ, ಧರ್ಮ ಹೀಗೆ ಎಲ್ಲ ಎಲ್ಲೆಗಳನ್ನೂ ದಾಟಿ ಜನರಿಗಾಗಿ ಮಾನವ ಕಲ್ಯಾಣಕ್ಕಾಗಿ ದುಡಿದರು. ಮಕ್ಕಳು, ಯುವಕರು, ಹಿರಿಯರು, ಅಧಿಕಾರಿಗಳು, ಹಲವು ರಾಷ್ಟ್ರಗಳ ನಾಯಕರು... ಹೀಗೆ ಎಲ್ಲಾ ವರ್ಗದ ಜನರ ಹೃದಯಗಳನ್ನೂ ಗೆದ್ದವರು ಅವರು. ಪದ್ಮಭೂಷಣ, ಪದ್ಮವಿಭೂಷಣ, ಭಾರತ ರತ್ನ ಹೀಗೆ ನಮ್ಮ ದೇಶದ ಅತ್ಯುನ್ನತವಾದ ಹಲವು ಬಿರುದುಗಳು ಇವರಿಗೆ ಲಭಿಸಿವೆ. ಅವರ ಸಾಧನೆಯನ್ನು ಇಲ್ಲಿ ಕವನದ ಮೂಲಕ ಕವಯಿತ್ರಿ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ.

9th_Kannada_Reader Term I.indd 53 29-01-2019 16:29:48

ಅಗ್ನಿಗೆ ರೆಕ್ಕೆಗಳ ತೊಡಿಸಿದ
ಸೂರ್ಯ!
ವಿಶ್ವ ರಾಷ್ಟ್ರಗಳ ಸಾಲಿನಲಿ ಭಾರತವ
ಮಿನುಗಿಸಿದ
ರವಿತೇಜ !

ವಿಶ್ವಭೂಪಟದಲ್ಲಿ ಭಾರತದ ಹೆಸರ
ಚಿರಸ್ಥಾಯಿಯಾಗಿಸಿದ ಚಿರಂಜೀವಿ!
ಅದಕಾಗಿ ಅಹರ್ನಿಶಿ ದುಡಿದ
ಕಾಯಕಯೋಗಿ!

ಬಲಿಷ್ಠ ಭಾರತದ ಕನಸೊಂದ ಕಂಡು
ಮುಸುಕಿದ್ದ ಬೂದಿಯ ಸರಿಸಿ
ಅಗ್ನಿ, ಪೃಥ್ವಿ, ಆಕಾಶ, ತ್ರಿಶೂಲ,
ನಾಗಗಳೆಂಬ
ಪಾಶುಪತಾಸ್ತ್ರಗಳ
ಅಂತರಿಕ್ಷದಲಿ ಸಾಲು ಸಾಲಾಗಿ ನಿಲ್ಲಿಸಿ
ರಾಷ್ಟ್ರರಕ್ಷಣೆಗೈದ ಸವ್ಯಸಾಚಿ!

ನಿನ್ನ ರಾಕೆಟ್‌ಗಳು ಅಂತರಿಕ್ಷವ
ತಲುಪಿದಾಗ
ಮಿಸೈಲ್‌ಗಳು ಬೆಂಕಿಯುಗುಳಿದಾಗ
ಚಕಿತಗೊಂಡಿತು ಜಗವು;
ಪ್ರೋಖ್ರಾನ್‌ನಲ್ಲಿ ನೀ ತೋರಿದ
ವಿರಾಟ್ ಶಕ್ತಿಯ ಪ್ರಕಾಶದೊಳಗೆ
ಮಿನುಗಿತು ಭಾರತ ದೇಶವು,
ಮಿಗಿಲೆನಿಸಿತು ತಾಂತ್ರಿಕ ಶಕ್ತಿಯಲಿ.
ನೆಲದ ಮೇಲೆ ನೀ ಸಾಧಿಸಿದ
ದಿಗ್ವಿಜಯ

ಅಂತರಿಕ್ಷದಲ್ಲಿ ಮೊಳಗಿತು !
ಅಂತರಿಕ್ಷದಲ್ಲಿ ನೀ ಹಾರಿಸಿದ
ಕ್ಷಿಪಣಿಗಳು
ಭೂಮಂಡಲದಲಿ ಮಾರ್ದನಿಸಿದವು !
ಮಕ್ಕಳ ಕನಸು ಕನವರಿಕೆಗೆ
ರೆಕ್ಕೆ ತೊಡಿಸಿ, ಜೀವ ತುಂಬಿ
ನಿನ್ನ ಕ್ಷಿಪಣಿಯೊಳಗಿಟ್ಟು ಅಂತರಿಕ್ಷಕ್ಕೆ
ಕಳಿಸಿದೆ!

ನಿನ್ನ ಪರಿಶ್ರಮ ಪರಿತಪನೆಗಳ ಮೂಲಕ
ಸಾಧನೆಯ ಉತ್ತುಂಗವ ತಲುಪಿದೆ !
ಜಾತಿ ಮತ ಕುಲಗಳೆಲ್ಲ ಭ್ರಮೆಯೆಂದು
ಸಾರಿದೆ
ದೇಶ ಹಿತ ಮನುಜ ಮತವೆಂದೇ
ಕಾರ್ಯಗೈದೆ.!
ಕಲಾಂಜೀ ! ನಿಮಗೆ ನಮದೊಂದು
ಸಲಾಂಜೀ!

9th_Kannada_Reader Term I.indd 54 29-01-2019 16:29:48

ಕವಿ–ಕಾವ್ಯ ಪರಿಚಯ

ಡಾ.ತಮಿಳ್ ಸೆಲ್ವಿಯವರು ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿಯೂ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸದಲ್ಲಿ ಆಳವಾದ ಜ್ಞಾನವನ್ನು ಪಡೆದಿರುವ ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ನೇಪಥ್ಯ, ಚೋಳ–ಪಲ್ಲವ ಶಿಲ್ಪಕಲೆ, ಅನನ್ಯ, ಅವಲೋಕನ, ಸಂಕ್ರಾಂತಿ, ಅಶೋಕ ಮಿತ್ರನ್ ಕಥೆಗಳು, ಮ.ರಂಗನಾಥನ್ ಕಥೆಗಳು ಮೊದಲಾದ ಮುವ್ವತ್ತಿಕ್ಕಿಂತ ಹೆಚ್ಚಿನ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಗಂಗರ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎನ್ನುವ ಮಹಾಪ್ರಬಂಧಕ್ಕೆ ಪಿಎಚ್.ಡಿ., ಪದವಿಯನ್ನೂ; 'ಕನ್ನಡ ಮತ್ತು ತಮಿಳು ಸಾಹಿತ್ಯಗಳ ನಡುವಿನ ಅನನ್ಯತೆ' ಎನ್ನುವ ಮಹಾಪ್ರಬಂಧಕ್ಕೆ ಡಿ.ಲಿಟ್., ಪದವಿಯನ್ನೂ ಗಳಿಸಿದ್ದಾರೆ. 'ನಾನು ಅವನಲ್ಲ, ಅವಳು' ಎನ್ನುವ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಇವರು ಪಡೆದಿದ್ದಾರೆ. ಇದಲ್ಲದೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, ನಲ್ಲಿ–ದಿಸೈಎಟ್ಟುಂ ಪ್ರಶಸ್ತಿ, ಉತ್ತಮ ಶಿಕ್ಷಕಿ ಪ್ರಶಸ್ತಿ ಮೊದಲಾದ ಹಲವಾರು ಪ್ರಶಸ್ತಿಗಳೂ ಇವರಿಗೆ ಲಭಿಸಿವೆ.

ಪದಗಳ ಅರ್ಥ

ಅಂತರಿಕ್ಷ–ಆಕಾಶ, ಬಾನು; ಮಾಂತ್ರಿಕ–ಜಾದೂಗಾರ; ತಾಂತ್ರಿಕ–ತಂತ್ರಶಾಸ್ತ್ರವನ್ನು ಬಲ್ಲವನು; ರವಿ–ಸೂರ್ಯ; ತೇಜ–ಹೊಳಪು, ಘನತೆ; ಚಿರಸ್ಥಾಯಿ–ಸ್ಥಿರವಾದುದು; ಅಹರ್ನಿಶಿ–ಹಗಲುರಾತ್ರಿ; ಸಲಾಂ–ನಮಸ್ಕಾರ; ಮಾರ್ದನಿ–ಪ್ರತಿಧ್ವನಿ; ಗೈದ–ಮಾಡಿದ; ಕ್ಷಿಪಣಿ–ದೂರದಿಂದ ನಿಯಂತ್ರಿಸಿ ಸ್ಫೋಟಿಸುವ ಸಾಧನ; ಸವ್ಯಸಾಚಿ–ಅರ್ಜುನ, ವೀರ; ಮಿಸೈಲ್–ಕ್ಷಿಪಣಿ; ಪ್ರಕಾಶ–ಬೆಳಕು; ದಿಗ್ವಿಜಯ–ಯಶಸ್ಸು, ಗೆಲುವು; ಪರಿತಪನೆ–ಅತಿಯಾಗಿ ಕಳವಳಪಡು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಅಗ್ನಿಗೆ ರೆಕ್ಕೆಗಳನ್ನು ತೊಡಿಸಿದವರು ಯಾರು ?
2. ಕಲಾಂ ಅವರು ಅಹರ್ನಿಶಿ ದುಡಿದದ್ದು ಯಾವುದಕ್ಕೆ ?
3. ಭೂಮಂಡಲದಲ್ಲಿ ಯಾವುದು ಮಾರ್ದನಿಸಿದವು ?
4. ಭಾರತ ಎಲ್ಲಿ ಮಿನುಗಿತು ?
5. ಕಲಾಂ ಅವರು ಆದರ್ಶವಾಗಲು ಕಾರಣಗಳೇನು ?
6. ಯಾವುದನ್ನು ಭ್ರಮೆ ಎಂದು ಕಲಾಂ ಅವರು ಸಾರಿದರು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಅಬ್ದುಲ್ ಕಲಾಂ ಅವರು ಭಾರತ ಮಾತೆಯ ಹೆಮ್ಮೆಯ ಪುತ್ರರೆನಿಸಿಕೊಳ್ಳಲು ಕಾರಣಗಳೇನು ? ವಿವರಿಸಿ.
2. ಅಬ್ದುಲ್ ಕಲಾಂ ಅವರು ಅಂತರಿಕ್ಷ ಮಾಂತ್ರಿಕ, ತಾಂತ್ರಿಕ ಎಂದು ಕರೆಸಿಕೊಳ್ಳಲು ಸರಿಯಾದ ಕಾರಣಗಳನ್ನು ನೀಡಿರಿ.

ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ಮಾಡಿರಿ.**
   ಮಾಂತ್ರಿಕ, ತೇಜ, ಅಹರ್ನಿಶಿ, ಮಾರ್ದನಿ, ಅನುಪಮ, ದಾರ್ಶನಿಕ, ಸಂದೇಶ.
2. **ಕೆಳಗಿನ ಪದಗಳಿಗೆ ತತ್ಸಮ–ತದ್ಭವ ಪದಗಳನ್ನು ನೀಡಿರಿ.**
   ಯೋಗಿ, ಧ್ವನಿ, ಚಿರ, ಅಚ್ಚರಿ, ದಿಸೆ, ನಿದ್ರೆ.
3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
   ಕನಸು, ಮೇಲೆ, ಏರು, ತೇಲು, ಮುಂದೆ, ಜ್ಞಾನಿ, ಹಿರಿಯ, ದೂರ.
4. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**
   ರವಿ, ದೇಶ, ಹೆಸರು, ಜಗ, ಮನುಜ, ಪುತ್ರ, ಅಗ್ನಿ.

ಚಟುವಟಿಕೆಗಳು

1. ಭಾರತ ದೇಶದ ಇನ್ನಿತರ ಖ್ಯಾತ ವಿಜ್ಞಾನಿಗಳ ಕುರಿತಂತೆ ವಿಷಯಗಳನ್ನು ಸಂಗ್ರಹಿಸಿ.
2. ರಾಮೇಶ್ವರಕ್ಕೆ ಭೇಟಿ ನೀಡಿ ಅಬ್ದುಲ್ ಕಲಾಂ ಅವರ ಕುರಿತಂತೆ ಇನ್ನೂ ಅಧಿಕ ವಿವರಗಳನ್ನು ತಿಳಿಯಿರಿ.

9th_Kannada_Reader Term I.indd 55 29-01-2019 16:29:48

ಉಪಪಠ್ಯ

ಘಟಕ ನಾಲ್ಕು

ಮೈಕೆಲ್ ಫ್ಯಾರಡೆ



ವಿದ್ಯುಚ್ಛಕ್ತಿ ಇಂದು ಮಾನವನ ಜೀವನದಲ್ಲಿ ಅತ್ಯವಶ್ಯಕವಾದ ವಸ್ತುವಾಗಿದೆ. ಅದು ಮನುಷ್ಯನ ಮೂಲ ಬೇಡಿಕೆಗಳಲ್ಲಿ ಒಂದಾಗಿದೆ. ವಿದ್ಯುತ್ ಇಲ್ಲದೆ ನಮ್ಮ ದೈನಂದಿನ ಕೆಲಸಗಳು, ನಮ್ಮ ಜೀವನ ಶೂನ್ಯ ಎನ್ನುವಷ್ಟರ ಮಟ್ಟಿಗೆ ಇಂದು ವಿದ್ಯುತ್ ನಮ್ಮ ಬದುಕಿನಲ್ಲಿ ಹಾಸುಹೊಕ್ಕಿದೆ. ಈ ವಿದ್ಯುತ್ ಪ್ರಪಂಚದಲ್ಲಿ ಕ್ರಾಂತಿಕಾರಕ ಸಂಶೋಧನೆ ನಡೆಸಿದ ಮಹಾವ್ಯಕ್ತಿ ಮೈಕೆಲ್ ಫ್ಯಾರಡೆ.



ಮೈಕೆಲ್ ಫ್ಯಾರಡೆಯವರಿಗೆ ಪ್ರಾಥಮಿಕ ಹಂತದಲ್ಲಿ ಸರಿಯಾದ ಶಿಕ್ಷಣ ಇಲ್ಲದಿದ್ದರೂ, ವೈಜ್ಞಾನಿಕ ಶಿಕ್ಷಣ ದೊರಕದಿದ್ದರೂ ತಮ್ಮ ಸ್ವಪರಿಶ್ರಮದಿಂದ ಸ್ವಯಂ ಪ್ರತಿಭೆಯಿಂದ ಇವರು ವಿಶ್ವದ ಮಹಾವಿಜ್ಞಾನಿಯಾದರು. ಅಯಸ್ಕಾಂತದಿಂದ ವಿದ್ಯುತ್ ಪ್ರಚೋದನೆ, ವಿದ್ಯುತ್ ಪ್ರವಾಹದಿಂದ ವಸ್ತು ವಿಭಜನೆ ಮುಂತಾದ ಪರಿಶೋಧನೆಗಳು ಫ್ಯಾರಡೆಯ ಹೆಸರನ್ನು ವಿಜ್ಞಾನ ಕ್ಷೇತ್ರದಲ್ಲಿ ಅಜರಾಮರವಾಗಿಸಿದವು. ಅಲ್ಲದೆ ಇವರು ಒಬ್ಬ ಉತ್ತಮ ಭಾಷಣಕಾರರೂ, ದಾರ್ಶನಿಕರೂ ಆಗಿದ್ದರು.

1791ರ ಸೆಪ್ಟೆಂಬರ್ 22ರಂದು ಫ್ಯಾರಡೆ ಇಂಗ್ಲೆಂಡಿನ ನ್ಯೂಯಂಗ್‌ಟನ್ ಎಂಬಲ್ಲಿ ಜನಿಸಿದರು. ಇವರ ತಂದೆ ಇಂಗ್ಲೆಂಡಿನ ಉತ್ತರ ಭಾಗದಲ್ಲಿ ಒಬ್ಬ ರೈತನಾಗಿ ಜೀವನ ಸಾಗಿಸುತ್ತಿದ್ದರು. ತಾಯಿಗೆ ಓದು–ಬರಹ ಕೂಡ ಬಾರದು. ಫ್ಯಾರಡೆಗೆ ಒಂಬತ್ತು ವರ್ಷವಾಗಿದ್ದಾಗ ಆತನ ತಂದೆಯ ಆರೋಗ್ಯ ಕೆಟ್ಟಿತು. ಫ್ಯಾರಡೆಯ ಸಂಸಾರ ಸಾಗುವುದೇ ಕಷ್ಟವಾಗಿತ್ತು. ಅವನಿಗೆ ಶಾಲೆಯಲ್ಲಿ ದೊರೆತ ಶಿಕ್ಷಣ ಬಹುಅಲ್ಪ. ಓದುವುದು, ಬರೆಯುವುದು, ಲೆಕ್ಕ ಇವಿಷ್ಟನ್ನು ಮಾತ್ರವೇ ಬಾಲಕ ಫ್ಯಾರಡೆ ಶಾಲೆಯಲ್ಲಿ ಕಲಿತದ್ದು. ತನ್ನ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಚಿಕ್ಕಂದಿನಲ್ಲಿಯೇ ಅವನು ಪುಸ್ತಕಗಳಿಗೆ ಬೈಂಡಿಂಗ್ ಮಾಡುವ ಕೆಲಸವನ್ನು ಮಾಡಲು ಆರಂಭಿಸಿದನು. ಒಂದು ವರ್ಷ ಕಳೆಯುವುದರಲ್ಲಿಯೇ ಪುಸ್ತಕ ಬೈಂಡ್ ಮಾಡುವ ವಿಭಾಗದಲ್ಲಿ ಅಪ್ರೆಂಟೀಸ್ ಆಗಿ ಕೆಲಸ ಕಲಿಯುವ ಅವಕಾಶ ಅವನಿಗೆ ದೊರೆಯಿತು. ಇದರಿಂದ ಫ್ಯಾರಡೆಗೆ ಉತ್ತಮ ಪುಸ್ತಕಗಳನ್ನು ನೋಡುವ, ಓದುವ ಅವಕಾಶ ದೊರೆಯಿತು. ಈ ಅವಕಾಶವನ್ನು ಉಪಯೋಗಿಸಿಕೊಂಡು ಹಲವಾರು ವೈಜ್ಞಾನಿಕ ಲೇಖನಗಳನ್ನು ಅವನು ಓದುತ್ತಿದ್ದನು. ಇದರಿಂದಾಗಿ ಅವನಿಗೆ ವಿಜ್ಞಾನದಲ್ಲಿ ಅಪಾರ ಆಸಕ್ತಿ ಬೆಳೆಯಿತು. ಚಿಕ್ಕ ವಯಸ್ಸಿನಲ್ಲಿ ಕೆಲಸಕ್ಕೆ ಸೇರಬೇಕಾಗಿ ಬಂದುದರಿಂದ ಆತನು ಪತ್ರ ವಾಹಕನಾಗಿ ಪುಸ್ತಕಕ್ಕೆ ರಟ್ಟು ಹಾಕುವ ಬೈಂಡರ್ ಆಗಿ ಪುಸ್ತಕ ವ್ಯಾಪಾರಿಯಾಗಿ ಕೆಲಸ ಮಾಡಿದನು. ಸಮಯ ದೊರೆತಾಗಲೆಲ್ಲಾ ಪುಸ್ತಕಗಳನ್ನು ಓದುತ್ತಿದ್ದುದರಿಂದ ಅವನಿಗೆ ವಿಜ್ಞಾನದಲ್ಲಿ ಅಪಾರ ಆಸಕ್ತಿ ಉಂಟಾಯಿತು. ಕೂಲಿ

9th_Kannada_Reader Term I.indd 56 29-01-2019 16:29:48



ಕೆಲಸ ಮಾಡುತ್ತಾ, ತಾನಾಗಿಯೇ ಓದಿ ಈತ ತುಂಬ ಬುದ್ಧಿವಂತನಾದನು. ವಿಜ್ಞಾನಿಗಳು ಸೇರುವ ಸಭೆಗಳಿಗೆ ಹೋಗಿ, ಪ್ರಸಿದ್ಧ ವಿಜ್ಞಾನಿಗಳ ಉಪನ್ಯಾಸಗಳನ್ನು ಕೇಳಿ, ಜ್ಞಾನವನ್ನು ಸಂಪಾದಿಸಿಕೊಂಡನು. ಅದರ ಪ್ರಭಾವದಿಂದಾಗಿ ಮುಂದೆ ಆತ ಉಪನ್ಯಾಸಕ, ದಾರ್ಶನಿಕ, ಗ್ರಂಥ ಕರ್ತೃ, ವಿಜ್ಞಾನಿಯೆನಿಸಿಕೊಳ್ಳಲು ಸಾಧ್ಯವಾಯಿತು. ದೈವಾನುಗ್ರಹ, ಗುರೂಪದೇಶಗಳಿಲ್ಲದೆ ಕೇವಲ ತನ್ನ ಪ್ರಯತ್ನ ಮಾತ್ರದಿಂದಲೇ ಜ್ಞಾನವು ಬರಲಾರದು ಎಂದು ಅವನು ನಂಬಿದ್ದನು.

ಹಂಫ್ರಿಡೇವಿ ಎಂಬ ವಿಜ್ಞಾನಿಗೆ ಪ್ರಯೋಗಶಾಲೆಯಲ್ಲಿ, ಅವರ ಉಪನ್ಯಾಸದಲ್ಲಿ ನೆರವಾಗುವ ಅವಕಾಶ ಫ್ಯಾರಡೆಗೆ ದೊರೆಯಿತು. ಅವರೊಡನೆ ಫ್ಯಾರಡೆ ವಿದೇಶಗಳಿಗೆ ಪ್ರವಾಸ ಮಾಡಿದನು. ಆ ಕಾಲದಲ್ಲಿದ್ದ ವೈಜ್ಞಾನಿಕ ಪ್ರಯೋಗ ಶಾಲೆ ಮತ್ತು ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡಿದನು. ಪ್ರಸಿದ್ಧ ವಿಜ್ಞಾನಿಗಳೊಡನೆ ಚರ್ಚಿಸಿ, ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿದುಕೊಂಡನು. ಭೌತಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲೂ ಪುಸ್ತಕಗಳನ್ನು ಬರೆದನು.

ಮೊದಲಿನಿಂದಲೂ ಫ್ಯಾರಡೆಗೆ ವಿದ್ಯುಚ್ಛಕ್ತಿಯನ್ನು ಕುರಿತು ಸಂಶೋಧನೆ ಮಾಡುವ ಬಯಕೆ ಇತ್ತು. ತಂತಿಯ ಮೂಲಕ ವಿದ್ಯುತ್ತನ್ನು ಹಾಯಿಸಿದರೆ ತಂತಿ ಅಯಸ್ಕಾಂತದಂತೆ ಕಬ್ಬಿಣದ ಚೂರುಗಳನ್ನು ಆಕರ್ಷಿಸುತ್ತದೆ ಎಂಬುದನ್ನು ಕ್ರಿ.ಶ.1830ರಲ್ಲಿ ಹ್ಯಾನ್ಸ್ ಓಯರ್ ಸ್ಟೆಡ್ ಎಂಬ ವಿಜ್ಞಾನಿ ಪತ್ತೆ ಹಚ್ಚಿದ್ದನು. ಫ್ಯಾರಡೆ ಅದಕ್ಕಿಂತ ತುಸು ಮುಂದುವರೆದು ಅಯಸ್ಕಾಂತದಿಂದ ವಿದ್ಯುಚ್ಛಕ್ತಿಯನ್ನು ಸೃಷ್ಟಿಸಲು ಸಾಧ್ಯವಿಲ್ಲವೇ ಎಂಬುದನ್ನು ಕುರಿತು ಯೋಚಿಸುತ್ತಿದ್ದನು. ಇದಕ್ಕಾಗಿ ಪ್ರಯೋಗಗಳನ್ನೂ ಮಾಡಿದನು. ತಂತಿಯ ಸುರುಳಿಯೊಂದರಲ್ಲಿ ಕಾಂತವೊಂದನ್ನು ಚಲಿಸುವಂತೆ ಮಾಡಿದರೆ ವಿದ್ಯುತ್ ಉತ್ಪಾದನೆಯಾಗುತ್ತದೆ ಎಂಬುದನ್ನು ಇವನು ಪ್ರಯೋಗದ ಮೂಲಕ ತೋರಿಸಿಕೊಟ್ಟನು. 1831ರಲ್ಲಿ ತನ್ನ ಪ್ರಯೋಗದ ಆಧಾರದ ಮೇಲೆ ಕಾಂತದಿಂದ ವಿದ್ಯುತ್ತನ್ನು ತಯಾರಿಸುವ ಸಾಧನವೊಂದನ್ನು ನಿರ್ಮಿಸಿದನು. ಇದನ್ನು 'ಡೈನಮೋ' ಎಂದು ಕರೆದನು. ಇಂದು ನಾವು ಉಪಯೋಗಿಸುವ ಡೈನಮೋ, ವಿದ್ಯುತ್ ಘಟಕ ಇವೆಲ್ಲವೂ ಫ್ಯಾರಡೆಯ ಕೊಡುಗೆಗಳು. ಕಾಂತ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸಾಧ್ಯ ಎನ್ನುವ ಸತ್ಯವನ್ನು ಜಗತ್ತಿಗೆ ತೋರಿಸಿಕೊಟ್ಟ ಈ ಮಹಾವಿಜ್ಞಾನಿಗೆ ಇಡೀ ವಿಶ್ವ ಚಿರಋಣಿಯಾಗಿದೆ. ವಿದ್ಯುತ್‌ಲೇಪನದ ಕುರಿತು ಮೊದಲು ವಿವರಗಳನ್ನು ನೀಡಿದವನೂ ಫ್ಯಾರಡೆಯೇ. 1834ರಲ್ಲಿ ಫ್ಯಾರಡೆ ವಿದ್ಯುತ್ ವಿಭಜನೆ ತತ್ವಗಳನ್ನು ನಿರೂಪಿಸಿದನು.

ಪಾಲಿಗೆ ಬಂದದ್ದು ಪಂಚಾಮೃತವೆನ್ನುತ್ತಾ ಕರ್ತವ್ಯ ಪಾರಾಯಣನಾಗಿ ದಕ್ಷತೆಯಿಂದ ತನ್ನ ಕೆಲಸ ಕಾರ್ಯಗಳನ್ನು ಇವನು ಮಾಡುತ್ತಿದ್ದನು. ಕಷ್ಟದಲ್ಲಿರುವವರಿಗೆ ಬಡವರಿಗೆ ಸಹಾಯ ಮಾಡಲು ತನ್ನ ಆದಾಯದ ಒಂದು ಭಾಗವನ್ನು ಮೀಸಲಾಗಿಡುತ್ತಿದ್ದನು. ನಿರಾಡಂಬರದ ಸರಳ ನಡೆ ನುಡಿಯೇ ಜೀವನದ ಸಾರವೆಂದು ತಿಳಿದು ಸ್ಥಾನಮಾನ, ಕೀರ್ತಿಗಳಿಗಾಗಿ ಆಸೆ ಪಡದೆ ಜೀವಿಸಿದ ವ್ಯಕ್ತಿ ಫ್ಯಾರಡೆ. ವಿದ್ಯುತ್‌ನ ಆವಿಷ್ಕಾರಕ್ಕೆ ಕಾರಣನಾದ ಫ್ಯಾರಡೆ 1867ರ ಆಗಸ್ಟ್ 25ರಂದು ಮರಣ ಹೊಂದಿದನು.

9th_Kannada_Reader Term I.indd 57 29-01-2019 16:29:48

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ವಿದ್ಯುತ್ ಪ್ರಪಂಚದಲ್ಲಿ ಕ್ರಾಂತಿಕಾರಕ ಸಂಶೋಧನೆ ನಡೆಸಿದ ಮಹಾವ್ಯಕ್ತಿ ಯಾರು ?
2. ಫ್ಯಾರಡೆ ಮಾಡಿದ ಸಾಧನೆಗಳಾವುವು ?
3. ಫ್ಯಾರಡೆ ಎಲ್ಲಿ ಜನಿಸಿದರು ?
4. ಫ್ಯಾರಡೆ ಚಿಕ್ಕಂದಿನಲ್ಲಿ ಯಾವ ಕೆಲಸ ಮಾಡುತ್ತಿದ್ದರು ?
5. ಫ್ಯಾರಡೆ ವೈಜ್ಞಾನಿಕ ಲೇಖನಗಳನ್ನು ಹೇಗೆ ಓದುತ್ತಿದ್ದರು ?
6. ಫ್ಯಾರಡೆಗೆ ವಿಜ್ಞಾನದಲ್ಲಿ ಹೇಗೆ ಆಸಕ್ತಿ ಬೆಳೆಯಿತು ?
7. ಮೊದಲಿನಿಂದಲೂ ಫ್ಯಾರಡೆಗೆ ಯಾವುದರಲ್ಲಿ ಹೆಚ್ಚಿನ ಆಸಕ್ತಿ ಇತ್ತು ?
8. ಫ್ಯಾರಡೆಯ ವಿಶಿಷ್ಟ ಕೊಡುಗೆಗಳು ಯಾವುವು ?
9. ಫ್ಯಾರಡೆ ತನ್ನ ಆದಾಯದ ಒಂದು ಭಾಗವನ್ನು ಏನು ಮಾಡುತ್ತಿದ್ದರು ?
10. ಫ್ಯಾರಡೆ ಯಾವಾಗ ಮರಣ ಹೊಂದಿದರು ?





II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಫ್ಯಾರಡೆಯ ಬಾಲ್ಯವನ್ನು ಕುರಿತು ಬರೆಯಿರಿ.
2. ಫ್ಯಾರಡೆ ಮಾಡಿದ ಸಾಧನೆಗಳನ್ನು ಕುರಿತು ಬರೆಯಿರಿ.
3. ಫ್ಯಾರಡೆಯ ವ್ಯಕ್ತಿತ್ವವನ್ನು ವಿವರಿಸಿ.

ಖ್ಯಾತ ವಿಜ್ಞಾನಿಗಳು





9th_Kannada_Reader Term I.indd 58 29-01-2019 16:29:50

ಘಟಕ ನಾಲ್ಕು

ವ್ಯಾಕರಣ

ಸಂಧಿಗಳು

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದಂತೆ ಸೇರುವುದನ್ನು ಸಂಧಿ ಎನ್ನುತ್ತೇವೆ. ಸಂಧಿಗಳಲ್ಲಿ ಸ್ವರ ಸಂಧಿ, ವ್ಯಂಜನ ಸಂಧಿ ಎಂಬ ಎರಡು ವಿಧಗಳಿವೆ.

ಸ್ವರ ಸಂಧಿ

ಸ್ವರದ ಮುಂದೆ ಸ್ವರ ಬಂದು ಸಂಧಿಯಾದರೆ ಅದನ್ನು ಸ್ವರ ಸಂಧಿ ಎನ್ನುವರು.

ಉದಾಹರಣೆಗೆ :

ಅವನ+ಊರು=ಅವನೂರು.

ವ್ಯಂಜನ ಸಂಧಿ

ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನವು ಬಂದು ಸಂಧಿಯಾದರೆ ಅದಕ್ಕೆ ವ್ಯಂಜನ ಸಂಧಿ ಎನ್ನುವರು.

ಉದಾಹರಣೆಗೆ :

ದಿಕ್+ಅಂತ=ದಿಗಂತ.

ಕನ್ನಡ ಸಂಧಿಗಳು

ಪೂರ್ವ ಪದ ಹಾಗೂ ಉತ್ತರ ಪದಗಳೆರಡೂ ಕನ್ನಡ ಪದಗಳೇ ಆಗಿದ್ದು, ಅವೆರಡೂ ಪದಗಳು ಕೂಡಿದಾಗ ಆಗುವ ಸಂಧಿಯನ್ನು ಕನ್ನಡ ಸಂಧಿ ಎನ್ನುವರು. ಎಂದರೆ ಎರಡು ಕನ್ನಡ ಪದಗಳು ಒಟ್ಟು ಸೇರುವುದನ್ನೇ ಕನ್ನಡ ಸಂಧಿಗಳು ಎನ್ನಲಾಗುವುದು. ಕನ್ನಡ ಸಂಧಿಗಳಲ್ಲಿ ಲೋಪ, ಆಗಮ, ಆದೇಶ ಎಂಬ ಮೂರು ವಿಧಗಳಿವೆ.

ಲೋಪ ಸಂಧಿ

ಸ್ವರದ ಮುಂದೆ ಸ್ವರವು ಬಂದಾಗ ಹಿಂದಿನ ಸ್ವರವು ಲೋಪವಾದರೆ, ಅದನ್ನು ಲೋಪ ಸಂಧಿ ಎನ್ನುತ್ತಾರೆ.

ಉದಾಹರಣೆಗೆ :

ಗಾಣ+ಇಗ=ಗಾಣಿಗ (ಇಲ್ಲಿ ಅಕಾರ ಲೋಪವಾಗಿದೆ)

ಮಾತು+ಇಲ್ಲ=ಮಾತಿಲ್ಲ(ಇಲ್ಲಿ ಉಕಾರ ಲೋಪವಾಗಿದೆ)

ಬೇರೆ+ಒಂದು=ಬೇರೊಂದು(ಇಲ್ಲಿ ಎಕಾರ ಲೋಪವಾಗಿದೆ)

ಆಗಮ ಸಂಧಿ

ಸ್ವರದ ಮುಂದೆ ಸ್ವರವು ಬಂದು ಸಂಧಿ ಕಾರ್ಯ ನಡೆದಾಗ ಆ ಎರಡು ಸ್ವರಗಳ ನಡುವೆ ಬೇರೊಂದು ಅಕ್ಷರವು ಹೊಸದಾಗಿ ಬಂದು ಸೇರುವುದನ್ನೇ ಆಗಮ ಸಂಧಿ ಎನ್ನುತ್ತಾರೆ.

9th_Kannada_Reader Term I.indd 59 29-01-2019 16:29:50

ಸಂಧಿಯಾಗುವಾಗ 'ಯ'ಕಾರವು ಹೊಸದಾಗಿ ಬಂದು ಸೇರಿದರೆ ಯಕಾರಾಗಮ ಸಂಧಿ ಎನ್ನಲಾಗುವುದು.

ಉದಾಹರಣೆಗೆ :

ಗಾಳಿ+ಅನ್ನು=ಗಾಳಿಯನ್ನು

ಕೆರೆ+ಅಲ್ಲಿ=ಕೆರೆಯಲ್ಲಿ

ಮನೆ+ಇಂದ=ಮನೆಯಿಂದ

ದೊರೆ+ಎಂದು=ದೊರೆಯೆಂದು

ಸಂಧಿಯಾಗುವಾಗ 'ವ'ಕಾರವು ಹೊಸದಾಗಿ ಬಂದು ಸೇರಿದರೆ ಅದನ್ನು ವಕಾರಾಗಮ ಸಂಧಿ ಎನ್ನಲಾಗುವುದು.

ಉದಾಹರಣೆಗೆ :

ಹಸು+ಅನ್ನು=ಹಸುವನ್ನು

ಗುರು+ಇಗೆ=ಗುರುವಿಗೆ

ಹೂ+ಇಂದ=ಹೂವಿಂದ

ಮಗು+ಉ=ಮಗುವು

ಆದೇಶ ಸಂಧಿ

ಸ್ವರಕ್ಕೆ ವ್ಯಂಜನ ಪರವಾದಾಗ ಅಥವಾ ವ್ಯಂಜನಕ್ಕೆ ವ್ಯಂಜನವು ಪರವಾದಾಗ ಮುಂದೆ ಇರುವ ವ್ಯಂಜನದ ಸ್ಥಾನದಲ್ಲಿ ಬೇರೊಂದು ವ್ಯಂಜನಾಕ್ಷರವು ಬರುವುದಕ್ಕೆ ಆದೇಶ ಸಂಧಿ ಎಂದು ಹೆಸರು. ಇದರಲ್ಲಿ ವರ್ಗದ ಪ್ರಥಮಾಕ್ಷರಗಳಾದ ಕ,ತ,ಪ.ಗಳಿಗೆ ವರ್ಗದ ತೃತೀಯಾಕ್ಷರಗಳಾದ ಗ,ದ,ಬ ಅಕ್ಷರಗಳು ಆದೇಶಗಳಾಗಿ ಬರುತ್ತವೆ.

ಉದಾಹರಣೆಗೆ :

ಹಳೆ+ಕನ್ನಡ=ಹಳೆಗನ್ನಡ(ಕಕಾರಕ್ಕೆ ಗಕಾರವು ಆದೇಶವಾಗಿ ಬಂದಿದೆ)

ಬೆಟ್ಟ+ತಾವರೆ+ಬೆಟ್ಟದಾವರೆ(ತಕಾರಕ್ಕೆ ದಕಾರವು ಆದೇಶವಾಗಿದೆ)

ಕಣ್+ಪನಿ=ಕಂಬನಿ(ಪಕಾರಕ್ಕೆ ಬಕಾರವು ಆದೇಶವಾಗಿದೆ)

ಪ್ರಕೃತಿ ಭಾವ ಸಂಧಿ

ಸ್ವರದ ಮುಂದೆ ಸ್ವರವು ಬಂದರೂ ಕೆಲವೆಡೆಗಳಲ್ಲಿ ಸಂಧಿ ಕಾರ್ಯವಾಗದೆ ಹಾಗೆಯೇ ಇದ್ದರೆ ಅದನ್ನು ಪ್ರಕೃತಿ ಭಾವ ಎಂದು ಕರೆಯಲಾಗುವುದು.

ಉದಾಹರಣೆಗೆ :

ಅಣ್ಣಾ+ಅಲ್ಲಿ ನೋಡು=ಅಣ್ಣಾ ಅಲ್ಲಿ ನೋಡು

ಅಕ್ಕಾ+ಇತ್ತ ಬಾ=ಅಕ್ಕಾ ಇತ್ತ ಬಾ

ದೇವರೇ+ಕಾಪಾಡು=ದೇವರೇ ಕಾಪಾಡು

ಅಬ್ಬಾ+ಅದು ಹುಲಿ=ಅಬ್ಬಾ ಅದು ಹುಲಿ

* * * *

9th_Kannada_Reader Term I.indd 60 29-01-2019 16:29:50

ಘಟಕ
ಐದು

ಲಿಕ್ಷ್ಣ



9th_Kannada_Reader Term II.indd 61 29-01-2019 16:32:49

ಘಟಕ ಐದು

ಮಹಿಳಾ ಸಾಧಕಿಯರು



ಅಸಾಮಾನ್ಯ ವ್ಯಕ್ತಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆ, ಮಾಡಿರುವ ಸಾಧನೆಗಳನ್ನು ಮನುಕುಲ ಎಂದೆಂದಿಗೂ ನೆನಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಆಯಾ ಕ್ಷೇತ್ರಗಳಲ್ಲಿ ಅವರ ಸಾಧನೆ, ಸಲ್ಲಿಸಿದ ಮೌಲ್ಯಯುತ ಸೇವೆ ಅನುಪಮ, ಅದ್ವಿತೀಯ ಹಾಗೂ ಮಹತ್ವವಾಗಿರುತ್ತದೆ. ಅವರು ನಾಡು ನುಡಿ ಸಮಾಜಕ್ಕೆ ನೀಡಿದ ಗುರುತರ ಸಾಧನೆ ಉಲ್ಲೇಖನೀಯ ಮಾತ್ರವಲ್ಲ, ಅದು ಇತರರಿಗೆ ಮಾರ್ಗದರ್ಶಿಯೂ ಆಗಿರುತ್ತದೆ. ಅವರ ಆದರ್ಶ, ಬೌದ್ಧಿಕತೆ, ನೈಪುಣ್ಯತೆ ಅನುಕರಣಶೀಲವೂ ಹೌದು. ಅದು ಪ್ರತಿಯೊಂದು ನಾಡು ನುಡಿ, ಸಾಹಿತ್ಯದ ಹೆಗ್ಗಳಿಕೆಯ ಕುರುಹೂ ಆಗಿರುತ್ತದೆ. ಅದಕ್ಕಾಗಿಯೇ ಅಂತಹವರ ಬದುಕು, ಸಾಧನೆ ಮತ್ತು ವ್ಯಕ್ತಿತ್ವದ ಕಿರು ಪರಿಚಯವನ್ನು ಸರಳವಾಗಿ ನಿರೂಪಿಸುವುದು ಪ್ರಸ್ತುತ ಪಾಠದ ಉದ್ದೇಶವಾಗಿದೆ.

ಮುಖ್ಯವಾಗಿ ಕರ್ನಾಟಕದಲ್ಲಿ ವಿಶಿಷ್ಟವಾಗಿ ಸಾಧನೆ ಮಾಡಿರುವ ಕೆಲವು ಮಹಿಳೆಯರನ್ನು ನಾವಿಲ್ಲಿ ಪರಿಚಯ ಮಾಡಿಕೊಳ್ಳಲಿದ್ದೇವೆ. ಡಾಕ್ಟರ್ ಅನುಪಮಾ ನಿರಂಜನ, ಭರತನಾಟ್ಯವನ್ನೇ ಬದುಕಿನ ಉಸಿರಾಗಿಸಿಕೊಂಡ ನಾಟ್ಯಮಯೂರಿ ಚಂದ್ರಭಾಗಾ ದೇವಿ ಮತ್ತು ದಾಸ ಸಾಹಿತ್ಯದಲ್ಲಿ ಗುರುತರ ಸೇವೆ ಸಲ್ಲಿಸಿದ ಹೆಳವನಕಟ್ಟೆ ಗಿರಿಯಮ್ಮ ಇವರೆಲ್ಲರ ಸಿದ್ಧಿ, ಸಾಧನೆಗಳ ಸಿಂಚನವೇ ಈ ಪಾಠ.

ಅನುಪಮಾ ನಿರಂಜನ

ಅನುಪಮಾ ನಿರಂಜನ ಕನ್ನಡ ಸಾಹಿತ್ಯದ ಲೇಖಕಿಯರಲ್ಲಿ ಒಬ್ಬರು. ಇವರು ಕಥೆ, ಕಾದಂಬರಿಗಳನ್ನು ರಚಿಸಿದ್ದಾರೆ. ಪ್ರವಾಸ ಕಥನ, ಆತ್ಮಕಥನ, ಶಿಶುಸಾಹಿತ್ಯ ಮತ್ತು ವೈದ್ಯ ವಿಜ್ಞಾನಗಳ ಲೇಖಕಿಯಾಗಿ ಕನ್ನಡದಲ್ಲಿ ಜನಪ್ರಿಯರಾಗಿದ್ದಾರೆ. ಇವೆಲ್ಲಕ್ಕಿಂತ ಹೆಚ್ಚಾಗಿ ಸೇವಾ ಮನೋಭಾವದ ವೈದ್ಯೆಯಾಗಿ, ಕನ್ನಡ ನಾಡಿನಾದ್ಯಂತ ಮನೆ ಮಾತಾಗಿದ್ದಾರೆ. ಇವರ ನಿಜವಾದ ಹೆಸರು ವೆಂಕಟಲಕ್ಷ್ಮಿ. 1934ರ ಮೇ 17ರಂದು, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿ ಇವರು ಹುಟ್ಟಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಬಿ.ಬಿ.ಎಸ್., ಪದವಿ ಪಡೆದು ವೈದ್ಯ ವೃತ್ತಿಯಲ್ಲಿ ತೊಡಗಿದರು. ಬೆಂಗಳೂರಿನಲ್ಲಿ ಚಿಕಿತ್ಸಾಲಯವನ್ನು ತೆರೆದು ಸಾವಿರಾರು ರೋಗಿಗಳಿಗೆ ಶುಶ್ರೂಷೆ ಮಾಡಿದ್ದಾರೆ. ಇವರ ಪತಿ ನಿರಂಜನ ಅವರೂ ಕೂಡ ಪ್ರಸಿದ್ಧ ಕಾದಂಬರಿಕಾರ ಹಾಗೂ ಅಂಕಣಕಾರರಾಗಿದ್ದಾರೆ. ಇವರ ಲೌಕಿಕ ಜೀವನ



ಪ್ರಫುಲ್ಲವಾಗಿತ್ತು. ಪತಿಯಂತೆಯೇ ಲೇಖನಿ ಹಿಡಿದು ಬರೆದು ಇವರೂ ಪ್ರಸಿದ್ಧಿ ಗಳಿಸಿದ್ದಾರೆ.

ಅನುಪಮಾ ಅವರ ಸಾಧನೆ ಅಗಾಧ ಹಾಗೂ ಬಹುಮುಖವಾದದ್ದು. ಇವರು ಹಲವಾರು ಕಾದಂಬರಿಗಳನ್ನೂ, ಕಥೆಗಳನ್ನೂ, ಶಿಶು ಸಾಹಿತ್ಯ, ಪ್ರವಾಸ ಸಾಹಿತ್ಯ, ದಾಂಪತ್ಯ, ಕಲೆ, ವಿಜ್ಞಾನ, ವೈದ್ಯಕೀಯಕ್ಕೆ ಸಂಬಂಧಿಸಿದ ಕೃತಿಗಳನ್ನು ಬರೆದಿದ್ದಾರೆ. ಅನುಪಮಾ ಅವರ ಸಾಹಿತ್ಯ ಕೃತಿಗಳು ಹೀಗಿವೆ : ಅನಂತಗೀತೆ, ಶ್ವೇತಾಂಬರಿ, ಸಂಕೋಲೆಯೊಳಗಿಂದ, ನೂಲು ನೆಯ್ದ ಚಿತ್ರ, ಹಿಮದ ಹೂ, ಸ್ನೇಹ ಪಲ್ಲವಿ, ಹೃದಯ ವಲ್ಲಭ, ಆಕಾಶ ಗಂಗೆ, ಸಸ್ಯಶಾಮಲ, ಋಣ, ಮೂಡಲ–ಪಡುವಣ, ಚಿತ್ತಮೋಹನ, ಕಣಿವೆಗೆ ಬಂತು ಬೇಸಿಗೆ, ಕೊಳಚೆ ಕೊಂಪೆಯ ದಾನಿಗಳು – ಇವು ಇವರ ಕಾದಂಬರಿಗಳು. ಕಣ್ಣಾಣಿ,

9th_Kannada_Reader Term II.indd 62 29-01-2019 16:32:49

ನೀರಿಗೆ ನೈದಿಲೆ ಶೃಂಗಾರ, ಏಳು ಸುತ್ತಿನ ಮಲ್ಲಿಗೆ, ಗಿರಿಧಾಮ, ಒಡಲು, ಪುಷ್ಪಕ – ಇವು ಇವರು ರಚಿಸಿರುವ ಕಥಾ ಸಂಕಲನಗಳು. 'ಕಲ್ಲೋಲ' ನಾಟಕ; 'ನೆನಪು : ಸಿಹಿಕಹಿ' ಆತ್ಮಕಥನ; 'ಸ್ನೇಹ ಯಾತ್ರೆ', 'ಅಂಗೈಯಲ್ಲಿ ಯೂರೋ'– ಅಮೇರಿಕಾ ಪ್ರವಾಸ ಕಥನ; 'ದಿನಕ್ಕೊಂದು ಕಥೆ' – ಮಕ್ಕಳ ಕಥಾ ಸಂಗ್ರಹ; 'ಕೆಂಪಮ್ಮನ ಮಗು', 'ಆರೋಗ್ಯ ಭಾಗ್ಯಕ್ಕೆ ವ್ಯಾಯಾಮ' – ಇವು ಇವರ ವೈದ್ಯಕೀಯ ಕೃತಿಗಳು.

ಅನುಪಮಾ ಅವರ ಮಹತ್ಸಾಧನೆಗೆ ಹಲವು ಗೌರವ, ಪ್ರಶಸ್ತಿಗಳೂ ಲಭಿಸಿವೆ. ಆತ್ಮಕಥನ ಕೃತಿ 'ನೆನಪು : ಸಿಹಿಕಹಿ'ಯಲ್ಲಿ ಅವರ ಪೂರ್ಣ ಜೀವನ ದರ್ಶನವೇ ಇದೆ. ಇವರ ಈ ಕೃತಿಗೆ ಬೆಂಗಳೂರಿನ 'ಶಾಶ್ವತೀ ಸಂಸ್ಥೆ' ಸ್ಥಾಪಿಸಿರುವ 'ನಂಜನಗೂಡು ತಿರುಮಲಾಂಬಾ ಪ್ರಶಸ್ತಿ' ಬಂದಿದೆ. ಅನುಪಮಾ ಅವರ 'ರೂವಾರಿಯ ಲಕ್ಷ್ಮಿ' ಕಥಾ ಸಂಕಲನಕ್ಕೆ 1960ರಲ್ಲಿ, ಮತ್ತು 'ಆರೋಗ್ಯ ದರ್ಶನ' ಎನ್ನುವ ವೈದ್ಯಕೀಯ ಪುಸ್ತಕಕ್ಕೆ 1971ರಲ್ಲಿ ರಾಜ್ಯ ಸರ್ಕಾರದ ಬಹುಮಾನ ದೊರೆತಿದೆ. 1978ರಲ್ಲಿ ಅನುಪಮಾ ಅವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ ಹಾಗೂ ಸೋವಿಯಟ್ ಲ್ಯಾಂಡ್ ನೆಹರೂ ಪ್ರಶಸ್ತಿ ಗೌರವ ದೊರೆತಿದೆ. ಇವರ ಕೆಲವು ಕಾದಂಬರಿಗಳು ಇಂಗ್ಲಿಷ್, ಉರ್ದು, ಜರ್ಮನ್, ತಮಿಳು, ತೆಲುಗು ಮಲಯಾಳಂ ಮತ್ತು ಹಿಂದಿ ಭಾಷೆಗಳಿಗೆ ಅನುವಾದವಾಗಿವೆ.

ತಮ್ಮ ಬದುಕಿನ ಕಡೆಗಾಲದಲ್ಲಿ ಕ್ಯಾನ್ಸರ್ ರೋಗಕ್ಕೆ ಬಲಿಯಾಗಿ, ಬದುಕಿದ್ದಾಗಲೇ ಸಾವು ಸಮೀಪಿಸುತ್ತಿದೆ ಎನ್ನುವುದನ್ನು ಬಲ್ಲವರಾಗಿದ್ದ ಅನುಪಮಾ ಸಾವನ್ನು ನಿರೀಕ್ಷಿಸುತ್ತಲೇ ಕಾರ್ಯ ಮುಂದುವರೆಸಿದ ಅವರ ಕಾರ್ಯತತ್ಪರತೆ ಶ್ಲಾಘನೀಯವಾದುದಾಗಿದೆ. 1991ರಲ್ಲಿ ಇವರು ಮರಣ ಹೊಂದಿದರು. ಅನುಪಮಾ ಇಂದು ನಮ್ಮೊಂದಿಗಿಲ್ಲ. ಆದರೆ ಅವರು ನಮಗೆ ದೇಣಿಗೆಯಾಗಿ ಬಿಟ್ಟು ಹೋದ ಕೃತಿಗಳು ನಮಗೆ ಆದರ್ಶವಾಗಿ ಉಳಿದಿವೆ.

ಚಂದ್ರಭಾಗಾದೇವಿ

ಚಂದ್ರಭಾಗಾದೇವಿ ಕನ್ನಡ ನಾಡಿನ ಖ್ಯಾತ ನೃತ್ಯ ಕಲಾವಿದೆ. ತಮ್ಮ ಭರತನಾಟ್ಯ ಕಲಾ ಪ್ರದರ್ಶನದ ಮೂಲಕ ನಮ್ಮ ದೇಶದಲ್ಲಷ್ಟೇ ಅಲ್ಲದೆ, ವಿದೇಶಗಳಲ್ಲೂ ಇವರು ಪ್ರಖ್ಯಾತಿ ಗಳಿಸಿದ್ದಾರೆ. ಭರತನಾಟ್ಯಕಲೆಗೊಂದು



ಗರಿ ತೊಡಿಸಿದ್ದಾರೆ. ಚಂದ್ರಭಾಗಾದೇವಿ 1921ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಜನಿಸಿದರು. ತಂದೆ ಪಡುಕೋಣೆ ರಮಾನಂದ ರಾಯರು. ತಾಯಿ : ಸೀತಾದೇವಿ. ಬಾಲ್ಯದಲ್ಲಿ ಚಂದ್ರಭಾಗಾದೇವಿ ಕೋಟಶಿವರಾಮಕಾರಂತ ಅವರಿಂದ, 'ಫ್ರೀ ಸ್ಟೈಲ್' ನೃತ್ಯಾಭ್ಯಾಸ ತರಬೇತಿ' ಪಡೆದರು. ಮುಂದಿನ ಓದಿಗಾಗಿ ಬೆಂಗಳೂರಿನ ಮಹಾರಾಣಿ ಕಾಲೇಜು ಸೇರಿದರು. ಅಲ್ಲಿ ರಸಾಯನಶಾಸ್ತ್ರ ವಿಭಾಗದ

ಕಲ್ಪನ ಎಂಬ ಗಗನ ಕುಸುಮ



ಕಲ್ಪನ ಚಾವ್ಲಾ

ಕಲ್ಪನ ಚಾವ್ಲಾ ಭಾರತದ ಪ್ರಥಮ ಮಹಿಳಾ ಬಾಹ್ಯಾಕಾಶ ಯಾನಿ. ಹರಿಯಾಣದ ಕರ್ನಾಲ್ ಎನ್ನುವ ಪುಟ್ಟ ನಗರದಲ್ಲಿ ಹುಟ್ಟಿದ ಚಾವ್ಲಾ 1984ರಲ್ಲಿ ಅಮೇರಿಕಾದ ಟೆಕ್ಸಾಸ್ ವಿಶ್ವವಿದ್ಯಾಲಯದಲ್ಲಿ ವೈಮಾನಿಕ ಶಾಸ್ತ್ರದಲ್ಲಿ ಪದವಿ ಪಡೆದು, 'ನಾಸಾ' ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಿದರು. 1995ರಲ್ಲಿ ಗಗನ ಯಾತ್ರೆ ಕೈಗೊಂಡು ಸುರಕ್ಷಿತವಾಗಿ ಭೂಮಿಗೆ ಮರಳಿದರು. 2003ರ ಜನವರಿ 16ರಂದು ಉಡಾಯನಗೊಂಡ 'ಎಸ್‌ಟಿಎಸ್ 107' ಎನ್ನುವ ಉಪಗ್ರಹದಲ್ಲಿ ಪ್ರಯಾಣ ಮಾಡಿ ಬಾಹ್ಯಾಕಾಶದಲ್ಲಿ ಸುಮಾರು 80 ಪ್ರಯೋಗಗಳನ್ನು ನಡೆಸಿ ಹಿಂದಿರುಗುವಾಗ, ಭೂಮಿಗೆ ಹದಿನಾರು ನಿಮಿಷಗಳ ದೂರವಿರುವಾಗ ಆಕಸ್ಮಿಕ ಅಗ್ನಿ ದುರಂತಕ್ಕೊಳಗಾಗಿ ಮರಣ ಹೊಂದಿದರು.

9th_Kannada_Reader Term II.indd 63 29-01-2019 16:32:49

ಅಧ್ಯಾಪಕರಾಗಿದ್ದ ಯು.ಎಸ್. ಕೃಷ್ಣರಾವ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿ ಹಬ್ಬದ ಸಂದರ್ಭದ(1940)ಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಭರತನಾಟ್ಯ ಪ್ರದರ್ಶಿಸುತ್ತಿದ್ದುದನ್ನು ಕಂಡರು. ಅವರ ಅಭಿನಯಕ್ಕೆ ಚಂದ್ರಭಾಗಾದೇವಿ ಮಾರು ಹೋಗಿ ಅವರ ಶಿಷ್ಯೆಯಾದರು.

ಚಂದ್ರಭಾಗಾದೇವಿ ಮೈಸೂರು ಶೈಲಿಯ ಭರತನಾಟ್ಯವನ್ನು ಕೋಲಾರ ಕೃಷ್ಣಪ್ಪ ಅವರಿಂದಲೂ; ಪಂದನಲ್ಲೂರು ಪದ್ಧತಿಯ ನೃತ್ಯಾಭ್ಯಾಸವನ್ನು ಪಂದನಲ್ಲೂರು ಮೀನಾಕ್ಷಿ ಸುಂದರಂ ಅವರಿಂದಲೂ ಕಲಿತರು. ಸುಮಾರು 55ಕ್ಕೂ ಹೆಚ್ಚು ವರ್ಷಗಳ ಕಾಲ ಇವರು ದೇಶ–ವಿದೇಶಗಳಲ್ಲಿ ನಾಟ್ಯ ಪ್ರದರ್ಶನ ನೀಡಿದರು. ಇವರು ನೀಡಿರುವ ನಾಟ್ಯ ಪ್ರದರ್ಶನಗಳ ಸಂಖ್ಯೆ ಸಾವಿರದೈನೂರಕ್ಕೂ ಮಿಗಿಲಾಗಿವೆ. ರತಿ–ಮನ್ಮಥ, ರಾಧಾ–ಕೃಷ್ಣ, ಶಿವಲೀಲೆ ಹೀಗೆ ನಾಟ್ಯದ ಮೂಲಕ ಅವರು ಅಭಿನಯಿಸಿದ ಪಾತ್ರಗಳು ಹಲವು. 'ದಿ ಟೆಂಪ್ಟೇಷನ್ ಆಫ್ ಬುದ್ಧ', 'ರಾಣಿ ಶಾಂತಲಾ', 'ಗೀತ ಗೋವಿಂದ', 'ಕಾಮದಹನ' – ಮೊದಲಾದವು ಇವರು ಪ್ರದರ್ಶಿಸಿರುವ ಪ್ರಮುಖ ನಾಟ್ಯ ದೃಶ್ಯಾವಳಿಗಳು. ನಾಟ್ಯಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಇವರು ರಚಿಸಿದ್ದಾರೆ. ಚಂದ್ರಭಾಗಾದೇವಿ ಪಡೆದ ಪ್ರಶಸ್ತಿಗಳೂ ಅನೇಕ. 1985ರಲ್ಲಿ ರಾಜ್ಯ ಪ್ರಶಸ್ತಿ, 1988ರಲ್ಲಿ ರಾಷ್ಟ್ರೀಯ ನೃತ್ಯ ಪ್ರಶಸ್ತಿ, ಕಲಾ ಭಾರತಿ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ಬೆಂಗಳೂರು ಗಾಯನ ಸಮಾಜ ಪ್ರಶಸ್ತಿ ಮೊದಲಾದವುಗಳನ್ನು ಇವರು ಪಡೆದಿದ್ದಾರೆ.

ಪತಿ ಕೃಷ್ಣರಾವ್ ಅವರ ಜೊತೆಗೂಡಿ ಚಂದ್ರಭಾಗಾದೇವಿ ತಮ್ಮ ನಿವಾಸ 'ಮಹಾಮಾಯಾ'ದಲ್ಲಿ ನಾಟ್ಯ ತರಗತಿಗಳನ್ನು ಆರಂಭಿಸಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಭರತನಾಟ್ಯ ತರಬೇತಿಯನ್ನು ನೀಡಿದ್ದಾರೆ.

ನೃತ್ಯಬೋಧನೆ, ಪ್ರದರ್ಶನ, ಉಪನ್ಯಾಸ ಇವುಗಳಿಗಾಗಿ ತಮ್ಮ ಬದುಕನ್ನೇ ಮೀಸಲಿರಿಸಿದ್ದ ಚಂದ್ರಭಾಗಾದೇವಿ ಅವರನ್ನು ಲಂಡನ್ನಿನ ಏಷ್ಯನ್ ಮ್ಯೂಸಿಕ್ ಸರ್ಕಲ್ ಸಹಯೋಗದಲ್ಲಿ ಕಾರ್ಯ ನಿರ್ವಹಿಸಲು ಮೈಸೂರು ಸರ್ಕಾರ ಇಂಗ್ಲೆಂಡ್‌ಗೆ ಕಳುಹಿಸಿತ್ತು(1965). ಇವರು ಸಾಂಸ್ಕೃತಿಕ ರಾಯಭಾರಿಯಾಗಿ ಅಲ್ಲಿಗೆ ಹೋಗಿ ದೇಶದ ಮನ್ನಣೆ ಹೆಚ್ಚಿಸಿದರು. ಇಂಗ್ಲೆಂಡ್, ಐರ್ಲೆಂಡ್, ಪಶ್ಚಿಮ ಜರ್ಮನಿ, ಫ್ರಾನ್ಸ್, ಬೆಲ್ಜಿಯಂ, ಅಮೇರಿಕಾ ಮತ್ತು ಇತರ ದೇಶಗಳಲ್ಲಿ ನೃತ್ಯ ಪ್ರದರ್ಶನ ಹಾಗೂ ಉಪನ್ಯಾಸ ನೀಡಿದ್ದಾರೆ.

ಕ್ರಾಂತಿ



ಮುತ್ತುಲಕ್ಷ್ಮಿ

ತಮಿಳುನಾಡಿನ ಪ್ರಪ್ರಥಮ ವೈದ್ಯೆ. ಭಾರತ ಒಕ್ಕೂಟದ ಮಹಿಳಾ ಸಂಘದ ಪ್ರಥಮ ಅಧ್ಯಕ್ಷೆ. ಚೆನ್ನೈ ಮಹಾನಗರ ಪಾಲಿಕೆಯ ಪ್ರಥಮ ಉಪಮೇಯರ್. ವಿಧಾನ ಪರಿಷತ್‌ಗೆ ಆಯ್ಕೆಯಾದ ಮೊಟ್ಟ ಮೊದಲ ಮಹಿಳೆ. ದೇವದಾಸಿ ತಡೆ ಕಾಯ್ದೆ, ದ್ವಿಪತ್ನಿತ್ವ ತಡೆ ಕಾಯ್ದೆ, ಮಹಿಳೆಯರಿಗೆ ಆಸ್ತಿಯ ಹಕ್ಕು ಕಾಯ್ದೆ, ಬಾಲ್ಯ ವಿವಾಹ ಪದ್ಧತಿ ತಡೆ ಕಾಯ್ದೆ ಮುಂತಾದ ಕಾಯ್ದೆಗಳನ್ನು ಜಾರಿಗೆ ತರಲು ಇವರು ಶ್ರಮಿಸಿದರು. ಚೆನ್ನೈನಲ್ಲಿ 1930ರಲ್ಲಿ, 'ಅವ್ವೈ ಇಲ್ಲಂ' ಎನ್ನುವ ವಸತಿ ಶಾಲೆಯನ್ನೂ, 1952ರಲ್ಲಿ 'ಕ್ಯಾನ್ಸರ್ ಆಸ್ಪತ್ರೆ' ಮುಂತಾದವುಗಳನ್ನೂ ಸ್ಥಾಪಿಸಿದರು.

ಜ್ಞಾನ



ಸಾವಿತ್ರಿ ಬಾಯಿ ಫುಲೆ

1848ರ' ಲ್ಲಿ ಮಹಿಳೆಯರಿಗಾಗಿ ಸ್ಥಾಪಿಸಿದ ಶಾಲೆಯಲ್ಲಿ ಇವರು ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ಇವರೇ ನಮ್ಮ ದೇಶದ ಪ್ರಪ್ರಥಮ ಮಹಿಳಾ ಶಿಕ್ಷಕಿ. ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ 1831ರ ಜನವರಿ 3ರಂದು ಇವರು ಜನಿಸಿದರು.

9th_Kannada_Reader Term II.indd 64 29-01-2019 16:32:49

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿಯೂ ಇವರು ಕಾರ್ಯ ನಿರ್ವಹಿಸಿದ್ದಾರೆ. ನೃತ್ಯ ಲೋಕದ ಈ ಅಪೂರ್ವ ತಾರೆ 1997ರಲ್ಲಿ ಅಸ್ತಂಗತರಾದರು. ನೃತ್ಯ ಲೋಕದ ಅಭ್ಯರ್ಥಿಗಳಿಗೆ ಆರಾಧ್ಯ ದೈವವಾದರು.

ಹೆಳವನಕಟ್ಟೆ ಗಿರಿಯಮ್ಮ



ಹೊನ್ನ ತಾ ಗುಬ್ಬಿ ಹೊನ್ನ ತಾ...
ನಮ್ಮ ಚಿನುಮಯ ಮೂರ್ತಿ
ಚೆಲುವ ರಂಗನ ಕೈಗೆ...
ಹೊನ್ನ ತಾ ಗುಬ್ಬಿ ಹೊನ್ನ ತಾ...
ಚೆನ್ನ ಗೋಪಾಲನ ಚೆಲುವ ಕೃಷ್ಣನ ಕೈಗೆ
ಆಗಮವನು ತಂದು ಅಜಗಿತ್ತ ಕೈಗೆ
ಸಾಗರವನೊತ್ತಿಕ್ಕಿ ಸುಧೆಯಿತ್ತ ಕೈಗೆ
ಹೊನ್ನ ತಾ ಗುಬ್ಬಿ ಹೊನ್ನ ತಾ...

ಹೀಗೆ ಪರಮಾತ್ಮನಲ್ಲಿ ಭಕ್ತಿಯಿಂದ ಪ್ರಾರ್ಥಿಸಿದ ಕವಯಿತ್ರಿ ಗಿರಿಯಮ್ಮ. ಅವಳ ಹೆಸರು ದಾಸ ಸಾಹಿತ್ಯ ಪಂಕ್ತಿಯಲ್ಲಿ ಅಗ್ರಮಾನ್ಯವಾಗಿದೆ. ಭಗವಂತನ ಬಗೆಗೆ ಅವಳ ನಿಷ್ಕಾಮ ಭಕ್ತಿ ಅನನ್ಯ. ಈಕೆಯ ಕಾಲ ಹದಿನೆಂಟನೆಯ ಶತಮಾನದ ಪೂರ್ವಾರ್ಧ. ಈಕೆಯ ಹುಟ್ಟೂರು ಹಾವೇರಿ ಜಿಲ್ಲೆಯ ರಾಣಿಬೆನ್ನೂರು. ಈಕೆ ಚಿಕ್ಕಂದಿನಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದಳು. ಇವಳು ಶಾಲೆಗೆ ಹೋಗಿ ವಿದ್ಯೆ ಕಲಿತವಳಲ್ಲ. ಚಿಕ್ಕಪ್ಪ ಮತ್ತು ಅವರಿವರಿಂದ ಅಕ್ಷರಾಭ್ಯಾಸ ಕಲಿತು ಕವಯಿತ್ರಿಯಾಗಿ ಬೆಳೆದಳು. ಇದು ಈಕೆಯ ಅಪೂರ್ವ ಸಾಧನೆ! ಭಗವಂತನ ಆರಾಧನೆಯೇ ಈಕೆಯ ಉಸಿರು! ದಾವಣಗೆರೆ ಜಿಲ್ಲೆಯ ಮಲೆಬೆನ್ನೂರು ಗ್ರಾಮದ ಶಾನುಭೋಗ ಕೃಷ್ಣಪ್ಪನ ಮಗ ತಿಪ್ಪರಸ ಅವರೊಂದಿಗೆ ಈಕೆಯ ವಿವಾಹವಾಯಿತು. ದೈವಭಕ್ತಿಗೆ ಒಲಿದ ಈಕೆ ವೈವಾಹಿಕ ಜೀವನಕ್ಕೆ ಹೊಂದಿಕೊಳ್ಳಲಿಲ್ಲ. ಮಲೆಬೆನ್ನೂರು ಸಮೀಪದ ಕೊಮ್ಮಾರನಹಳ್ಳಿಯ ತನ್ನ ಆದಿದೈವ ಶ್ರೀರಂಗನಾಥನಿಗೆ ಬದುಕನ್ನೇ ಅರ್ಪಿಸಿದಳು. ಭಗವಂತನ ಸಾನ್ನಿಧ್ಯದಲ್ಲಿ ಸುಖ ಸಂತೋಷವನ್ನು ಅನುಭವಿಸಿದಳು. ಆರಾಧ್ಯ ದೈವವನ್ನು ಕುರಿತು ಹಲವು ಕೃತಿಗಳನ್ನು ರಚಿಸಿದ ಹೆಗ್ಗಳಿಕೆ ಇವಳದು. ಇವಳ ಅಂಕಿತ 'ಹೆಳವನಕಟ್ಟೆ ರಂಗನಾಥ'. 'ಉದ್ಧಾಳಿಕನ ಕಥೆ', 'ಶಂಕರ ಗಂಡನ ಹಾಡು', 'ಸೀತಾ ಕಲ್ಯಾಣ', 'ಚಂದ್ರಹಾಸನ ಕಥೆ', 'ಬ್ರಹ್ಮ ಕೊರವಂಜಿ', 'ಲವ–ಕುಶರ ಕಾಳಗ' – ಇವು ಈಕೆಯ ಪ್ರಮುಖ ಕೃತಿಗಳು. ಗಿರಿಯಮ್ಮನ ಕಾವ್ಯ, ಅಲಂಕಾರ, ಗಾದೆ ಮತ್ತು ಜನಪದ ವಾಕ್ಯಗಳ ಬಳಕೆಯಿಂದ ಸುಂದರವಾಗಿ ಮೂಡಿ ಬಂದಿದೆ. ಕೃಷ್ಣ ಕೊರವಂಜಿ ಕೃತಿಯಲ್ಲಿ ಶ್ರೀಕೃಷ್ಣ ಕೊರವಂಜಿ ವೇಷ ಧರಿಸಿ ಕಣಿ ಹೇಳುವುದು, ರುಕ್ಮಿಣಿಯನ್ನು ಮದುವೆಯಾಗುವ ರೀತಿ ಹಾಸ್ಯ ಪ್ರಸಂಗವನ್ನು ನಿರ್ಮಿಸುತ್ತದೆ. ಗಿರಿಯಮ್ಮನ ಜೀವನದಲ್ಲಿ ಅನೇಕ ಪವಾಡಗಳು ನಡೆದಿವೆ. ಅವೆಲ್ಲಾ ಶ್ರೀರಂಗನಾಥನ ಕೃಪೆ ಎನ್ನುವುದು ಅವಳ ಅಭಿಪ್ರಾಯ. ದೈವಭಕ್ತಳಾದ ಗಿರಿಯಮ್ಮ ಅನೇಕ ಪುಣ್ಯಕ್ಷೇತ್ರಗಳ ದರ್ಶನ ಮಾಡಿದ್ದಾಳೆ. ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನೂ ಕೈಗೊಂಡದ್ದಲ್ಲದೆ ಕಮ್ಮಾರಗಟ್ಟೆಯಲ್ಲಿ ದೇವಸ್ಥಾನವೊಂದನ್ನೂ ಈಕೆ ಕಟ್ಟಿಸಿದಳು. ಗಿರಿಯಮ್ಮ ತನ್ನ ದೇಹತ್ಯಾಗವನ್ನು ತುಂಗಭದ್ರೆಯ ಪೂರ್ಣ ಪ್ರವಾಹದಲ್ಲಿ ಮಾಡಿಕೊಂಡಳೆಂಬ ಸಂಗತಿ ರೋಚಕವಾದುದು! ಕನ್ನಡ ಸಾಹಿತ್ಯದ ಕೆಲವೇ ಕವಯಿತ್ರಿಯರಲ್ಲಿ ಹೆಳವನಕಟ್ಟೆ ಗಿರಿಯಮ್ಮ ಸ್ಮರಣೀಯಳು.



ಪಿ.ಟಿ.ಉಷಾ

ಪಿ.ಟಿ. ಉಷಾ ಭಾರತದ ಪ್ರಸಿದ್ಧ ಓಟಗಾರ್ತಿ. ಇವರು 1979ರಿಂದಲೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದು, ಇಂಡೋನೇಷ್ಯಾದ ಜಕಾರ್ತಾದಲ್ಲಿ ನಡೆದ ಏಷ್ಯನ್ ಕ್ರೀಡಾ ಕೂಟದಲ್ಲಿ ಐದು ಚಿನ್ನದ ಪದಕಗಳನ್ನು ಗೆದ್ದರು. 'ಸಿಂಗಲ್ ಟ್ರ್ಯಾಕ್ ಮೀಟ್'ನಲ್ಲಿ ಅತಿ ಹೆಚ್ಚು ಚಿನ್ನದ ಪದಕ ಪಡೆದ ದಾಖಲೆಯನ್ನು ಇವರು ಮಾಡಿದ್ದಾರೆ. ಇವರಿಗೆ ಅರ್ಜುನ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಬಂದಿವೆ.

9th_Kannada_Reader Term II.indd 65 29-01-2019 16:32:49

ಪದಗಳ ಅರ್ಥ

ಪ್ರಮುಖ–ಮುಖ್ಯ, ಪ್ರಧಾನ; ನಾಮ–ಹೆಸರು; ವೃತ್ತಿ–ಉದ್ಯೋಗ; ಶುಶ್ರೂಷೆ–ಚಿಕಿತ್ಸೆ; ಪ್ರಸಿದ್ಧ–ಹೆಸರುವಾಸಿ; ಅಗಾಧ–ಹೆಚ್ಚು, ವ್ಯಾಪ್ತಿ; ಅನುವಾದ–ಭಾಷಾಂತರ, ತರ್ಜುಮೆ; ಪ್ರಫುಲ್ಲ–ಆನಂದ, ಸಂತೋಷ; ದೇಣಿಗೆ–ಕೊಡುಗೆ; ಬಾಳಸಂಗಾತಿ–ಪತಿ ಅಥವಾ ಪತ್ನಿ, ದಂಪತಿ; ಸಾಮರಸ್ಯ–ಹೊಂದಾಣಿಕೆ; ಆದರ್ಶ–ಮಾದರಿ; ಹಿರಿಮೆ–ಮೇಲ್ಮೆ, ಹೆಚ್ಚುಗಾರಿಕೆ; ಸೀಮಿತ–ಮಿತಿ; ಹೊತ್ತಿಗೆ–ಪುಸ್ತಕ; ಹೊನ್ನು–ಬಂಗಾರ, ಚಿನ್ನ, ಸ್ವರ್ಣ, ಬಂಗಾರ; ಅಜ–ಬ್ರಹ್ಮ, ಆಡು; ಸುಧೆ–ಅಮೃತ; ಅನನ್ಯ–ವಿಕನಿಷ್ಠೆ, ವಿಶೇಷತೆ; ಪಂಕ್ತಿ–ಸಾಲು; ಅಗ್ರಗಣ್ಯ–ಮುಖ್ಯ, ಪ್ರಮುಖ, ಮೊದಲನೆಯದು; ಮೆರುಗು–ಕಾಂತಿ, ಲಾವಣ್ಯ; ನಿಷ್ಕಾಮ–ಆಸೆಯಿಲ್ಲದ, ನಿಸ್ವಾರ್ಥವಾದ; ಕಣಿ–ಭವಿಷ್ಯ; ಆರಾಧನೆ–ಪೂಜೆ; ದೇಹತ್ಯಾಗ–ಪ್ರಾಣಬಿಡು, ಸಾವು ಸಂಭವಿಸು, ಅಸ್ತಂಗತ–ಅಸ್ತಮಾನ, ಮುಳುಗುವುದು, ಸಾಯುವುದು, ಪ್ರಾಣ ಬಿಡುವುದು, ಮನ್ನಣೆ–ಗೌರವ.

ತಿಳಿದುಕೊಳ್ಳಿ

ಅಂಕಣಕಾರ–ನಿಯತವಾಗಿ ಪತ್ರಿಕೆಗಳಲ್ಲಿ ಬರೆಯುವವ.

ಲೇಖನಿ–ಬರೆಯುವ ಸಾಧನ.

ಬಹುಮುಖ–ವೈವಿಧ್ಯತೆಯಿಂದ ಕೂಡಿದ.

ಕಥಾ ಸಂಕಲನ–ಹಲವು ಕಥೆಗಳಿಂದ ಕೂಡಿದ ಒಂದು ಪುಸ್ತಕ.

ಸಂಪುಟ–ಬಿಡಿ ಬರಹಗಳ ಸಂಗ್ರಹ ಕೃತಿ.

ಆತ್ಮಕಥೆ–ತಮ್ಮ ಜೀವನದ ಬಗ್ಗೆ ತಾವೇ ಬರೆದುಕೊಂಡ ಜೀವನ ಚರಿತ್ರೆ.

ನಿರೂಪಣೆ–ವಿವರವಾಗಿ ಹೇಳುವುದು.

ಅಸ್ತಂಗತ–ಮುಳುಗು, ಕಣ್ಮರೆಯಾಗು.

ಶತಮಾನ–ನೂರು ವರ್ಷ.

ವೈರಾಗ್ಯ–ಪ್ರಾಪಂಚಿಕ ವಿಷಯಗಳಲ್ಲಿ ಅನಾಸಕ್ತಿ, ವಿರಕ್ತಿ.

ಆಗಮ–ಪೂಜಾ ತಂತ್ರ ವಿಧಾನವನ್ನು ತಿಳಿಸುವ ಭಾರತೀಯ ಪುರಾತನ ಶಾಸ್ತ್ರ, ಜ್ಞಾನ ಶಾಸ್ತ್ರ.

ಪ್ರತೀತಿ–ಜನಜನಿತವಾಗಿ ಬಂದ ತಿಳುವಳಿಕೆ.

ಪವಾಡ–ಅತಿಮಾನುಷ ಕಾರ್ಯ, ಆಶ್ಚರ್ಯಕರ ಘಟನೆ.

ಜೀರ್ಣೋದ್ಧಾರ–ಹಳೆಯದನ್ನು ದುರಸ್ತಿ ಮಾಡಿ ನವೀನಗೊಳಿಸುವುದು.

ರೋಮಾಂಚನ–ಮೈನವಿರೇಳು, ಪುಳಕಗೊಳ್ಳು, ಕೂದಲು ನಿಮಿರು.

ಆರಾಧ್ಯ ದೈವ–ಕುಲ ದೇವರು, ಮನೆ ದೇವರು, ಆರಾಧನಾ ದೈವ.

ಹಾಸ್ಯಲಾಸ್ಯ–ಸಂತೋಷಭರಿತ ಕುಣಿತ, ನಾಟ್ಯ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಅನುಪಮಾ ನಿರಂಜನ ಅವರು ಎಲ್ಲಿ ಜನಿಸಿದರು ?
2. ಅನುಪಮಾ ಅವರ ಆತ್ಮಕಥನದ ಹೆಸರೇನು?
3. ಅನುಪಮಾ ಅವರು ಬರೆದ ಮಕ್ಕಳ ಕಥಾ ಸಂಕಲನ ಯಾವುದು ?
4. ಚಂದ್ರಭಾಗಾ ದೇವಿ ಅವರ ತಂದೆ ಯಾರು?
5. ಬಾಲ್ಯದಲ್ಲಿ ಚಂದ್ರಭಾಗಾ ದೇವಿ ಅವರು ಯಾರಿಂದ ನೃತ್ಯಾಭ್ಯಾಸ ತರಬೇತಿ ಪಡೆದರು?
6. ಹೆಳವನಕಟ್ಟೆ ಗಿರಿಯಮ್ಮ ಯಾರ ಆಶ್ರಯದಲ್ಲಿ ಬೆಳೆದಳು ?
7. ಗಿರಿಯಮ್ಮ ತಮ್ಮ ಬದುಕನ್ನು ಯಾರಿಗೆ ಅರ್ಪಿಸಿದಳು ?
8. ಗಿರಿಯಮ್ಮ ಎಲ್ಲಿ ದೇವಸ್ಥಾನವನ್ನು ಕಟ್ಟಿಸಿದಳು ?
9. ಗಿರಿಯಮ್ಮ ಎಲ್ಲಿ ಜನಿಸಿದಳು ?

9th_Kannada_Reader Term II.indd 66 29-01-2019 16:32:49

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಅನುಪಮಾ ಅವರು ಬರೆದ ಕೃತಿಗಳು ಯಾವುವು ?
2. ಚಂದ್ರಭಾಗಾ ದೇವಿ ಅವರದು ಆದರ್ಶದ ಬದುಕು ಹೇಗೆ ?
3. ಗಿರಿಯಮ್ಮ ರಚಿಸಿದ ಕೃತಿಗಳಾವುವು ?

ಭಾಷಾಭ್ಯಾಸ

1. ಈ ಕೆಳಕಂಡ ಪದಗಳ ಲಿಂಗ ರೂಪವನ್ನು ಬದಲಾಯಿಸಿ.

ಲೇಖಕಿ, ಕಾದಂಬರಿಕಾರ, ವೈದ್ಯೆ, ಶಿಷ್ಯ, ವಿಜೇತೆ, ಅಧ್ಯಕ್ಷ, ಅಧ್ಯಾಪಕಿ, ಕವಯಿತ್ರಿ, ಭಕ್ತ.

2. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಚಿಕಿತ್ಸಾಲಯ, ನೃತ್ಯಾಭ್ಯಾಸ, ವಿಶ್ವದಾದ್ಯಂತ, ಜ್ಞಾನೋದಯ, ಬಾಯಲ್ಲಿ, ಹಳಗನ್ನಡ.

3. ಈ ಕೆಳಕಂಡ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

ವಿದ್ಯೆ, ಅಕ್ಷರ, ಶಾಲಾ, ಕಾವ್ಯ, ವಿಜ್ಞಾನ, ಸ್ನೇಹ, ಭಕ್ತಿ, ಸಂತೋಷ.

4. ಈ ಕೆಳಗಿನ ಪದಗಳಿಗೆ ನಾನಾರ್ಥ ಪದಗಳನ್ನು ಬರೆದು; ನಾಮಪದಕ್ಕೊಂದು ಹಾಗೂ ಕ್ರಿಯಾಪದಕ್ಕೊಂದು ಎಂಬಂತೆ ವಾಕ್ಯಗಳನ್ನೂ ರಚಿಸಿ.

ಉದಾಹರಣೆಗೆ, ನೆರೆ :

ಒಂದುಗೂಡು(ಕ್ರಿಯಾಪದ) = ಜಾತ್ರೆಯಲ್ಲಿ ತುಂಬ ಜನ ನೆರೆದಿದ್ದರು.

ಪ್ರವಾಹ(ನಾಮಪದ) = ಕಾವೇರಿ ನದಿಯಲ್ಲಿ ನೆರೆಯುಕ್ಕಿ ಸುತ್ತ ಮುತ್ತಲಿನ ಪ್ರದೇಶಗಳು ಹಾನಿಗೊಳಗಾದವು.

ಅ.ಹೊಳೆ, ಆ.ಕಾಡು, ಇ.ಅರಸು, ಈ.ಆಡು, ಉ.ಮಡಿ, ಊ.ಕರೆ.

5. ಈ ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ.

1. ಮನಸ್ಸಿದ್ದರೆ ಮಾರ್ಗ.
2. ತಾಳಿದವನು ಬಾಳಿಯಾನು.
3. ಹಾಸಿಗೆಯಿದ್ದಷ್ಟು ಕಾಲು ಚಾಚು.

ಚಟುವಟಿಕೆ

1. ಈ ಕೆಳಗಿನ ಜನಪದ ಗೀತೆಯನ್ನು ಓದಿ ಅರ್ಥ ಮಾಡಿಕೊಳ್ಳಿ.

ಮುಂಗೋಳಿ ಕೂಗ್ಯಾವೋ ಮೂಡು ಕೆಂಪೇರ್ಯಾವೋ
ಸ್ವಾಮಿ ನನ್ನಯ್ಯ ರಥವೇರಿ । ಬರುವಾಗ
ನಾವೆದ್ದು ಕೈಯ ಮುಗಿದೇವು ॥

2. 'ನಾಟ್ಯ'ವನ್ನು ಕುರಿತ ಪುಸ್ತಕಗಳನ್ನು ಓದಿ.

9th_Kannada_Reader Term II.indd 67 29-01-2019 16:32:49

ಘಟಕ ಐದು

ಪುಟ್ಟ ವಿಧವೆ

– ಅಂಬಿಕಾತನಯದತ್ತ

ಆಕೆಯಿದ್ದಳು ಕೂಸು; ಈತನಿನ್ನೂ ಹುಡುಗ
ಅವರ ತಾಯ್ತಂದೆಗಳ ಹಿಗ್ಗು ಎಷ್ಟು !
ಧರ್ಮದಾ ಹೆಸರಿನಲಿ ಅವರ ಕೈಕೂಡಿಸಲು
ಇವರಿಗೆನಿಸಿತು ಹರ್ಷ ಹಬ್ಬದಷ್ಟು !

ಕೊರಳ ಕರಿಮಣಿ, ಗಲ್ಲದರಿಷಿಣವು ಮುಗಬೊಟ್ಟು
ಆ ಮೇಲೆ ಉದ್ದು ಕುಂಕುಮದ ಅಂದ!
ಆ ಪುಟ್ಟ ಮುತ್ತೈದೆ ಪುಟಪುಟನೆ ನೆಗೆದಾಡಿ
ಅಷ್ಟೆ ಕಂಡಿತು ಕಣ್ಣಿಗೆಷ್ಟೊ ಚಂದ.

ಆಕೆ ದೊಡ್ಡವಳಾಗಿ, ಈತ ಚಿಕ್ಕವನಿದ್ದು
ಶೋಭನವ ಮಾಡಿದ್ದು ಊರಿಗಾಟ !
ಪೆಚ್ಚು ಮೋರೆಯ ಅಳಿಯ–ದೇವರಿದಿರಲಿ ಜನಕೆ
ಕಡಿಮೆ ಸಿಹಿಯೆನಿಸಿತ್ತೆ ಪ್ರಸ್ತದೂಟ ?

ವರ್ಷವೆಂಬುದರೊಳಗೆ ಚೊಚ್ಚಲದ ಸಂಭ್ರಮವು
ದೈವದಾಟವು ಎಂದಿತಿಡಿಯ ಊರು.
ಮಗನು ಬಂದಿರೆ ಇಹಕೆ, ತಂದೆ ಏರಿದ ಪರಕೆ;
ಕ್ಷೀರಸಾಗರವಾಯ್ತು ಉಪ್ಪುನೀರು.

ತಂದೆ ಹಿಡಿದಿಹ ಹಾದಿ ಒಂದೆರಡು ದಿನದಲ್ಲಿ
ಕೂಸು ಹಿಡಿಯಿತು; ತಾಯಿಗುಳಿದಿತೇನು?
ಮೈ–ಗೋರಿಯಲಿ ಮಡಗಿ ಜೀವ; ಜೀವನವಾಯ್ತು
ಜೇನುಹುಳ ಉಳಿದಂತೆ ಕಳೆದು ಜೇನು.

9th_Kannada_Reader Term II.indd 68 29-01-2019 16:32:49

ಸತ್ತೆನೆಂದಳು ಕೂಸು–ತಾಯಿ ಅಯ್ಯೋ ಎಂದು
ಬೋರೆಂದು ಗೋಳಿಟ್ಟು ಹೊಟ್ಟೆ ಹೊಸೆದು
ಹುಚ್ಚೆದ್ದು ಹೌಹಾರಿ ಹುಯ್ಯಲಿಟ್ಟಳು ಆಕೆ
ತನ್ನ ತಾ ಶಪಿಸಿದಳು ಹಲ್ಲು ಮಸೆದು.

ಹತ್ತು ದಿವಸಕೆ ಹಾಳು ಮುತ್ತೈದೆತನ ಹೋಗಿ
ವೈಧವ್ಯ ಸಂಪತ್ತು ಪಡೆದಳಾಕೆ;
ಮನೆಯವರು ವೈದಿಕರು, ಊರು ಧರ್ಮದ ತೌರು;
ಶಾಸ್ತ್ರವಿರೆ ಬೇರೆಯ ವಿಚಾರವೇಕೆ ?

ತಲೆ ಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು;
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ.
ಆದರಯ್ಯೋ ಪಾಪ! ಆಕೆಯಿನ್ನೂ ಮಗುವು
ಸಿಂಗಾರವಿರದೆ! ಆ ಮಾತೆ ಬೇರೆ.

ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೊ,
ಹೂ ಬತ್ತಿ ಹೊಸೆಯಲಿಕೆ ಮೈತಳೆದಳೊ,
ಎಂಬಂತೆ ಬಾಳ ಕಳೆದಳು ಬಾಲೆ ಹೂಮಾಲೆ
ಮುಳ್ಳು ಕಂಟೆಯ ಮೇಲೆ ತಾನೆಳೆದಳೊ !

ನಿಟ್ಟುಸಿರ ಸರದಲ್ಲಿ ಕಂಬನಿಯ ಪೋಣಿಸುತ
ಪುಟ್ಟ ವಿಧವೆಯು ಪುರಾಣಕ್ಕೆ ಬರಲು
ಗುಡಿಯ ಮೂರ್ತಿಗೆ ಮಂಕು ಹಿಡಿದು, ಆಚಾರ್ಯರಿಗು
ಉರುಲಿಕ್ಕಿದಂತೆ ಬಿಗಿದಿತ್ತು ಕೊರಲು.

ಕುರುಡು ಧರ್ಮಕ್ಕೆ ಸ್ಮಾರಕವು ನಿಂತಂತಾಕೆ
ಮೈಮರೆತು ನಿಂತಾಗ್ಗೆ ಗೂಗೆ ಹಾಡಿತ್ತು.
ಮುದ್ರೆಯೊತ್ತುವ ಕಣ್ಣು ಮೋರೆ ನೋಡಿತ್ತೊಮ್ಮೆ
ಬಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು !

9th_Kannada_Reader Term II.indd 69 29-01-2019 16:32:49

ಕವಿ–ಕಾವ್ಯ ಪರಿಚಯ



ಅಂಬಿಕಾತನಯದತ್ತ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಧಾರವಾಡದ ಸಾಧನಕೇರಿಯವರು. ಶಾಲಾ ಶಿಕ್ಷಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಇವರು ಸೊಲ್ಲಾಪುರದ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿಯೂ, ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯ ನವೋದಯದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಇವರು ನಾದಲೀಲೆ, ಗಂಗಾವತರಣ, ಸೂರ್ಯಪಾನ, ಸಖೀಗೀತ ಮುಂತಾದ ಕವನ ಸಂಕಲನಗಳನ್ನು ರಚಿಸಿ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಇವರ ಅರಳು–ಮರಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 'ನಾಕುತಂತಿ' ಎಂಬ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ ದೊರೆತಿದೆ.

ಕೇಂದ್ರ ಸರ್ಕಾರದ ಪದ್ಮಶ್ರೀ ಪುರಸ್ಕಾರಕ್ಕೂ ಭಾಜನರಾದ ಇವರು ಶಿವಮೊಗ್ಗದಲ್ಲಿ ನಡೆದ ಇಪ್ಪತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಉತ್ತರ ಕರ್ನಾಟಕದ ಆಡುಭಾಷೆಯನ್ನು ಜಾನಪದ ಲಯ ಗೇಯಗಳೊಂದಿಗೆ ಸಮರ್ಥವಾಗಿ ಬಳಸಿ ಗಾರುಡಿಗ ಕವಿಯೆಂದೇ ಖ್ಯಾತರಾಗಿದ್ದಾರೆ.

ಪದಗಳ ಅರ್ಥ

ಹರ್ಷ–ಸಂತೋಷ; ಹಿಗ್ಗು–ಖುಷಿಪಡು; ಮುತ್ತೈದೆ–ಗಂಡನುಳ್ಳ ಹೆಣ್ಣು, ಸುಮಂಗಲಿ; ಚೊಚ್ಚಿಲು–ಮೊದಲ ಹೆರಿಗೆ; ಇಹ–ಲೌಕಿಕ, ಭೂಲೋಕ; ಕ್ಷೀರಸಾಗರ–ಹಾಲಿನ ಸಮುದ್ರ; ಹೌಹಾರು–ಗೋಳಾಡಿ; ವೈಧವ್ಯ–ವಿಧವೆತನ; ಅಂಗಾರ–ಕಪ್ಪುನಾಮ.

ತಿಳಿದುಕೊಳ್ಳಿ

ಕೈಕೂಡಿಸು–ಒಂದುಗೂಡಿಸು.

ಊರಿಗಾಟ–ಊರಿನವರಿಗೆಲ್ಲ ಸಂತೋಷವಾಯಿತು.

ಪೆಚ್ಚುಮೋರೆ–ಸಪ್ಪೆಮುಖ.

ದೈವದಾಟ–ವಿಧಿಲೀಲೆ.

ಕ್ಷೀರಸಾಗರ–ಕಲ್ಪನೆಯ ಹಾಲಿನ ಕಡಲು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ತಂದೆ–ತಾಯಿಗಳಿಗೆ ಸಂತೋಷವಾಗಲು ಕಾರಣವೇನು ?
2. ಮುತ್ತೈದೆಯ ಲಕ್ಷಣಗಳನ್ನು ಬರೆಯಿರಿ.
3. ಪುಟ್ಟ ವಿಧವೆ ತನ್ನನ್ನು ತಾನು ಶಪಿಸಿಕೊಳ್ಳಲು ಕಾರಣವೇನು ?
4. ವೈಧವ್ಯದ ಗುರುತುಗಳಾವುವು ?
5. ಪುಟ್ಟ ವಿಧವೆ ಮೈಮರೆತು ಹೇಗೆ ನಿಂತಳು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಪುಟ್ಟ ವಿಧವೆಯ ದುಃಖಕ್ಕೆ ಕಾರಣಗಳಾವುವು?
2. ವಿಧವೆಯ ಜೀವನ ಹೇಗಿತ್ತು ?

9th_Kannada_Reader Term II.indd 70 29-01-2019 16:32:49

3. ಗುಡಿಯ ಮೂರ್ತಿಗೆ ಮಂಕು ಹಿಡಿಯಲು ಕಾರಣವೇನು?

ಭಾಷಾಭ್ಯಾಸ

1. **ಈ ಕೆಳಕಂಡ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
   ಆಕೆಯಿದ್ದಳು, ಊರಿಗಾಟ, ದೈವದಾಟ, ಮೈಯನ್ನು, ಕಂಬನಿ, ಬಿಗಿದಿತ್ತು.
2. **ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**
   ಹಿಗ್ಗು, ಇಹ, ಉದ್ದ, ಶಪಿಸು, ವೈಧವ್ಯ, ಪಾಪ.
3. **ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**
   ಕರಿಮಣಿ, ಸಂಭ್ರಮ, ಕ್ಷೀರ ಸಾಗರ, ಸಿಂಗಾರ, ಕಂಬನಿ.
4. **ಈ ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ.**
   ಅ. ಯೋಗಿ ಪಡೆದದ್ದು ಯೋಗಿಗೆ, ಭೋಗಿ ಪಡೆದದ್ದು ಭೋಗಿಗೆ.
   ಆ. ಹರ ಮುನಿದರೆ ಗುರು ಕಾಯುವ.
5. **ಈ ಕೆಳಗಿನ ಒಗಟುಗಳನ್ನು ಬಿಡಿಸಿರಿ.**
   ಅ.ಹಿಡಿಯೋಣವೆಂದರೆ ಕೈಗೆ ಸಿಗುವುದಿಲ್ಲ;
   ಬಡಿಯೋಣವೆಂದರೆ ಕಣ್ಣಿಗೆ ಕಾಣುವುದಿಲ್ಲ
   ಹೇಳು ಹೇಳು ನಾನು ಯಾರು ? (ಗಾಳಿ)
   ಆ.ಏರಿ ಮೇಲೊಂದು ಜೀರಿಗೆ ಮರ ಹುಟ್ಟಿ
   ನೀರ್ನ ಕುಡೀತದೆ, ಬೇರ್ನ ತಿಂತದೆ. (ದೀಪ)

ಚಟುವಟಿಕೆ

1. ಬಾಲ್ಯ ವಿವಾಹದ ಪರಿಣಾಮದ ಬಗ್ಗೆ ಒಂದು ಕಿರುನಾಟಕವನ್ನು ಅಭಿನಯಿಸಿ.
2. ಬಾಲ್ಯ ವಿವಾಹದ ದುಷ್ಪರಿಣಾಮಗಳ ಬಗ್ಗೆ ಪ್ರಬಂಧವನ್ನು ರಚಿಸಿ.
3. ಬಾಲ್ಯ ವಿವಾಹದ ಬಗ್ಗೆ ಇರುವ ಕಾನೂನು–ಕಾಯ್ದೆಗಳ ಬಗ್ಗೆ ತಿಳಿದುಕೊಳ್ಳಿ.

ಪೂರಕ ಅಭ್ಯಾಸ

ಇಲ್ಲಿ ನೀಡಲಾಗಿರುವ ಕವನವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಹಕ್ಕಿಯ ಹಾಡಿಗೆ ತಲೆದೂಗುವ ಹೂ
ನಾನಾಗುವ ಆಸೆ ॥
ಹಸುವಿನ ಕೊರಲಿನ ಗೆಜ್ಜೆಯ ದನಿಯು
ನಾನಾಗುವ ಆಸೆ ॥
ಹಬ್ಬದ ಕಾಮನ ಬಿಲ್ಲಿನ ಮೇಲಿನ
ಮುಗಿಲಾಗುವ ಆಸೆ ॥
ನಾಳೆಯ ಬದುಕಿನ ಇರುಳಿನ ತಿರುವಿಗೆ
ದೀಪವನಿಡುವಾಸೆ ॥
ಮಣ್ಣಿನ ಕೊಡುಗೆಗೆ ನೋವಿಗೆ ನಲಿವಿಗೆ
ಕನ್ನಡಿ ಹಿಡಿವಾಸೆ ॥
ಮಾನವ ಹೃದಯದ ಕರುಣೆಗೆ ಒಲವಿಗೆ
ದನಿಗೂಡಿಸುವಾಸೆ ॥

ಪ್ರಶ್ನೆಗಳು

1. ಹೂವು ಯಾವುದಕ್ಕೆ ತಲೆದೂಗುತ್ತದೆ ?
2. ಹಬ್ಬಿದ ಕಾಮನ ಬಿಲ್ಲಿನ ಮೇಲೆ ಕವಿ ಏನಾಗಲು ಬಯಸುತ್ತಾರೆ ?
3. ಕವಿ ಯಾವುದಕ್ಕೆ ದೀಪವಿಡಲು ಆಸೆ ಪಟ್ಟಿದ್ದಾರೆ?
4. ಕವಿ ಯಾವುದಕ್ಕೆ ದನಿಗೂಡಲು ಬಯಸಿದ್ದಾರೆ?



9th_Kannada_Reader Term II.indd 71 29-01-2019 16:32:50

ಪೂರಕ ಪದ್ಯ

ಘಟಕ ಐದು

ಅರಿವೇ ದೇವರು !

– ತಮಿಳು ಮೂಲ : ಸುಬ್ರಹ್ಮಣ್ಯ ಭಾರತಿಯಾರ್

– ಅನುವಾದ : ಚೇ॥ರಾಮಸ್ವಾಮಿ

ಸಾವಿರ ಸಾವಿರ ದೇವರ ಹರಸಿ
ಅಲೆಯುವ ಅಜ್ಞಾನಿಗಳೇ ।
ಸಾವಿರ ಸಾವಿರ ವೇದವು ಸಾರಿದ
'ಅರಿವೇ ದೇವರು' ಎಂಬುದ ಅರಿಯರಿರಾ ॥

ಬಣ ಕಾಡ ಮಾಡ ಬೇಡರ ನುತಿಸಿ
ಸೊರಗುವ ಮತಿ ಹೀನರಿರಾ ।
ಕಣಕಣದೊಳೂ ಮೆರೆಯುವ ಅರಿವೊಂದೇ
ದೇವರು ಎಂಬುದ ಅರಿಯರಿರಾ ॥

ನಿರ್ಮಲ ಅರಿವೇ ಶಿವನೆಂದುಲಿಯುವ
ಶ್ರುತಿಗಳ ಕೇಳದ ಕಿವುಡರಿರಾ ।
ಪರಿಪರಿ ಮತಗಳ ಅಸ್ವಸ್ಥತೆಯಲಿ
ಅಲೆದಲೆದ್ದೆಮ್ಮೆಯ ಕಳೆಯುವಿರಾ ॥

ವೇಷವು ಪರಿಪರಿ, ಸತ್ಯವು ಒಂದೇ
ವೇದದ ಘೋಷವು ಕೇಳಿದಿರಾ ।
ವೇಷವೇ ಸತ್ಯವು ಎಂದೆಣಿಸುವ ಬಗೆ
ವೇದಕ್ಕೇ ಇದು ಹೊಸತಯ್ಯಾ ॥

ನಾಮವು ಹಲವು, ಸತ್ಯವು ಒಂದೇ, ನಾಲ್ಕು
ವೇದದ ನುಡಿಯಿದು ತಿಳಿಯುವಿರಾ ।
ನಾಮವೇ ಸತ್ಯವು, ಎಂದೆಣಿಸುವ ಬಗೆ
ಚತುರ್ವೇದಕ್ಕೆ ಇದು ಹೊಸತಯ್ಯಾ ॥

ಎತ್ತಿದ ರೂಪಗಳೆನಿತೋ, ಅನಿತೂ ಪರಾ
ಶಕ್ತಿಯ ಅವತಾರಗಳೇ ।
ಶಾಂತ ರೂಪವೇ ವೇದಾಂತ ಇದು
ಹಿರಿಯರು ಅರಿತ ರೂಪಗಳೇ ॥

ದುಃಖವು ಇಲ್ಲದೆ, ಬಾಳುವುದಿಲ್ಲಿ ಅದುವೇ
ಮೋಕ್ಷವು, ವೇದದ ಬೆಳಕು ।
ಅಕ್ಕಿಯ ನೆನಪಲಿ ಹೊಟ್ಟನು ಮೆಲ್ಲನು
ಮೂರ್ಖರ ಸಂತೆ ಆಗುವಿರಾ? ॥

ಎಲ್ಲದರೊಳಗೂ ಇರುವುದು ಅರಿವೇ
ಹೊಳೆ ಹೊಳೆಯುವ ಆತ್ಮವು ತಾನಾಗಿ ।
ಅದುವೇ ಇಹದಲಿ ಅಮೂಲ್ಯ ಬ್ರಹ್ಮವು
ವೇದದ ಸಾರಿಕೆ ಇದು ಕೇಳಿದಿರಾ? ॥

ದೇವರ ಸಂತೆಯ ಸೇರಿಸಿ ಮೆರೆಯಿಸಿ
ಹೊಸೆದಿರಿ ಬರಿ ಕಂತೆಗಳನ್ನೇ ।
ಸಾವಿರ ಮತಗಳ ಕಳ್ಳ ಸಂತೆಗೆ
ಒಂದು ವೇದವ ಕಾಣಿಸ ಬಲ್ಲಿರಿರಾ? ॥

ಬ್ರಹ್ಮವು ಒಂದೇ, ಅದುವೇ ಸತ್ಯ
ಒಳ ಅರಿವಿನ ವೇದವೇ ಅದುವಯ್ಯ ।
ಬ್ರಹ್ಮವು ಒಂದೇ, ಅದುವೇ ಸತ್ಯ
ನಿನ್ನಯ ಅರಿವೇ ಅದು ತಿಳಿಯಯ್ಯ ॥

ಪದಗಳ ಅರ್ಥ

ಅರಸು–ಹುಡುಕು; ಸಾರು–ತಿಳಿಸು; ಬಣ–ಪಂಗಡ, ಗುಂಪು, ಹುರುಳಿಲ್ಲದ– ನೀರಸವಾದ; ಮಾಡ–ಭವನ, ಮಹಡಿ; ನುತಿ–ಸ್ತುತಿ, ಹೊಗಳು; ಅಸ್ವಸ್ಥತೆ–ರೋಗಪೀಡಿತವಾದ; ಘೋಷ–ಗಟ್ಟಿಯಾಗಿ ಹೇಳು; ನುಡಿ–ಮಾತು; ಎಣಿಸು–ತಿಳಿ; ಹೊಟ್ಟು–ತೌಡು; ಇಹ–ಪ್ರಾಪಂಚಿಕ, ಈ ಲೋಕ, ಭೂಲೋಕ; ಕಂತೆ–ಕಟ್ಟುಕತೆ.

ಅಭ್ಯಾಸ

ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ವೇದವು ಏನೆಂದು ಸಾರುತ್ತದೆ ?
2. ಯಾರನ್ನು ನುತಿಸಬಾರದು ?
3. ಯಾವುದು ಶಿವ ?
4. ಯಾವುದು ಒಂದು ? ಯಾವುದು ಹಲವು?
5. ಇಲ್ಲಿ ಹೇಗೆ ಬದುಕಬೇಕು ?

9th_Kannada_Reader Term II.indd 72 29-01-2019 16:32:50

ಉಪಪಠ್ಯ

ಘಟಕ ಐದು

ಪುಸ್ತಕ ಸಂಸ್ಕೃತಿ

– ಡಾ. ಕರೀಗೌಡ ಬೀಚನಹಳ್ಳಿ



'ಜಗತ್ತನ್ನು ಬೆಳಗಲು ಸೂರ್ಯ ಬೇಕು; ಬದುಕನ್ನು ಬೆಳಗಲು ಪುಸ್ತಕಗಳು ಬೇಕು'(ರವೀಂದ್ರನಾಥ ಟ್ಯಾಗೂರ್); 'ಗ್ರಂಥವಿಲ್ಲದ ಮನೆ ಆತ್ಮವಿಲ್ಲದ ದೇಹದಂತೆ'(ಸಿಸಿರೋ); 'ಒಳ್ಳೆಯ ಪುಸ್ತಕಗಳ ಸಂಗ್ರಹವೇ ಒಂದು ವಿಶ್ವವಿದ್ಯಾಲಯದಂತೆ'(ಥಾಮಸ್ ಕಾರ್ಲೈಲ್); 'ಅತ್ಯುತ್ತಮ ಪುಸ್ತಕವೇ ಎಲ್ಲರಿಗಿಂತ ಅತ್ಯುತ್ತಮ ಸಂಗಾತಿ'(ಪಾರ್ಕರ್) – ಹೀಗೆ ಕವಿಗಳೂ, ಕಲಾವಿದರೂ ವಿಜ್ಞಾನಿಗಳೂ ತತ್ವಜ್ಞಾನಿಗಳೂ ತಮ್ಮ ಮೌಲಿಕ ಮಾತುಗಳ ಮೂಲಕ ಪುಸ್ತಕಗಳ ಮಹತ್ವವನ್ನು ಕುರಿತು ಹೇಳಿದ್ದಾರೆ. ಪುಸ್ತಕ 'ಗತ ಕಾಲದ ಕತೆಗಳ ಆತ್ಮ, ಭವಿಷ್ಯತ್ತಿನ ಚಿಂತನೆ ಮತ್ತು ವರ್ತಮಾನದ ವಿದ್ಯಮಾನಗಳನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುತ್ತದೆ'. ಸಾಮಾಜಿಕವಾದ, ಆರ್ಥಿಕವಾದ, ಧಾರ್ಮಿಕವಾದ, ನೈತಿಕವಾದ, ಆದರ್ಶಮಯವಾದ ಸ್ತರಗಳನ್ನು ಇದು ಒಳಗೊಂಡಿದ್ದು, ಬದುಕಿನ ವಿಸ್ತರಣೆಗೆ ತುಡಿಯುತ್ತಿರುವ ಸಂಸ್ಕೃತಿಯ ಸಾತತ್ಯವನ್ನು ಪುಸ್ತಕ ಹೊಂದಿರುತ್ತದೆ.

ಪುಸ್ತಕಗಳು ಸಂಸ್ಕೃತಿಯ ಆರ್ಥಿಕ ಉತ್ಪನ್ನ. ಅದು ಸಾರ್ವಜನಿಕರ ಆಸ್ತಿ. ಮಾನವೀಯತೆಯ ಮೌಲ್ಯಗಳ ಸೃಷ್ಟಿಗಾಗಿ, ಬದುಕಿನ ಜೀವಂತ ಸೆಲೆಗಾಗಿ, ಸಮಾಜದ ತರತಮ ಭಾವಗಳ ಅಭಿವ್ಯಕ್ತಿಗಾಗಿ ಪುಸ್ತಕ ಒಂದು ಉತ್ತಮ ಅಭಿವ್ಯಕ್ತಿ ಮಾಧ್ಯಮ. ಇದನ್ನು ಅಭಿವ್ಯಕ್ತಿಸುವ ಭಾಷೆಯೂ ಸಮಾಜದ ಸೃಷ್ಟಿಯೇ. ಭಾಷೆಯ ಮೂಲಕ ಘಟಿಸುವ ಪುಸ್ತಕ ಆ ಸಮಾಜದ ಪ್ರತಿಬಿಂಬವಾಗಿರುತ್ತದೆ. ಆರಂಭದಲ್ಲಿ ಇಂತಹ ಪುಸ್ತಕಗಳನ್ನು ಪ್ರಕಟಿಸಿದ ಪ್ರಕಾಶಕರು ಪ್ರಕಾಶನ ಎಂದರೆ ಅದು ಸಂಸ್ಕೃತಿಯ ಒಂದು ಬಹುಮುಖ್ಯ ಭಾಗ ಎಂದು ತಿಳಿದಿದ್ದರು. ಕುವೆಂಪು, ಮಾಸ್ತಿ, ಕಾರಂತ, ರಾಜರತ್ನಂ, ಗಳಗನಾಥ, ಜಿ.ಬಿ.ಜೋಷಿ ಮುಂತಾದ ಹಿರಿಯ ಲೇಖಕರೆಲ್ಲರೂ ಪುಸ್ತಕ ರಚನೆ, ಪ್ರಕಟಣೆ ಹಾಗೂ ಅದರ ಪ್ರಸಾರ

9th_Kannada_Reader Term II.indd 73 29-01-2019 16:32:50

ಇವೆಲ್ಲವೂ ಸಂಸ್ಕೃತಿಯ ಭಾಗ ಎಂದು ತಿಳಿದು ಪುಸ್ತಕ ಸಂಸ್ಕೃತಿಯ ಪ್ರಕ್ರಿಯೆಯಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದರು. ಪುಸ್ತಕ ಸಂಸ್ಕೃತಿಯು ಧಾರ್ಮಿಕ ಪ್ರತಿಪಾದನೆಯ, ನೀತಿಯ ನಿರೂಪಣೆಯ ಭಾಗವಾಗಿದ್ದು, ನಂತರ ಅದು ಶಿಕ್ಷಣದ ಭಾಗವಾಗಿ ಬೆಳೆದು ಬಂದಿದೆ. ಕೆಲವು ಬ್ರಿಟೀಷ್ ಅಧಿಕಾರಿಗಳು ಶಿಕ್ಷಣ ಪ್ರಸಾರದ ಹಾಗೂ ಆರೋಗ್ಯ ಸುಧಾರಣೆಯ ಪರ ಇದ್ದರೆ ಕೆಲವು ಅಧಿಕಾರಿಗಳು ಮತಾಂತರದ ಪರ ಇದ್ದರು. ಬ್ರಿಟೀಷರ ಪದ್ಧತಿಗೆ, ಈ ಮತಾಂತರ ವಸಾಹತುಶಾಹಿಯ ಕೇಡು ಕ್ರೌರ್ಯಗಳಿಗೆ ಕನ್ನಡದ ಹಲವಾರು ಲೇಖಕರು ತಮ್ಮ ಕೃತಿಗಳಲ್ಲಿ ಪ್ರತಿರೋಧ ವ್ಯಕ್ತಪಡಿಸಿದ್ದರು. ಧಾರವಾಡ, ಬೆಳಗಾವಿ ಪ್ರದೇಶಗಳಲ್ಲಿ ಕನ್ನಡದ ಶಾಲೆಗಳು 1836ರ ನಂತರ ಅಸ್ತಿತ್ವಕ್ಕೆ ಬಂದ ಮೇಲೆ ಶಿಕ್ಷಣದಲ್ಲಿ ಕನ್ನಡ ಅಧಿಕೃತ ಭಾಷೆಯಾಗಿ ಪರಿಗಣಿತವಾಯಿತು. ಇದರಿಂದ ಪ್ರಾದೇಶಿಕ ಭಾಷೆಗೆ ಶಿಕ್ಷಣದಲ್ಲಿ ಪ್ರಾಶಸ್ತ್ಯ ಬಂದಿತು. ಇದಕ್ಕಾಗಿ ಕನ್ನಡ ಶಾಲೆಯ ಅನೇಕ ಕನ್ನಡದ ಮಾಸ್ತರುಗಳು ಶ್ರಮಿಸಿದ್ದಾರೆ. ಮಿಶನರಿಗಳ ಸೇವೆಯಿಂದಾಗಿ ಬ್ರಿಟೀಷರಿಂದ 1840ರಲ್ಲಿ ಮುದ್ರಣಾಲಯ ಸ್ಥಾಪಿತವಾಯಿತು. ಇದರಿಂದ ರಾಮಾಯಣ ಮಹಾಭಾರತ, ಪಂಚತಂತ್ರ ಹಳಗನ್ನಡ ಕಾವ್ಯಗಳ ಭಾಗಗಳನ್ನು ಶಾಲಾ ಮಾಸ್ತರರುಗಳು ಆಯ್ದು ಸಿದ್ಧಪಡಿಸಿ ಪ್ರಕಟಿಸಿದರು. ಇಲ್ಲಿಂದ ಕನ್ನಡ ಪುಸ್ತಕಗಳು ಶಿಕ್ಷಣದ ಪಠ್ಯಪುಸ್ತಕಗಳ ಭಾಗವಾಗಿ ಆರಂಭವಾದದ್ದು ತಿಳಿದು ಬರುತ್ತದೆ. ಇದಕ್ಕೆ ಮೊದಲು ಪುಸ್ತಕಗಳನ್ನು ಧರ್ಮದ ಅಂಗವಾಗಿ, ಶಾಸ್ತ್ರದ ಅಂಗವಾಗಿ ಬಳಸಲಾಗುತ್ತಿತ್ತು. ಜೈನರಲ್ಲಿ ಈಗಲೂ ತಮ್ಮ ಮನೆಯಲ್ಲಿ ಯಾರಾದರೂ ನಿಧನ ಹೊಂದಿದರೆ ಶಾಸ್ತ್ರದ ಭಾಗವಾಗಿ ಪುಸ್ತಕವನ್ನು ದಾನ ಮಾಡುವ ಪದ್ಧತಿ ಉಳಿದುಕೊಂಡು ಬಂದಿದೆ. ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಸಾವಿರಾರು ಪ್ರತಿಗಳನ್ನು ಪ್ರತಿ ಮಾಡಿಸಿ ಹಂಚಿದ್ದು ತಿಳಿದು ಬರುತ್ತದೆ. ಯುದ್ಧದಲ್ಲಿ ಪತಿ ಮಡಿದರೆ ಆತನ ನೆನಪಿಗಾಗಿ ಸತಿ ಗ್ರಂಥದಾನ ಮಾಡಿರುವ ಬಗ್ಗೆ ಕೊಪ್ಪಳದ ಶಾಸನಗಳಲ್ಲಿ ಉಲ್ಲೇಖ ಇದೆ.

ಪುಸ್ತಕವು ಶಿಕ್ಷಣದ ಭಾಗವಾಗಿ, ಬೋಧನೆಯ ಭಾಗವಾಗಿ ಬಳಕೆಗೆ ಬಂದು ಆ ಮೂಲಕ ಆದರ್ಶ ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ ನೈತಿಕ ಮೌಲ್ಯಗಳನ್ನು ವಿಸ್ತರಿಸುವಲ್ಲಿ, ಸಂಸ್ಕೃತಿ ಪ್ರಸಾರದ ಮಾಧ್ಯಮವಾಗಿ ಬಳಕೆಯಾಗಿರುವುದನ್ನು ಕಾಣಬಹುದು. ಮಹಾರಾಷ್ಟ್ರದಲ್ಲಿ ಪುಸ್ತಕ ಸಂಸ್ಕೃತಿಯ ಪ್ರಸಾರದ ಬಗ್ಗೆ ಒಂದು ವಿಶಿಷ್ಟವಾದ ಕಲ್ಪನೆ ಇದೆ. ಪಲ್ಲಕ್ಕಿ ಗಾಡಿಯಲ್ಲಿ ಹೊಸ ಪುಸ್ತಕಗಳನ್ನು ತುಂಬಿಕೊಂಡು ರಸ್ತೆಯಲ್ಲಿ ತೆರಳುತ್ತಾರೆ. ಓದುಗರು ತಮ್ಮ ಮನೆಯಲ್ಲಿ ಓದಿ ಹಳೆಯದಾಗಿರುವ ಪುಸ್ತಕಗಳನ್ನು ತಂದು ಆ ಪಲ್ಲಕ್ಕಿ ಗಾಡಿಯೊಳಗೆ ಹಾಕಿ, ಅದರಲ್ಲಿರುವ ತಮಗೆ ಬೇಕಾದ ಹೊಸ ಪುಸ್ತಕಗಳನ್ನು ಕೊಳ್ಳುತ್ತಾರೆ. ಇದರ ಅರ್ಥ ಹಳೆಯದನ್ನು ದಾನ ಮಾಡಿದರೆ ಕರ್ಮ ಕಳೆಯಿತೆಂದೂ, ಹೊಸದನ್ನು ಕೊಂಡರೆ ಮೋಕ್ಷ ಪ್ರಾಪ್ತವಾಗುತ್ತದೆಂದೂ ನಂಬಲಾಗುತ್ತದೆ. ಈ ನಂಬಿಕೆಯ ಹಿಂದೆ ಏನೇ ಅರ್ಥವಿರಲಿ, ಆದರೆ ಇದರ ಉದ್ದೇಶದಿಂದ ಪುಸ್ತಕ ಸಂಸ್ಕೃತಿಯು ವಿಸ್ತರಣೆಯಾಗುತ್ತದೆಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ವಸಾಹತುಶಾಹಿಯ ಸಂದರ್ಭದಲ್ಲಿ ಪುಸ್ತಕವು ಸಂಸ್ಕೃತಿಯ ಪ್ರತೀಕವಾಗಿತ್ತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಹಸ್ತದಲ್ಲಿ ಹೊತ್ತಿಗೆ ಹಿಡಿದುಕೊಂಡಿರುವ ಚಿತ್ರಗಳು ನಮಗೆ ಕಾಣಿಸುತ್ತವೆ. ಇದರ್ಥ ಅವರಿಗೆ ಪುಸ್ತಕ ಒಂದು ಶೋಕಿಯ ವಸ್ತುವಾಗಿರಲಿಲ್ಲ; ಅದು ಸಂಸ್ಕೃತಿಯ ಪ್ರತೀಕವಾಗಿತ್ತೆಂಬುದು ಇದರಿಂದ ತಿಳಿದು ಬರುತ್ತದೆ. 1950ರ ನಂತರ ಪುಸ್ತಕ ಪ್ರಕಾಶನ ತೀವ್ರವಾಗಿ ಬೆಳವಣಿಗೆಯಾಗಿರುವುದು ಕಂಡು ಬರುತ್ತದೆ. ಈ ಪ್ರಕಾಶನದ ಬೆಳವಣಿಗೆಯಲ್ಲಿ ಲೇಖಕರು, ಪ್ರಕಾಶಕರು, ಸರ್ಕಾರ ವಿಶ್ವವಿದ್ಯಾಲಯದ ಪ್ರಸಾರಾಂಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಅಕಾಡೆಮಿಗಳು, ಪ್ರಾಧಿಕಾರಗಳು, ಖಾಸಗಿ ಪ್ರಕಾಶನಗಳು, ಓದುಗರೂ ಪಾಲ್ಗೊಂಡಿದ್ದಾರೆ. 1857ರಲ್ಲಿ ಭಾರತದಲ್ಲಿ ಬ್ರಿಟೀಷ್ ಸರ್ಕಾರ ಪ್ರಾರಂಭಿಸಿದ ವಿಶ್ವವಿದ್ಯಾಲಯಗಳು, 1867ರಲ್ಲಿ ಜಾರಿಗೆ ತಂದ ಗ್ರಂಥಸ್ವಾಮ್ಯ ಹಕ್ಕು ಕಾಯ್ದೆ, 1860ರಲ್ಲಿ ಕನ್ನಡದಲ್ಲೇ ಪ್ರಾರಂಭವಾದ ಕನ್ನಡದ ದಿನಪತ್ರಿಕೆಗಳು – ಪ್ರಾದೇಶಿಕ ಭಾಷೆಗಳಲ್ಲಿ ಪುಸ್ತಕ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾದವು. 1950ರ ದಶಕದಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ತಮ್ಮ ಸರ್ಕಾರದಲ್ಲಿ ಕನ್ನಡ

9th_Kannada_Reader Term II.indd 74 29-01-2019 16:32:50

ಮತ್ತು ಸಂಸ್ಕೃತಿ ಇಲಾಖೆಯನ್ನು ಆರಂಭಿಸಿದರು.

ಇಲ್ಲಿ ಒಂದು ಸಂಗತಿಯನ್ನು ನೆನಪು ಮಾಡಿಕೊಳ್ಳಬಹುದಾಗಿದೆ. ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಅಸಾಧಾರಣ ಕನಸುಗಾರರಾಗಿದ್ದರು. ಸಾಹಿತ್ಯ, ಸಂಸ್ಕೃತಿ, ಅಭಿವೃದ್ಧಿ ಕಾರ್ಯಗಳಲ್ಲಿ ದೂರದೃಷ್ಟಿಯನ್ನು ಹೊಂದಿದ್ದರು. ಸಾಹಿತ್ಯದ ಬಗ್ಗೆ ಅತೀವ ಶ್ರದ್ಧೆ ಹಾಗೂ ಪ್ರೀತಿಯನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಮುಖ್ಯಮಂತ್ರಿ ಹನುಮಂತಯ್ಯನವರು ತಮ್ಮ ಸರ್ಕಾರದಲ್ಲಿ ತಮ್ಮ ಮಹಾತ್ವಾಕಾಂಕ್ಷೆಗೆ ಸಾಕ್ಷಿಯಾಗಿ, 'ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿಯ ಇಲಾಖೆ' ಎಂಬ ವಿಭಾಗವನ್ನು ತೆರೆದು, ಅದರ ನೇತೃತ್ವವನ್ನು ಸಾಹಿತಿ ಅ.ನ. ಕೃಷ್ಣರಾವ್ ಅವರು ವಹಿಸಿಕೊಳ್ಳಬೇಕೆಂದು ಕೇಳಲು ಸ್ವತಃ ಕೆಂಗಲ್ ಅವರೇ ಅನಕೃ ಅವರ ಮನೆಗೆ ಹೋಗಿ, 'ಸರ್ಕಾರದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿಯ ಇಲಾಖೆಯನ್ನು ತೆರೆದಿದ್ದೇನೆ. ಇದು ಸಂಸ್ಕೃತಿ ಪ್ರಸಾರ ಮಾಡಬೇಕಾಗಿದೆ. ರಾಜ್ಯಾದ್ಯಂತ ರಾಮಾಯಣ, ಮಹಾಭಾರತ, ಭಾಗವತ, ವಚನ, ಶಾಸ್ತ್ರೀಯ ಸಂಗೀತ, ಭರತನಾಟ್ಯ ಮುಂತಾದ ಕಾರ್ಯಕ್ರಮಗಳನ್ನು ನಡೆಸಬೇಕಾಗಿದೆ. ಇದಕ್ಕೆ ಸರ್ಕಾರಿ ಅಧಿಕಾರಿಗಳಿಗಿಂತ ಒಬ್ಬ ಸಮರ್ಥ ಸಾಹಿತಿಯನ್ನು ಇದರ ನಿರ್ದೇಶಕರನ್ನಾಗಿ ಮಾಡಬೇಕೆಂದು ನನ್ನ ಆಸೆ. ಇದಕ್ಕೆ ನೀವು ಸಮರ್ಥರು. ದಯವಿಟ್ಟು ಒಪ್ಪಿಕೊಳ್ಳಿ' ಎಂದು ಕೋರಿಕೊಳ್ಳುತ್ತಾರೆ.

ಆಗ ಅ.ನ.ಕೃಷ್ಣರಾವ್ ಅವರು, 'ದಯವಿಟ್ಟು ಕ್ಷಮಿಸಿ. ನನ್ನ ಮನೆಗೆ ತಾವು ಬಂದಿದ್ದೀರಿ. ಇಡೀ ಸರ್ಕಾರವೇ ಬಂದಂತಾಗಿದೆ. ನನ್ನ ಬರವಣಿಗೆಗೆ ಇದು ಅಡ್ಡಿಯಾಗುತ್ತದೆ. ನಾನು ಈಗ ಒಪ್ಪಂದ ಮಾಡಿಕೊಂಡಿರುವಂತೆ ಪ್ರಕಾಶಕರಿಗೆ ಐದು ಕಾದಂಬರಿಗಳನ್ನು ಇನ್ನು ಒಂದೆರಡು ತಿಂಗಳಲ್ಲಿ ಬರೆದು ಕೊಡಬೇಕು. ಮುಂದೆ ಬರೆಯುವುದೂ ಇದೆ. ನಾನೊಂದು ಸಲಹೆಯನ್ನು ನಿಮಗೆ ಕೊಡಬಲ್ಲೆ. ನನಗಿಂತ ಹಿರಿಯರೂ ಸಮರ್ಥರೂ ಸಂಸ್ಕೃತಿ ಪ್ರತಿಪಾದಕರೂ ಆದ ಸಿ.ಕೆ. ವೆಂಕಟರಾಮಯ್ಯನವರನ್ನು ತಾವು ಆರಿಸಿ' ಎಂದು ಹೇಳಿ ಅನಂತರ ಅ.ನ.ಕೃ. ಅವರು ಕೆಂಗಲ್ ಅವರಿಗೆ ಮಲ್ಲಿಗೆಯ ಹಾರವನ್ನು ಹಾಕಿ ಬೀಳ್ಕೊಡುತ್ತಾರೆ. ಆಮೇಲೆ ಸಿ.ಕೆ.ವೆಂಕಟರಾಮಯ್ಯನವರನ್ನು ಸಾಹಿತ್ಯ ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನಾಗಿ ಕೆಂಗಲ್ ನಿಯಮಿಸುತ್ತಾರೆ. ಆಗ 'ಒಬ್ಬ ಸಾಹಿತಿಯ ಮಾತಿಗೆ ಇಷ್ಟೊಂದು ಗೌರವ ಕೊಡುವ ದೊಡ್ಡತನ ಹನುಮಂತಯ್ಯನವರಲ್ಲಿ ಇರುವುದನ್ನು ಅಂದು ನಾನು ಅರಿತುಕೊಂಡೆ' ಎಂದು ಅ.ನ.ಕೃ. ಅವರು ಮಾತನಾಡಿದರಂತೆ ಎಂದು ಈ ಘಟನೆಯನ್ನು ಕೆಂಗಲ್ ಅವರಿಗೆ ಆಪ್ತರಾಗಿದ್ದ ಲೇಖಕ ಕೆ.ಮಹಾಬಲೇಶ್ವರ ಭಟ್ಟ ಅವರು ಒಂದು ಕಡೆ ದಾಖಲಿಸಿದ್ದಾರೆ.

ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಕನಸಿನ ಸಾಕಾರ ರೂಪವಾಗಿ ಕರ್ನಾಟಕದಲ್ಲಿ 1954ರಲ್ಲಿ, 'ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ' ಅಸ್ತಿತ್ವಕ್ಕೆ ಬಂದಿತು. ಅದರ ಮುಖ್ಯ ಉದ್ದೇಶದ ವಿವರಗಳು ಹೀಗಿದ್ದವು :

1. ದೀರ್ಘ ಕಾಲ ಪ್ರಭಾವ ಬೀರುವ ಕಾರ್ಯಕ್ರಮಗಳು:

ಅ. ಅವುಗಳಲ್ಲಿ ಮುಖ್ಯವಾಗಿ ಖಾಸಗಿ ಪ್ರಕಾಶನ ಸಂಸ್ಥೆಗಳೊಡನೆ ಸ್ಪರ್ಧೆ ಹೂಡದೆ ಇತರರು ಪ್ರಕಟಿಸಲು ಹಿಂಜರಿಯುವ ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಪ್ರಕಟಿಸುವುದು. ಇದು ಹೊಸತೂ ಆಗಬಹುದು, ಪುನರ್ಮುದ್ರಣವೂ ಆಗಬಹುದು.

ಆ. ರಾಮಾಯಣ, ಮಹಾಭಾರತದಂತಹ ಪ್ರಸಿದ್ಧ ಪ್ರಾಚೀನ ಗ್ರಂಥಗಳನ್ನು ಆಧುನಿಕ ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವುದು.

ಇ. ವಿಚಾರ ಸಾಹಿತ್ಯವನ್ನು ಪ್ರಕಟಿಸುವುದು.

ಈ. ಉತ್ತಮ ಗ್ರಂಥಗಳನ್ನು ಪ್ರಕಟಿಸಲು ಗ್ರಂಥಕರ್ತರೇ ಮುಂದಾದರೆ ಅವರಿಗೆ ಧನ ಸಹಾಯ ನೀಡುವುದು.

ಉ. ಪರಿಣತ ವಿದ್ವಾಂಸರಿಂದ ಉಪಯುಕ್ತವಾದ ಹೊಸ ಪುಸ್ತಕಗಳನ್ನು ಬರೆಯಿಸಿ ಅಚ್ಚು ಹಾಕಿಸುವುದು. ಪ್ರಕಟಿಸುವ ಗ್ರಂಥಗಳನ್ನು ಜನ ಸಾಮಾನ್ಯರಿಗೆ ಹೊರೆಯಾಗದಂತೆ ಕಡಿಮೆ ಬೆಲೆಗೆ ಮಾರಾಟ ಮಾಡುವುದು.

2. ತಾತ್ಕಾಲಿಕ ಪ್ರಭಾವ ಬೀರುವ ಕಾರ್ಯಕ್ರಮಗಳು:

ಅ. ವಿವಿಧ ವಿಷಯಗಳನ್ನು ಕುರಿತ

9th_Kannada_Reader Term II.indd 75 29-01-2019 16:32:50

ಉಪನ್ಯಾಸಗಳನ್ನು ಏರ್ಪಡಿಸುವುದು.

ಆ. ಕಾವ್ಯ ವಾಚನ. ಗ್ರಹಿಕೆಗೆ ನೆರವಾಗುವಂತೆ ರಸವತ್ತಾದ ವ್ಯಾಖ್ಯಾನ ನೀಡುವ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

ಇ. ನಾಟಕ ಪ್ರದರ್ಶನ.

ಈ. ಹರಿಕಥೆ, ಶಿವಕಥೆ, ಬಯಲಾಟಗಳನ್ನು ವ್ಯವಸ್ಥೆ ಮಾಡುವುದು.

ಉ. ವಾಗ್ಮಿಗಳ, ಗಮಕಿಗಳ, ಸಂಗೀತಗಾರರ, ಹರಿಕಥೆ ಮಾಡುವವರ, ಬಯಲಾಟ ತಂಡಗಳ ಪಟ್ಟಿ ತಯಾರಿಸುವುದು.

ಊ. ಪ್ರದರ್ಶಕರಿಗೆ ಪ್ರಯಾಣ ವೆಚ್ಚ ಭತ್ಯೆ ಸಹಿತ ಸಂಭಾವನೆ ಕೊಡುವುದು.

ಋ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವ ಹೊಸ ಕರ್ನಾಟಕ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುವುದು.

ಋಾ. ಅರ್ಹತೆ, ಅವಶ್ಯಕತೆಗಳನ್ನು ಪರಿಗಣಿಸಿ ಕರ್ನಾಟಕ ಸಂಘಗಳಿಗೆ ಧನ ಸಹಾಯ

3. ಕನ್ನಡ ಭಾಷೆಯಲ್ಲಿ ಬೃಹತ್ ಪ್ರಮಾಣದ ವಿಶ್ವಕೋಶ ತಯಾರಿಸುವುದು... ಇತ್ಯಾದಿ.

ಅನಂತರ ಈ ಇಲಾಖೆಯು ಕನ್ನಡ ಸಾಹಿತ್ಯವನ್ನು ಕಡಿಮೆ ಬೆಲೆಗೆ ಮುದ್ರಿಸಿ ಪ್ರಸಾರ ಮಾಡುವ ಕಾರ್ಯಕ್ಕೆ ತೊಡಗಿತು. ಪುಸ್ತಕ ಸಂಸ್ಕೃತಿಯ ಪ್ರಕಾಶನ ಹಾಗೂ ಪ್ರಸಾರ ಕಾರ್ಯದಲ್ಲಿ ಸರ್ಕಾರ ಒಂದು ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಪಾಲ್ಗೊಂಡಿದ್ದು ಐತಿಹಾಸಿಕವಾಗಿ ಪ್ರಮುಖವಾದ ಘಟ್ಟ ಇದು. ಓದುಗರ ಜ್ಞಾನ, ವಿಜ್ಞಾನ, ವೈಚಾರಿಕತೆ ಮತ್ತು ಬೌದ್ಧಿಕತೆಯ ಹಸಿವನ್ನು ಇಂಗಿಸಲು ಸರ್ಕಾರಕ್ಕೂ ಪುಸ್ತಕ ಪ್ರಕಾಶನ ಬೇಕು ಎಂಬುದು ಮನವರಿಕೆಯಾಗತೊಡಗಿತು. ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅನೇಕ ಮಹತ್ವದ ಕನ್ನಡದ ಅಲಭ್ಯ ಕೃತಿಗಳನ್ನು ಮರುಮುದ್ರಿಸಿತು. ಇದರ ಜೊತೆಗೆ ದಾಸ ಸಾಹಿತ್ಯ, ವಚನ ಸಾಹಿತ್ಯ, ಲೋಹಿಯಾ ಹಾಗೂ ಅಂಬೇಡ್ಕರ್ ಸಂಪುಟಗಳು, ಡಿ.ವಿ.ಜಿ. ಕೃತಿಶ್ರೇಣಿ ಹೀಗೆ ಮಹತ್ವದ ಪ್ರಕಟಣೆಗಳನ್ನು ಹೊರತಂದಿದೆ. ಹಾಗೆಯೇ ಸರ್ಕಾರದ ಪುಸ್ತಕ ಪ್ರಾಧಿಕಾರ ಸಹ ಅಪರೂಪದ, ಅಲಭ್ಯ ಕೃತಿಗಳನ್ನು ಹೊರತಂದಿದೆ. ಶಂ.ಭಾ.ಸಮಗ್ರ ಸಂಪುಟಗಳು ಹಾಗೂ ಮಕ್ಕಳ ಸಾಹಿತ್ಯವನ್ನು ಈ ಪ್ರಾಧಿಕಾರ ಹೊರತಂದು ಜನಮನ್ನಣೆ ಗಳಿಸಿದೆ. ಗಾಂಧೀಜಿ, ನೆಹರೂ, ಅಂಬೇಡ್ಕರ್, ಲೋಹಿಯಾ ಮುಂತಾದ ವ್ಯಕ್ತಿಗಳು ಸಹ ಪುಸ್ತಕ ಸಂಸ್ಕೃತಿಯ ಸೃಷ್ಟಿ ಹಾಗು ಪ್ರಸಾರದಲ್ಲಿ ಪಾಲ್ಗೊಂಡವರೇ ಆಗಿದ್ದಾರೆ.

ಅತ್ಯುತ್ತಮ ಪುಸ್ತಕವು ಬಲಿಷ್ಠ ಸಂಸ್ಕೃತಿಯನ್ನು ನಿರ್ಮಿಸುತ್ತದೆ. ಓದುಗನಾಗಲೀ, ಪುಸ್ತಕವಾಗಲೀ ಶೂನ್ಯದ ಸೃಷ್ಟಿಗಳಲ್ಲ. ವಾಸ್ತವದ ಓದುಗರ ಅಪೇಕ್ಷೆ ಮತ್ತು ನಿರೀಕ್ಷೆಯನ್ನು ಕೃತಿ ಹುಟ್ಟು ಹಾಕುತ್ತಿರುತ್ತದೆ. ಹಾಗಾಗಿ ಕೃತಿ ಅಮೂರ್ತ ಅಲ್ಲ. ಅದು ಸಮಷ್ಟಿ ಬದುಕಿನ ವಾಸ್ತವದ ಪ್ರತಿಬಿಂಬ. ಕೃತಿಯ ಪ್ರತಿ ವಾಕ್ಯದಲ್ಲೂ ಬದುಕಿನ ವ್ಯಾಖ್ಯಾನ, ವಿಶ್ಲೇಷಣೆ ಮತ್ತು ದರ್ಶನ ಅಡಗಿರುತ್ತದೆ. ಆದರೆ ಓದುವ ರೀತಿಯನ್ನು ಶಿಕ್ಷಣದ ಪ್ರಾಥಮಿಕ ಹಂತದಲ್ಲಿಯೇ ರೂಪಿಸಬೇಕಾಗುತ್ತದೆ. ಓದುವುದು ಎಂದರೆ ಅದು ಒಂದು ಜೀವಂತ ಕಲೆ ಎಂಬ ಅರಿವನ್ನು ಮೂಡಿಸಬೇಕಾಗುತ್ತದೆ. ಆದರೆ ಪುಸ್ತಕವನ್ನು ಕಂಪ್ಯೂಟರ್ ಮೂಲಕ ಕೂತು ಓದಲು ಸಾಧ್ಯವಾಗದು. ಓದುವಿಕೆ ಎಂಬುದು ಒಂದು ತತ್ವ, ಒಂದು ಕಲೆ ಎಂದು ತಿಳಿಯಬೇಕು. ಓದುವ ಕಲೆ ಏಕೆ ಇತ್ತೀಚಿನ ವರ್ಷಗಳಲ್ಲಿ ಕ್ಷೀಣವಾಗಿದೆ, ದುರ್ಬಲವಾಗಿದೆ ಎಂಬುದನ್ನು ಗಂಭೀರವಾಗಿ ವಿಶ್ಲೇಷಿಸಬಹುದಾಗಿದೆ.

ಕೃತಿ–ಕರ್ತೃ ಪರಿಚಯ

ಡಾ॥ ಕರೀಗೌಡ ಬೀಚನಹಳ್ಳಿಯವರು ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಬೀಚನಹಳ್ಳಿಯಲ್ಲಿ 10.9.1951ರಂದು ಜನಿಸಿದರು. ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ಹಲವು ವಿಭಾಗಗಳ ಮುಖ್ಯಸ್ಥರಾಗಿ, ಪ್ರಸಾರಾಂಗದ ಡೈರೆಕ್ಟರ್ ಆಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಹಲವು ವಿದ್ಯಾರ್ಥಿಗಳ ಎಂ.ಫಿಲ್., ಪಿ.ಎಚ್.ಡಿ., ಪದವಿಗಳಿಗೆ ಮಾರ್ಗದರ್ಶಕರಾಗಿ ನೆಚ್ಚಿನ ಗುರುಗಳಾಗಿ ಹೆಸರು ಗಳಿಸಿದರು. ಸಂಶೋಧನೆ, ಭಾಷಾಂತರ, ವಿಶ್ವಕೋಶ ರಚನೆ, ಪಠ್ಯಪುಸ್ತಕ ರಚನೆ ಮುಂತಾದ ಹಲವು

9th_Kannada_Reader Term II.indd 76 29-01-2019 16:32:50

ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ರಚನೆಯಲ್ಲೂ ತಮ್ಮನ್ನು ಈಡುಪಡಿಸಿಕೊಂಡರು. ಕರಿಮಣ್ಣಿನ ಗೊಂಬೆಗಳು, ಸಂಧಾನ, ನೆನಪಲ್ಲ ವಾಸ್ತವ, ಮಳೆ ಕೋಗಿಲೆ, ಗೂಟದ ಕರು, ಒಂದು ಅಪೂರ್ವ ಸಂಸಾರ ಮುಂತಾದ ಇಪ್ಪತ್ತಕ್ಕೂ ಅಧಿಕ ಸಣ್ಣ ಕಥೆಗಳ ಸಂಗ್ರಹಗಳನ್ನು ಹೊರತಂದಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರಗಳ ಸಾಹಿತ್ಯಕ ಸಂಘಟನೆಗಳು ಹಾಗೂ ಹಲವು ಸಂಘ ಸಂಸ್ಥೆಗಳ ಸದಸ್ಯರಾಗಿಯೂ ಕನ್ನಡ ಸೇವೆಯನ್ನು ಹೆಮ್ಮೆಯಿಂದ ಮಾಡಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ 1999ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಹಾಗೂ ಹತ್ತು ಹಲವು ಬಿರುದು ಬಹುಮಾನಗಳಿಗೆ ಭಾಜನರಾಗಿದ್ದಾರೆ.

ಪದಗಳ ಅರ್ಥ

ಸಂಗಾತಿ–ಜೊತೆಗಾರ/ರ್ತಿ, ಸ್ನೇಹಿತ/ತೆ; ಮೌಲಿಕ–ಬೆಲೆಯುಳ್ಳ; ಗತಕಾಲ–ಕಳೆದುಹೋದ ಕಾಲ; ಸ್ತರ–ಹಂತ, ವರ್ಗ; ಸಾತತ್ಯ–ಅವಿಚ್ಛಿನ್ನ, ಮುರಿಯದ, ಒಡೆಯದ; ಸೆಲೆ–ಒಸರು, ಜಿನುಗು; ತರತಮ–ಮೇಲುಕೀಳು ಭಾವನೆ; ವಸಾಹತುಶಾಹಿ–ಪಾಳೆಯ, ಬೀಡು; ಪ್ರತಿರೋಧ–ಅಡ್ಡಿ; ಪ್ರಾಪ್ತಿ–ಹೊಂದು; ಪ್ರತೀಕ–ಸಂಕೇತ, ಚಿಹ್ನೆ; ಹಸ್ತ–ಕೈ; ಶೋಕಿ–ಅಲಂಕಾರಿಕ; ಪ್ರತಿಪಾದಕ–ತಿಳಿಸುವವನು; ಪರಿಣತ–ನಿಷ್ಣಾತ, ಬಲ್ಲವ; ಹೊರೆ–ಭಾರ, ಕಾಪಾಡುವುದು; ಪ್ರಕಾಶನ–ಗ್ರಂಥಗಳನ್ನು ಪ್ರಕಟಿಸುವುದು; ಅಪೇಕ್ಷೆ–ಬಯಕೆ, ನಿರೀಕ್ಷೆ; ಸಮಷ್ಟಿ–ಸಂಪೂರ್ಣ.

ಅಭ್ಯಾಸ

I.ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಪುಸ್ತಕಗಳ ಮಹತ್ವವನ್ನು ಕುರಿತು ಏನು ಹೇಳಲಾಗಿದೆ ?
2. ಪುಸ್ತಕ ಸಂಸ್ಕೃತಿಯ ಪ್ರಕ್ರಿಯೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡವರು ಯಾರು ?
3. ಎಂದು ಶಿಕ್ಷಣದಲ್ಲಿ ಕನ್ನಡ ಅಧಿಕೃತ ಭಾಷೆಯಾಗಿ ಪರಿಗಣಿತವಾಯಿತು ?
4. ಶಾಂತಿ ಪುರಾಣದ ಕರ್ತೃ ಯಾರು ?
5. ಮಹಾರಾಷ್ಟ್ರದಲ್ಲಿ ಪುಸ್ತಕ ಸಂಸ್ಕೃತಿಯ ಪ್ರಸಾರದ ಬಗ್ಗೆ ಯಾವ ಕಲ್ಪನೆಯಿದೆ?
6. ಕೆಂಗಲ್ ಹನುಮಂತಯ್ಯನವರು ತಮ್ಮ ಸರ್ಕಾರದಲ್ಲಿ ಯಾವ ಇಲಾಖೆಯನ್ನು ಹೊಸದಾಗಿ ಆರಂಭಿಸಿದರು?
7. ಮಹಾಬಲೇಶ್ವರ ಭಟ್ ಅವರು ದಾಖಲಿಸಿದ ಘಟನೆಯನ್ನು ವಿವರಿಸಿರಿ.
8. ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಮುಖ್ಯ ಉದ್ದೇಶಗಳಾವುವು?
9. ಓದುವಿಕೆಯನ್ನು ಏನೆಂದು ತಿಳಿಯಬೇಕು ?

9th_Kannada_Reader Term II.indd 77 29-01-2019 16:32:50

ಘಟಕ ಐದು

ಸಂಯುಕ್ತಾಕ್ಷರ, ನಾಮಪದ

ವ್ಯಂಜನಕ್ಕೆ ವ್ಯಂಜನ ಸೇರಿ ನಡೆಯುವ ಅಕ್ಷರ ಪ್ರಕ್ರಿಯೆಯೇ ಒತ್ತಕ್ಷರ ಎನ್ನಿಸುವುದು. ಇದರಲ್ಲಿ ಎರಡು ವಿಧ. ಅವು,

1. ಸಜಾತೀಯ ಸಂಯುಕ್ತಾಕ್ಷರ.
2. ವಿಜಾತೀಯ ಸಂಯುಕ್ತಾಕ್ಷರ.

1. ಸಜಾತೀಯ ಸಂಯುಕ್ತಾಕ್ಷರ :

ಅ**ಕ್ಕ**, ಹ**ಗ್ಗ**, ಅ**ಚ್ಚು**, ಅ**ಡ್ಡ**, ಅ**ಣ್ಣ**, ಅ**ತ್ತೆ**, ಉ**ದ್ದ**, ಅ**ನ್ನ**, ಅ**ಜ್ಜಿ**, ಅ**ಮ್ಮ**,
ಅ**ಯ್ಯ**, ಕ**ರ್ರ**ಗೆ, ಬೆ**ಲ್ಲ**, ಅ**ವ್ವ**, ಬ**ಸ್ಸು**, ಕ**ನ್ನ**ಡ, ಹ**ಳ್ಳ**.

ಇಲ್ಲಿ ದಪ್ಪಕ್ಷರಗಳಲ್ಲಿ ನೀಡಲಾಗಿರುವ ಅಕ್ಷರಗಳು ಸಜಾತೀಯ ಸಂಯುಕ್ತಾಕ್ಷರಗಳು.

2. ವಿಜಾತೀಯ ಸಂಯುಕ್ತಾಕ್ಷರ :

ರ**ಕ್ತ**, ಚ**ಕ್ರ**, ಅ**ಕ್ಷ**ಯ, ಅ**ಗ್ನಿ**, ಭಾ**ಗ್ಯ**, ಶ**ಬ್ದ**, ಪ**ಶ್ಚಿ**ಮ, ಕ**ಷ್ಟ**, ಅ**ಜ್ಞಾ**ನ, ಅ**ರ್ಧ**.

ಇಲ್ಲಿ ದಪ್ಪಕ್ಷರಗಳಲ್ಲಿ ನೀಡಲಾಗಿರುವ ಅಕ್ಷರಗಳು ವಿಜಾತೀಯ ಸಂಯುಕ್ತಾಕ್ಷರಗಳು.

ನಾಮಪದಗಳು

ಭಾಷೆಯಲ್ಲಿರುವ ಶಬ್ದಗಳಲ್ಲಿ ಬಗೆಬಗೆಯ ಹೆಸರುಗಳನ್ನು ತಿಳಿಸತಕ್ಕವುಗಳಿಗೆ ನಾಮಪದ ಎಂಬ ಹೆಸರು ಬಂದಿದೆ. ಇದನ್ನು ನಾಮವಾಚಕ ಹಾಗೂ ವಸ್ತುವಾಚಕಗಳು ಎಂದು ಸಹ ಕರೆಯುತ್ತಾರೆ. ವಸ್ತುಗಳ ಹೆಸರುಗಳನ್ನು ಹೇಳುವ ಪದಗಳೇ ವಸ್ತುವಾಚಕಗಳು. ವಸ್ತುಗಳನ್ನು ಚೇತನ(ಚೇತನವುಳ್ಳ), ಅಚೇತನ(ಚೇತನವಿಲ್ಲದ್ದು) ಎಂದು ಎರಡು ರೀತಿಯಲ್ಲಿ ವಿಭಾಗಿಸಲಾಗಿದೆ. ಉದಾಹರಣೆಗೆ:

ಚೇತನವುಳ್ಳವು – ಮನುಷ್ಯ, ಪ್ರಾಣಿ, ಪಕ್ಷಿ, ಜಂತುಗಳು ಮುಂತಾದವು.

ಅಚೇತನವಾದವು – ನೆಲ, ಜಲ, ಹಣ್ಣು, ಕಾಯಿ, ಮನೆ, ಬೆಟ್ಟ ಮುಂತಾದವು.

1. ವಸ್ತುವಾಚಕ : ವಸ್ತು ವಾಚಕ(ನಾಮಪದ)ಗಳನ್ನು ಮೂರು ಭಾಗಗಳಾಗಿ ವಿಭಾಗ ಮಾಡಲಾಗಿದೆ. ಅವುಗಳೆಂದರೆ, **ಅ. ರೂಢನಾಮ. ಆ. ಅಂಕಿತನಾಮ. ಇ. ಅನ್ವರ್ಥ ನಾಮ.**

ಅ. ರೂಢನಾಮ : ಹಿಂದಿನ ಕಾಲದಿಂದಲೂ ಕರೆದುಕೊಂಡು ಬಂದಿರುವ (ರೂಢಿಯಿಂದ ಬಂದಿರುವ) ಹೆಸರುಗಳನ್ನು ರೂಢನಾಮ ಎಂದು ಕರೆಯುತ್ತೇವೆ. ಉದಾಹರಣೆಗೆ: ನದಿ, ಪರ್ವತ, ಹೆಂಗಸು, ಮರ, ದೇಶ, ಭಾಷೆ ಮುಂತಾದ ಪದಗಳು ರೂಢನಾಮಗಳು.

ಆ. ಅಂಕಿತನಾಮ : ಒಬ್ಬ ವ್ಯಕ್ತಿ, ವಸ್ತು, ಸ್ಥಳ ಮುಂತಾದವುಗಳನ್ನು ಗುರುತಿಸುವುದಕ್ಕಾಗಿ ಇಟ್ಟ ಹೆಸರನ್ನು ಅಂಕಿತನಾಮ ಎಂದು ಕರೆಯುವರು. ಉದಾಹರಣೆಗೆ: ಕಾವೇರಿ, ನಕುಲ, ಹಿಮಾಲಯ, ಶಂಕರ, ಬೇವು, ಮಾವು, ಮುಂತಾದವು.

ಇ. ಅನ್ವರ್ಥನಾಮ : ಅರ್ಥಕ್ಕೆ ಅನುಗುಣವಾಗಿ ರಚನೆಯಾದ ನಾಮಪದಗಳನ್ನು ಅನ್ವರ್ಥನಾಮ ಎಂದು ಕರೆಯುತ್ತೇವೆ. ಉದಾಹರಣೆಗೆ: ವ್ಯಾಪಾರಿ, ವಿದ್ವಾಂಸ, ಚಾಲಕ, ರೋಗಿ, ಶಿಕ್ಷಕ, ಕುರುಡ, ಕುಂಟ, ಕಿವುಡ ಇತ್ಯಾದಿ.

2. ಗುಣವಾಚಕ : ವ್ಯಕ್ತಿಯ, ವಸ್ತುವಿನ, ಸ್ಥಳಗಳ, ಪ್ರಾಣಿಪಕ್ಷಿಗಳ ಗುಣ, ರೀತಿ, ಸ್ವಭಾವವನ್ನು ಹೇಳುವ ವಿಶೇಷಣಗಳೇ ಗುಣವಾಚಕಗಳು. ಉದಾಹರಣೆಗೆ: ಒಳ್ಳೆಯ, ಕೆಟ್ಟ, ಹೊಸದು, ದೊಡ್ಡದು, ಸುಂದರ, ಸಾಧಾರಣ ಮುಂತಾದವು.

3. ಸಂಖ್ಯಾವಾಚಕ : ಎಣಿಕೆ ಮಾಡುವ ಸಂಖ್ಯೆಗಳನ್ನು ಸೂಚಿಸುವ ಪದಗಳೇ ಸಂಖ್ಯಾವಾಚಕಗಳು. ಉದಾಹರಣೆಗೆ: ಒಂದು, ಎರಡು, ಹತ್ತು, ನೂರು, ಸಾವಿರ, ಕೋಟಿ ಇತ್ಯಾದಿ.

9th_Kannada_Reader Term II.indd 78 29-01-2019 16:32:50

4. ಸರ್ವನಾಮಗಳು : ನಾಮಪದಕ್ಕೆ ಬದಲಾಗಿ ಉಪಯೋಗಿಸುವ ಪದಗಳನ್ನು ಸರ್ವನಾಮ ಎಂದು ಕರೆಯುತ್ತೇವೆ. ಉದಾಹರಣೆಗೆ: ಅವನು, ಅವಳು, ಅವರು, ತಾವು, ನೀವು, ಅವು ಇತ್ಯಾದಿ.

ಸರ್ವನಾಮದಲ್ಲಿ ಮೂರು ಬಗೆಗಳಿವೆ. ಅವುಗಳೆಂದರೆ,

1. ಪುರುಷಾರ್ಥಕ ಸರ್ವನಾಮ

ಉತ್ತಮ ಪುರುಷ – ನಾನು, ನಾವು
ಮಧ್ಯಮ ಪುರುಷ – ನೀನು, ನೀವು,
ಪ್ರಥಮ ಪುರುಷ – ಅವನು, ಅವಳು.

2. ಪ್ರಶ್ನಾರ್ಥಕ ಸರ್ವನಾಮ : ಯಾರು, ಯಾವುದು, ಏನು, ಯಾವನು.

3. ಆತ್ಮಾರ್ಥಕ ಸರ್ವನಾಮ : ತಾನು, ತಾವು, ತನ್ನ, ತಮ್ಮ.

5. ದಿಗ್ವಾಚಕಗಳು : ದಿಕ್ಕುಗಳನ್ನು ಸೂಚಿಸುವ ಪದಗಳನ್ನು ದಿಗ್ವಾಚಕಗಳೆನ್ನುವರು. ಉದಾಹರಣೆಗೆ: ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮೂಡಣ, ಪಡುವಣ, ತೆಂಕಣ, ಬಡಗಣ, ಆಗ್ನೇಯ, ನೈಋತ್ಯ, ವಾಯುವ್ಯ, ಈಶಾನ್ಯ ಇತ್ಯಾದಿ.

6. ಪರಿಣಾಮ ವಾಚಕಗಳು : ವಸ್ತುಗಳ ಪರಿಮಾಣ, ಗಾತ್ರವನ್ನು ಎಂದರೆ ಅಳತೆಯನ್ನು ತಿಳಿಸುವ ಪದಗಳನ್ನು ಪರಿಮಾಣ ವಾಚಕ ಎನ್ನುತ್ತೇವೆ. ಉದಾಹರಣೆಗೆ: ಅಷ್ಟು, ಇಷ್ಟು, ಹಲವು, ಕೆಲವು, ಎನಿತು, ಅನಿತು, ಇನಿತು, ಆಸುಪಾಸು, ಈಸು, ಏಸು, ಎಲ್ಲವೂ ಮುಂತಾದವುಗಳು.

7. ಪ್ರಕಾರ ವಾಚಕಗಳು : ವ್ಯಕ್ತಿ, ವಸ್ತು ಮತ್ತು ಸ್ಥಳಗಳ ಪ್ರಕಾರವನ್ನು ಎಂದರೆ ರೀತಿಯನ್ನು ತಿಳಿಸುವ ಪದಗಳನ್ನು ಪ್ರಕಾರ ವಾಚಕ ಎಂದು ಕರೆಯುತ್ತೇವೆ. ಉದಾಹರಣೆಗೆ: ಎಂತಹುದು, ಇಂತಹವನು, ಅಂತಹವಳು.

ಕ್ರಿಯಾಪದಗಳು

ಕ್ರಿಯೆಯನ್ನು (ಕೆಲಸವನ್ನು) ಸೂಚಿಸುವ ಪದಗಳನ್ನು ಕ್ರಿಯಾಪದ ಎನ್ನುತ್ತೇವೆ. ಉದಾಹರಣೆಗೆ: ಈಜು, ದಾಟು, ಹುಟ್ಟು, ಓಡು, ಕೊಡು, ಒದೆ, ಚಿಮ್ಮು, ಕ್ರಿಯಾಪದದ ಮೂಲರೂಪವನ್ನು ಧಾತು ಎನ್ನುತ್ತೇವೆ. ಕ್ರಿಯಾಪದದಲ್ಲಿ ಎರಡು ವಿಧ. ಅವು,

1. ಸಕರ್ಮಕ ಕ್ರಿಯಾಪದ 2. ಅಕರ್ಮಕ ಕ್ರಿಯಾಪದ.

1. ಸಕರ್ಮಕ ಕ್ರಿಯಾಪದ

ಕರ್ಮಪದವನ್ನು ಬಯಸುವ ಕ್ರಿಯಾಪದಗಳನ್ನು ಸಕರ್ಮಕ ಕ್ರಿಯಾಪದ ಎಂದು ಕರೆಯುತ್ತೇವೆ. ಉದಾಹರಣೆಗೆ:

ರಮೇಶನು ಗಿಡವನ್ನು ನೆಟ್ಟನು.
ಶಿಲ್ಪಿಗಳು ಗುಡಿಯನ್ನು ಕಟ್ಟಿದರು.
ವಿದ್ಯಾರ್ಥಿಗಳು ಪಾಠವನ್ನು ಓದಿದರು.

– ಈ ಮೂರೂ ವಾಕ್ಯಗಳಲ್ಲಿರುವ ನೆಟ್ಟನು, ಕಟ್ಟಿದರು, ಓದಿದರು ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಅನುಕ್ರಮವಾಗಿ ಗಿಡವನ್ನು, ಗುಡಿಯನ್ನು, ಪಾಠವನ್ನು ಎಂಬ ಉತ್ತರ ದೊರೆಯುವುದು. ಇಂತಹ ಕ್ರಿಯಾಪದವನ್ನು ಸಕರ್ಮಕ ಕ್ರಿಯಾಪದ ಎಂದು ಕರೆಯುವರು.

2. ಅಕರ್ಮಕ ಕ್ರಿಯಾಪದ

ಕರ್ಮಪದವನ್ನು ಬಯಸದೇ ಇರುವ ಕ್ರಿಯಾಪದಗಳೇ ಅಕರ್ಮಕ ಕ್ರಿಯಾಪದಗಳು ಎನ್ನಿಸುವುವು. ಉದಾಹರಣೆಗೆ:

ಕೂಸು ಮಲಗಿತು.
ಅವನು ಬದುಕಿದನು.
ಆಕಾಶ ಹೊಳೆಯುತ್ತಿದೆ.

ಇಲ್ಲಿ ಮಲಗಿತು, ಬದುಕಿದನು, ಹೊಳೆಯುತ್ತಿದೆ ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆ ಹಾಕಿಕೊಂಡರೆ ಉತ್ತರ ಇರುವುದಿಲ್ಲ. ಅಂದರೆ ಕರ್ಮಪದವನ್ನು ಇವು ಬಯಸುವುದಿಲ್ಲ. ಇಂತಹ ಕ್ರಿಯಾಪದಗಳಿಗೆ ಅಕರ್ಮಕ ಕ್ರಿಯಾಪದ ಎನ್ನುತ್ತೇವೆ.

9th_Kannada_Reader Term II.indd 79 29-01-2019 16:32:50

ಘಟಕ
ಆರು

ನಾಗರಿಕತೆ–ವೃತ್ತಿ–ವಾಣಿಜ್ಯ



9th_Kannada_Reader Term II.indd 80 29-01-2019 16:32:50

ಗದ್ಯ ವಿಹಾರ

ಘಟಕ ಆರು

ವಾಣಿಜ್ಯ ವೈಶಿಷ್ಟ್ಯ



ಪೀಠಿಕೆ

'ಪುರಾತನ ತಮಿಳುನಾಡಿನ ಕರಾವಳಿ ಬಂದರುಗಳು ಯವನರ ಕುದುರೆಗಳು ಓಡುವ ಶಬ್ದಗಳಿಂದಲೂ, ರೋಮನ್ನರ ಚಿನ್ನದ ನಾಣ್ಯಗಳ ಝಣಝಣ ಶಬ್ದದಿಂದಲೂ, ವಿದೇಶೀಯರೂ ಸ್ವದೇಶೀಯರೂ ಇಡೀ ರಾತ್ರಿ ನಿದ್ರಿಸದೆ ವ್ಯವಹಾರ ನಡೆಸುವ ನಗರಗಳಾಗಿ ಕಾಣುತ್ತಿದ್ದವು. ಮಾರ್ಕೋಪೋಲೋ ಎಂಬ ವಿದೇಶೀ ಪ್ರವಾಸಿಗನು ತನ್ನ ಪ್ರವಾಸ ಕಥನದಲ್ಲಿ, 'ಈ ನಗರಗಳು ಬಹುಮಹಡಿಗಳಿಂದಲೂ, ಸುಂದರ ಮನೆಗಳಿಂದಲೂ ಎಲ್ಲರನ್ನೂ ಆಕರ್ಷಿಸುತ್ತದೆ' ಎಂದು ತಿಳಿಸಿದ್ದಾನೆ. ಒಂದನೇ ಶತಮಾನಕ್ಕೆ ಸೇರಿದ ಇಟಲಿಯ ಪ್ಲಿನಿ ಎಂಬುವವನು, ಈಜಿಪ್ಟಿನ ಮಹಾರಾಣಿ ಕ್ಲಿಯೋಪಾತ್ರ ಅಂದಿನ ಕೊರ್ಕೈ ಪ್ರದೇಶದಲ್ಲಿ ದೊರೆಯುತ್ತಿದ್ದ ಮುತ್ತುಗಳಿಂದ ಅಲಂಕರಿಸಿಕೊಳ್ಳುತ್ತಿದ್ದಳೆಂದು ಹೇಳುತ್ತಾರೆ. ಕೊರ್ಕೈ ಮುತ್ತಿನ ವಿಶೇಷತೆಗಳನ್ನು ಅರ್ಥಶಾಸ್ತ್ರದಲ್ಲಿಯೂ ತಿಳಿಸಲಾಗಿದೆ. ಆ ಕಾಲದ ಬಂದರುಗಳು ತಮಿಳುನಾಡಿನ ವಾಣಿಜ್ಯ ಸಂಪತ್ತು, ನಾಗರಿಕತೆಗಳ ಬೆಳವಣಿಗೆಯನ್ನು ತಿಳುಸುತ್ತದೆ'.

9th_Kannada_Reader Term II.indd 81 29-01-2019 16:32:51

ಹಡಗುಗಳು ಬಂದು ತಂಗಿ ಹೋಗುವ ಸ್ಥಳವೇ ಬಂದರು. ಇದು ಜಲ ಮಾರ್ಗ ಸಂಚಾರ ಸಾಧನವಾಗಿದೆ. ಪ್ರಾಚೀನ ತಮಿಳರು ಯುದ್ಧ ಮತ್ತು ವಾಣಿಜ್ಯ, ವ್ಯಾಪಾರ ಕಾರಣಕ್ಕಾಗಿ ಬಂದರುಗಳನ್ನು ಉಪಯೋಗಿಸುತ್ತಿದ್ದರು. ತಮಿಳುನಾಡಿನ ಬಂದರುಗಳು ಹೆಚ್ಚಾಗಿ ನದಿಗಳು ಬಂದು ಸಮುದ್ರವನ್ನು ಸೇರುವ ಸ್ಥಳಗಳಲ್ಲಿ ಸ್ವಾಭಾವಿಕವಾಗಿ ನಿರ್ಮಿಸಲ್ಪಟ್ಟಿವೆ.

ವಿಶ್ವವ್ಯಾಪ್ತಿಯಾಗಿ ಉತ್ಪಾದಿಸಿದ ವಸ್ತುಗಳನ್ನು ಬೇರೆ ದೇಶಗಳಿಗೆ ಸಾಗಿಸಲು ರಸ್ತೆಮಾರ್ಗ, ವಾಯುಮಾರ್ಗ ಹಾಗೂ ಜಲಮಾರ್ಗಗಳನ್ನು ಬಳಸುತ್ತಾರೆ. ಜಲಸಾರಿಗೆಗಳು ಬಹಳ ಕಡಿಮೆ ಖರ್ಚಿನ ಸಾರಿಗೆಗಳಾಗಿವೆ. ವೈಜ್ಞಾನಿಕ ಬೆಳವಣಿಗೆಯಿಂದ ಈ ಕಾಲದಲ್ಲಿ ದಿಕ್ಸೂಚಿಗಳ, ಉಪಗ್ರಹಗಳ ಸಹಾಯದಿಂದ ಸಮುದ್ರ ಪ್ರಯಾಣ(ಹಡಗು) ಮಾಡಬಹುದು. ಪ್ರಾಚೀನ ತಮಿಳುನಾಡು ಬಂಗಾಳಕೊಲ್ಲಿ, ಅರಬ್ಬೀ ಸಮುದ್ರ, ಹಿಂದೂ ಮಹಾಸಾಗರಗಳ ನಡುವಣ ಪ್ರದೇಶವಾಗಿತ್ತು. ಆ ಕಾಲದಲ್ಲಿ ತಮಿಳರು ಪೂರ್ವ ರಾಷ್ಟ್ರಗಳೊಡನೆಯೂ, ಪಾಶ್ಚಿಮಾತ್ಯ ರಾಷ್ಟ್ರಗಳೊಡನೆಯೂ ವ್ಯಾಪಾರ ಸಂಪರ್ಕ ಹೊಂದಿದ್ದರು. ಹಾಗೆಯೇ ಗ್ರೀಕರು, ರೋಮನ್ನರು ತಮಿಳುನಾಡಿಗೆ ವ್ಯಾಪಾರಕ್ಕಾಗಿ ಬಂದರು.

ಪ್ರಾಚೀನ ತಮಿಳುನಾಡು ಉತ್ತರ ವೇಂಗಡಂ(ತಿರುಪತಿ)ನಿಂದ ಕನ್ಯಾಕುಮಾರಿಯವರೆಗೆ ವ್ಯಾಪಿಸಿತ್ತು. ಕಾವೇರಿ ಪೂಂಪಟ್ಟಣಂ, ಅರಿಕಮೇಡು, ಕೊಲ್ಲಂದುರೈ, ಏಯಿರ್ ಪಟ್ಟಣಂ, ತೂಂಡಿ, ಮರುಂಗೈ, ಕೊರ್ಕೈ – ಇವು ಪ್ರಸಿದ್ಧವಾದ ಪೂರ್ವ ಕರಾವಳಿ ಬಂದರುಗಳು. ಮಂಗಳೂರು ನಗರವು, ಮಾಂದೈ, ಮುಸಿರಿ, ವೈಗರೈ, ವಿಳಿನಂ – ಪಶ್ಚಿಮ ಕರಾವಳಿಯ ಪಶ್ಚಿಮ ಬಂದರುಗಳಾಗಿವೆ.

ಮುಸಿರಿ

ತಮಿಳುನಾಡಿನ ಪಶ್ಚಿಮ ಕರಾವಳಿಯಲ್ಲಿ ಚೇರ ಅರಸರ ಆಡಳಿತಕ್ಕೊಳಪಟ್ಟ ಪ್ರಸಿದ್ಧ ಸ್ಥಳ ಮುಸಿರಿ ಬಂದರು. ಇದು ಪಶ್ಚಿಮ ಘಟ್ಟಗಳಲ್ಲಿ ಪ್ರಾರಂಭವಾದ ಪೆರಿಯಾರು ನದಿ ಸಮುದ್ರಕ್ಕೆ ಬಂದು ಸೇರುವ ಸ್ಥಳದಲ್ಲಿ ಉಂಟಾದ ಸ್ವಾಭಾವಿಕ ಬಂದರಾಗಿದೆ. ಚೇರರ ರಾಜಧಾನಿ 'ವಂಜಿ' ನಗರವು ಈ ನದಿಯ ದಡದಲ್ಲಿತ್ತು.

ಮುಸಿರಿ ಬಂದರಿನಲ್ಲಿ ಮೆಣಸು ರಫ್ತು ವಿಶೇಷವಾಗಿತ್ತು. ಯವನರು ಇಷ್ಟಪಟ್ಟು ಕೊಂಡುಕೊಳ್ಳುತ್ತಿದ್ದುದರಿಂದ ಮೆಣಸಿಗೆ 'ಯವನ ಪ್ರಿಯ' ಎಂಬ ಹೆಸರು ಬಂತು. ಇವರು ಹಡಗಿನಿಂದ ಚಿನ್ನ ತಂದುಕೊಟ್ಟು, ಮೆಣಸನ್ನು ಕೊಂಡುಕೊಳ್ಳುತ್ತಿದ್ದರೆಂದು ಹೇಳಲಾಗುತ್ತದೆ.

ಅರಬ್ಬಿಯನ್ನರು ಸಹ ಇಲ್ಲಿಯ ಮೆಣಸನ್ನು ಕೊಂಡು ಹೋಗಿ ಕೆಂಪು ಸಮುದ್ರ ಬಂದರುಗಳಲ್ಲೂ, ಈಜಿಪ್ಟಿನ ನೈಲ್ ನದಿ ಮತ್ತು ಅಲೆಕ್ಸಾಂಡ್ರಿಯಾ ಬಂದರಿನಲ್ಲೂ ವ್ಯಾಪಾರ ಮಾಡುತ್ತಿದ್ದರು. ಅಲ್ಲದೆ ಮುತ್ತುಗಳು, ಬೆಲೆ ಬಾಳುವ ಚಿನ್ನದ ಆಭರಣಗಳನ್ನೂ, ಸುಗಂಧ ದ್ರವ್ಯಗಳನ್ನೂ, ಬೆಲೆ ಬಾಳುವ ಕಲ್ಲುಗಳನ್ನೂ, ವಜ್ರ ಮಾಣಿಕ್ಯ, ದಂತ, ಚೀನಾದ ರೇಷ್ಮೆ, ಆಮೆ ಕವಚ ಮುಂತಾದವುಗಳನ್ನೂ ರಫ್ತು ಮಾಡುತ್ತಿದ್ದರು. ಹವಳ, ಗಾಜು, ತಾಮ್ರ, ತವರ, ಸೀಸ ಮುಂತಾದ ವಸ್ತುಗಳನ್ನು ಯವನ ದೇಶದವರಿಂದ ಆಮದು ಮಾಡಿಕೊಳ್ಳುತ್ತಿದ್ದರು.

ಸಮುದ್ರ ವ್ಯಾಪಾರ ಒಪ್ಪಂದಗಳ (ಒಡಂಬಡಿಕೆಗಳ) ಆಧಾರದ ಮೇಲೆ ನಡೆಯುತ್ತಿತ್ತು. ಉದಾಹರಣೆಗೆ, ಮುಸಿರಿ–ಅಲೆಗ್ಸಾಂಡ್ರಿಯಾ ಒಡಂಬಡಿಕೆ ಎಂಬುದು ಮುಸಿರಿಯ ತಮಿಳು ವ್ಯಾಪಾರಿಗೂ, ಈಜಿಪ್ಟಿನ ಅಲೆಗ್ಸಾಂಡ್ರಿಯಾ ನಗರದ ಗ್ರೀಕ್ ವ್ಯಾಪಾರಿಯ ನಡುವೆ ಏರ್ಪಟ್ಟ ಒಡಂಬಡಿಕೆಯಾಗಿದೆ. ಅದರ ಪ್ರಕಾರ ತಮಿಳು ವ್ಯಾಪಾರಿಯೊಬ್ಬನು ಹಡಗಿನಲ್ಲಿ ಒಂದು ಬಾರಿ ತೆಗೆದುಕೊಂಡು ಹೋದ ವಸ್ತುವಿನ ಬೆಲೆ 2,94,84,000 ಗ್ರಾಂ ಬೆಳ್ಳಿಯ ಬೆಲೆಗೆ ಸಮವಾದುದು ಎಂದು ಈ ಒಡಂಬಡಿಕೆಯಿಂದ ತಿಳಿಯುತ್ತದೆ. ಆ ಕಾಲದಲ್ಲಿ ಈಜಿಪ್ಟ್ ದೇಶ, ರೋಮನ್ನರ ಚಕ್ರಾಧಿಪತ್ಯಕ್ಕೆ ಒಳಪಟ್ಟಿತ್ತು.

9th_Kannada_Reader Term II.indd 82 29-01-2019 16:32:51

ಕಾವೇರಿ ಪೂಂಪಟ್ಟಣಂ

ಚೋಳರ ಆಡಳಿತಕ್ಕೊಳಪಟ್ಟ ಸ್ಥಳದಲ್ಲಿ ಕಾವೇರಿ ನದಿ ಬಂಗಾಳಕೊಲ್ಲಿಯನ್ನು ಬಂದು ಸೇರುವ ಸ್ಥಳದಲ್ಲಿ ಕಾವೇರಿ ಪೂಂಪಟ್ಟಣಂ ಎಂಬ ಸ್ವಾಭಾವಿಕ ಬಂದರು ಇದೆ.

ಕಾವೇರಿ ನದಿಯ ಈ ಭಾಗದ ಬಂದರು ಆಳವಾಗಿಯೂ, ಅಗಲವಾಗಿಯೂ ಅನೇಕ ಹಡಗುಗಳು ಬಂದು ತಂಗುವುದಕ್ಕೂ ಸೂಕ್ತವಾಗಿತ್ತು. ಹಡಗುಗಳು ಯಾವುದೇ ತೊಂದರೆಯಿಲ್ಲದೆ ಭಾರ ಕಡಿಮೆ ಮಾಡದೆ ನೇರವಾಗಿ ದಡದಿಂದ ಸಮುದ್ರಕ್ಕೆ ಹೋಗುವಂತೆ ಸ್ವಾಭಾವಿಕವಾಗಿತ್ತು. ಇಲ್ಲಿ ವಿಶಾಲವಾದ ಬೀದಿಗಳಲ್ಲಿ ಮುತ್ತು, ಮಾಣಿಕ್ಯ, ಸುಗಂಧ ದ್ರವ್ಯಗಳನ್ನೂ ಆಹಾರ ಪದಾರ್ಥಗಳನ್ನೂ, ದಂತಗಳನ್ನೂ, ಗಂಗಾ ಬಂದರಿನಿಂದ ತಂದ ವಸ್ತುಗಳನ್ನೂ, ಬೇರೆ ದೇಶಗಳಿಂದ ಆಮದಾದ ವಸ್ತುಗಳನ್ನೂ ರಫ್ತು ಮಾಡಲಾಗುತ್ತಿತ್ತು.

ಆ ಕಾಲದಲ್ಲಿ ಒಂದು ಬಂದರಿನಲ್ಲಿ ನಡೆಯುವ ಕಾರ್ಯ ಕೌಶಲಗಳನ್ನು ಲೆಕ್ಕ ಹಾಕುವುದಕ್ಕೂ ಹಡಗುಗಳು ಬರುವ ವೇಳೆ, ರಫ್ತು ಮತ್ತು ಆಮದು ಕೆಲಸಗಳನ್ನು ಮುಗಿಸಿ ಹೊರಡುವ ಸಮಯವನ್ನು ಲೆಕ್ಕ ಹಾಕಲಾಗುತ್ತಿತ್ತು. ಅದಕ್ಕಾಗಿ ಬಂದರಿನಲ್ಲಿ ಏಕಪಪದ್ಧತಿ ವ್ಯವಸ್ಥೆಯನ್ನೂ ಮಾಡಲಾಗಿತ್ತು. ರಫ್ತು ಮತ್ತು ಆಮದಾಗುವ ವಸ್ತುಗಳ ರಕ್ಷಣೆ ಮಾಡಲು ಶುದ್ಧವಾದ, ವಿಶಾಲವಾದ ಗೋದಾಮುಗಳನ್ನು ನಿರ್ಮಿಸಲಾಗಿತ್ತು. ಆ ವಸ್ತುಗಳಿಗೆ ಸುಂಕ ವಿಧಿಸಿ ವಸೂಲಿ ಮಾಡುತ್ತಿದ್ದರು ಎಂದೂ ತಿಳಿಸಲಾಗಿದೆ.

ಬೇರೆ ದೇಶಗಳಿಂದ ಬಂದ ವಸ್ತುಗಳು ಬೆಟ್ಟದಂತೆ ಕಾಣುತ್ತಿತ್ತು. ನಗರದಲ್ಲಿ ಕಾವಲು ಕಾಯುವ, ಸುಂಕ ವಸೂಲಿ ಮಾಡುವ ಚಾವಡಿಗಳಿರುತ್ತಿದ್ದವು. ಸುಂಕದ ಶುಲ್ಕವನ್ನು ತೆಗೆದುಕೊಂಡು ಆ ವಸ್ತುಗಳ ಮೇಲೆ ಚೋಳ ಸಾಮ್ರಾಜ್ಯದ ಲಾಂಛನವಾದ ಹುಲಿ ಚಿಹ್ನೆಯ ಮುದ್ರೆಯನ್ನು ಹಾಕಿ, ವಸ್ತುಗಳನ್ನು ರಫ್ತು ಮಾಡುತ್ತಿದ್ದರು ಎಂಬ ಮಾಹಿತಿಯೂ ದೊರಕುತ್ತದೆ.

ಮೊದಲ ಎರಡು ಶತಮಾನಗಳಲ್ಲಿ ರೋಮಾಪುರಿಯಿಂದ ಬಂದ ಯವನರುಗಳು ಪೂರ್ವ ದೇಶಗಳಿಂದ ಬಂದ ಜಾವ ದ್ವೀಪಗಳಿಂದ ಬಂದವರೂ ಮತ್ತು ಉತ್ತರ ಭಾರತೀಯರೂ ಇಲ್ಲಿ ವ್ಯಾಪಾರ ಮಾಡುತ್ತಿದ್ದರು. ಚೋಳ ರಾಜ್ಯದ ವರ್ತಕರು ಈ ಬಂದರುಗಳಿಂದ ಹೊರಟು ಜಾವಾ ದ್ವೀಪ, ಬರ್ಮಾ(ಮಾಯನ್ಮಾರ್), ಗಂಗಾ ಬಯಲು ಸ್ಥಳಗಳೊಂದಿಗೆ ವ್ಯಾಪಾರ ಮಾಡುತ್ತಿದ್ದರು.

ಕಾವೇರಿ ಪೂಂಪಟ್ಟಿಣಂನಲ್ಲಿ ಚೋಳರ ಕಾಲದಲ್ಲಿ ಶಿಲಪ್ಪದಿಗಾರಂ, ಮಣಿಮೇಘಲೈ ಎಂಬ ಕಾವ್ಯಗಳ ನಾಯಕರಾದ ಕೋವಲನ್, ಕಣ್ಣಗಿ, ಮಾಧವಿ, ಮಣಿಮೇಘಲೈ ಮುಂತಾದವರು ಕಿಳ್ಳಿವಳವನ್ ರಾಜಕುಮಾರನ ಆಡಳಿತದ ಕಾಲದಲ್ಲಿದ್ದರು ಎಂದು ಕಾವ್ಯಗಳು ತಿಳಿಸುತ್ತವೆ.

ಕೊರ್ಕೈ

ತಾಮ್ರಭರಣಿ ನದಿ ಸಮುದ್ರದಲ್ಲಿ ಸಂಧಿಸುವ ಸ್ಥಳದಲ್ಲಿ ನದಿಯ ಪಶ್ಚಿಮ ತೀರದಲ್ಲಿರುವ ಸ್ವಾಭಾವಿಕ ಬಂದರು ಕೊರ್ಕೈ.

ಪಾಂಡ್ಯ ರಾಜರುಗಳು ಈ ಬಂದರುಗಳಲ್ಲಿಯೇ ತಂಗಿ ಆಡಳಿತ, ಶಿಕ್ಷಣಗಳನ್ನು ಕಲಿಯುತ್ತಿದ್ದರು. ಪಾಂಡ್ಯರ ನೆಡುಂಚೆಳಿಯನ್‌ನ ಮರಣದ ನಂತರ ಕೊರ್ಕೈನಲ್ಲಿದ್ದ ರಾಜಕುಮಾರ ವೆಟ್ರಿವೇಲ್‌ಚೆಳಿಯನ್ ಮಧುರೈಗೆ ಬಂದು ಸಿಂಹಾಸನಾರೋಹಣ ಮಾಡಿದನು ಎಂಬ ವಿಷಯವನ್ನು ಶಿಲಪ್ಪದಿಕ್ಕಾರಂ ಕಾವ್ಯದಲ್ಲಿ ಕಾಣಬಹುದು. ಇದು ಪಾಂಡ್ಯರ ನೌಕಾಸೇನೆ ಇದ್ದ ಸ್ಥಳವಾಗಿತ್ತು.

ಅಲ್ಲಿಯ ಯುವಕರು ಸಮುದ್ರದ ಆಳಕ್ಕಿಳಿದು ಹೇರಳವಾದ ಮುತ್ತುಗಳನ್ನೂ ಬಲಮುರಿ ಶಂಖಗಳನ್ನೂ ತೆಗೆಯುತ್ತಿದ್ದರು ಎಂದು ಅಗನಾನೂರು ಗ್ರಂಥ ತಿಳಿಸುತ್ತದೆ.

ಕೊರ್ಕೈನಲ್ಲಿ ಮುತ್ತುಗಳೂ, ಕಪ್ಪೆಚಿಪ್ಪುಗಳೂ, ಶಂಖಗಳೂ ಹೇರಳವಾಗಿ ದೊರೆಯುತ್ತಿದ್ದವು. ಶ್ರೀಮಂತರು ಬರುವ ಕುದುರೆಗಳ ಕಾಲುಗಳಿಗೆ ಇವು

9th_Kannada_Reader Term II.indd 83 29-01-2019 16:32:51

ತಾಗುತ್ತಿದ್ದವು ಎಂದು ಶಾಸನಗಳು ಹೇಳುತ್ತವೆ.

ತಮಿಳುನಾಡಿನಲ್ಲಿದ್ದ ಸಂಗಂ ಯುಗದ ಕಾಲದಿಂದ ಪಾಂಡ್ಯ ರಾಜರವರೆಗೆ ಕೊರ್ಕೈ ಮುತ್ತುಗಳನ್ನು ರೋಂ ನಗರದವರು ಇಷ್ಟಪಟ್ಟು ತೆಗೆದುಕೊಳ್ಳುತ್ತಿದ್ದರು. ಪಾಂಡ್ಯ ರಾಜರು ರೋಂನ ಅಗಸ್ಟಸ್ ರಾಜನ ಆಸ್ಥಾನಕ್ಕೆ ಮುತ್ತುಗಳನ್ನು ಬಹುಮಾನವಾಗಿ ಕಳುಹಿಸುತ್ತಿದ್ದರು ಎಂಬುದಾಗಿ ಇತಿಹಾಸ ತಜ್ಞರಾದ ಸ್ಟ್ರಾಮೋ ತಿಳಿಸುತ್ತಾರೆ.

ಪಾಂಡ್ಯ ರಾಜರುಗಳು ಪ್ರತಿವರ್ಷ ಕೊರ್ಕೈ ಬಂದರಿನ ಮೂಲಕ ಸಾವಿರಾರು ಹಡುಗುಗಳಲ್ಲಿ 16,000 ಅರೇಬಿಯನ್ ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದರೆಂದು ಇತಿಹಾಸಕಾರರು ತಿಳಿಸಿದ್ದಾರೆ.

ಕೊರ್ಕೈ ಪಟ್ಟಣದಲ್ಲಿ ಪಾಂಡ್ಯರ ಟಂಕಸಾಲೆಗಳಲ್ಲಿ ನಾಣ್ಯಗಳನ್ನು ಮುದ್ರಿಸುವ ಕಾರ್ಯಾಗಾರಗಳು(ಕುಲುಮೆ) ಇದ್ದುವೆಂದು ತಿಳಿದು ಬಂದಿದೆ. ಕುಲುಮೆ ಕಾರ್ಮಿಕರ ಬೀದಿ ಕೂಡ ಇತ್ತು ಎಂದು ಇತಿಹಾಸಕಾರರು ಹೇಳುತ್ತಾರೆ. ಪಾಂಡ್ಯರು ಬಿಡುಗಡೆ ಮಾಡಿದ ಮೀನಿನ ಮುದ್ರೆಯಿರುವ ಬೆಳ್ಳಿ ನಾಣ್ಯಗಳು ಈ ಪ್ರದೇಶದಲ್ಲಿ ದೊರೆತಿವೆ.

ಚೇರ, ಚೋಳ, ಪಾಂಡ್ಯ ರಾಜರ ಆಡಳಿತಕ್ಕೊಳಪಟ್ಟ ಪೂರ್ವ ಕರಾವಳಿ, ಪಶ್ಚಿಮ ಕರಾವಳಿ ಬಂದರುಗಳು ಒಂದೊಂದು ವಿಶೇಷತೆಯನ್ನು ಪಡೆದುಕೊಂಡಿವೆ.

'ಯಾದುಂ ಊರೇ, ಯಾವರುಂ ಕೇಳಿರ್' ಯಾವುದೇ ಊರಾದರೂ ನಮ್ಮದೇ ಎಂಬ ವಿಶ್ವಮಾನವ ನೀತಿಯನ್ನು ಅಳವಡಿಸಿಕೊಂಡವರು ತಮಿಳರು. ತಮಿಳರು ಕಡಲು ವ್ಯಾಪಾರದ ಮೂಲಕ ಭೂಪ್ರದೇಶದಲ್ಲಿಯೂ, ಜಲಪ್ರದೇಶದಲ್ಲಿಯೂ ತಮ್ಮ ಸಂಪರ್ಕವನ್ನು (ಪರಂಪರೆಯನ್ನು) ಹಲವಾರು ಶತಮಾನಗಳಿಂದಲೂ ನಡೆಸಿಕೊಂಡು ಬಂದರೆಂದು ತಿಳಿಯುವುದಕ್ಕೆ ಈ ಬಂದರುಗಳು ಸಾಕ್ಷಿಯಾಗಿವೆ.

ಪದಗಳ ಅರ್ಥ

ವಾಣಿಜ್ಯ–ವ್ಯಾಪಾರ; ಬಂದರು–ಹಡಗು ನಿಲ್ಲುವ ಸ್ಥಳ; ಯವನರು–ಗ್ರೀಕ್ ದೇಶದವರು; ಕೊರ್ಕೈ–ಒಂದು ಬಂದರಿನ ಸ್ಥಳ; ಯವನಪ್ರಿಯ–ಮೆಣಸು; ಏಕಪಥ–ಒಂದು ದಾರಿ; ಟಂಕಸಾಲೆ–ನಾಣ್ಯಗಳನ್ನು ಮುದ್ರಿಸುವ ಸ್ಥಳ;

ತಿಳಿದುಕೊಳ್ಳಿರಿ	
ವಿದೇಶದಿಂದ ಸಮುದ್ರ ಮಾರ್ಗವಾಗಿ ಬಂದವು	ಕುದುರೆಗಳು
ಸ್ವದೇಶದಲ್ಲಿಯೇ ಭೂಮಾರ್ಗವಾಗಿ ಬಂದವು	ಮೆಣಸು
ಉತ್ತರ ಬೆಟ್ಟ ಪ್ರದೇಶದಿಂದ ಬಂದವು	ಮೆರಗುಗೊಳಿಸಲ್ಪಟ್ಟ ಚಿನ್ನ
ಪಶ್ಚಿಮ ಬೆಟ್ಟಗಳಿಂದ ಬಂದವು	ಶ್ರೀಗಂಧ
ದಕ್ಷಿಣ ಸಮುದ್ರದಿಂದ ದೊರೆತವು	ಮುತ್ತು
ಕೆಳ ಸಮುದ್ರದಲ್ಲಿ ದೊರೆತವು	ಹವಳ

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬಂದರು ಎಂದರೇನು ?
2. ತಮಿಳುನಾಡಿನ ಪೂರ್ವ ಕರಾವಳಿ ಬಂದರುಗಳು ಯಾವುವು ?
3. ತಮಿಳುನಾಡಿನ ಪಶ್ಚಿಮ ಕರಾವಳಿ ಬಂದರುಗಳು ಯಾವುವು ?

9th_Kannada_Reader Term II.indd 84 29-01-2019 16:32:51

4. ಪ್ರಾಚೀನ ತಮಿಳುನಾಡು ಎಲ್ಲಿಂದ ಎಲ್ಲಿಯವರೆಗೆ ಹರಡಿತ್ತು ?
5. ಯವನಪ್ರಿಯ ಎಂದರೇನು ?
6. ಮುಸಿರಿಯಿಂದ ರಫ್ತಾಗುತ್ತಿದ್ದ ವಸ್ತುಗಳಾವುವು ?
7. ಏಕಪಥ ಪದ್ಧತಿ ಎಂದರೇನು ?
8. ಕಾವೇರಿ ಪೂಂಪಟ್ಟಣಂ ಯಾವ ರಾಜರ ಆಡಳಿತಕ್ಕೊಳಪಟ್ಟಿತ್ತು ?
9. ಚೋಳರ ಕಾವ್ಯಗಳಾವುವು ?
10. ಕೊರ್ಕೈ ಯಾವುದಕ್ಕೆ ಪ್ರಸಿದ್ಧವಾಗಿತ್ತು ?
11. ಪುರಾತನ ತಮಿಳುನಾಡಿನ ರಾಜರುಗಳು ಯಾರು ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮುಸಿರಿ ಬಂದರಿನಿಂದ ರಫ್ತು ಮತ್ತು ಆಮದಾಗುತ್ತಿದ್ದ ವಸ್ತುಗಳಾವುವು?
2. ಪಾಂಡ್ಯ ರಾಜರುಗಳು ಯಾವ ದೇಶದಿಂದ, ಹೇಗೆ ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು?
3. ಪುರಾತನ ತಮಿಳುನಾಡಿನ ರಾಜರುಗಳನ್ನು ಹೆಸರಿಸಿ. ಅವರು ಆಳುತ್ತಿದ್ದ ಪ್ರದೇಶಗಳಾವುವು?
4. ಸಂಚಾರ ಸಾರಿಗೆಗಳಲ್ಲಿ ಎಷ್ಟು ವಿಧ? ಅವು ಯಾವುವು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಪ್ರಾಚೀನ ತಮಿಳುನಾಡಿನ ಬಂದರುಗಳಾವುವು? ಅವುಗಳ ವಿಶೇಷತೆಗಳೇನು ?
2. ಮುಸಿರಿ ಬಂದರು ಕುರಿತು ಟಿಪ್ಪಣಿ ಬರೆಯಿರಿ
3. ಕಾವೇರಿ ಪೂಂಪಟ್ಟಿಣಂ ಬಂದರು ಕುರಿತು ಟಿಪ್ಪಣಿ ಬರೆಯಿರಿ.
4. ಕೊರ್ಕೈ ಬಂದರಿನ ವಿಶೇಷತೆಗಳ ಬಗ್ಗೆ ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಆಕರ್ಷಣೆ, ಸ್ವದೇಶಿ, ರಫ್ತು, ಆಮದು, ದಡ, ವರ್ತಕ.

2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಚಕ್ರಾಧಿಪತ್ಯ, ಸೂಕ್ತವಾಗಿ, ಕೊಳ್ಳುತ್ತಿದ್ದರು, ಆಡಳಿತಕ್ಕೊಳಪಟ್ಟ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಪುರಾತನ, ಸ್ವಾಭಾವಿಕ, ಪ್ರಸಿದ್ಧ, ರಫ್ತು, ದಡ, ಶ್ರೀಮಂತ.

4. ಕೆಳಗಿನ ಪದಗಳನ್ನು ಉಪಯೋಗಿಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿ.

ಸಂಪರ್ಕ, ಲಾಂಛನ, ವರ್ತಕ, ಟಂಕಸಾಲೆ, ಕರಾವಳಿ, ಮುದ್ರೆ.

ಚಟುವಟಿಕೆ

1. ನಿಮಗೆ ಪಕ್ಕದಲ್ಲಿರುವ ವಾಣಿಜ್ಯ ಕೇಂದ್ರಗಳಿಗೆ ಭೇಟಿ ನೀಡಿ.

9th_Kannada_Reader Term II.indd 85 29-01-2019 16:32:51

ಕಾವ್ಯ ಕಣಜ

ಘಟಕ ಆರು

ಗಿರಣಿ ವಿಸ್ತಾರ ನೋಡಮ್ಮಾ

– ಶಿಶುನಾಳ ಶರೀಫ



ಬ್ರಿಟೀಷರ ಆಗಮನದಿಂದ ಭಾರತೀಯರ ಬದುಕು ಯಾಂತ್ರಿಕತೆಯ ಕಡೆಗೆ ವಾಲತೊಡಗಿತು. ಕ್ರಾಂತಿಯ ಉಚ್ಛಘಟ್ಟವೆನ್ನುವಂತೆ ಪ್ರತಿಯೊಂದು ಕಾಯಕವೂ ಯಂತ್ರಮಯವಾಯಿತು. ಉತ್ತರ ಕರ್ನಾಟಕದಲ್ಲಿ ಹತ್ತಿಯ ಗಿರಣಿಯಲ್ಲಿ ಜರುಗುವ ಕಾರ್ಯ ಚಟುವಟಿಕೆಗಳನ್ನು, ಕಣ್ಣಾರೆ ಕಂಡ ಶಿಶುನಾಳ ಶರೀಫರಿಗೆ ಅದಕ್ಕಿಂತ ದೈವ ನಿರ್ಮಿತವಾದ ಶರೀರ ಯಂತ್ರವೇ ಅದ್ಭುತವಾಗಿ ಕಂಡದ್ದರಿಂದ ಅದನ್ನು, ಕಾವ್ಯಮಯವಾಗಿ ಇಲ್ಲಿ ಬಣ್ಣಿಸಿದ್ದಾರೆ. ಹೊಸ ಆವಿಷ್ಕಾರಕ್ಕೆ ಸಮಕಾಲೀನ ಕವಿಯೊಬ್ಬ ಸ್ಪಂದಿಸುವ ರೀತಿ ಇಲ್ಲಿ ಅದ್ಭುತವಾಗಿ ಮೂಡಿ ಬಂದಿದೆ.



9th_Kannada_Reader Term II.indd 86 29-01-2019 16:32:51

ಗಿರಣಿ ವಿಸ್ತಾರ ನೋಡಮ್ಮಾ ಇದಕೆ
ಪರಾಕು ಮಾಡಮ್ಮಾ ‖ಪಲ್ಲವಿ‖
ಧರಣಿಪತಿ ಮಹಾರಾಣಿ ದೊರೆಗಳು
ಕರ್ನಾಟಕ ರಾಜ್ಯದಿ
ಮೆರೆಸಿದ ಮಹಾಚೋದ್ಯ ವಿದ್ಯ ಅರಿಯದಾಯಿತು ನರರಿಗೆಲ್ಲಾ ‖ಅನುಪಲ್ಲವಿ‖

ಜಲ ಅಗ್ನಿ ವಾಯು ಒಂದಾಗಿ
ಕಲೆತು ಚಂದಾಗಿ
ಜಲ ಅಗ್ನಿ ವಾಯು ಒಂದಾಗಿ
ನೆಲದಿಂದ ಗಗನಕ್ಕೆ ಮುಟ್ಟಿದಂತೆ ಕಾಂಬುದು
ಚಲುವ ಮಧ್ಯದ ಕಂಬವೋ, ಹೊಗಿ ಬಿಂಬವೋ ‖1‖

ಒಳಗೊಂದು ಬೇರೆ ಆಕಾರ
ತಿಳಕೋ ಚಮತ್ಕಾರ
ಒಳಗೊಂದು ಬೇರೆ ಆಕಾರ
ದಳಗಳೊಂಭತ್ತು ಚಕ್ರ ಸುಳಿವ ಸೂತ್ರದ ದಾರದಲ್ಲಿ
ಒಳಗೆ ಹೊರಗೆ ನವಕೊಳಿವೆಯೋ ಇದರೊಳಿವೆಯೋ ‖2‖

ಆಲಿಯೊಳಿಟ್ಟರಳಿ ಹಿಂಜಿ
ಅಲ್ಲಾದವೋ ಹಂಜಿ
ಆಲಿಯೊಳಿಟ್ಟರಳಿ ಹಿಂಜಿ
ಗಾಲಿಯೊಂದರ ಮೇಲೆ ಬ್ರಹ್ಮದ ಕೀಲ
ಮೂಲ ಸುಷುಮ್ನದಲಿ ಜೋಲುತಿರುವುದು ನಾಡಿ ಅಲ್ಲಾಯ್ತು ಕುಕ್ಕಡಿ ‖3‖

ಪರಬೊಮ್ಮನ ಪಟ್ಟವೋ ಅಲ್ಲೆ
ಪ್ರಾಣವನು ಮರೆತಿಟ್ಟವೊ
ಪರಬೊಮ್ಮನ ಪಟ್ಟವೊ
ಧರಣೀಲಿ ಶಿಶುವಿನಾಳ ದೇವಾಂಗ ಋಷಿಯಿಂದ
ನೇಸಿ ಹಚ್ಚಡ ಹೊಚ್ಚಿತೋ, ಲೋಕವೆಲ್ಲ ಮೆಚ್ಚಿತೋ ‖4‖

9th_Kannada_Reader Term II.indd 87 29-01-2019 16:32:51

ಕವಿ–ಕಾವ್ಯ ಪರಿಚಯ



ಶಿಶುನಾಳ ಶರೀಫ

ಶಿಶುನಾಳ ಶರೀಫ ಸಾಹೇಬರು (ಕ್ರಿ.ಶ. 1819–1889) ಕರ್ನಾಟಕದ ಕಬೀರ ಎಂದು ಕರೆಸಿಕೊಂಡ ಕನ್ನಡದ ಮಹಮದೀಯ ಸಂತಕವಿ. ಈತನ ಜನ್ಮಸ್ಥಳ ಧಾರವಾಡ ಜಿಲ್ಲೆಯ ಶಿಶುನಾಳ. ತಂದೆ: ಇಮಾಮ್ ಸಾಹೇಬ. ಗುರು: ಕಳಸದ ಗೋವಿಂದ ಭಟ್ಟರು. ಶರೀಫರು ಜಾತಿ ಮತಗಳ ಗಡಿಯನ್ನು ದಾಟಿ ನಿಂತ ಜನಪದ ಕವಿ, ದಾರ್ಶನಿಕ, ಸಮನ್ವಯಕಾರ. ಹರಿ–ಹರ–ಹಜರತ ತತ್ವಗಳ ತ್ರಿವೇಣೀ ಸಂಗಮವಾದ ಈತ ಉತ್ತರ ಕರ್ನಾಟಕದ ಜನಪ್ರಿಯ ಕವಿ, ಅನುಭಾವಿ, ಅವಧೂತ.

ಶರೀಫರ ಗೀತೆಗಳು ಮೇಲು ನೋಟಕ್ಕೆ ನಮ್ಮ ದೈನಂದಿನ ಬದುಕಿನ ಸಂಗತಿಗಳನ್ನು ನಿರೂಪಿಸುವಂತೆ ಕಾಣುತ್ತವೆ. ಆದರೆ ಅವುಗಳಿಗೆ ಬೇರೊಂದು ತಾತ್ವಿಕ ಅರ್ಥವೂ ಇರುತ್ತದೆ. ದಿನನಿತ್ಯದ ಸಂಗತಿಗಳು ಅವನ ಪದ್ಯಗಳಲ್ಲಿ ಆಧ್ಯಾತ್ಮದ ಮೆರುಗನ್ನು ಪಡೆದು ಪರಮಾರ್ಥ ದೃಷ್ಟಿಯ ರೂಪಕ ಪ್ರತಿಮೆಗಳಾಗಿ ಬಿಡುತ್ತವೆ.

ಹುಬ್ಬಳ್ಳಿಯಲ್ಲಿ ಹೊಸದಾಗಿ ಹತ್ತಿ ಗಿರಣಿಯು ಪ್ರಾರಂಭವಾದಾಗ ಅದರ ಉದ್ದನೆಯ ಹೊಗೆ ಕೊಳವೆ, ತಿರುಗುವ ಚಕ್ರ, ಹತ್ತಿಯನ್ನು ಹಿಂಜುವ ರೀತಿ – ಹೀಗೆ ಯಂತ್ರದ ಕಾರ್ಯಾಚರಣೆಯನ್ನು ಜನರು ಬೆರಗಾಗಿ ನೋಡಿದರು. ಮಾನವ ನಿರ್ಮಿತವಾದ ಈ ಯಂತ್ರಕ್ಕಿಂತ ಶರೀಫನಿಗೆ ದೈವನಿರ್ಮಿತವಾದ ಶರೀರ ಯಂತ್ರವೇ ಅದ್ಭುತವೆನಿಸಿತು. ಯಂತ್ರ ಕೇವಲ ಬಟ್ಟೆಯನ್ನು ಮಾತ್ರ ನೇಯುತ್ತದೆ. ಆದರೆ ಪರಮಾತ್ಮ ನೇಯುವ ದೇಹವೆಂಬ ಬಟ್ಟೆಗೆ ಜೀವವಿದೆ, ಜ್ಞಾನವಿದೆ ಎಂದು ಕವಿ ಭಾವಿಸುತ್ತಾನೆ. ಹೊಸ ಆವಿಷ್ಕಾರಕ್ಕೆ ಸಮಕಾಲೀನ ಕವಿಯೊಬ್ಬ ಹೇಗೆ ಸ್ಪಂದಿಸಿದ ಎಂಬುದು ಇಲ್ಲಿ ಗಮನಾರ್ಹವಾದದ್ದು.

ಪದಗಳ ಅರ್ಥ

ಪಲ್ಲವಿ: ಪರಾಕು ಮಾಡು–ಹೊಗಳು; ಧರಣಿಪತಿ ಮಹಾರಾಣಿ ದೊರೆಗಳು–ರಾಜನಂತೆಯೇ ಆಳುವ ವಿಕ್ಟೋರಿಯಾ ರಾಣಿ ಎನ್ನುವ ಚಕ್ರವರ್ತಿನಿ; ಚೋದ್ಯ–ಆಶ್ಚರ್ಯ; ಹರಿಯದಾಯಿತು–ತಿಳಿಯದೇ ಹೋಯಿತು.

1: ಜಲ ಅಗ್ನಿ ವಾಯು ಒಂದಾಗಿ... ಗಿರಣಿಯು ನೀರು, ಬೆಂಕಿ, ಗಾಳಿಗಳನ್ನು ಸ್ವೀಕರಿಸುತ್ತದೆ. ಅದರ ಹೊಗೆ ಕೊಳವೆಯು ಭೂಮಿ ಆಕಾಶಗಳಿಗೆ ಸಂಪರ್ಕ ಕಲ್ಪಿಸಿದಂತೆ ಕಾಣುತ್ತದೆ. ದೇಹವೂ ಕೂಡ ಪಂಚಭೂತಗಳಿಂದ ನಿರ್ಮಿತವಾಗಿದೆ. ದೇಹವೇ ಕಂಬ, ಆತ್ಮವೇ ಬಿಂಬ.

2: ಹೊರಗೆ ಒಂಬತ್ತು ದಳದ ಚಕ್ರ, ಒಳಗೆ ಒಂಬತ್ತು ದಾರ ಹರಿದು ಬರುವ ಕೊಳವೆಗಳು – ಇದು ಯಂತ್ರದ ಸ್ವರೂಪ. ದೇಹವೆಂಬ ಯಂತ್ರಕ್ಕೆ ಹೊರಗೆ ನವ ದ್ವಾರಗಳು, ಒಳಗೆ ಷಟ್ಚಕ್ರಗಳು.

3: ಆಲಿ–ಯಂತ್ರದಲ್ಲಿ ಹತ್ತಿ ತುಂಬುವ ಭಾಗ; ಅರಳಿ/ಅರಳೆ–ಬೀಜ ತೆಗೆದ ಹತ್ತಿ; ಹಂಜಿ–ಶುದ್ಧಗೊಳಿಸಿದ ಹತ್ತಿಯ ಸುರುಳಿ, ಹತ್ತಿಯನ್ನು ಯಂತ್ರವು ಹಿಂಜಿ ಹಂಜಿಯನ್ನಾಗಿ ಮಾಡುತ್ತದೆ, ಅನಂತರ ನೂಲಿನ ಉಂಡೆಯಾಗಿ ಅದು ಹೊರಬರುತ್ತದೆ; ಕುಕ್ಕಡಿ–ನೂಲಿನ ಉಂಡೆ; ಯಂತ್ರದ ಗಾಲಿಯನ್ನು ನಿಯಂತ್ರಿಸುವ ಸಾಧನವಾದ ಕೀಲು ಚಕ್ರದ ಮೇಲಿದೆ–ಹೀಗೆಯೇ ದೈಹಿಕ ಕ್ರಿಯೆಗಳನ್ನು ನಿಯಂತ್ರಿಸುವ ಜ್ಞಾನದ ಕೀಲು ನೆತ್ತಿಯಲ್ಲಿದೆ, ಇದೇ ಸುಷುಮ್ನ ನಾಡಿ.

9th_Kannada_Reader Term II.indd 88 29-01-2019 16:32:51

ಬಟ್ಟೆ ಗಿರಣಿಯ ಸೃಷ್ಟಿ : ದೇಹ ಬ್ರಹ್ಮ ನೇಯ್ದ ಬಟ್ಟೆ. ಇದರಲ್ಲಿ ಜ್ಞಾನವನ್ನೂ, ಪ್ರಾಣವನ್ನೂ ದೇವರು ಇರಿಸಿದ್ದಾನೆ. ದೇವರೇ ಒಬ್ಬ ನೇಕಾರ. ಅವನು ದೇಹವೆಂಬ ಬಟ್ಟೆಯನ್ನು ಲೋಕ ಮೆಚ್ಚುವಂತೆ ನೇಯುತ್ತಾನೆ.

4: ಪರಬೊಮ್ಮ–ಪರಬ್ರಹ್ಮ, ದೇವರು; ಪಟ್ಟ–ಬಟ್ಟೆ; ದೇವಾಂಗ–ನೇಕಾರ; ಹಚ್ಚಡ–ಹೊದೆಯುವ ಬಟ್ಟೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕರ್ನಾಟಕ ರಾಜ್ಯಕ್ಕೆ ಗಿರಣಿಯನ್ನು ತರಿಸಿದವರು ಯಾರು ?
2. ಗಿರಣಿಯ ಕಂಬ ಹೇಗೆ ಕಾಣುತ್ತದೆ ?
3. ಗಿರಣಿಯ ಚಕ್ರಕ್ಕೆ ಎಷ್ಟು ದಳಗಳಿವೆ ?
4. ಅರಳೆಯನ್ನು ಹಿಂಜಿದರೆ ಏನಾಗುತ್ತದೆ ?
5. ದೈಹಿಕ ಚಟುವಟಿಕೆಗಳನ್ನು ನಿಯಂತ್ರಿಸುವ ಕೀಲು ಯಾವುದು ?
6. ದೇವರು ನೇಯ್ದ ಬಟ್ಟೆ ಯಾವುದು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿ ಶರೀಫರು ಹೇಳುವ ಅಚ್ಚರಿಯ ಸಂಗತಿ ಯಾವುದು ?
2. ದೇಹ ಮತ್ತು ಗಿರಣಿ ಇವು ಪಂಚಭೂತಗಳಿಂದ ಹೇಗೆ ಕೂಡಿವೆ ?
3. ಗಿರಣಿ ಮತ್ತು ದೇಹ ಇವುಗಳ ಒಳ ಹೊರಗು ಹೇಗಿವೆ ?
4. ಯಂತ್ರ ನೇಯುವ ಬಟ್ಟೆಗೂ, ಬ್ರಹ್ಮ ನೇಯುವ ಬಟ್ಟೆಗೂ ಇರುವ ವ್ಯತ್ಯಾಸವೇನು?
5. ದೇವರೇ ಒಬ್ಬ ನೇಕಾರ ಹೇಗೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ದೇಹ ಮತ್ತು ಗಿರಣಿ – ಇವುಗಳಲ್ಲಿರುವ ಸಮಾನಾಂಶಗಳು ಯಾವುವು ?
2. ಗಿರಣಿ ಯಂತ್ರ ಬಟ್ಟೆ – ಇವುಗಳಿಗೂ ದೇಹಕ್ಕೂ ಕವಿ ಹೇಗೆ ಸಂಬಂಧ ಕಲ್ಪಿಸಿದ್ದಾನೆ ?
3. ಮಾನವ ನಿರ್ಮಿತ ಯಂತ್ರಕ್ಕಿಂತ ದೈವ ನಿರ್ಮಿತವಾದ ದೇಹವೆಂಬ ಯಂತ್ರವೇ ಹೆಚ್ಚು ಅಚ್ಚರಿಗೊಳಿಸುಂತಹದ್ದು. ಹೇಗೆ ?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ವಿಸ್ತಾರ, ವಿದ್ಯಾ, ಅಗ್ನಿ, ಕಂಬ, ಬೊಮ್ಮ, ಶಿಶು, ಋಷಿ, ಲೋಕ, ಪ್ರಾಣ.

2. ಕೆಳಗಿನ ಪದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

ಚಂದಾಗಿ, ಕಾಂಬುದು, ಹೊಗಿ, ತಿಳಕೋ, ನೇಸಿ.

3. ಕೆಳಗಿನ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಧರಣಿ, ದೊರೆ, ನರ, ಗಗನ.

4. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ನರರಿಗೆಲ್ಲಾ, ಒಂದಾಗಿ, ನೆಲದಿಂದ, ಒಳಗೊಂದು, ಪ್ರಾಣವನ್ನು, ದೇವಾಂಗ, ಲೋಕವೆಲ್ಲಾ.

ಚಟುವಟಿಕೆ

1. ಶಿಶುನಾಳ ಶರೀಫರ ಗೀತೆಗಳನ್ನು ಧ್ವನಿ ಸುರುಳಿಗಳಲ್ಲಿ ಕೇಳಿ ಆನಂದಿಸಿ.
2. ಶಿಶುನಾಳ ಶರೀಫರ ಜೀವನ ಚರಿತ್ರೆಗೆ ಸಂಬಂಧಿಸಿದ ಕೃತಿಗಳನ್ನು ಓದಿ ತಿಳಿಯಿರಿ.



9th_Kannada_Reader Term II.indd 89 29-01-2019 16:32:52

ಘಟಕ ಆರು

ಪೂರಕ ಪದ್ಯ

ಕಾಡಿದ್ದರೆ ನಾಡು

–ಎಚ್.ಆರ್.ಲೀಲಾವತಿ

ಕಾಡ ನಾಶವೇ ನಮ್ಮ ನಾಶವು
ಕಾಡ ಕಡಿಯಲು ಬೇಡಿರೋ
ಕಾಡಿನಿಂದಲೇ ಮಳೆಯು ಬೆಳೆಯು
ಕಾಡನುಳಿಸಿ ಬೆಳೆಸಿರೋ.

ಹಸಿರೆ ನಮ್ಮಯ ಬಾಳಿನುಸಿರು
ಹಸಿರೆ ನಮ್ಮಯ ಅನ್ನವು
ಹಸಿರೆ ನಮ್ಮಯ ಬಟ್ಟೆ ಬರೆಯು
ಹಸಿರೆ ನಮಗಾಧಾರವು.

ಹಸಿರೆ ಇಲ್ಲದ ಮರಳುಗಾಡು
ಉರಿವ ಬಿಸಿಲಿನ ಬೆಂಕಿಯೋಡು
ನೀರಿನೊರತೆಯೆ ಇರದ ನಾಡು
ಬರದ ಕ್ಷಾಮದ ಬೋಳು ಬೀಡು.

ಮರದ ಬುಡಕೆ ಕೊಡಲಿ ಹಾಕುತ
ಕಾಡ ನಾಶವ ಮಾಡಬೇಡಿರಿ
ಕಾಡನುಳಿಸಿ ನೀವು ಉಳಿಯಿರಿ
ಸುಖವ ಶಾಂತಿಯ ಪಡೆಯಿರಿ.

ಅಭ್ಯಾಸ

ಪದಗಳ ಅರ್ಥ

ನಾಶ–ಅಳಿವು, ಹಾಳು; ಉಸಿರು–ಪ್ರಾಣ, ಮರಳುಗಾಡು–ಮರುಭೂಮಿ, ಕೇವಲ ಮರಳಿನಿಂದ ತುಂಬಿರುವ ಪ್ರದೇಶ; ಬುಡ–ತಳ; ಒರತೆ–ನೀರಿನ ಚಿಲುಮೆ; ಕ್ಷಾಮ–ಮಳೆಯಿಲ್ಲದ ಸಮಯ.

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಯಾವುದರಿಂದ ಮಳೆ ಬೆಳೆ ಬರುವುದು?
2. ಯಾವುದು ನಮ್ಮ ಉಸಿರು?
3. 'ಬರದ ನಾಡು' ಹೇಗಿದೆ ? ಕವಿಯ ಮಾತಿನಲ್ಲಿ ಹೇಳಿ.
4. ಕಾಡಿದ್ದರೆ ನಾಡು ಪದ್ಯದಲ್ಲಿ ಕವಯಿತ್ರಿ ನೀಡುವ ಸಂದೇಶವೇನು?

9th_Kannada_Reader Term II.indd 90 29-01-2019 16:32:52

ಉಪಪಠ್ಯ

ಘಟಕ ಆರು

ಸಂತೆ



ಎತ್ತಿನ ಗಾಡಿಗಳಲ್ಲಿ ಸಾಮಾನುಗಳನ್ನು ಹೇರಿಕೊಂಡು, ಝಲ್‌ಝಲ್ ಎಂದು ತಾಳಬದ್ಧವಾಗಿ ಎತ್ತುಗಳು ಸಾಲುಸಾಲಾಗಿ ಸಾಗುವ ದೃಶ್ಯ ಇಂದು ಕಣ್ಮರೆಯಾಗುತ್ತಿದೆ. ಆದರೂ ಕೆಲವು ಹಳ್ಳಿಗಳಲ್ಲಿ ವಾರ ಸಂತೆಯ ಕ್ರಮ ಜಾರಿಯಲ್ಲಿದೆ. ಇಂದು ಸೂಪರ್ ಮಾರ್ಕೆಟ್‌ಗಳ ಆಗಮನದಿಂದಾಗಿ ವರ್ತಕ–ಜನತೆಯ ನಡುವಿನ ಸಂಬಂಧ ಕುಂಠಿತವಾಗಿದೆ. ಹಿಂದೆ ಸಂತೆಯಲ್ಲಿ ವ್ಯಾಪಾರ ಮಾತ್ರವಲ್ಲ; ವ್ಯಾಪಾರೀ–ಗ್ರಾಹಕರೊಂದಿಗಿನ ಮನಸ್ಸೂ ಒಂದುಗೂಡುತ್ತಿತ್ತು. ತಲೆತಲಾಂತರದಿಂದ ವರ್ತಕ ಹಾಗೂ ಗ್ರಾಹಕರ ನಡುವೆ ಇದ್ದ ಸಂಬಂಧದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ.



ಭೈರಪ್ಪನ ಹಳ್ಳಿ ನೂರಾರು ಕೃಷಿಕರು ಬಾಳುವ ಅಂದದ ಊರು. ಆ ಹಳ್ಳಿಯಿಂದ ವೀರಪ್ಪನು ತನ್ನ ಮಗಳು ಸುಶೀಲೆ ವಾಸಿಸುವ ನಗರಕ್ಕೆ ಬಂದಿದ್ದ. ವೀರಪ್ಪ ಸಾವಯವ ಕೃಷಿಕ. ತನ್ನ ಗ್ರಾಮದ ಪಂಚಾಯಿತಿ ಸದಸ್ಯನಾಗಿಯೂ ಕಾರ್ಯ ನಿರ್ವಹಿಸಿದ್ದ. ನಗರದಲ್ಲಿ ಆತ ಒಂದು ದಿನ ತನ್ನ ಮೊಮ್ಮಗ, ಮೊಮ್ಮಗಳೊಂದಿಗೆ ನಗರ ಸುತ್ತಾಟಕ್ಕೆ ಹೊರಟ.

ಮೊದಲ ಬಾರಿಗೆ ವೀರಪ್ಪ ನಗರ ಕಂಡಿದ್ದ! ಮಕ್ಕಳು ಒಂದು ದೊಡ್ಡ ಮಾಲ್ ಅನ್ನು ತೋರಿಸಿ, ಅದರೊಳಕ್ಕೆ ಆತನನ್ನು ಕರೆದುಕೊಂಡು ಹೋದರು. ವೀರಪ್ಪ ಅದನ್ನು ನೋಡಿ ಆಶ್ಚರ್ಯ ಪಟ್ಟ. ಎಲ್ಲಾ ವಸ್ತುಗಳನ್ನೂ ಒಳಗೊಂಡಿರುವ ದೊಡ್ಡ ಕಟ್ಟಡವನ್ನು ಕಂಡು ಆತ ದಿಗ್ಭ್ರಮೆಗೊಳಗಾದ!

'ತಾತಾ... ! ಏಕೆ ಹೀಗೆ ನೋಡುವೆ ? ಇಲ್ಲಿ ಗುಂಡು ಸೂಜಿಯಿಂದ ಹಿಡಿದು ಕಂಪ್ಯೂಟರ್‌ವರೆಗೆ

9th_Kannada_Reader Term II.indd 91 29-01-2019 16:32:52

ಎಲ್ಲಾ ದೊರೆಯುತ್ತವೆ. ನಮಗೆ ಬೇಕಾದ ಎಲ್ಲಾ ವಸ್ತುಗಳನ್ನೂ ಇಲ್ಲೇ ಕೊಳ್ಳಬಹುದು ತಾತಾ' ಎಂದು ಮಕ್ಕಳು ಹೇಳಿದರು.

ಅದಕ್ಕೆ ವೀರಪ್ಪ, 'ಮೊಮ್ಮಕ್ಕಳೇ, ನಮ್ಮ ಹಳ್ಳಿಗಳಲ್ಲೂ ವಾರ ಸಂತೆಗಳು ನಡೆಯುತ್ತವೆ. ನಮಗೆ ಬೇಕಾದ ಎಲ್ಲಾ ವಸ್ತುಗಳನ್ನೂ ಅಂದು ಒಂದೇ ದಿನ ಅಲ್ಲಿ ನಾವು ಖರೀದಿಸಬೇಕು. ಮತ್ತೆ ಬೇಕೆಂದರೆ ಮುಂದಿನ ವಾರದ ತನಕ ಕಾಯಬೇಕು. ಆದರೆ ನಗರಗಳಲ್ಲಿ ದಿನದ 24 ಗಂಟೆಗಳೂ ಸಂತೆಯೇ' ಎಂದು ಆತ ನಕ್ಕ.

'ತಾತಾ...! ನೀವು ಬೀದಿ ಸಂತೆಗಳ ಬಗ್ಗೆ ಹೇಳುತ್ತಿದ್ದೀರಲ್ಲವೇ...! ಆದರೆ ಈ ಮಾಲ್‌ಗಳು ಹಾಗಲ್ಲ. ಇದರೊಳಗೆ ಅಂಗಡಿ ಮುಂಗಟ್ಟುಗಳ ಜೊತೆ ಸಿನಿಮಾ, ಥಿಯೇಟರ್, ಕ್ರೀಡೆ, ವಿವಿಧ ಬಗೆಯ ತಿನಿಸಿನ ಅಂಗಡಿಗಳು, ಪುಸ್ತಕಾಲಯ ಮುಂತಾದ ಎಲ್ಲಾ ಥರದ ಮನೋರಂಜನೆಗಳೂ ಇರುತ್ತವೆ. ಒಂದು ರೀತಿಯಲ್ಲಿ ಇದನ್ನು ದೊಡ್ಡ ಸಂತೆ ಎಂದೇ ಹೇಳಬಹುದು ತಾತಾ' ಎಂದವು ಮಕ್ಕಳು. ಒಟ್ಟಿನಲ್ಲಿ ನಮ್ಮೂರಲ್ಲಿರುವ ಸಂತೆಗಳೇ ಇಂದು ನಗರಗಳಲ್ಲಿ 'ಮಾಲ್' ಎಂದು ನಾಮಕರಣಗೊಂಡಿವೆ ಎಂದು ಮೊಮ್ಮಕ್ಕಳು ವಿವರಿಸುತ್ತಿದ್ದವು. ಮೊಮ್ಮಕ್ಕಳ ಮಾತುಗಳನ್ನು ಕೇಳುತ್ತಲೇ ವೀರಪ್ಪ ಪ್ರಾಚೀನ ಕಾಲದತ್ತ ತನ್ನ ನೆನಪನ್ನು ಹರಿಸಿದ...

ಊರೂರು ಸುತ್ತುತ್ತಾ ಬದುಕನ್ನು ಸಾಗಿಸುತ್ತಿದ್ದ ಮಾನವ ಮುಂದೆ ಒಂದೇ ಊರಿನಲ್ಲಿ ಮನೆ ಮಠಗಳನ್ನು ಕಟ್ಟಿಕೊಂಡು ತನಗೆ ಬೇಕಾದ ಎಲ್ಲಾ ವಸ್ತುಗಳನ್ನೂ ಅಲ್ಲೇ ಸುತ್ತಮುತ್ತ ಭೂಮಿಯಲ್ಲಿ ಬೆಳೆಯತೊಡಗಿದ. ತನ್ನ ಮಣ್ಣಿನಲ್ಲಿ ಏನು ಫಲ ಸಿಗುವುದೋ ಅದನ್ನು ಬೆಳೆಸಿ ಮಾರುವುದು, ಅವಶ್ಯಕ ಸಾಮಾನುಗಳು ಬೇರೆಲ್ಲಿ ಸಿಗುವುದೋ ಅಲ್ಲಿ ಕೊಂಡುಕೊಳ್ಳುವುದು ಹೀಗೆ ಕೊಡು–ಕೊಳ್ಳುವ ವ್ಯಾಪಾರ ಆರಂಭಿಸಿದ. ಅದು ಬೆಳವಣಿಗೆ ಹೊಂದಿ ಮುಂದೊಂದು ದಿನ ಸಂತೆಯಾಯಿತು. ಇಂದು ಅದೇ ನಗರಗಳಲ್ಲಿ ಮಾಲ್ ಎಂಬ ಹೆಸರಿನಿಂದ ಬೃಹತ್ ರೂಪ ಪಡೆದಿದೆ ಎಂದು ಯೋಚಿಸಿದ.

ಆ ಸಂದರ್ಭದಲ್ಲಿ ಮೊಮ್ಮಕ್ಕಳು, 'ತಾತಾ!' ಎನ್ನುತ್ತಾ ಕಟ್ಟಡದ ಎದುರಿಗಿರುವ ದೊಡ್ಡದೊಡ್ಡ ಜಾಹಿರಾತು ಫಲಕಗಳನ್ನೂ, ನಿರ್ಜೀವ ಬೊಂಬೆಗಳನ್ನೂ ತೋರಿಸಿದಾಗ, ವೀರಪ್ಪನಿಗೆ ಮತ್ತೆ ಅಂದಿನ ಸಂತೆಯ ನೆನಪಾಗತೊಡಗಿತು. ಜಾಹೀರಾತು ಇಲ್ಲದೆ ವ್ಯಾಪಾರ ಇಲ್ಲ ಎನ್ನುವ ಇಂದಿನ ತತ್ವಕ್ಕೆ ತಲೆದೂಗಿದ. ಎಲ್ಲವೂ ವ್ಯಾಪಾರೀಕರಣವಾಗಿರುವುದು ಅರಿವಾಯಿತು. 'ಎಲ್ಲವೂ ಝಣಝಣ! ಹಣ! ಹಣ!' ಎಂದು ಹಲುಬಿದ. ಹಳ್ಳಿಯ ಸಂತೆಯ ಮಹತ್ವ ಇಲ್ಲಿಲ್ಲ. ಮಾನವೀಯ ಸಂಬಂಧಗಳು ಇಲ್ಲಿ ನಶ್ವರ! 'ನಗರೀಕರಣವೇ? ವ್ಯಾಪಾರೀಕರಣವೇ?' ಎಂದು ಗೊಂದಲಕ್ಕೀಡಾದ.

ಭೈರಪ್ಪನ ಹಳ್ಳಿಯಲ್ಲಿ ನಡೆಯುವ ಶನಿವಾರದ ಸಂತೆಯ ವೈಭವ ವೀರಪ್ಪನ ಕಣ್ಣ ಮುಂದೆ ಕುಣಿಯಿತು. ಸುತ್ತಮುತ್ತಲಿನ ರೈತರು ಹಳ್ಳಿಗಳಿಂದ ತಾವು ಬೆಳೆದ ಧಾನ್ಯಗಳನ್ನೂ, ತರಕಾರಿಗಳನ್ನೂ ಕುಲಕಸುಬುದಾರರು ತಾವು ಹೆಣೆದ ಬುಟ್ಟಿ, ಮರದ ಸಾಮಾನುಗಳನ್ನೂ ಕತ್ತಿ, ಹಾರೆ, ಮಡಕೆ ಮುಂತಾದ ವಸ್ತುಗಳನ್ನೂ ಎತ್ತಿನ ಬಂಡಿಗಳಲ್ಲಿ ಹೇರಿಕೊಂಡು ಬರುವ ಚಿತ್ರ ಕಣ್ಣ ಮುಂದೆ ಬಂತು.

ಬಂದವರೆಲ್ಲರೂ ಸಂತೆ ಮಾಳದಲ್ಲಿ ಸೇರುತ್ತಿದ್ದುದು, ಅಂಗಡಿಗಳ ಸಾಲುಸಾಲುಗಳು, ಒಂದೆಡೆ ಧಾನ್ಯಗಳ, ತರಕಾರಿಗಳ ಅಂಗಡಿಗಳು; ಇನ್ನೊಂದೆಡೆ ಹೂ ಹಣ್ಣುಗಳ ಅಂಗಡಿಗಳು; ಮತ್ತೊಂದೆಡೆ ಬಳೆ, ಬಟ್ಟೆ, ವಿವಿಧ ಬಗೆಯ ಆಟದ ಸಾಮಾನುಗಳು... ಸಂತೆಯೆಂದರೆ ಗದ್ದಲ, ಗಡಿಬಿಡಿ. ಸೇರಿದ ಜನತೆಯಲ್ಲಿ ಮಾರುವ ಮತ್ತು ಕೊಳ್ಳುವ ಆತುರ... ರೈತರು ತಾವು ಬೆಳೆದ ಕಾಳು–ಕಡ್ಡಿ, ತರಕಾರಿಗಳನ್ನು ಮಾರುತ್ತಾರೆ. ಬಂದಿರುವ ಜನರು ತಮ್ಮ ಮನೆಗಳಿಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ. ಎಲ್ಲೆಲ್ಲೂ ಚರ್ಚೆ, ಮಾತುಗಳ ಕಿರುಚಾಟ. ಜೊತೆಗೆ ತಮ್ಮತಮ್ಮ ಕುಟುಂಬಗಳ ಕಷ್ಟಸುಖಗಳ ಸಂಭಾಷಣೆಗಳೂ ನಡೆಯುತ್ತಿದ್ದವು.

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಒಂದೆರಡು ಅಂಗಡಿಗಳು ಇರುತ್ತಿದ್ದವಾದರೂ, ದಿನಬಳಕೆಯ ಎಲ್ಲಾ ಸಾಮಾನುಗಳೂ ಅಲ್ಲಿ ದೊರೆಯುತ್ತಿರಲಿಲ್ಲ. ಅದಕ್ಕಾಗಿಯೇ ಊರಿನ ಜನತೆ ಒಂದೆಡೆ ಸೇರಿ ಸಂತೆ

9th_Kannada_Reader Term II.indd 92 29-01-2019 16:32:52

ಕಟ್ಟೆಗಳನ್ನು ಆರಂಭಿಸಿ ಅಕ್ಕಪಕ್ಕದ ಊರುಗಳಿಂದಲೂ ಸಾಮಾನುಗಳನ್ನು ತರಿಸಿ ಮಾರುವ–ಕೊಳ್ಳುವ ವ್ಯಾಪಾರ ಸಂತೆಯ ಹೆಸರಿನಲ್ಲಿ ಆರಂಭವಾಯಿತು. ಮುಂದೆ ಪ್ರಾಣಿಗಳನ್ನು ಮಾರುವ ಜಾನುವಾರು ಸಂತೆಗಳೂ ಪ್ರಾರಂಭವಾದವು. ಕ್ರಮವಾಗಿ ಸಂತೆಯಲ್ಲಿ ಮನೋರಂಜನೆಗೂ ಸ್ಥಾನ ಸಿಕ್ಕಿತು. ಹಾವಾಡಿಗರು, ಕರಡಿ ಕುಣಿಸುವವರು, ಡೋಲು ಮುಂತಾದ ವಾದ್ಯ ಬಾರಿಸುವವರು, ಸರ್ಕಸ್, ಜಾದೂ, ಕೀಲುಗೊಂಬೆ ಮುಂತಾದ ಮನೋರಂಜನೆಗಳೂ ಹಳ್ಳಿಗರಿಗೆ ದೊರೆಯಲಾರಂಭಿಸಿತು.

ಅಂತೂ ಊರ ಜನತೆ ವಾರದ ಸಂತೆ ಮುಂದೆಂದು ಬರುವುದೋ ಎಂದು ಕಾಯುತ್ತಿದ್ದರು. ಏಕೆಂದರೆ ಜನತೆಗೆ ಬೇಕಾದ ವಸ್ತುಗಳು ಅಲ್ಲಿ ದೊರೆಯುತ್ತಿದ್ದವು. ವ್ಯಾಪಾರದ ಮೂಲಕ ರೈತ, ಕಸುಬುದಾರರ ಶ್ರಮಕ್ಕೆ ಅಲ್ಲಿ ಪ್ರತಿಫಲ ಸಿಕ್ಕರೆ; ಮಕ್ಕಳಿಗೆ ಮನೋರಂಜನೆಯೂ ದೊರೆಯುತ್ತಿತ್ತು. ಈ ಎಲ್ಲದರ ಜೊತೆಗೆ ಮನಸ್ಸು ಮನಸ್ಸುಗಳ ಹೊಂದಾಣಿಕೆ ಅಲ್ಲಿ ಕಾಣುತ್ತಿತ್ತು. ಇವೆಲ್ಲವೂ ನಗರಗಳಲ್ಲಿಲ್ಲವೆಂದು ಅಂದುಕೊಂಡ ವೀರಪ್ಪ 'ಮಾಲ್‌ಗಳು ನಿರ್ಜೀವ ಸಂತೆಕಟ್ಟೆ'ಗಳು ಎಂದುಕೊಂಡು ಮನದೊಳಗೇ ನಕ್ಕ!

ಪದಗಳ ಅರ್ಥ

ಹೇರು–ಹೊರಿಸು; ತಲೆತಲಾಂತರ–ತಲೆಮಾರು; ನೀಟಾಗಿರುವ–ಅಚ್ಚುಕಟ್ಟಾಗಿರುವ; ಪ್ರತಿಫಲ–ಫಲಿತಾಂಶ; ಫಲ–ಲಾಭ; ಗೊಂದಲ–ಗಲಿಬಿಲಿ; ಜಾದೂ–ಮಾಯಾಜಾಲ; ಪರಿ–ರೀತಿ, ಸ್ಥಿತಿ; ಕಸುಬು–ಕೆಲಸ, ಉದ್ಯೋಗ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ವೀರಪ್ಪನು ಹಳ್ಳಿಯಲ್ಲಿ ಏನು ಮಾಡುತ್ತಿದ್ದನು ?
2. ಮೊಮ್ಮಕ್ಕಳು ವೀರಪ್ಪನನ್ನು ಎಲ್ಲಿಗೆ ಕರೆದುಕೊಂಡು ಹೋದರು ?
3. ವೀರಪ್ಪನು ನಗುತ್ತಾ ಏನೆಂದು ಹೇಳಿದನು ?
4. ಮಾಲ್‌ನ ಕುರಿತು ಮೊಮ್ಮಕ್ಕಳು ಏನು ಹೇಳಿದವು?
5. ವೀರಪ್ಪನ ಪ್ರಕಾರ ಸಂತೆಯು ಹೇಗೆ ಪ್ರಾರಂಭಗೊಂಡಿತು ?
6. ವೀರಪ್ಪನು ಗೊಂದಲಕ್ಕೀಡಾಗಲು ಕಾರಣವೇನು?
7. ಶನಿವಾರದ ಸಂತೆಯ ವೈಭವವನ್ನು ವಿವರಿಸಿ?
8. ಸಂತೆಯಲ್ಲಿ ಮಕ್ಕಳಿಗೆ ಯಾವ ಬಗೆಯ ಮನೋರಂಜನೆಗಳು ಸಿಗುತ್ತಿದ್ದವು ?
9. ಮಾಲ್‌ಗಳನ್ನು ನಿರ್ಜೀವ ಸಂತೆಕಟ್ಟೆಗಳೆಂದು ವೀರಪ್ಪನು ತೀರ್ಮಾನಿಸಲು ಕಾರಣವೇನು?

9th_Kannada_Reader Term II.indd 93 29-01-2019 16:32:52

ಘಟಕ ಆರು

ಸಂಸ್ಕೃತ ಸಂಧಿಗಳು

ಸಂಸ್ಕೃತ ಸಂಧಿಗಳನ್ನು ಸ್ವರ ಸಂಧಿಗಳು, ವ್ಯಂಜನ ಸಂಧಿಗಳೆಂದು ಎರಡು ರೀತಿಯಲ್ಲಿ ಗುರುತಿಸಬಹುದು.

ಸಂಸ್ಕೃತ ಸ್ವರ ಸಂಧಿಗಳು

ಸವರ್ಣದೀರ್ಘ ಸಂಧಿ

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಸ್ವರದ ದೀರ್ಘ ಸ್ವರವು ಬರುವುದನ್ನು ಸವರ್ಣದೀರ್ಘ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಸುರ+ಅಸುರ = ಸುರಾಸುರ (ಅ+ಅ=ಆ)

ಕವಿ+ಇಂದ್ರ = ಕವೀಂದ್ರ(ಇ+ಇ=ಈ)

ಗುರು+ಉಪದೇಶ = ಗುರೂಪದೇಶ (ಉ+ಉ=ಊ)

ಗುಣ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಇಈ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏಕಾರವೂ; ಉಊಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಓಕಾರವೂ; ಋಕಾರವು ಪರವಾದರೆ ಅವೆರಡರ ಸ್ಥಾನದಲ್ಲಿ ಅರ್‌ಕಾರವೂ ಆದೇಶವಾಗಿ ಬರುವುದನ್ನು ಗುಣಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ದೇವ+ಇಂದ್ರ=ದೇವೇಂದ್ರ(ಅ+ಇ=ಏ)

ಸೂರ್ಯ+ಉದಯ=ಸೂರ್ಯೋದಯ(ಅ+ಉ=ಓ)

ಮಹ+=ಋಷಿ=ಮಹರ್ಷಿ(ಅ+ಋ=ಅರ್/ರ್)

ವೃದ್ಧಿ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಉತ್ತರ ಪದದ ಮೊದಲಲ್ಲಿ ಏಐ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಐಕಾರವೂ ಒಔ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಔಕಾರವೂ ಬರುವುದನ್ನು ವೃದ್ಧಿ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಏಕ+ಏಕ=ಏಕೈಕ(ಅ+ಏ=ಐ)

ವನ+ಔಷಧ=ವನೌಷಧ(ಆ+ಔ=ಔ)

ಯಣ್ ಸಂಧಿ

ಸಂಧಿಯಾಗುವಾಗ ಪೂರ್ವ ಪದದ ಕೊನೆಯಲ್ಲಿರುವ ಇಈಉಊಋ–ಕಾರಗಳಿಗೆ ಸವರ್ಣವಲ್ಲದ ಅಕ್ಷರಗಳು ಪರವಾದರೆ, ಇಈ–ಕಾರಗಳಿಗೆ 'ಯ'ಕಾರವೂ; ಉಊ–ಕಾರಗಳಿಗೆ 'ವ'ಕಾರವೂ; ಋಕಾರಕ್ಕೆ 'ಅರ್'ಕಾರವೂ ಆದೇಶವಾಗಿ ಬರುವುದನ್ನು ಯಣ್ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಅತಿ+ಅಂತ=ಅತ್ಯಂತ(ಇ+ಅ=ಯ; ಇಕಾರಕ್ಕೆ ಯಕಾರ)

ಮನು+ಅಂತರ=ಮನ್ವಂತರ(ಉ+ಅ=ವ; ಉಕಾರಕ್ಕೆ ವಕಾರ)

ಪಿತೃ+ಆರ್ಜಿತ(ಋ+ಆ=ಅರ್; ಋಕಾರಕ್ಕೆ ಅರ್‌ಕಾರ)

9th_Kannada_Reader Term II.indd 94 29-01-2019 16:32:52

ಸಂಸ್ಕೃತ ವ್ಯಂಜನ ಸಂಧಿಗಳು

ಜಸ್ತ್ವ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಮೊದಲ ಅಕ್ಷರಗಳಾದ ಕ,ಚ,ಟ,ತ,ಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳಾದ ಗ,ಜ,ಡ,ದ,ಬ–ಗಳು ಆದೇಶವಾಗಿ ಬರುವುದನ್ನು ಜಸ್ತ್ವಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ದಿಕ್+ಅಂತ=ದಿಗಂತ(ಕ+ಅ=ಗ; ಕಕಾರಕ್ಕೆ ಗಕಾರ ಆದೇಶವಾಗಿದೆ)

ಅಚ್+ಅಂತ=ಅಜಂತ(ಚ+ಅ=ಜ; ಚಕಾರಕ್ಕೆ ಜಕಾರ ಆದೇಶವಾಗಿದೆ)

ಚಿತ್+ಆನಂದ=ಚಿದಾನಂದ(ತ+ಆ=ದ; ತಕಾರಕ್ಕೆ ದಕಾರಾದೇಶ)

ಷಟ್+ಆನನ=ಷಡಾನನ(ಟ+ಅ=ಡ; ಟಕಾರಕ್ಕೆ ಡಕಾರಾದೇಶ)

ಶ್ಚುತ್ವ ಸಂಧಿ

ಸಂಧಿಯಾಗುವಾಗ ಪೂರ್ವ ಪದದ ಕೊನೆಯಲ್ಲಿ ಸಕಾರ ಹಾಗೂ ತವರ್ಗಾಕ್ಷರಗಳಿಗೆ ಕ್ರಮವಾಗಿ ಶಕಾರ ಮತ್ತು ಚವರ್ಗಾಕ್ಷರಗಳು ಪರವಾದರೆ; ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶವಾಗಿ ಬರುವುದನ್ನೇ ಶ್ಚುತ್ವ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಯಶಸ್+ಚಂದ್ರಿಕೆ=ಯಶಶ್ಚಂದ್ರಿಕೆ (ಸಕಾರಕ್ಕೆ ಶಕಾರಾದೇಶ)

ಮನಸ್+ಶಾಂತಿ=ಮನಶ್ಶಾಂತಿ (ಸಕಾರಕ್ಕೆ ಶಕಾರಾದೇಶ)

ಸತ್+ಚಿತ್ತ=ಸಚ್ಚಿತ್ತ(ತಕಾರಕ್ಕೆ ಚಕಾರಾದೇಶ)

ಅನುನಾಸಿಕ ಸಂಧಿ

ಸಂಧಿಯಾಗುವಗ ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಾದ ಕಚಟತಪ ವ್ಯಂಜನಗಳಿಗೆ ಯಾವುದೇ ವ್ಯಂಜನಗಳು ಪರವಾದರೂ ಅದೇ ವರ್ಗದ ಅನುನಾಸಿಕಗಳಾದ ಙಞಣನಮ ವ್ಯಂಜನಗಳು ಆದೇಶವಾಗಿ ಬರುವುದನ್ನೇ ಅನುನಾಸಿಕ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ :

ವಾಕ್+ಮಯ=ವಾಙ್ಮಯ (ಕಕಾರಕ್ಕೆ ಙ ಆಗಮ)

ಷಟ್+ಮುಖ=ಷಣ್ಮುಖ (ಟಕಾರಕ್ಕೆ ಣ ಆಗಮ)

ಸತ್+ಮಾನ=ಸನ್ಮಾನ (ತಕಾರಕ್ಕೆ ನ ಆಗಮ)

9th_Kannada_Reader Term II.indd 95 29-01-2019 16:32:52

ಘಟಕ
ಏಳು

ಕಲೆ–ಸೌಂದರ್ಯಮೀಮಾಂಸೆ–ಆಧುನಿಕತೆ



9th_Kannada_Reader Term II.indd 96 29-01-2019 16:32:52

ಘಟಕ ವಿಳು

ಪಲ್ಲವ ಶಿಲ್ಪಕಲೆ

–ಡಾ. ತಮಿಳ್ ಸೆಲ್ವಿ



"ಪ್ರಾಚೀನ ತಮಿಳುನಾಡನ್ನಾಳಿದ ಅರಸರಲ್ಲಿ ಪ್ರಮುಖರಾದವರು ಚೇರ, ಚೋಳ ಹಾಗೂ ಪಾಂಡ್ಯ ಅರಸರು. ಇವರನ್ನು 'ಮೂವೇಂದರ್'(ಮೂರು ಅರಸುಮನೆತನಗಳು) ಎಂದೇ ಗುರುತಿಸಲಾಗುತ್ತದೆ. ಇವರೊಂದಿಗೆ ಪಲ್ಲವರ ಹೆಸರನ್ನು ಸೇರಿಸಿಲ್ಲವಾದರೂ ಪಲ್ಲವರೂ ತಮಿಳುನಾಡನ್ನಾಳಿದ ಪ್ರಾಚೀನ ಅರಸರಲ್ಲಿ ಒಬ್ಬರಾಗಿದ್ದಾರೆ. ತಮಿಳು ಭಾಷೆಯು ಸಾಹಿತ್ಯ, ಸಂಗೀತ, ನಾಟಿಕ – ಈ ಮೂರೂ ಪ್ರಕಾರಗಳಲ್ಲಿ ಈ ಅರಸು ಮನೆತನಗಳ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೇರಿರುವುದನ್ನು ಕಾಣಬಹುದು. ತಮಿಳುನಾಡಿನ ಚರಿತ್ರೆಯಲ್ಲಿ ಪಲ್ಲವರ ಆಡಳಿತ ಹಾಗೂ ಅವರ ಆಡಳಿತ ವಿಧಾನಗಳು ಮುಂದಿನವರಿಗೆ ಆದರ್ಶಪ್ರಾಯವಾಗಿದ್ದವು.



ದಕ್ಷಿಣಭಾರತದ ಇತಿಹಾಸದಲ್ಲಿ ಪಲ್ಲವರ ಸ್ಥಾನ ಚಿರಸ್ಥಾಯಿಯಾದುದು. ದಕ್ಷಿಣ ಭಾರತದಲ್ಲಿ ಮೊದಲು ಬೃಹತ್ ಸಾಮ್ರಾಜ್ಯ ಸ್ಥಾಪಿಸಿದ ರಾಜವಂಶ ಪಲ್ಲವರದ್ದು. ಇಡೀ ದಕ್ಷಿಣ ಭಾರತವನ್ನು ಒಂದೇ ಆಡಳಿತಕ್ಕೊಳಪಡಿಸಿದ ಮೊದಲ ಅರಸರು ಇವರು. ಕಂಚಿ ಇವರ ರಾಜಧಾನಿಯಾಗಿತ್ತು.

ಈ ವಂಶದ ಅರಸರು ದಕ್ಷಿಣ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ವಿಶೇಷ ಪ್ರಭಾವ ಬೀರಿದ್ದಾರೆ. ಪಲ್ಲವ ದೊರೆಗಳು 3ನೆಯ ಶತಮಾನದಿಂದ 9ನೆಯ ಶತಮಾನದವರೆಗೂ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿ ಆಳಿದರು. ಇವರು ತುಂಗಭದ್ರಾ ಹಾಗೂ ಪೆನ್ನಾರ್ ನದಿಗಳ ದಕ್ಷಿಣದಲ್ಲಿ ಮೊದಲು ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆರನೇ

9th_Kannada_Reader Term II.indd 97 29-01-2019 16:32:52

ಶತಮಾನದ ಉತ್ತರಾರ್ಧದಲ್ಲಿ ವಿಜಯಾಲಯ ಚೋಳನು ಪಲ್ಲವ ರಾಜಧಾನಿಯಾದ ಕಂಚಿಯನ್ನು ವಶಪಡಿಸಿಕೊಳ್ಳುವವರೆಗೆ ಇವರು ತಮಿಳುನಾಡಿನ ವಿಸ್ತಾರ ಪ್ರದೇಶದ ಅಧಿಪತಿಗಳಾಗಿ ಆಳಿದರು. ಇವರು ದೇವಾಲಯ ನಿರ್ಮಾಣದಲ್ಲಿ ತೋರಿಸಿರುವ ಆಸಕ್ತಿ ಅನ್ಯಾದೃಶವಾದುದು. ಪಲ್ಲವರ ರಾಜ್ಯ ಲಾಂಛನ ಸಿಂಹ.

ಕಂಚಿಯ ಪಲ್ಲವರ ಕಾಲವು ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಅವಿಸ್ಮರಣೀಯವಾದುದು. ಈ ಕಾಲದಲ್ಲಿ ಶೈವ, ವೈಷ್ಣವ, ಬೌದ್ಧ ಮತ್ತು ಜೈನ ಧರ್ಮಗಳೂ ಆಚರಣೆಯಲ್ಲಿದ್ದವು. ಪಲ್ಲವರ ಆಳ್ವಿಕೆಯ ಕಾಲದಲ್ಲಿ ಕಂಚಿ ನಗರವು ಬೌದ್ಧ ಹಾಗೂ ವೈದಿಕ ಧರ್ಮಗಳ ಅಧ್ಯಯನದ ಪ್ರಮುಖ ಕೇಂದ್ರವಾಗಿತ್ತು. ಇದಕ್ಕೆ ಕಾಂಚೀ, ಕಂಚೀ ಎಂಬ ಹೆಸರುಗಳೂ ಇದ್ದವು. ಕಾಂಚಿಯ ವಿಶ್ವವಿದ್ಯಾಲಯವು ನಲಂದ ವಿಶ್ವವಿದ್ಯಾಲಯಕ್ಕೆ ಸಮಾನವಾದ ಖ್ಯಾತಿಯನ್ನು ಹೊಂದಿತ್ತು. 'ಧರ್ಮಪಾಲ' ಎನ್ನುವವನು ಈ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದನೆಂದು ಶಾಸನಗಳು ತಿಳಿಸುತ್ತವೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ಭಾರತದ ಎಲ್ಲೆಡೆಗಳಿಂದಲೂ ಅಧ್ಯಯನಾಕಾಂಕ್ಷಿಗಳು ಇಲ್ಲಿಗೆ ಬರುತ್ತಿದ್ದರು. ಒಂದನೇ ನರಸಿಂಹವರ್ಮನ ಕಾಲದಲ್ಲಿ ಕಂಚಿಗೆ ಭೇಟಿ ನೀಡಿದ್ದ ಚೀನಾದ ಪ್ರವಾಸಿ ಹ್ಯೂಯೆನ್‌ತ್ಸಾಂಗನು ಆ ಕಾಲದ ಬೌದ್ಧ ಧರ್ಮದ ಸ್ಥಿತಿಗತಿಗಳನ್ನು ವಿವರಿಸಿದ್ದಾನೆ. ಪಲ್ಲವ ಸಾಮ್ರಾಜ್ಯವನ್ನು ಇವನು 'ದ್ರಾವಿಡ ನಾಡು' ಎಂದು ಹೆಸರಿಸಿದ್ದಾನೆ. ಹ್ಯೂಯೆನ್‌ತ್ಸಾಂಗನು ಪಲ್ಲವರ ರಾಜ್ಯಕ್ಕೆ ಭೇಟಿ ನೀಡಿದ್ದು ಕ್ರಿ.ಶ.640ರಲ್ಲಿ.

ಒಂದನೇ ನರಸಿಂಹವರ್ಮನ್, ಶಿವಸ್ಕಂಧವರ್ಮನ್, ವೀರವರ್ಮನ್, ಮಹೇಂದ್ರವರ್ಮನ್ ವಿಷ್ಣುಗೋಪ, ಕುಮಾರ ವಿಷ್ಣು, ಎರಡನೇ ಸ್ಕಂಧವರ್ಮನ್, ಪರಮೇಶ್ವರವರ್ಮನ್ ಮೊದಲಾದವರು ಪಲ್ಲವ ವಂಶದ ಪ್ರಸಿದ್ಧ ಅರಸರು. ಪಲ್ಲವರ ಕೊನೆಯ ದೊರೆ ಅಪರಾಜಿತ ವರ್ಮ. ಪಲ್ಲವ ಅರಸರು ಅತೀವ ಕಲಾಸಕ್ತಿ ಹೊಂದಿದ್ದವರೆನ್ನುವುದು ಅವರ ಕಾಲದಲ್ಲಿ ನಿರ್ಮಾಣವಾದ ಅನೇಕ ದೇವಾಲಯಗಳಿಂದ ಅರಿಯಬಹುದು. ಶಿಲ್ಪಕಲೆಗೆ ಪಲ್ಲವರ ಕಾಣಿಕೆ ಅನ್ಯಾದೃಶವಾದುದು. ಪಲ್ಲವರ ಕಾಲದಲ್ಲಿ ಕಲ್ಲಿನಿಂದ ದೇವಾಲಯ ನಿರ್ಮಿಸುವ ಪದ್ಧತಿ ಪ್ರಾರಂಭವಾಯಿತು. ಇದನ್ನು ಚೋಳರು ಮುಂದುವರೆಸಿ ತಮಿಳುನಾಡಿನ ಕಲೆಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ.

ಪಲ್ಲವರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯನ್ನು ದ್ರಾವಿಡ ಶೈಲಿ ಎಂದು ಕರೆಯಲಾಗುವುದು. ಪಲ್ಲವರು ದ್ರಾವಿಡ ಶೈಲಿಯ ನಿರ್ಮಾಪಕರು. ಇವರ ನಂತರ ದ್ರಾವಿಡ ಶೈಲಿ ದಕ್ಷಿಣ ಭಾರತದಲ್ಲಿ ವಿಕಾಸವಾಯಿತು. ಪಲ್ಲವರ ನಂತರ ಸಾರ್ವಭೌಮತ್ವವನ್ನು ಸ್ಥಾಪಿಸಿದ ಚೋಳರ ಕಾಲದಲ್ಲಿ ದ್ರಾವಿಡ ಶೈಲಿ ಉನ್ನತಿಯ ಶಿಖರವನ್ನು ತಲುಪಿತು. ಮುಂದೆ ಪಾಂಡ್ಯರು ದ್ರಾವಿಡ ಶೈಲಿಯಲ್ಲಿ ಅತ್ಯುನ್ನತವಾದ ದೇವಾಲಯಗಳನ್ನು ನಿರ್ಮಿಸಿದರು. ದಕ್ಷಿಣ ಭಾರತದಲ್ಲೇ ಈ ಶೈಲಿಯು ಪ್ರಸಿದ್ಧವಾಯಿತು. ವಿಜಯನಗರದ ಅರಸರು ದ್ರಾವಿಡ ಶೈಲಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಈ ಶೈಲಿ ದಕ್ಷಿಣ ಭಾರತಕ್ಕೆ ಮಾತ್ರ ಸೀಮಿತವಾಗಿರದೆ ಮಲಯಾ ಪರ್ಯಾಯ ದ್ವೀಪಗಳಿಗೂ ಪಸರಿಸಿ ಅಲ್ಲಿನ ನಾಗರಿಕತೆಗಳ ಕಲಾ ಪರಂಪರೆಯಲ್ಲಿ ತನ್ನ ಪ್ರಭಾವವನ್ನು ಅಚ್ಚೊತ್ತಿತು. ಹೀಗೆ ಭಾರತೀಯ ಶಿಲ್ಪಕಲೆಗೆ ಪಲ್ಲವರು ಅವಿಸ್ಮರಣೀಯ ಕಾಣಿಕೆ ನೀಡಿದ್ದಾರೆ.

ಪಲ್ಲವರ ಕಾಲದ ಎರಡು ಪ್ರಸಿದ್ಧ ಶಿಲ್ಪಕಲಾ ಕೇಂದ್ರಗಳು 'ಮಹಾಬಲಿಪುರಂ' ಹಾಗೂ 'ಕಂಚಿ'. ಕಂಚಿ ಪಲ್ಲವರ ಮೊದಲ ರಾಜಧಾನಿಯಾದರೆ, ಮಹಾಬಲಿಪುರಂ ಅವರ ಎರಡನೆಯ ರಾಜಧಾನಿಯಾಗಿತ್ತು. ಪಲ್ಲವರ ನರಸಿಂಹವರ್ಮನಿಗೆ ಮಾಮಲ್ಲ ಎಂಬ ಬಿರುದಿತ್ತು. ಅವನ ನೆನಪಿನಲ್ಲಿ ಈ ಊರಿಗೆ ಮಾಮಲ್ಲಪುರಂ ಎಂಬ ಹೆಸರಾಯಿತು. ಮಹಾಬಲಿಪುರಂ ಚೆನ್ನೈನಿಂದ ಸುಮಾರು 75 ಕಿ.ಮೀ. ಗಳ ದೂರದಲ್ಲಿದೆ. ಈ ಊರು ಬಂಗಾಳಕೊಲ್ಲಿಯ ತೀರದಲ್ಲಿದೆ. ಪಲ್ಲವರ ಕಾಲದ ಪ್ರಮುಖ ಬಂದರು ಪ್ರದೇಶ ಇದಾಗಿತ್ತು. ಪಲ್ಲವರ ಶಿಲ್ಪಕಲೆಯ ಪರಿಣತಿ ಹಾಗೂ ಔನ್ನತ್ಯವನ್ನು ಈ ಎರಡೂ ಸ್ಥಳಗಳಲ್ಲೂ ಕಾಣಬಹುದು.

ಪಲ್ಲವರ ದೇವಾಲಯಗಳನ್ನು ಮೂರು ರೀತಿಯಲ್ಲಿ ಗುರುತಿಸಬಹುದು. ಅವು, 1.ಬಂಡೆಗಳನ್ನು

9th_Kannada_Reader Term II.indd 98 29-01-2019 16:32:52

ಕಡೆದು ನಿರ್ಮಿಸಿರುವ ಗುಹಾಲಯಗಳು, 2. ಏಕ ಶಿಲೆಯಿಂದ ನಿರ್ಮಿಸಿರುವ ದೇವಾಲಯಗಳು ಹಾಗೂ 3. ಕಟ್ಟಡ ದೇವಾಲಯಗಳು. ಪಲ್ಲವರ ಕಾಲದ ಗುಹಾಲಯಗಳು ಇತಿಹಾಸ ಪ್ರಸಿದ್ಧವಾದುವು. ಮಹಾಬಲಿಪುರಂನಲ್ಲಿರುವ ಗುಹಾಲಯಗಳು ರಚನೆ ಮತ್ತು ವಿನ್ಯಾಸದ ದೃಷ್ಟಿಯಿಂದ ಪ್ರಸಿದ್ಧವಾಗಿವೆ. ಏಕಶಿಲಾ ದೇವಾಲಯಗಳನ್ನು 'ರಥ'ಗಳು ಎಂದೂ ಕರೆಯುವ ವಾಡಿಕೆಯಿದೆ. ಮಹಾಬಲಿಪುರದಲ್ಲಿ ಇಂತಹ ಹಲವು ರಥಗಳನ್ನು ಕಾಣಬಹುದು. ಅವುಗಳಲ್ಲಿ ಪ್ರಸಿದ್ಧವಾದುವು ಪಂಚಪಾಂಡವರ ರಥಗಳು. ಇವೆಲ್ಲವೂ ಕಲ್ಲಿನಿಂದಲೇ ಕಡೆದ, ದ್ರಾವಿಡ ಶೈಲಿಯ ಆಕರ್ಷಕ ಮಂದಿರಗಳು. ಅರ್ಜುನ ರಥ, ಭೀಮ ರಥ, ನಕುಲ–ಸಹದೇವರ ರಥಗಳು ಹಾಗೂ ಯುಧಿಷ್ಠಿರ ರಥಗಳೊಂದಿಗೆ ಬೃಹದಾಕಾರದ ಆನೆಯ ವಿಗ್ರಹಗಳೂ ಇಲ್ಲಿವೆ. ದ್ರೌಪದಿಗೆ ಸೇರಿದ ಶಿಲಾ ರಥವೂ ಇಲ್ಲಿದೆ. ಸಮೀಪದಲ್ಲೆ ಗಣೇಶ ರಥವೂ ಇದೆ. ಇವುಗಳಲ್ಲಿ ಅತಿ ಉದ್ದವಾದ ಹಾಗೂ ಪೂರ್ಣಗೊಂಡ ರಥ 'ಧರ್ಮರಾಜ ರಥ'. ಇದನ್ನು ನಿರ್ಮಿಸಿದವನು 'ಒಂದನೇ ನರಸಿಂಹ ವರ್ಮ'.

ಪಲ್ಲವರ ಕಾಲದ ಕಲಾಕೂಟದಂತೆ ಕಂಗೊಳಿಸುವ ಮಹಾಬಲಿಪುರದ ಗುಹಾಲಯಗಳು, ಏಕಶಿಲಾ ರಥಗಳು ಹಾಗೂ ಕಲ್ಲಿನ ದೇವಾಲಯಗಳಲ್ಲಿರುವ ಶಿಲ್ಪಗಳ ಸೊಗಸು ಅನನ್ಯವಾದುದು. ಇಲ್ಲಿರುವ ಮಹಿಷಿಮರ್ಧಿನಿ ಗುಹೆ, ವರಾಹ ಗುಹೆ, ಆದಿ ವರಾಹ ಗುಹೆ, ತ್ರಿಮೂರ್ತಿಗಳ ಗುಹೆಗಳಲ್ಲಿನ ಶಿಲ್ಪಗಳು ಮನೋಹರವಾಗಿವೆ. ಆದಿ ವರಾಹ ಮಂಟಪದಲ್ಲಿ ಮಹಾವಿಷ್ಣುವಿನ 9ನೇ ಅವತಾರವಾದ ಬುದ್ಧಾವತಾರವನ್ನು ಬಿಂಬಿಸಲಾಗಿದೆ. ಇಲ್ಲಿ ಉಂಡೆಯಾಕಾರದ ಒಂದು ಬಂಡೆ ಇದೆ. ಇದನ್ನು ಶ್ರೀಕೃಷ್ಣನ ಬೆಣ್ಣೆಯುಂಡೆ ಎಂದು ಹೇಳಲಾಗುತ್ತದೆ. ಇಳಿಜಾರಿನಲ್ಲಿದ್ದೂ ಅದು ಉರುಳದೆ ಇರುವ ರೀತಿ ಅಚ್ಚರಿ ಮೂಡಿಸುತ್ತದೆ.

ಪಲ್ಲವ ಪರಮೇಶ್ವರನ ಕಾಲದಲ್ಲಿ ಮೊದಲ ಬಾರಿಗೆ ಕಲ್ಲಿನಲ್ಲಿ ಕೊರೆಯುವ ಗುಹಾ ದೇವಾಲಯಗಳಿಗಿಂತ ಭಿನ್ನವಾಗಿ ಕಲ್ಲುಗಳನ್ನು ಜೋಡಿಸಿ ದೇವಾಲಯಗಳನ್ನು ನಿರ್ಮಿಸುವ ಪದ್ಧತಿ ಆರಂಭವಾಯಿತು. ಎರಡನೆಯ ನರಸಿಂಹ ವರ್ಮನ ಕಾಲದಲ್ಲಿ ಇಂತಹ ಹಲವಾರು ದೇವಾಲಯಗಳು ನಿರ್ಮಾಣವಾಗಿವೆ.

ಅವುಗಳಲ್ಲಿ ಮಹಾಬಲಿಪುರದ ಕಡಲತೀರದ ದೇವಾಲಯ ಹಾಗೂ ಕಂಚಿಯ ವೈಕುಂಠ ಪೆರುಮಾಳ್ ದೇವಾಲಯಗಳು ತುಂಬ ಪ್ರಮುಖವಾದುದು. ಕಡಲ ತೀರದ ದೇವಾಲಯ(ಶೋರ್ ಟೆಂಪಲ್)ವು, ಕ್ರಿ.ಶ. 7ನೇ ಶತಮಾನಕ್ಕೆ ಸೇರಿದ್ದು, ಇದು ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದೆ. ಯುನೆಸ್ಕೋ ಸಂಸ್ಥೆಯು ಇದನ್ನು 'ವಿಶ್ವ ಪರಂಪರೆ'ಯ ತಾಣವಾಗಿ ಗುರುತಿಸಿದೆ. ದ್ರಾವಿಡ ಶೈಲಿಯ ಈ ದೇವಾಲಯದ ಸಮೀಪದಲ್ಲೇ ಮತ್ತೆರಡು ಶಿವ ದೇವಾಲಯಗಳು ಮತ್ತು ಒಂದು ವಿಷ್ಣು ದೇವಾಲಯ ಇದೆ. ಇಲ್ಲಿರುವ ವಿಷ್ಣುವಿನ ವಿಗ್ರಹವನ್ನು ಒಂದೇ ದ್ವಾರದಿಂದ ಏಕಕಾಲದಲ್ಲಿ ನೋಡಲು ಸಾಧ್ಯವಿಲ್ಲ. ಅಷ್ಟು ಉದ್ದವಿದೆ. ಇಲ್ಲಿರುವ ಬ್ರಹ್ಮ–ಸರಸ್ವತಿ, ನರಸಿಂಹ ಹಾಗೂ ದುರ್ಗಾ ವಿಗ್ರಹಗಳು ಕೂಡ ಆಕರ್ಷಕವಾಗಿವೆ.

ಭಗೀರಥನ/ಅರ್ಜುನನ ತಪಸ್ಸು :

ಮಹಾಬಲಿಪುರಂನ ಒಂದೆಡೆ, 'ಭಗೀರಥ' ತಪಸ್ಸಿನಲ್ಲಿ ನಿರತನಾಗಿರುವ ದೃಶ್ಯವನ್ನು ಒಂದು ಬಂಡೆಯ ಮೇಲೆ ಮನಮೋಹಕವಾಗಿ ಕೆತ್ತಲಾಗಿದೆ. ಸಮುದ್ರಾಭಿಮುಖವಾಗಿರುವ ಎತ್ತರವಾದ ಒಂದು ಬಂಡೆಗಲ್ಲಿನಲ್ಲಿ ಕೆತ್ತಲಾಗಿರುವ ಉಬ್ಬು ಶಿಲ್ಪಗಳ ಗುಚ್ಛವನ್ನು 'ಭಗೀರಥನ ತಪಸ್ಸಿ'ನ ದೃಶ್ಯ ಎಂದು ಪರಿಗಣಿಸಲಾಗಿದೆ. ಕೆಲವರು ಇದನ್ನು 'ಅರ್ಜುನನ ತಪಸ್ಸು' ಎಂದೂ ಹೇಳುವರು. ದೂರದಿಂದ ಇದು ಒಂದು ತಿಮಿಂಗಿಲದ ರೂಪದಲ್ಲಿ ಕಾಣಿಸುತ್ತದೆ. 27 ಮೀಟರ್ ಉದ್ದ ಹಾಗೂ 9 ಮೀಟರ್ ಎತ್ತರವಿರುವ ಈ ಬೃಹತ್ ಬಂಡೆಯು ಮಧ್ಯದಲ್ಲಿ ಸೀಳಿದೆ. ಬಂಡೆಯ ಮೇಲೆ ಹಲವಾರು ದೇವಾನುದೇವತೆಗಳು, ಅಪ್ಸರೆಯರು ಮುಂತಾದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಭಗೀರಥನು ಕಠಿಣವಾದ ತಪಸ್ಸನ್ನು ಮಾಡಿ ದೇಹವನ್ನು ದಂಡಿಸಿಕೊಂಡ ಪುರಾಣ ಕಥೆಯನ್ನು ಉಲ್ಲೇಖಿಸುವ ಕೆತ್ತನೆಗಳು ಇವಾಗಿವೆ. ಸೂರ್ಯ ಚಂದ್ರರು, ಆನೆ, ಯಕ್ಷರು, ಗಂಧರ್ವರು, ವಿದ್ಯಾಧರರು, ಸಿದ್ಧರು, ಕಿನ್ನರ–ಕಿಂಪುರುಷರು ಮುಂತಾದವರು ತಾಳವಾದ್ಯಗಳೊಂದಿಗೆ ಇಲ್ಲಿ ಕಾಣಿಸುತ್ತಾರೆ.

9th_Kannada_Reader Term II.indd 99 29-01-2019 16:32:52

ಅನುಪಮವಾದ ಈ ಶಿಲ್ಪವು ಜಗತ್ತಿನ ಶಿಲ್ಪಕಲಾ ಪ್ರದರ್ಶನಾಲಯವೆಂದೇ ಗುರುತಿಸಲ್ಪಟ್ಟಿದೆ. ನಮ್ಮ ಕಣ್ಮುಂದೆ ಹರಡಿರುವ ಈ ದೃಶ್ಯವು ಒಂದು ದೊಡ್ಡ ಛಾಯಾಚಿತ್ರವನ್ನು ನಮ್ಮ ಮುಂದೆ ಬಿಚ್ಚಿ ಹರಡಿರುವಂತೆ ಕಾಣಿಸುತ್ತದೆ. ಅದ್ಭುತ ಭಿತ್ತಿ ಚಿತ್ರವಾಗಿ ಮೂಡಿ ಬಂದಿರುವ ಇದರಲ್ಲಿ ಪ್ರಕೃತಿಯ ವಿಷಯಗಳಿಗೆ ಸಂಬಂಧಿಸಿದಂತೆ ಒಬ್ಬ ಚಿತ್ರಕಾರನ ಮನಸ್ಸು ಹೇಗೆ ಕಾರ್ಯ ನಿರ್ವಹಿಸಬಹುದು ಎಂಬುದನ್ನು ತೋರಿಸುತ್ತದೆ. ಈ ಬೃಹತ್ ಬಂಡೆಯ ಕಡಿದಾದ ಒಂದು ಮಗ್ಗುಲನ್ನು ಕಡೆದು ಈ ಭಿತ್ತಿ ಶಿಲ್ಪವನ್ನು ಮಾಡಲಾಗಿದೆ. ಚಿತ್ರದ ಒಟ್ಟು ವಿನ್ಯಾಸ ಮೇಲ್ನೋಟಕ್ಕೆ ಜಟಿಲವೆನಿಸಿದರೂ ಸೂಕ್ಷ್ಮವಾಗಿ ಗಮನಿಸಿದಾಗ ಇವು ಸುಸಂಬದ್ಧವಾಗಿರುವುದು ಕಂಡು ಬರುತ್ತದೆ.

ಇವುಗಳ ನಡುವೆ ಎರಡೂ ಕೈಗಳನ್ನು ಮೇಲೆತ್ತಿ, ಒಂಟಿಕಾಲಿನಲ್ಲಿ ನಿಂತಿರುವ ನೀಳಗಡ್ಡಧಾರಿಯಾದ ಕೃಶ ಶರೀರಿಯೊಬ್ಬನು ಕಠಿಣ ತಪಸ್ಸಿನಲ್ಲಿ ಮುಳುಗಿದ್ದಾನೆ. ಇವನನ್ನೇ ಕೆಲವರು ಅರ್ಜುನ ಎಂದೂ, ಕೆಲವರು ಭಗೀರಥ ಎಂದೂ ಹೇಳುತ್ತಾರೆ.

ಇಲ್ಲಿನ ಕಥೆ ಗಂಗಾವತರಣಕ್ಕೆ ಸಂಬಂಧಿಸಿದ್ದು. ಭಗೀರಥನು ಒಂಟಿಕಾಲಿನಲ್ಲಿ ನಿಂತು ತಪಸ್ಸು ಮಾಡಿ ಗಂಗೆಯನ್ನೂ, ಶಿವನನ್ನೂ ಒಲಿಸಿಕೊಂಡು ಗಂಗೆಯನ್ನು ಆಕಾಶದಿಂದ ಭೂಮಿಗೆ ಕರೆತರುವ ಕಥೆ ಇದು. ನೇರವಾಗಿರುವ ಈ ಬಂಡೆಗಲ್ಲಿನ ನಡುವಿನ ಒಂದು ಭಾಗವು ಸೀಳುಬಿಟ್ಟಿದೆ. ಇದನ್ನು ಶಿಲ್ಪಿಯು ಗಂಗಾ ನದಿಯು ಮೇಲಿನಿಂದ ಕೆಳಕ್ಕೆ ಬೀಳುತ್ತಿರುವ ಹಾಗೆ ಚಿತ್ರಿಸಲು ಬಳಸಿಕೊಂಡಿದ್ದಾನೆ. ನದಿಯ ಮೇಲ್ಭಾಗದಲ್ಲಿ ಚಂದ್ರ–ಸೂರ್ಯರು ಪ್ರಕಾಶಿಸುತ್ತಿದ್ದಾರೆ. ಗಂಗೆ ಭೂಮಿಗೆ ಬರುವ ಮಹಾ ಸಂತೋಷದ ಘಟನೆಯನ್ನು ನೋಡಲು ಬಾನಿನ ಜನರೂ ಭೂಮಿಯ ಜನರು ಕಾತರದಿಂದ ನಿಂತಿದ್ದಾರೆ. ದೇವಾನುದೇವತೆಗಳು, ಗಂಧರ್ವರು, ನಾಗಕನ್ಯೆಯರು... ಇಲ್ಲಿ ಚಿತ್ರಿತರಾಗಿದ್ದಾರೆ.

ಸ್ವಲ್ಪ ದೂರದಲ್ಲಿ ಮೇಲೆ ಶೂಲಧಾರಿಯಾಗಿರುವ ಶಿವನು ಆ ತಪಸ್ವಿಗೆ ವರವನ್ನು ನೀಡುತ್ತಿದ್ದಾನೆ. ಜಿಂಕೆ, ಮಂಗಗಳು, ಆನೆಗಳನ್ನು ಸಹಜ ಹಾಗೂ ಅಂಗಾನುಬದ್ಧತೆಯೊಂದಿಗೆ ಚಿತ್ರಿಸಲ್ಪಟ್ಟಿವೆ. ಈ ಭಿತ್ತಿಶಿಲ್ಪದಲ್ಲಿ ಮಹೇಂದ್ರವರ್ಮ ಹಾಗೂ ಅವನ ರಾಣಿಯ ಮೂರ್ತಿಗಳನ್ನೂ ಕಂಡರಿಸಲಾಗಿದೆ. ವಿಶಾಲವಾಗಿ ಹರಡಿರುವ ಈ ಶಿಲ್ಪದಲ್ಲಿ ಕಾಣಿಸುವ ದೇವಾನುದೇವತೆಗಳ ರೂಪಗಳು ಅವರ ಅಂಗ ವಿನ್ಯಾಸ– ಭಂಗಿಗಳು, ಮುಖಭಾವ ಎಲ್ಲವೂ ಸರಳ ಹಾಗೂ ಸಹಜತೆಯಿಂದ ಕೂಡಿವೆ.

ದಕ್ಷಿಣದ ಗೋಡೆಯಲ್ಲಿ ಚರ್ಮದ ಉಡುಗೆಯನ್ನು ಧರಿಸಿದ ಹಾಗೂ ಗಡ್ಡಧಾರಿಗಳಾದ, ತಲೆಗೂದಲನ್ನು ಮೇಲೆತ್ತಿ ಕಟ್ಟಿಕೊಂಡಿರುವ ಬೇಡರು ಇದ್ದಾರೆ. ಕೈಗಳಲ್ಲಿ ಅವರು ಈಟಿಗಳನ್ನು ಹಿಡಿದುಕೊಂಡಿದ್ದಾರೆ. ಕಾಡಿನ ಚಿತ್ರವೂ, ಕಾಡಿನಲ್ಲಿರುವ ಹುಲಿ, ಕಾಡುಹಂದಿ, ಜಿಂಕೆ ಮೊದಲಾದ ಪ್ರಾಣಿಗಳೂ ಇಲ್ಲಿ ಕಂಡು ಬರುತ್ತದೆ. ಉಡವೊಂದು ಮರವನ್ನೇರುತ್ತಿದೆ. ಇನ್ನೊಂದು ಮರದ ಮೇಲೆ ಒಂದು ಕೋತಿ ಕುಳಿತು ಎಲ್ಲವನ್ನೂ ನೋಡುತ್ತಿದೆ.

ಈ ಭಿತ್ತಿ ಶಿಲ್ಪವನ್ನು ಜಗತ್ತಿನ ಅತ್ಯುತ್ತಮ ಶಿಲ್ಪಗಳಲ್ಲಿ ಒಂದು ಎಂದು ಭಾವಿಸಲಾಗಿದೆ. ಈ ಶಿಲ್ಪಭಿತ್ತಿಯ ಕೆಳಬದಿಯಲ್ಲಿ ರುದ್ರಾಕ್ಷಿ ಮಾಲೆ ಧರಿಸಿ ಹಿಂಗಾಲುಗಳನ್ನು ಮೇಲೆತ್ತಿ ತಪಸ್ಸಿನಲ್ಲಿ ಮುಳುಗಿರುವ ಒಂದು ಬೆಕ್ಕನ್ನು ಕಾಣಬಹುದು. ಅದರ ಮುಂದೆ ನಿರ್ಭಯವಾಗಿ ಓಡಾಡುತ್ತಿರುವ ಇಲಿಗಳನ್ನು ಕಾಣಬಹುದು. ಇದು ಆಶ್ರಮದ ವಾತಾವರಣವನ್ನು ಸೂಚಿಸುತ್ತದೆ.

ಮಹಾಬಲಿಪುರದ ಹಾಗೆಯೇ ಕಂಚಿಯಲ್ಲೂ ಪಲ್ಲವರು ಸಾಕಷ್ಟು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಕಂಚಿಯನ್ನು 'ದೇವಾಲಯಗಳ ನಗರ' ಎಂದೇ ಕರೆಯುತ್ತಾರೆ. ಕಂಚಿಯ ಕೈಲಾಸ ದೇವಾಲಯದ ಕರ್ತೃ 'ರಾಜಸಿಂಹ ಪಲ್ಲವ'. ಆದುದರಿಂದ ಈ ದೇವಾಲಯವನ್ನು 'ರಾಜಸಿಂಹೇಶ್ವರ ದೇವಾಲಯ'ವೆಂದೂ ಕರೆಯಲಾಗುವುದು. ಪಲ್ಲವರ ದೇವಾಲಯಗಳಲ್ಲೆಲ್ಲಾ ತುಂಬ ಪ್ರಸಿದ್ಧವಾದುದು ಹಾಗೂ ವಿಶಿಷ್ಟವಾದುದು ಕಂಚಿಯ ಕೈಲಾಸನಾಥ ದೇವಾಲಯ. ಆ ಕಾಲದಲ್ಲಿ ನಿರ್ಮಾಣವಾದ ಅತ್ಯಂತ ದೊಡ್ಡ ಪ್ರಮಾಣದ ದೇವಾಲಯವಾದುದರಿಂದ ಇದಕ್ಕೆ 'ದೊಡ್ಡ ದೇವಾಲಯ' ಎನ್ನುವ ಹೆಸರೂ ಇದೆ.

ಕೈಲಾಸನಾಥ ದೇವಾಲಯದಲ್ಲಿ ಶಿವನು ಹಲವು ರೂಪಗಳಲ್ಲಿ, ಹಲವು ಭಂಗಿಗಳಲ್ಲಿ ಕಾಣಿಸಿಕೊಳ್ಳುತ್ತಾನೆ.

9th_Kannada_Reader Term II.indd 100 29-01-2019 16:32:52

ಇವನೊಂದಿಗೆ ಅವನ ರೂಪಕ್ಕೆ ತಕ್ಕ ಹಾಗೆ ದೇವಿಯೂ ಕಾಣಿಸಿಕೊಳ್ಳುತ್ತಾಳೆ. ಶಿವನ ಕೃಪಾಕಟಾಕ್ಷವನ್ನು ಗಳಿಸುವುದಕ್ಕಾಗಿ ಅವನ ಮುಂದೆ ನರ್ತಿಸುತ್ತಿರುವ ಗಣಗಳ ಶಿಲ್ಪಗಳನ್ನು ವಿಮಾನದ ಕೆಳಹಂತದಲ್ಲಿ ಚಿತ್ರಿಸಲಾಗಿದೆ.

ಕೃತಿ–ಕರ್ತೃ ಪರಿಚಯ



ಡಾ||. ತಮಿಳ್ ಸೆಲ್ವಿಯವರು ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿಯೂ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸದಲ್ಲಿ ಆಳವಾದ ಜ್ಞಾನವನ್ನು ಪಡೆದಿರುವ ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ನೇಪಥ್ಯ, ಚೋಳ–ಪಲ್ಲವ ಶಿಲ್ಪಕಲೆ, ಅನನ್ಯ, ಅವಲೋಕನ, ಸಂಕ್ರಾಂತಿ, ಅಶೋಕ ಮಿತ್ರನ್ ಕಥೆಗಳು, ಮ.ರಂಗನಾಥನ್ ಕಥೆಗಳು ಮೊದಲಾದ ಮುವ್ವತ್ತಿಕ್ಕಿಂತ ಹೆಚ್ಚಿನ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಗಂಗರ ಶಾಸನಗಳ ಸಾಂಸ್ಕೃತಿ–ಕ ಅಧ್ಯಯನ' ಎನ್ನುವ ಮಹಾಪ್ರಬಂಧಕ್ಕೆ ಪಿಎಚ್.ಡಿ., ಪದವಿಯನ್ನೂ; 'ಕನ್ನಡ ಮತ್ತು ತಮಿಳು ಸಾಹಿತ್ಯಗಳ ನಡುವಿನ ಅನನ್ಯತೆ' ಎನ್ನುವ ಮಹಾಪ್ರಬಂಧಕ್ಕೆ ಡಿ.ಲಿಟ್., ಪದವಿಯನ್ನೂ ಗಳಿಸಿದ್ದಾರೆ. 'ನಾನು ಅವನಲ್ಲ, ಅವಳು' ಎನ್ನುವ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಇವರು ಪಡೆದಿದ್ದಾರೆ. ಇದಲ್ಲದೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ಪ್ರಶಸ್ತಿ, ನಲ್ಲಿ–ದಿಸೈಎಟ್ಟುಂ ಪ್ರಶಸ್ತಿ, ಉತ್ತಮ ಶಿಕ್ಷಕಿ ಪ್ರಶಸ್ತಿ ಮೊದಲಾದ ಹಲವಾರು ಪ್ರಶಸ್ತಿಗಳೂ ಲಭಿಸಿವೆ.

ಪದಗಳ ಅರ್ಥ

ಸಾಮ್ರಾಜ್ಯ–ಚಕ್ರಾಧಿಪತ್ಯ, ದೊಡ್ಡ ರಾಜ್ಯ; ಏಳುಬೀಳು–ಅಭಿವೃದ್ಧಿ ಹಾಗೂ ಪತನ; ಅವಿಸ್ಮರಣೀಯ–ಸದಾ ನೆನಪಿನಲ್ಲಿ ಉಳಿಯುವಂತಹ; ಭಿತ್ತಿ–ಗೋಡೆ, ಪ್ರಾಕಾರ–ಹೊರ ಆವರಣ; ಗರ್ಭಗೃಹ–ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿರುವ ಕೋಣೆ; ಚತುರ್ಭುಜ–ನಾಲ್ಕು ಕೈಗಳು; ತ್ರಿಮೂರ್ತಿಗಳು–ಬ್ರಹ್ಮ ಶಿವ ಮತ್ತು ವಿಷ್ಣು; ಅನಂತಶಯನ–ಹಾವಿನ ಮೇಲೆ ಮಲಗಿರುವ ವಿಷ್ಣು; ಪೌರಾಣಿಕ–ಪುರಾಣಕ್ಕೆ ಸಂಬಂಧಿಸಿದ, ನಿರ್ಭಯ–ಭಯವಿಲ್ಲದೆ, ದೇವಿ–ಪಾರ್ವತಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯದಲ್ಲಿ ಉತ್ತರಿಸಿ

1. ದಕ್ಷಿಣ ಭಾರತದಲ್ಲಿ ಮೊದಲು ಬೃಹತ್ ಸಾಮ್ರಾಜ್ಯ ಸ್ಥಾಪಿಸಿದವರು ಯಾರು ?
2. ಮೂವೇಂದರ್ ಎಂದರೆ ಯಾರು ?
3. ಪಲ್ಲವರ ರಾಜಧಾನಿ ಯಾವುದು ?
4. ಪಲ್ಲವರು ಮೊದಲು ಎಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿದರು ?
5. ಪಲ್ಲವರ ಕೊನೆಯ ಅರಸ ಯಾರು ?
6. ಪಲ್ಲವರ ರಾಜಧಾನಿಯಾಗಿದ್ದ ಕಂಚಿಯನ್ನು ಯಾವ ಚೋಳ ದೊರೆಯು ವಶಪಡಿಸಿಕೊಂಡನು?
7. ಪಲ್ಲವರ ಆಸ್ಥಾನಕ್ಕೆ ಭೇಟಿ ನೀಡಿದ್ದ ವಿದೇಶೀ ಪ್ರವಾಸಿ ಯಾರು ?
8. ಹ್ಯೂಯೆನ್‌ತ್ಸಾಂಗನು ಪಲ್ಲವ ಸಾಮ್ರಾಜ್ಯವನ್ನು ಏನೆಂದು ಕರೆದಿದ್ದಾನೆ ?
9. ಪಲ್ಲವರ ಕಾಲದ ವಾಸ್ತುಶೈಲಿಯನ್ನು ಏನೆಂದು ಕರೆಯುತ್ತಾರೆ ?
10. ಶ್ರೀಕೃಷ್ಣನ ಬೆಣ್ಣೆಯುಂಡೆ ಎಂದು ಯಾವುದನ್ನು ಕರೆಯಲಾಗುವುದು ?

9th_Kannada_Reader Term II.indd 101 29-01-2019 16:32:52

II. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಪಲ್ಲವರ ಪ್ರಸಿದ್ಧ ಅರಸರನ್ನು ಹೆಸರಿಸಿ.
2. ಮಹಾಬಲಿಪುರಂನಲ್ಲಿರುವ ಪ್ರಸಿದ್ಧ ದೇವಾಲಯಗಳು ಯಾವುವು ?
3. ಕಂಚಿಯ ವಿಶ್ವವಿದ್ಯಾಲಯದ ಬಗ್ಗೆ ಬರೆಯಿರಿ.
4. ಪಲ್ಲವರ ಕಾಲದ ದೇವಾಲಯಗಳನ್ನು ಎಷ್ಟು ರೀತಿಯಲ್ಲಿ ವಿಂಗಡಿಸಬಹುದು? ಅವು ಯಾವುವು?
5. ಕಡಲ ತೀರದ ದೇವಾಲಯ ಎಲ್ಲಿದೆ? ಅದರ ಪ್ರಾಮುಖ್ಯತೆಯೇನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಭಗೀರಥನ ಶಿಲ್ಪವನ್ನು ವರ್ಣಿಸಿ.
2. ಕಂಚಿಯ ಪ್ರಸಿದ್ಧ ದೇವಾಲಯಗಳು ಯಾವುವು?
3. ಭಾರತೀಯ ಶಿಲ್ಪಕಲೆಗೆ ಪಲ್ಲವರ ಕಾಣಿಕೆಯೇನು?

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ತಿಳಿಸಿ.

ಮರವನ್ನೇರು, ಗಂಗಾವತರಣ,
ಮಹಿಷಾಸುರ, ಚಳಿಗಾಲ,
ಓಡಾಡು

2. ಕೆಳಗಿನವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ

ಗೆಲುವು, ಜನನ, ಬೀಳು, ಉನ್ನತಿ, ಆಸೆ.

3. ಕೆಳಗಿನವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ

ಆಲಯ, ಹಾದಿ, ನೀರು, ತಾಯಿ, ಶಿವ.

ಚಟುವಟಿಕೆ

1. ಮಹಾಬಲಿಪುರಂ ಹಾಗೂ ಕಂಚಿಗೆ ಭೇಟಿ ನೀಡಿ ಅಲ್ಲಿನ ದೇವಾಲಯಗಳನ್ನು ವೀಕ್ಷಿಸಿ.
2. ಮಹಾಬಲಿಪುರಂನಲ್ಲಿ ನೀವು ಏನೇನು ನೋಡಿದಿರಿ ಎಂಬುದರ ಬಗ್ಗೆ ಪ್ರಬಂಧ ಬರೆಯಿರಿ.
3. ನಿಮ್ಮ ಸುತ್ತಲಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ.



9th_Kannada_Reader Term II.indd 102 29-01-2019 16:32:52

ಕಾವ್ಯ ಕಣಜ

ಘಟಕ ವಿಳು

ರಮ್ಯ ಸೃಷ್ಟಿ

– ಮಧುರ ಚೆನ್ನ



ಸೂರ್ಯೋದಯ ಜಗತ್ತಿನ ಜೀವರಾಶಿಗೆ ಹೊಸ ಉತ್ಸಾಹ ಹಾಗೂ ಚೇತನವನ್ನು ತುಂಬುತ್ತದೆ. ಇದು, ಮಲಗಿದ ಜೀವ ಜಗತ್ತನ್ನು ಎಬ್ಬಿಸಿ ನಿದ್ರೆಯನ್ನು ಬಿಡಿಸಿ ಹೊಸ ಜೀವಕಳೆಯನ್ನು ತುಂಬುವ ಚೈತನ್ಯ ಗಳಿಗೆ ಅತಿ ಸುಂದರ ಕ್ಷಣ. ಇಂತಹ ಸೌಂದರ್ಯದ ಕ್ಷಣವನ್ನು ಕವಿ ಅರ್ಥಪೂರ್ಣ ಪದ ರೂಪದಲ್ಲಿ ವರ್ಣಿಸಿದರೆ, ಚಿತ್ರಕಾರ ಅದನ್ನು ಕುಂಚದಲ್ಲಿ ಹಿಡಿದಿಡುತ್ತಾನೆ. ಸೃಷ್ಟಿಯ ರಮ್ಯ–ಮನೋಹರ ಸೌಂದರ್ಯಕ್ಕೆ ಮನ ಸೋಲದವರೇ ಇಲ್ಲ. ದಿನದ ಪ್ರತಿಕ್ಷಣವೂ ವಿಭಿನ್ನ ಚೆಲುವಿನಿಂದ ಕಂಗೊಳಿಸುವುದು. ಮುಂಜಾವಿನ ಸೊಬಗು ತಂಪಾಗಿದ್ದು ಮನಕ್ಕೆ ಮುದ ನೀಡಿದರೆ, ಮಧ್ಯಾಹ್ನದ ಸೊಬಗು ತಾಪವನ್ನುಂಟು ಮಾಡುವುದು, ನೆತ್ತಿಯಿಂದ ಹೊತ್ತು ಕೆಳಗಿಳಿಯುವಾಗಿನ ಹೊತ್ತು ಕೂಡ ಮನಮೋಹಕವಾಗಿರುತ್ತದೆ. ಸೂರ್ಯೋದಯದ ರಮ್ಯತೆಯನ್ನು ಕವಿಗಳು ನಾನಾ ಬಗೆಯಲ್ಲಿ ಬಣ್ಣಿಸಿದ್ದಾರೆ. ಈ ಮಧುರ ಕ್ಷಣದ ವರ್ಣನೆಯೇ ಈ ಕವನದ ಆಶಯ.



9th_Kannada_Reader Term II.indd 103 29-01-2019 16:32:52

ಮಹಾಕಾಶ ಶಿರದ ಮೇಲೆ
ಆಹಾ ! ಪೃಥ್ವಿ ನಮ್ಮ ಮುಂದೆ
ಬಾನು ಭೂಮಿ ಅಪ್ಪಿದಲ್ಲಿ
ಏನು ರಮ್ಯ ದೂರದಲ್ಲಿ !

ಪ್ರಭಾಮಯನು ವಿಭಾಕರನು
ನಭಾಂಗಣದಿ ವಿರಾಜಿಪನು
ಹಾಲು ಮೋಡ ಅಲ್ಲಿ ಇಲ್ಲಿ
ನೀಲ ಗಗನ ಅಲ್ಲಿ ಇಲ್ಲಿ !

ಹೊನ್ನ ಬಿಸಿಲು ಸೂಸಿ ಸೂಸಿ
ರನ್ನ ನೆಲದಿ ಹಾಸಿ ಹಾಸಿ
ತರುವು ಹಸಿರು ಮರವು ಹಸಿರು
ಮೆರೆವ ಹುಲ್ಲು ಹಚ್ಚ ಹಸಿರು !

ಮರದ ಸಾಲು ಮೇವ ಮೇಕೆ
ತೆರೆದ ಹಕ್ಕಿ ಏನು ಚೆಲುವು
ಎತ್ತು ಎಮ್ಮೆ ಆಡು ಆವು
ಚಿತ್ತಗೊಟ್ಟು ಮೇವ ಠೀವು !

ಹೆಣ್ಣು ಗಂಡು ಕೂಸು ಕುನ್ನಿ
ದಿನ್ನಿ ದಿಬ್ಬ ಹಾದಿ ಬೀದಿ
ಏನು ಚಂದ ಏನು ಚೆಲುವು
ಏನು ಬೇಕು ಇದಕು ಮಿಗಿಲು !

ಮಹಾಕಾಶ ಶಿರದ ಮೇಲೆ
ಆಹಾ ! ಪೃಥ್ವಿ ನಮ್ಮ ಮುಂದೆ
ಬಾನು ಭೂಮಿ ಅಪ್ಪಿದಲ್ಲಿ
ಏನು ರಮ್ಯ ದೂರದಲ್ಲಿ !

9th_Kannada_Reader Term II.indd 104 29-01-2019 16:32:52

ಕವಿ – ಕೃತಿ ಪರಿಚಯ



ಮಧುರ ಚೆನ್ನ ಎನ್ನುವ ಕಾವ್ಯ ನಾಮದಿಂದ ಪ್ರಸಿದ್ಧರಾದ ಹಲಸಂಗಿ ಚೆನ್ನಮಲ್ಲಪ್ಪ ಅವರು (ಕ್ರಿ.ಶ. 1903) ಬಿಜಾಪುರದ್ಲ ಇಂಡಿ ತಾಲ್ಲೂಕಿನ ಹಲಸಂಗಿ ಗ್ರಾಮದಲ್ಲಿ ಜನಿಸಿದರು. ಇವರು ಸ್ವಪರಿಶ್ರಮದಿಂದ ಬಂಗಾಳಿ, ಇಂಗ್ಲಿಷ್, ಮರಾಠಿ, ಗುಜರಾತಿ, ತಮಿಳು, ಪರ್ಷಿಯನ್ ಭಾಷೆಗಳನ್ನೂ ಕಲಿತರು. ಜಾನಪದ ಮತ್ತು ವಚನ ವಾಙ್ಮಯವನ್ನು ವಿಸ್ತಾರವಾಗಿ ಅಧ್ಯಯನ ಮಾಡಿದ್ದರು. ಪೂರ್ವ ರಂಗ, ಪೂರ್ವ ಯೋಗದ ಪಥದಲ್ಲಿ ಕಾಳರಾತ್ರಿ, ಬೆಳಗು ಇವರ ಪ್ರಮುಖ ಕೃತಿಗಳು. ನನ್ನ ನಲ್ಲ ಎನ್ನುವ ಕವನ ಸಂಕಲನ, ಜನಪದ ಗೀತೆಗಳ ಸಂಕಲನಗಳನ್ನೂ ಇವರು ಸಂಪಾದಿಸಿ ಪ್ರಕಟಿಸಿದ್ದಾರೆ. ಸಿಂಪಿ ಲಿಂಗಣ್ಣನವರೊಂದಿಗೆ ಕನ್ನಡದ ಕುಲಗುರು ವಿದ್ಯಾರಣ್ಯ ಎನ್ನುವ ಕೃತಿಯನ್ನೂ ಇವರು ರಚಿಸಿದ್ದಾರೆ. ಇವರು 1953ರಲ್ಲಿ ನಿಧನ ಹೊಂದಿದರು.

ಮುಂಜಾವಿನ ಸೂರ್ಯೋದಯದ ರಮ್ಯತೆಯನ್ನು ಮನದುಃಬಿ ಅಭಿವ್ಯಕ್ತಿಸುವುದೇ ಈ ಕವನದ ಒಳದನಿ. ಸೃಷ್ಟಿಯ ರಮ್ಯತೆಯನ್ನು ನೈಜಗೊಳಿಸುವುದೇ ಕವಿಯ ಇಂಗಿತ. ಪ್ರಸ್ತುತ ರಮ್ಯಸೃಷ್ಟಿ ಎನ್ನುವ ಕವನವನ್ನು ಮಧುರಚೆನ್ನ ಅವರ 'ನನ್ನ ನಲ್ಲ' ಎನ್ನುವ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ರಮ್ಯ–ಸುಂದರ, ಆಕರ್ಷಕ, ಮನೋಹರ; ಶಿರ–ತಲೆ; ವಿಭ–ಬೆಳಕು; ನಭ–ಆಕಾಶ; ತರು–ಮರ; ಆವು–ಹಸು, ಚಿತ್ತ–ಮನಸ್ಸು; ಠೀವು–ಭಿನ್ನಾಣ, ಬೆಡಗು; ಕುನ್ನಿ–ಮರಿ, ನಾಯಿಮರಿ; ದಿನ್ನಿ–ದಿಬ್ಬ; ವಿಭಾಕರ–ಸೂರ್ಯ; ರಮ್ಯ–ರಮಣೀಯ, ಮನೋಹರ; ಸೂಸು–ಚೆಲ್ಲು, ಚಿಮ್ಮು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ರಮ್ಯ ಸೃಷ್ಟಿ ಕವನದಲ್ಲಿ ಯಾವ ಸಂದರ್ಭವನ್ನು ಬಣ್ಣಿಸಲಾಗಿದೆ?
2. ಸೂರ್ಯನು ಎಲ್ಲಿ ವಿರಾಜಿಸುತ್ತಿದ್ದಾನೆ?
3. ಕವಿಯು ಸೂರ್ಯ ಎಂತಹವನೆಂದು ಹೇಳಿದ್ದಾರೆ?
4. ರಮ್ಯಸೃಷ್ಟಿ ಕವನದಲ್ಲಿ ಯಾವ ಯಾವ ಪ್ರಾಣಿಗಳು ಮೇಯುವ ಠೀವಿಯನ್ನು ವರ್ಣಿಸಲಾಗಿದೆ ?
5. ಯಾವುದರ ಚೆಲುವಿಗೆ ಮಿಗಿಲಿಲ್ಲದಂತಾಗಿದೆ?
6. ಯಾವುದೆಲ್ಲಾ ಹಸಿರಾಗಿದೆ ಎಂದು ಕವಿ ಹೇಳಿದ್ದಾರೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸೂರ್ಯೋದಯದ ಪ್ರಕೃತಿ ಸೌಂದರ್ಯ ಹೇಗಿದೆ?
2. ಜೀವರಾಶಿಯ ವರ್ಣನೆ ರಮ್ಯ ಸೃಷ್ಟಿ ಕವನದಲ್ಲಿ ಹೇಗೆ ಮೂಡಿ ಬಂದಿದೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. 'ರಮ್ಯ ಸೃಷ್ಟಿ' ಕವನದಲ್ಲಿ ಪ್ರಕೃತಿ ಸೌಂದರ್ಯದ ವರ್ಣನೆಯನ್ನು ಹೇಗೆ ಮಾಡಲಾಗಿದೆ? ವಿವರಿಸಿ.
2. ಪ್ರಾತಃಕಾಲದ ಜೀವ ಸಂಕುಲದ ಕಾರ್ಯಾರಂಭ ಹೇಗಿದೆ?
3. 'ರಮ್ಯ ಸೃಷ್ಟಿ' ಕವನದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಈ ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.

ಆಕಾಶ, ಶಿರ, ಭೂಮಿ, ರನ್ನ, ಹಕ್ಕಿ.

2. ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ

ಪೃಥ್ವಿ, ನಭ, ಹೊನ್ನು.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಮುಂದೆ, ದೂರ, ಚೆಲುವು, ಗಗನ.

9th_Kannada_Reader Term II.indd 105 29-01-2019 16:32:52

4. ಈ ಕೆಳಕಂಡ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಮಹಾಕಾಶ, ವಿಭಾಕರ, ನಭಾಂಗಣ, ಚಿತ್ತಗೊಟ್ಟು.

5. ದಿನ್ನಿ–ದಿಬ್ಬ, ಹಾದಿ–ಬೀದಿ–ಇಂತಹ ಜೋಡು ನುಡಿಗಳನ್ನು ಪಟ್ಟಿಮಾಡಿ.

ಚಟುವಟಿಕೆ

1. ಕವಿ ಮಧುರ ಚನ್ನರ ಇತರ ಕವನಗಳನ್ನು ಓದಿರಿ.
2. ಸೂರ್ಯೋದಯ ಹಾಗೂ ಪ್ರಕೃತಿ ಸೌಂದರ್ಯವನ್ನು ವರ್ಣಿಸಿರುವ ಇತರ ಕವಿಗಳ ಕವನಗಳನ್ನು ಓದಿ ತಿಳಿಯಿರಿ.



9th_Kannada_Reader Term II.indd 106 29-01-2019 16:32:53

ಪೂರಕ ಪದ್ಯ

ಘಟಕ ಏಳು

ಶುಕಭಾಷಿಣಿ

–ಡಿ.ವಿ.ಜಿ.



ಏನೇ ಶುಕಭಾಷಿಣೀ – ಇದು ।
ಏನೇ ಶುಕಭಾಷಿಣೀ – ಸುದ್ದಿ ।
ಯೇನೇ ಮನೋಲ್ಲಾಸಿನೀ ॥ ॥ ಪಲ್ಲವಿ ॥

ಆರಾರ ತೆಗಳುತಲಾರಾರ ಪೊಗಳುತ ।
ಕೀರಾಲಿಗುಸುರುವೆ ಮಾರಾಂತರಂಗವ ॥
॥ ಅನುಪಲ್ಲವಿ ॥

ಚಿಂತಾವಿಚಾರಂಗಳೇಂ – ನಿನ್ನ ।
ಸಂತೋಷ ಗೋಪ್ಯಂಗಳೇಂ ॥
ಕಾಂತಂಗದೇನೇ – ಕಾಂತಂಗಳೊಸಗೆಯ ।
ಕಾಂತೇಂ ನೀಂ ಕಳುಹಿ ಅ–ಶಾಂತನನಾಗಿಪೆ ॥ ॥ 1 ॥

ವನ್ಯ ಪ್ರವಾಸಿಯೊಳೇಂ – ನಿನ್ನ ।
ಬಿನ್ಯಾಣ ಬೂತಾಟಗಳ್ ॥
ಇನ್ನಾರುಮಿಲ್ಲವೆ ಚೆನ್ನಕೇಶವನಿಗೆ ।
ನಿನ್ನಂದ ಚಂದವ ಬಣ್ಣಿಪ ಚತುರರು ॥ ॥ 2 ॥

ಕವಿ–ಕಾವ್ಯ ಪರಿಚಯ



ದೇವನಹಳ್ಳಿಯ ವೆಂಕಟರಮಣಯ್ಯ ಗುಂಡಪ್ಪ ಅವರು ದಿನಾಂಕ 17.03.1887 ರಲ್ಲಿ ಕೋಲಾರದ ವಾಣಿಬಾಗಿಲಿನಲ್ಲಿ ಜನಿಸಿದರು. ಇವರು ಡಿ.ವಿ.ಜಿ. ಎಂಬ ಸಂಕ್ಷಿಪ್ತ ನಾಮದಿಂದ ಸಾರಸ್ವತ ಹಾಗೂ ಪತ್ರಿಕೋದ್ಯಮದಲ್ಲಿ ಪ್ರಸಿದ್ಧರಾಗಿದ್ದರು. 1932ರಲ್ಲಿ ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯ 1997ರಲ್ಲಿ ಗೌರವ ಡಾಕ್ಟರೇಟ್ ಪುರಸ್ಕಾರ ನೀಡಿ ಇವರನ್ನು ಗೌರವಿಸಿತು. ಇವರ 'ಶ್ರೀಮದ್ ಭಗವದ್ಗೀತಾ ತಾತ್ಪರ್ಯ' ಎನ್ನುವ ಕೃತಿಗೆ 1967ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯ ಗೌರವ ಸಂದಿದೆ. ಇವರು ಮಂಕುತಿಮ್ಮನ ಕಗ್ಗ, ಮರುಳಮುನಿಯನ ಕಗ್ಗ, ಉಮರನ ಒಸಗೆ, ಅಂತಃಪುರ ಗೀತೆ, ಸಂಸ್ಕೃತಿ, ನಿವೇದನಾ, ಬಾಳಿಗೊಂದು ನಂಬಿಕೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರು 07.10.1975ರಲ್ಲಿ ನಿಧನರಾದರು.

ಪದಗಳ ಅರ್ಥ

ಶುಕ–ಗಿಣಿ; ಶುಕಭಾಷಿಣಿ–ಗಿಣಿಯೊಂದಿಗೆ ಮಾತನಾಡುವವಳು; ಮನೋಲ್ಲಾಸಿನಿ–ಮನಸ್ಸಿಗೆ ಮುದ ನೀಡುವವಳು, ಮನಸ್ಸಿನಲ್ಲಿ ಉಲ್ಲಾಸವನ್ನು ತುಂಬುವವಳು; ಕೀರ–ಗಿಣಿ; ಕೀರಾಲಿ–ಗಿಣಿಗಳ ಗುಂಪು; ಮಾರ–ಮನ್ಮಥ, ಕಾಮ; ಅಂತರಂಗ–ಮನಸ್ಸಿನಲ್ಲಿರುವುದು; ಗೋಪ್ಯ–ರಹಸ್ಯ; ಕಾಂತ–ಪ್ರಿಯಕರ; ಕಾಂತೆ–ಯುವತಿ, ಪ್ರೇಯಸಿ; ವನ್ಯ–ಕಾಡು.

9th_Kannada_Reader Term II.indd 107 29-01-2019 16:32:53

ಉಪಪಠ್ಯ

ಘಟಕ ಏಳು

ಬೇವಿನ ಮರ

– ಸುಬ್ರಹ್ಮಣ್ಯ ಭಾರತಿಯಾರ್



ಈ ಕಥಾ ಭಾಗದಲ್ಲಿ ಬೇವಿನ ಮರವೊಂದು ಮಾತನಾಡುವ ಸಂದರ್ಭವನ್ನು ವರ್ಣಿಸಲಾಗಿದೆ. ಮಾತನಾಡಲಾರದ ಬೇವಿನ ಮರವೊಂದು ಇತರರಿಗೆ ಒಳಿತನ್ನು ಮಾಡಬೇಕೆನ್ನುವ ಆಶಯ ಹೊಂದಿ ಅದರಂತೆ ತನ್ನಿಂದ ಸಾಧ್ಯವಾದಷ್ಟೂ ಮಟ್ಟಿಗೆ ಹಾವಿನಿಂದ ಋಷಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತದೆ. ಆದರೆ ರಕ್ಷಿಸಲು ಸಾಧ್ಯವಾಗಲಿಲ್ಲ. ಇದಾದ ನಂತರ ನಡೆದ ಘಟನೆಯಲ್ಲಿ ಆ ಬೇವಿನ ಮರದ ಉದಾತ್ತ ಮನೋಧರ್ಮವನ್ನು ಈ ಮೊದಲೇ ಅರಿತಿದ್ದ ಋಷಿಗಳು ಮರವನ್ನು ಆಶೀರ್ವದಿಸಿದ ಸಂದರ್ಭವನ್ನು ಇಲ್ಲಿ ಚಿತ್ರಿಸಲಾಗಿದೆ. ಇದನ್ನರಿತ ಮಾನವನೂ ಕೂಡ ಆ ಬೇವಿನ ಮರದ ಉತ್ತಮ ಗುಣಗಳನ್ನು ಬೇಡುವ ಸಂದರ್ಭವನ್ನು ಇಲ್ಲಿ ಕಾಣಬಹುದಾಗಿದೆ.

ಎಳೆ ಬೇಸಿಗೆಯಲ್ಲಿ ಒಂದು ದಿನ ಬೆಳಿಗ್ಗೆ ನಾನು ಮಲಯಗಿರಿಯ ಪಕ್ಕದಲ್ಲಿ ಒಂಟಿಯಾಗಿ ತಿರುಗಾಡುತ್ತಿದ್ದೆ. ಸಾಕಷ್ಟು ದೂರ ಸುತ್ತಿದ ಮೇಲೆ ನನ್ನ ಮೈ ಕೊಂಚ ಬಳಲಿತು. ಆ ಬಳಲಿಕೆ ತೀರುವುದಕ್ಕಾಗಿ ಅಲ್ಲಿಯ ತೋಪೊಂದಕ್ಕೆ ಹೋಗಿ ಒಂದು ಬೇವಿನ ಮರದಡಿಯಲ್ಲಿ ಮಲಗಿಕೊಂಡೆ. ಹಿತವಾದ ಗಾಳಿ ಬೀಸಿತು. ಕೊಂಚ ಹೊತ್ತಿನಲ್ಲೇ ಕಣ್ಣು ಜೋಲಿ ಬಂದು ನಿದ್ರೆಯಲ್ಲಿ ಮುಳುಗಿದೆ. ಆಗ ನಾನು ಕಂಡ ಒಂದು ಅಪೂರ್ವವಾದ ಕನಸನ್ನು ಇಲ್ಲಿ ಬರೆಯುತ್ತಿದ್ದೇನೆ.

ನಾನು ಮಲಗಿದ್ದಾಗ, 'ಲೇ ಮನುಷ್ಯಾ, ಲೇ ಮನುಷ್ಯಾ... ಏಳು ಏಳು!' ಎಂದು ಒಂದು ಅಮಾನುಷವಾದ ಧ್ವನಿ ಕೇಳಿಸಿತು. ಆ ಧ್ವನಿ ಕೇಳಿದೊಡನೆ ನಾನು ಕಣ್ಣು ತೆರೆದೆ. ನಿಜವಾಗಿಯೂ ನಾನು ಕಣ್ಣು ತೆರೆಯಲಿಲ್ಲ; ಕನಸಿನಲ್ಲಿ ತೆರೆದೆ. ಎಂದರೆ ಕಣ್ಣು ತೆರೆದಂತೆ ನಾನು ಕನಸು ಕಂಡೆ.

ಕಣ್ಣು ಬಿಟ್ಟು, 'ಯಾರು ಕೂಗಿದ್ದು ?' ಎಂದು ಕೇಳಿದೆ.

'ನಾನೇ ! ಬೇವಿನ ಮರ ! ನಾನೇ ಕೂಗಿದ್ದು. ಏಳು...' ಎಂದು ಉತ್ತರ ಬಂತು.

ಒಡನೆ ನಾನು ಯೋಚಿಸ ತೊಡಗಿದೆ...

'ಓಹೋ! ಓಹೋ! ಇದು ದೆವ್ವವೋ, ಪಿಶಾಚಿಯೋ ? ಯಕ್ಷರು ಕಿನ್ನರರು ಗಂಧರ್ವರು ಮೊದಲಾದ ದೈವ ಜಾತಿಯೋ ? ವನದೇವತೆಗಳೋ? ಯಾರೋ ತಿಳಿಯಲಿಲ್ಲ. ಇಲ್ಲದಿದ್ದರೆ ಬೇವಿನ ಮರ ಮಾತನಾಡುವುದುಂಟೇ? ಲೇ ಹೋಗೋ, ದೆವ್ವ ಯಾವುದು? ಅದೆಲ್ಲ ಶುದ್ಧ ಕಟ್ಟುಕಥೆಯಲ್ಲವೇ? ನಾನು ನಿಜವಾಗಿಯೂ ಕಣ್ಣು ಬಿಟ್ಟು ಜಾಗೃತಾವಸ್ಥೆ ಪಡೆಯಲಿಲ್ಲ. ಇನ್ನೂ ಕನಸಿನ ಅವಸ್ಥೆಯಲ್ಲಿಯೇ ಇದ್ದೇನೆ... ಈ ಧ್ವನಿ ಕನಸಿನಲ್ಲಿಯ ಒಂದು ಕಲ್ಪನೆ – ಹೀಗೆ ನಾನು ಯೋಚನೆ ಮಾಡುತ್ತಿದ್ದಾಗ, 'ಲೇ ಮನುಷ್ಯ, ಲೇ ಮನುಷ್ಯಾ.. ಏಳು...' ಎಂದು ಮತ್ತೆ ಕೂಗು ಕೇಳಿಸಿತು.

'ನೀನು ಯಾರು ?' ಎಂದು ನಾನು ಮತ್ತೆ ಕೇಳಿದೆ.

9th_Kannada_Reader Term II.indd 108 29-01-2019 16:32:53

'ನಾನು ಬೇವಿನ ಮರ. ನನ್ನ ಅಡಿಯಲ್ಲಿ ತಾನೇ ನೀನು ಮಲಗಿದ್ದೀಯೆ. ನಿನಗೆ ಕೆಲವು ಸರಿಯಾದ ವಿಷಯಗಳನ್ನು ಕಲಿಸಿ ಕೊಡುವುದಕ್ಕಾಗಿ ಎಬ್ಬಿಸುತ್ತಿದ್ದೇನೆ' ಎಂದು ಉತ್ತರ ಬಂತು.

ಆಗ ನಾನು, 'ಸರಿ, ನಮಗೆ ತಿಳಿಸುವ ವಿಷಯಗಳು ಲೋಕದಲ್ಲಿ ಇದೆ ಎಂದು ಷೇಕ್ಸ್‌ಪಿಯರ್ ಹೇಳಿದ್ದಾನೆ. ಹಾಗೆಯೇ ಮರಗಳಿಗೂ ಮಾತನಾಡುವ ಶಕ್ತಿ ಇರಬಹುದು. ಆ ವಿಷಯ ನಮಗೆ ಈವರೆಗೆ ತಿಳಿಯದಿರಬಹುದು. ಆದ್ದರಿಂದ ಈ ಮರದೊಂದಿಗೆ ಸಂಭಾಷಣೆ ನಡೆಸಿ, ವಿಷಯ ತಿಳಿದುಕೊಳ್ಳೋಣ' ಎಂದೆಣಿಸಿ ಕಣ್ಣು ತೆರೆದು ಎದ್ದು ನಿಂತೆ.

(ನಿಜವಾಗಿಯೂ ಎದ್ದು ನಿಲ್ಲಲಿಲ್ಲ. ಕನಸಿನಲ್ಲಿ ಎದ್ದು ನಿಂತುಕೊಂಡೆ) ಎದ್ದು ನಿಂತುಕೊಂಡು, 'ಬೇವಿನ ಮರವೇ! ನಿನಗೆ ಮನುಷ್ಯ ಭಾಷೆ ಹೇಗೆ ಬರುತ್ತದೆ ? ಮನುಷ್ಯರ ಹಾಗೆ ಹೃದಯ, ಬಾಯಿ, ಗಂಟಲು, ಅಂಗಳು, ನಾಲಗೆ, ಹಲ್ಲು, ಒಸಡು – ಈ ಅಂಗಗಳು ಇಲ್ಲದಿರುವಾಗ ಮನುಷ್ಯರ ಭಾಷೆಯನ್ನು ಆಡುವುದು ಸಾಧ್ಯವಾಗುವುದಿಲ್ಲವಲ್ಲ! ನಮ್ಮಲ್ಲಿ ಹಲ್ಲು ಮಾತ್ರ ಬಿದ್ದವರಿಗೂ ಉಚ್ಚಾರಣೆ ಸರಿಯಾಗಿ ಬರದೇ ಹೋಗುತ್ತದೆ. ಕಿರುನಾಲಗೆ ಇಲ್ಲದವರು ಮೂಗರಾಗಿ ಬಿಡುತ್ತಾರಲ್ಲ. ಹಾಗಿರುವಾಗ ನೀನು ಮನುಷ್ಯ ಶರೀರ ಇಲ್ಲದೆ ಮನುಷ್ಯ ಭಾಷೆಯನ್ನು ಹೇಗೆ ಆಡುತ್ತೀಯೆ? ಎಂದು ಕೇಳಿದೆ.

ಆಗ ಆ ಬೇವಿನ ಮರ ಹೇಳಿತು :

'ಕೇಳೋ ಮನುಷ್ಯಾ! ಮನುಷ್ಯನಿಗೆ ಒಂದೇ ಬಾಯಿ. ನನಗೆ ಮೈಯೆಲ್ಲಾ ಬಾಯಿ. ಮನುಷ್ಯ ಭಾಷೆ ಆಡುವುದಕ್ಕೆ ಬಾಯಿ ಮೊದಲಾದ ಬಾಹ್ಯ ಸಾಧನಗಳು ಮನುಷ್ಯರಂತೆಯೇ ಇರುವುದು ಅವಶ್ಯಕ ಎಂದು ನೀನು ಎಣಿಸುತ್ತೀಯೆ. ಸಾಧಾರಣ ಸ್ಥಿತಿಯಲ್ಲಿ ಅವು ಅವಶ್ಯಕವೇ. ಆದರೆ ನಾನು ಕೇವಲ ಮರವಲ್ಲ. ನಾನು ಅಗಸ್ತ್ಯ ಮುನಿಗಳ ಶಿಷ್ಯ. ತಮಿಳು ಭಾಷೆಯಲ್ಲಿ ನನಗಿರುವ ಜ್ಞಾನ ಈ ಕಾಲದಲ್ಲಿ ಅಗಸ್ತ್ಯರನ್ನು ಬಿಟ್ಟು ಬೇರೆ ಯಾರಿಗೂ ಇಲ್ಲ...

ಬೇವಿನ ಮರ ಹೀಗೆಯೇ ಹೇಳತೊಡಗಿತು...

'ನಡೆದ ಕಥೆಯನ್ನು ಬುಡದಿಂದ ಹೇಳುತ್ತೇನೆ. ಮನುಷ್ಯ, ಗಮನಿಸಿ ಕೇಳು. ನನಗೆ ಈಗ ಮೂವತ್ತು ವರ್ಷಗಳು. ನಾನು ಎಳೆಯ ಮರ. ಹದಿನೈದು ವರ್ಷಕ್ಕೆ ಮುಂಚೆ ಒಂದು ದಿನ ವಸಂತ ಕಾಲದಲ್ಲಿ ರಾತ್ರಿಯ ವೇಳೆ ಆಶ್ಚರ್ಯಕರವಾದ ಬೆಳದಿಂಗಳು ಸೂಸುತ್ತಿತ್ತು. ನಾನು ಕಣ್ಣು ತೆರೆದುಕೊಂಡಿದ್ದೆ. ಸಾಧಾರಣವಾಗಿ ಮರಗಳು ಮನುಷ್ಯರ ಹಾಗೆಯೇ ಹಗಲೆಲ್ಲಾ ಎದ್ದಿರುತ್ತವೆ. ರಾತ್ರಿಯಾದೊಡನೆ ಮಲಗಿಕೊಳ್ಳುತ್ತವೆ. ಆ ರಾತ್ರಿ ನನಗೆ ಯಾವ ಕಾರಣದಿಂದಲೋ ನಿದ್ರೆಯೇ ಬರಲಿಲ್ಲ. ಬೆಳದಿಂಗಳನ್ನೂ, ಬಾನನ್ನೂ, ಸುತ್ತಲಿನ ಮರಗಳನ್ನೂ ನೋಡಿಕೊಂಡು ಬ್ರಹ್ಮಾನಂದದಲ್ಲಿ ಮಗ್ನನಾಗಿದ್ದೆ. ಆಗ ಹದಿನಾರು ವಯಸ್ಸಿನ ಯುವಕನೊಬ್ಬ ಅವನಿಗಿಂತ ಸುಂದರಳಾದ ಹನ್ನೆರಡು ವಯಸ್ಸಿನ ಸ್ತ್ರೀಯೊಬ್ಬಳೊಡನೆ ಅಲ್ಲಿ ಕಾಣುವ ನದಿಯಲ್ಲಿ ಆಟವಾಡುತ್ತಿರುವುದನ್ನು ಕಂಡೆ. ಕೊಂಚ ಹೊತ್ತಿನಲ್ಲೇ ಆ ಇಬ್ಬರೂ ಸಾಮಾನ್ಯ ಮನುಷ್ಯರಲ್ಲ ಎಂಬುದು ನನಗೆ ತಿಳಿದು ಹೋಯಿತು. ರೆಕ್ಕೆ ಇಲ್ಲದೆ ಅವರು ಬಾನಲ್ಲಿ ಹಾರಿ, ಆಟವಾಡುವುದನ್ನುಕಂಡೆ. ಮತ್ತೆ ಒಬ್ಬರಿಗೊಬ್ಬರು ಆಡಿಕೊಂಡು ಮಾತುಗಳಿಂದ ಅವರು ಇಂತಹವರೆಂಬುದನ್ನೂ ತಿಳಿದುಕೊಂಡೆ. ಅವರಿಬ್ಬರೂ ಯಾರೆಂದರೆ – ಅಗಸ್ತ್ಯ ಮುನಿ ಹಾಗೂ ತಾಮ್ರಪರ್ಣಿಯಮ್ಮ. ಅಗಸ್ತ್ಯರು ಸಾಧಾರಣ ಕಾಲದಲ್ಲಿ ಹೆಬ್ಬೆರಳು ಗಾತ್ರದ ರೂಪವನ್ನು ಧರಿಸುವುದು ರೂಢಿ. ಆದರೆ ಅವರು ಕಾಮರೂಪಿ. ಅಂದರೆ ಅಂದುಕೊಂಡಾಗ ತಮಗೆ ಬೇಕಾದ ರೂಪವನ್ನು ತಾಳುವ ಶಕ್ತಿಯನ್ನು ಪಡೆದವರು. ತಾಮ್ರಪರ್ಣಿಯಮ್ಮನೂ ಹಾಗೆಯೇ. ಆದ್ದರಿಂದ ಅವರಿಬ್ಬರೂ ಆಗ ಅತಿ ಸುಂದರವಾದ ಮನುಷ್ಯ ರೂಪ ಧರಿಸಿ ಆಟವಾಡುತ್ತಿದ್ದರು. ಅವರ ಕ್ರೀಡೆ ಬೆಳಗಾಗುವತನಕ ನಡೆಯಿತು. ಆಮೇಲೆ ತಾಮ್ರಪರ್ಣಿ ಮರೆಯಾಗಿ ಬಿಟ್ಟಳು.

ಬೇವಿನ ಮರ ಮುಂದುವರೆಸಿತು...

'ಕೇಳೋ ಮನುಷ್ಯಾ ! ಗಮನಿಸಿ ಕೇಳು. ತಾಮ್ರಪರ್ಣಿಯಮ್ಮ ಹಗಲನ್ನು ಕಂಡ ಒಡನೆ ಮರೆಯಾಗಿ ಬಿಟ್ಟಳು. ಅಗಸ್ತ್ಯನು ಮಾತ್ರ ಒಂಟಿಯಾಗಿ ಬಂದು ನನ್ನ ಅಡಿಯಲ್ಲಿ ಈಗ ನಿಂತಿರುವಲ್ಲಿಯೇ ಮಲಗಿಕೊಂಡು, ಯೋಗ ನಿದ್ರೆಯಲ್ಲಿ ಮಗ್ನರಾದರು. ನನಗೆ ಆ ಸಮಯದಲ್ಲಿ ಅಗಸ್ತ್ಯರ ಶಕ್ತಿ ಸಾಮರ್ಥ್ಯಗಳ ಪರಿಚಯವಿರಲಿಲ್ಲ. ಆದ್ದರಿಂದ ಯೋಗದಲ್ಲಿದ್ದಾರೆ

9th_Kannada_Reader Term II.indd 109 29-01-2019 16:32:53

ಎಂಬುದನ್ನು ಅರಿಯದೆ ಜಲಕ್ರೀಡೆಯ ಶ್ರಮದಿಂದ ಸಾಧಾರಣ ನಿದ್ರೆಯಲ್ಲಿದ್ದಾರೆ ಎಂದು ಎಣಿಸಿದೆ. ಹೊತ್ತು ಹುಟ್ಟಿ ಹೆಚ್ಚು ಕಡಿಮೆ ಒಂದು ಜಾವವಾಯಿತು. ಆಗ ಅದೋ, ನಿನ್ನೆದುರು ಒಂದು ಹುಣಿಸೆ ಮರ ನಿಂತಿದೆ ನೋಡು! ಆ ಮರದ ಕೆಳಗಿರುವ ಹುತ್ತದಿಂದ ಒಂದು ದೊಡ್ಡ ನಾಗರಹಾವು ಬುಸ್ ಎಂದು ಬುಸುಗುಟ್ಟುತ್ತಾ, ಅಗಸ್ತ್ಯರು ಮಲಗಿದ್ದ ಸ್ಥಳವನ್ನು ನೋಡಿ ಹಾರಿ ಹಾರಿ ಬಂತು. ಅದನ್ನು ನೋಡಿದ ಮಾತ್ರಕ್ಕೇ ನಾನು ದಿಗಿಲುಬಿದ್ದು ಹೋದೆ. 'ಅಯ್ಯೋ! ಈ ಕೆಟ್ಟ ಹಾವು ಈ ಮಹಾಪುರುಷನನ್ನು ಕೊಲ್ಲುವುದಲ್ಲ, ಇವರನ್ನು ಹೇಗಾದರೂ ಕಣ್ಣು ತೆರೆಯುವಂತೆ ಮಾಡುವುದಾದರೆ ತಮ್ಮ ತಪಃಶಕ್ತಿಯಿಂದ ಈ ಹಾವನ್ನು ಅಡಗಿಸಿ ಬಿಡುತ್ತಾರೆ' ಎಂದೆಣಿಸಿ ಅವರ ಕಣ್ಣು ತೆರೆಸಬೇಕೆಂಬ ಎಣಿಕೆಯಿಂದ ನನ್ನ ಎಲೆಗಳನ್ನು ಅವರ ಮೇಲೆ ಸುರಿಸಿದೆ. ಅವರು ಎಚ್ಚರಗೊಳ್ಳಲಿಲ್ಲ. ಇಷ್ಟರಲ್ಲಿ ಹಾವು ಅವರನ್ನು ಸಮೀಪಿಸಿ, ಅವರ ಕಾಲನ್ನು ಎರಡು ಸಲ ಕಚ್ಚಿತು. ಮೂರನೇ ಸಲ ಕಡಿಯುವುದಕ್ಕಾಗಿ ಹೆಡೆ ಹೆತ್ತಿತು. ಆ ಸಮಯದಲ್ಲಿ ಅವರು ಕಣ್ಣು ತೆರೆದು ನೋಡಿ, ಹಗ್ಗವನ್ನು ಎತ್ತುವಂತೆ ಸುಲಭವಾಗಿ ಆ ಹಾವನ್ನು ಕೈಯಿಂದ ಎತ್ತಿಕೊಂಡು ಕತ್ತಿನಲ್ಲಿ ಸುತ್ತಿಕೊಂಡರು. ಆ ಹಾವು ಹಗ್ಗದ ಹಾಗೆಯೇ ಏನೂ ಮಾಡದೆ ಪರಮಸಾಧುವಾಗಿ ಅವರ ಕತ್ತಿನಲ್ಲಿ ಬಿದ್ದುಕೊಂಡಿತ್ತು. ಹಾವು ಕಚ್ಚಿದ ಸ್ಥಳದಲ್ಲಿ ಬಸಿಯುತ್ತಿತ್ತು. ಅವರು ಕೊಂಚ ಮಣ್ಣು ತೆಗೆದು ಅಲ್ಲಿ ಸವರಿದರು. ಗಾಯ ಕೂಡಲೇ ಮಾಗಿ ಆ ಸ್ಥಳದಲ್ಲಿ ಮತ್ತೆ ಮೊದಲಿನಂತೆ ಸಾಧಾರಣ ಚರ್ಮ ಕಾಣಿಸಿತು. ಇದನ್ನು ಕಂಡು ನಾನು ತುಂಬಾ ಆಶ್ಚರ್ಯಪಟ್ಟೆ, ಇಂತಹ ಮಹನೀಯರಲ್ಲಿ ಒಂದು ಮಾತು ಆಡಲು ಕೂಡ ಯೋಗ್ಯತೆ ಇಲ್ಲದಂತೆ ಮೂಗು ಮರವಾಗಿ ಹುಟ್ಟಿಬಿಟ್ಟೆನಲ್ಲ' ಎಂದು ದುಃಖಪಟ್ಟೆ. ಹೇಗಾದರೂ ನನ್ನ ಅಭಿಪ್ರಾಯವನ್ನು ಅವರಿಗೆ ತಿಳಿಸಬಯಸಿ, ಅವರ ಕಾಲ ಮೇಲೆ ಕೆಲವು ಹೂವುಗಳನ್ನೂ, ಎಲೆಗಳನ್ನೂ ಸುರಿಸಿದೆ. ಅವರು ತಲೆಯೆತ್ತಿ ನನ್ನನ್ನು ನೋಡಿ, 'ಬೇವಿನ ಮರವೇ!' ಎಂದು ಕರೆದರು.

'ಕೇಳೋ ಮನುಷ್ಯಾ, ಗಮನಿಸಿ ಕೇಳು! ಹೀಗೆ ನನ್ನನ್ನು ಅಗಸ್ತ್ಯರು ಕೂಗಿದ ಕೂಡಲೇ ನನಗೇ ತಿಳಿಯದಂತೆ ನನ್ನ ಕೊಂಬೆಗಳಲ್ಲಿದ್ದ ಬಾಯಿಗಳಿಂದ, 'ಏನು ಮುನಿಗಳೇ!?' ಎಂಬ ತಮಿಳು ಮಾತುಗಳು ಹೊರಹೊಮ್ಮಿದವು. ನನ್ನ ಮೈಯೆಲ್ಲಾ ಪುಳಕಿತವಾಯಿತು. ಮಾತು ಹುಟ್ಟುವ ಬಗೆಯನ್ನು ಅರಿತುಕೊಂಡೆ. ಬೇವಿನ ಮರದ ಜನ್ಮ ಹೋಗಿ ಮನುಷ್ಯ ಜನ್ಮ ಬಂತು ಎಂದು ತಿಳಿದುಕೊಂಡೆ. ಮೈ ಬದಲಾಯಿಸಲಿಲ್ಲ. ಮೈ ಬದಲಾಯಿಸಿದರೇನು, ಬದಲಾಯಿಸದಿದ್ದರೇನು ? ನಾನು ಮೈ ಅಲ್ಲ; ನಾನು ಆತ್ಮ. ನಾನು ಬೋಧೆ. ನಾನು ಅರಿವು. ತಟಕ್ಕನೆ ಬೇವಿನ ಮರದ ಶಬ್ದ ಬದಲಾಯಿಸಿ ನನ್ನಲ್ಲಿ ಮನುಷ್ಯ ಚಿತ್ತ ಉಂಟಾಯಿತು. ಮನುಷ್ಯ ಚಿತ್ತ ಉಂಟಾಗದೆ ಮನುಷ್ಯ ಭಾಷೆ ಆಡಬರುತ್ತದೆಯೇ ? ಕೋಟಿ ಜನ್ಮಗಳಲ್ಲಿ ನಾನು ಪಡೆಯಬೇಕಾಗಿದ್ದ ಫಲವನ್ನು ಆ ಮುನಿಗಳು ಒಂದೇ ಕ್ಷಣದಲ್ಲಿ ಅನುಗ್ರಹಿಸಿದರು. ನನಗುಂಟಾದ ಆನಂದಾತಿಶಯದಿಂದ ನನ್ನ ಹೂಗಳನ್ನೂ, ಎಲೆಗಳನ್ನೂ ಅಸಂಖ್ಯಾತವಾಗಿ ಅವರ ಪಾದಗಳ ಮೇಲೆ ಸುರಿಸಿದೆ. ಅವರು ತುಂಬ ಹರ್ಷಗೊಂಡು, 'ಎಲೆ ಬೇವಿನ ಮರವೇ! ನೆನ್ನೆ ರಾತ್ರಿ ನಾನೂ, ತಾಮ್ರಪರ್ಣಿಯೂ ಇಲ್ಲಿ ರಾಮ ನದಿಯಲ್ಲಿ ಜಲಕ್ರೀಡೆಯಾಡುತ್ತಿದ್ದಾಗ ನೀನು ನೋಡಿ ಅತಿಶಯ ಸಂತೋಷದಿಂದ ಹಲವು ಆಶೀರ್ವಾದಗಳನ್ನು ಮಾಡಿದೆ. ಅದನ್ನು ನಾನು ಜ್ಞಾನ ದೃಷ್ಟಿಯಿಂದ ತಿಳಿದೆ. ಆಮೇಲೆ ಕೊಂಚ ಹೊತ್ತಿಗೆ ಮುಂಚೆ ನಾನು ಯೋಗ ಸಮಾಧಿಯಲ್ಲಿದ್ದಾಗ ಈ ಹಾವು ಬರುವುದನ್ನು ಕಂಡು ನೀನು ನನ್ನನ್ನು ಕಾಪಾಡ ಬಯಸಿ, ನನ್ನನ್ನು ಎಬ್ಬಿಸುವುದಕ್ಕಾಗಿ ನನ್ನ ಮೇಲೆ ನಿನ್ನ ಎಲೆಗಳನ್ನೂ ಹೂಗಳನ್ನೂ ಸುರಿಸಿದೆ. ಹೀಗೆ ನೀನು ನನ್ನ ವಿಷಯದಲ್ಲಿ ತೋರಿಸಿದ ಪ್ರೀತಿಗೆ ಪ್ರತ್ಯುಪಕರವಾಗಿ ನಿನಗೆ ನಾನು ಋಷಿ ಬೋಧೆ ಕೊಡುತ್ತೇನೆ. ಅದರಿಂದ ನಿನಗೆ ಸಕಲ ಜೀವಜಂತುಗಳ ಭಾಷೆಗಳಲ್ಲೂ ಉತ್ತಮ ಜ್ಞಾನ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ಎಲ್ಲಾ ಜಂತುಗಳ ವಿಷಯದಲ್ಲೂ ಸಮಾನ ದೃಷ್ಟಿ, ಸಮಾನ ಪ್ರೀತಿಗಳು ಉಂಟಾಗುತ್ತವೆ. ಎಲ್ಲಾ ಜೀವಿಗಳ ವಿಷಯದಲ್ಲೂ ತನ್ನನ್ನೇ ಕಾಣುವ ದೇವದೃಷ್ಟಿ ಏರ್ಪಡುತ್ತದೆ. ಇದರಿಂದ ನೀನು ಜೀವನ್ಮುಕ್ತಿ ಹೊಂದುತ್ತೀಯೆ' ಎಂದರು. ಅದು ಮೊದಲು ನಾನು ಅವರು ಹೇಳಿದ ಶಕ್ತಿಗಳನ್ನೆಲ್ಲ ಪಡೆದು ಯಾವೊಂದು ಚಿಂತೆಯೂ, ಯಾವೊಂದು ಭಯವೂ ಇಲ್ಲದೆ ಜೀವನ್ಮುಕ್ತಿ ಸ್ಥಿತಿಯನ್ನು ಪಡೆದು

9th_Kannada_Reader Term II.indd 110 29-01-2019 16:32:53

ಬಾಳುತ್ತಾ ಬಂದಿದ್ದೇನೆ. ಒಡನೇ ನಾನು ಆ ಬೇವಿನ ಮರದಡಿಯಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದೆ. ನಿನಗೇನು ಬೇಕು ?' ಎಂದು ಅದು ಕೇಳಿತು. ಆಗ ನಾನು, ಆ ಬೇವಿನ ಮರವನ್ನು ನೋಡಿ, 'ನಿನಗೆ ಹೇಗೆ ಅಗಸ್ತ್ಯನು ಗುರುವೋ ಹಾಗೆ ನೀನು ನನಗೆ ಗುರು. ಆ ಮುನಿಗಳು ಕರುಣಿಸಿದ ಜೀವನ್ಮುಕ್ತಿ ಸ್ಥಿತಿಯನ್ನು ನೀನು ನನಗೆ ಕರುಣಿಸಬೇಕು' ಎಂದು ಪ್ರಾರ್ಥನೆ ಮಾಡಿದೆ.

'ಕೊಟ್ಟೆ' ಎಂದು ಬೇವಿನ ಮರ ನುಡಿಯಿತು.

ಈ ಸಮಯದಲ್ಲಿ ನಾನು ನಿಜವಾಗಿಯೂ ನಿದ್ರೆ ತಿಳಿದು ಕಣ್ಣು ಬಿಟ್ಟು ಎದ್ದು ನಿಂತೆ. ಹಲವು ಬಗೆಯ ಗುಬ್ಬಚ್ಚಿಗಳು ಹಾರಾಡುತ್ತಿದ್ದವು. ಓತಿಕ್ಯಾತಗಳೂ, ಹಲ್ಲಿಗಳೂ ಆಟವಾಡುತ್ತಿದ್ದವು. ಕಾಗೆಗಳೂ, ಗಿಳಿಗಳೂ, ಚಿಟ್ಟೆಗಳೂ ಹಲವು ಬಗೆಯ ದುಂಬಿಗಳೂ ಕಾಂತಿ ಸಮುದ್ರದಲ್ಲಿ ಅಮಲು ದೋಣಿಯಲ್ಲಿ ಈಜುವಂತೆ ಸಂಚರಿಸ ಬಂದವು. ಕಣ್ಣಿಗೆ ಗೋಚರವಾಗದೆ ಮರೆಯಲ್ಲಿದ್ದ ಒಂದು ಗಂಡು ಕೋಗಿಲೆಯೂ ಒಂದು ಹೆಣ್ಣು ಕೋಗಿಲೆಯೂ ಒಂದಕ್ಕೊಂದು ಪ್ರೇಮಗೀತೆಗಳನ್ನು ಹಾಡುತ್ತಿದ್ದವು.

ಗಂಡು ಕೋಗಿಲೆ ಹಾಡುತ್ತದೆ;

ತೂಹಿ, ತೂಹಿ, ತೂಹಿ...

ತೂಹಿ, ತೂಹಿ, ತೂಹಿ...

ರಾಧಾ... ರೇ...

(ನೀ, ನೀ, ನೀ

(ನೀ, ನೀ, ನೀ

ರಾಧೆ ಕಣೇ)

ಹೆಣ್ಣು ಕೋಗಿಲೆ ಹಾಡುತ್ತದೆ;

ತೂಹಿ, ತೂಹಿ, ತೂಹಿ...

ರಾಧಾ ಕೃಷ್ಣ ಕೃಷ್ಣ ರೇ.

ಬೇವಿನ ಮರ ತನ್ನ ಹಸಿರೆಲೆಗಳನ್ನು ಬಿಸಿಲಲ್ಲಿ ಮೆಲ್ಲಮೆಲ್ಲಗೆ ಅಲುಗಿಸುತ್ತಿತ್ತು. 'ಎಂಥಾ ಆಶ್ಚರ್ಯಕರವಾದ ಕನಸು ಕಂಡೆ !' ಎಂದು ಎಣಿಸಿ ಬೆರಗಾದೆ. ಇಷ್ಟರಲ್ಲಿ ಬಿಸಿಲೇರಿತು. ನನಗೂ ಹಸಿವೇರತೊಡಗಿತು. ಬೇವಿನ ಮರಕ್ಕೆ ಒಂದು ನಮಸ್ಕಾರ ಹಾಕಿ ತೋಪಿನಿಂದ ಹೊರಗೆದ್ದು ಮನೆಗೆ ಬಂದು ಸೇರಿದೆ.

ಕೃತಿ – ಕರ್ತೃ ಪರಿಚಯ



ತಮಿಳು ಸಾಹಿತ್ಯಕ್ಕೆ ಹೊಸ ಆಯಾಮ ನೀಡುವ ಮೂಲಕ ಅದರ ನವೋದಯಕ್ಕೆ ಕಾರಣರಾದವರು ಭಾರತಿಯಾರರು. ತಮಿಳು ಜನಾಂಗಕ್ಕೆ ಹೊಸ ಚೈತನ್ಯ ನೀಡಿದವರು. ಎಟ್ಟೆಯಪುರಂ ಎನ್ನುವ ಗ್ರಾಮದಲ್ಲಿ ಡಿಸೆಂಬರ್ 11, 1882ರಲ್ಲಿ ಚಿನ್ನಸ್ವಾಮಿ ಸುಬ್ರಹ್ಮಣ್ಯ ಅಯ್ಯರ್ ಹಾಗೂ ಲಕ್ಷ್ಮಿ ಅಮ್ಮಾಳ್ ಎನ್ನುವ ದಂಪತಿಗಳಿಗೆ ಇವರು ಜನಿಸಿದರು. ಬಾಲ್ಯದಲ್ಲಿಯೇ ಕವನಗಳನ್ನು ರಚಿಸುವುದರ ಮೂಲಕ ಕವನಗಾರ ಭಾರತಿ ಎನ್ನುವ ಬಿರುದನ್ನು ಇವರು ಪಡೆದಿದ್ದರು. ತಮಿಳು ದಿನಪತ್ರಿಕೆ 'ಸ್ವದೇಶೀ ಮಿತ್ರನ್'ನ ಸಹ ಸಂಪಾದಕರಾಗಿ ಇವರು ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ, ಚಕ್ರವರ್ತಿನಿ ಎನ್ನುವ ಒಂದು ಮಾಸಪತ್ರಿಕೆಯನ್ನೂ ಇವರು ಪ್ರಾರಂಭಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದರು. ಪಾಂಚಾಲಿ ಶಪಥಂ, ಕಣ್ಣನ್ ಪಾಟ್ಟು, ಪಾಪಾ ಪಾಟ್ಟು, ಕುಯಿಲ್ ಪಾಟ್ಟು ಮೊದಲಾದವು ಇವರ ಕೃತಿಗಳು. ಸ್ವಾತಂತ್ರ್ಯ ಹೋರಾಟ, ಸ್ತ್ರೀ ಸ್ವಾತಂತ್ರ್ಯ, ಸಮಾಜ ಸುಧಾರಣೆ, ರಾಜಕೀಯ ಎಲ್ಲಾ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರನ್ನು ಮಹಾಕವಿ ಎಂದು ಕರೆಯಲಾಗುತ್ತದೆ. 1921, ಸೆಪ್ಟೆಂಬರ್ 11ನೇ ತಾರೀಖು ಇವರು ಕಾಲವಾದರು.

9th_Kannada_Reader Term II.indd 111 29-01-2019 16:32:53

ಪದಗಳ ಅರ್ಥ

ತೋಪು–ಮರಗಳ ಗುಂಪು; ಅಪೂರ್ವ–ಅಪರೂಪ; ಅಮಾನುಷ–ಮನುಷ್ಯರಿಗೆ ಸಂಬಂಧಿಸಿಲ್ಲದ, ಮನುಷ್ಯರಿಗೆ ಮೀರಿದ; ಜಾಗೃತಾವಸ್ಥೆ–ಎಚ್ಚರದ ಸ್ಥಿತಿ; ಷೇಕ್ಸ್‌ಪಿಯರ್–ಇಂಗ್ಲಿಷ್‌ನ ಪ್ರಸಿದ್ಧ ಲೇಖಕ; ಸಂಭಾಷಣೆ–ಮಾತುಕತೆ, ಇಬ್ಬರು ಪರಸ್ಪರ ಮಾತನಾಡಿಕೊಳ್ಳುವುದು; ಅಂಗಳು–ಬಾಯಿಯ ಒಳಭಾಗ; ಶರೀರ–ದೇಹ; ಬಾಹ್ಯ–ಹೊರಗಿನ; ಬುಡ–ತಳಭಾಗ, ಅಡಿಭಾಗ; ಸಾಧಾರಣವಾಗಿ–ಸಾಮಾನ್ಯವಾಗಿ; ಬಾನು–ಆಕಾಶ; ಕಾಮರೂಪಿ–ನೆನೆದಾಗ ನೆನೆದ ರೂಪವನ್ನು ಪಡೆಯುವ ಶಕ್ತಿಯಿರುವವರು; ಚಿತ್ತ–ಮನಸ್ಸು; ಅಸಂಖ್ಯಾತ–ಲೆಕ್ಕವಿಲ್ಲದ, ಅಗಣಿತವಾದ; ಹರ್ಷ–ಸಂತೋಷ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲೇಖಕರು ಎಲ್ಲಿ ತಿರುಗಾಡುತ್ತಿದ್ದರು ?
2. ಲೇಖಕರು ಎಲ್ಲಿ ಮಲಗಿಕೊಂಡರು ?
3. ಲೇಖಕರಿಗೆ ಕೇಳಿಸಿದ ಅಮಾನುಷ ಧ್ವನಿ ಯಾವುದು?
4. ಷೇಕ್ಸ್‌ಪಿಯರ್ ನೀಡಿರುವ ಹೇಳಿಕೆಯೇನು ?
5. ಬೆಳದಿಂಗಳ ರಾತ್ರಿಯಲ್ಲಿ ಬೇವಿನ ಮರಕ್ಕೆ ಕಾಣಿಸಿದವರು ಯಾರು ? ಅವರು ಹೇಗಿದ್ದರು?
6. ಹಾವು ಏನು ಮಾಡಿತು ? ಅದರ ಪರಿಣಾಮವೇನಾಯಿತು ?
7. ಬೇವಿನ ಮರದ ಮೇಲಿನ ಪ್ರೀತಿಯಿಂದ ಅಗಸ್ತ್ಯರು ಏನು ಮಾಡಿದರು ?
8. ಲೇಖಕರು ಬೇವಿನ ಮರದ ಬಳಿ ಏನೆಂದು ಪ್ರಾರ್ಥಿಸಿದರು?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಅಮಾನುಷ ಧ್ವನಿ ಕೇಳಿದಾಗ ಲೇಖಕರು ಏನೆಂದು ಯೋಚಿಸಿದರು ?
2. ಲೇಖಕರು ಕನಸಿನಲ್ಲಿ ಎದ್ದು ನಿಂತು ಬೇವಿನ ಮರದೊಡನೆ ಏನನ್ನು ಕೇಳಿದರು?
3. ವಸಂತಕಾಲದ ಒಂದು ರಾತ್ರಿಯಲ್ಲಿ ಬೇವಿನ ಮರವು ಕಂಡಂತಹ ದೃಶ್ಯವೇನು?
4. ಹಾವು ಬಂದಾಗ ನಡೆದ ಘಟನೆಗಳೇನು ?
5. ಬೇವಿನ ಮರಕ್ಕೆ ಅಗಸ್ತ್ಯರು ಏನೆಂದು ಹೇಳಿ ಆಶೀರ್ವದಿಸಿದರು ?

9th_Kannada_Reader Term II.indd 112 29-01-2019 16:32:53

ವ್ಯಾಕರಣ

ಘಟಕ ಏಳು

ಸಮಾಸಗಳು

ಎರಡು ಅಥವಾ ಹಲವು ಪದಗಳು ಅರ್ಥಕ್ಕೆ ಅನುಸಾರವಾಗಿ ಒಟ್ಟು ಸೇರಿ, ಮಧ್ಯದಲ್ಲಿನ ವಿಭಕ್ತಿ ಪ್ರತ್ಯಯ ಲೋಪವಾಗಿ, ಒಂದೇ ಪದವಾಗುವುದಕ್ಕೆ ಸಮಾಸವೆನ್ನುವರು. ಸಮಾಸ ಪದಗಳನ್ನು ಅರ್ಥವಾಗುವಂತೆ ಬಿಡಿಸಿ ಹೇಳುವುದಕ್ಕೆ ವಿಗ್ರಹ ವಾಕ್ಯಗಳೆಂದು ಹೆಸರು. ವಿಗ್ರಹ ವಾಕ್ಯದ ಮೊದಲ ಪದವನ್ನು ಪೂರ್ವ ಪದವೆಂದೂ, ಅದರ ಮುಂದಿನ ಪದವನ್ನು ಉತ್ತರ ಪದವೆಂದೂ ಕರೆಯುತ್ತಾರೆ. ಉದಾಹರಣೆಗೆ:

ತಾಯಿಯ+ನುಡಿ=ತಾಯ್ನುಡಿ.

ಅರಸನ+ಮನೆ=ಅರಮನೆ

ಸಮಾಸದಲ್ಲಿ ಸೇರಿರುವ ಪದಗಳ ಅರ್ಥದ ಪ್ರಾಮುಖ್ಯತೆಯ ಮೇಲೆ ಸಮಾಸ ಭೇದಗಳಾಗುವುವು. ನಾವು ಹೇಳುವ ಮಾತಿನ ಅರ್ಥವು ಯಾವ ಪದಕ್ಕೆ ನೇರವಾಗಿ ಅನ್ವಯಿಸುವುದೋ ಆ ಪದದ ಅರ್ಥ ಮುಖ್ಯವೆಂದು ತಿಳಿಯಬೇಕು.

ಸಮಾಸದ ರಚನಾ ವಿನ್ಯಾಸ ಬಗೆಗಳನ್ನು ತಿಳಿಯಿರಿ.

ಪೂರ್ವ ಪದ + ಉತ್ತರ ಪದ = ಸಮಾಸ ಪದ

ಮಳೆಯ + ಕಾಲ = ಮಳೆಗಾಲ

ಹಿರಿದು + ಜೇನು = ಹೆಜ್ಜೇನು

ಇನಿದು + ಸರ = ಇಂಚರ

ಮೂರು + ಮಡಿ = ಮುಮ್ಮಡಿ

ಕೈ + ಮುಂದು = ಮುಂಗೈ

ಮರವೂ + ಗಿಡವೂ + ಬಳ್ಳಿಯೂ = ಮರಗಿಡಬಳ್ಳಿಗಳು

ಸಮಾಸಗಳಲ್ಲಿ ಮುಖ್ಯವಾಗಿ ತತ್ಪುರುಷ, ಕರ್ಮಧಾರಯ, ಅಂಶಿ, ಬಹುವ್ರೀಹಿ, ದ್ವಂದ್ವ, ಗಮಕ, ಕ್ರಿಯಾ ಮತ್ತು ದ್ವಿಗು ಸಮಾಸಗಳೆಂದು ಎಂಟು ವಿಧಗಳಿವೆ.

1. ತತ್ಪುರುಷ ಸಮಾಸ

ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸವೆಂದು ಹೆಸರು. ತತ್ಪುರುಷ ಸಮಾಸದಲ್ಲಿ ದ್ವಿತೀಯಾ, ತೃತೀಯಾ, ಚತುರ್ಥಿ, ಪಂಚಮೀ, ಷಷ್ಠಿ ಹಾಗೂ ಸಪ್ತಮೀ ತತ್ಪುರುಷ ಎಂದು ಆರು ಭೇದಗಳಿವೆ.

ಉದಾಹರಣೆ:

ಹಣ್ಣನ್ನು + ಮಾರುವವನು = ಹಣ್ಣು ಮಾರುವವನು	(ದ್ವಿತೀಯಾ)
ವಯಸ್ಸಿನಿಂದ + ವೃದ್ಧ = ವಯೋವೃದ್ಧ	(ತೃತೀಯಾ)
ಭೂತಗಳಿಗೆ + ತೃಪ್ತಿ = ಭೂತ ತೃಪ್ತಿ	(ಚತುರ್ಥೀ)
ಚೋರನ ದೆಸೆಯಿಂದ + ಭಯ= ಚೋರಭಯ	(ಪಂಚಮೀ)
ಬೆಟ್ಟದ + ತಾವರೆ = ಬೆಟ್ಟದಾವರೆ	(ಷಷ್ಠೀ)
ವನದಲ್ಲಿ + ವಾಸ = ವನವಾಸ	(ಸಪ್ತಮೀ)

ಕೊಟ್ಟಿರುವ ಪದಗಳನ್ನು ಗಮನಿಸಿದಾಗ ಎರಡೆರಡು ಪದಗಳು ಸೇರಿ ಒಂದು ಪದವಾಗಿರುವುದು, ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದು ಸಮಾಸವಾಗುವಾಗ ಆ ಪ್ರತ್ಯಯಗಳು ಲೋಪವಾಗಿರುವುದು ಕಂಡು ಬರುತ್ತದೆ. ಯಾವ ವಿಭಕ್ತಿ ಪ್ರತ್ಯಯ ಲೋಪವಾಗುವುದೋ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವರು.

9th_Kannada_Reader Term II.indd 113 29-01-2019 16:32:53

ಹೀಗೆ ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು, ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿ ಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದೇ ತತ್ಪುರುಷ ಸಮಾಸ. ಇದರಲ್ಲಿ ಉತ್ತರಪದದ ಅರ್ಥ ಪ್ರಧಾನವಾಗಿರುತ್ತದೆ.

2. ಕರ್ಮಧಾರಯ ಸಮಾಸ

ಪೂರ್ವಪದದಲ್ಲಿ ವಿಶೇಷಣವಿದ್ದು, ಉತ್ತರ ಪದದ ಅರ್ಥ ಮುಖ್ಯವಾಗಿದ್ದು, ವಿಶೇಷಣ, ವಿಶೇಷ್ಯಗಳಿಗೆ ಸಂಬಂಧವಿದ್ದರೆ ಅದು ಕರ್ಮಧಾರಯ ಸಮಾಸವೆನ್ನಿಸುತ್ತದೆ.

ಉದಾಹರಣೆ:

ಹೊಸದು+ಕನ್ನಡ=ಹೊಸಗನ್ನಡ
ಹಿರಿದು+ಬಾಗಿಲು=ಹೆಬ್ಬಾಗಿಲು
ಹಿರಿದು+ಮರ=ಹೆಮ್ಮರ
ಮೆಲ್ಲಿತು+ನುಡಿ=ಮೆಲ್ನುಡಿ
ದಿವ್ಯವಾದ+ಪ್ರಕಾಶ=ದಿವ್ಯಪ್ರಕಾಶ.

ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾಸವಾಗಿದ್ದು, ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರಯ ಸಮಾಸ. ಇದರಲ್ಲಿ ಉತ್ತರ ಪದದ ಅರ್ಥವೇ ಪ್ರಧಾನ.

3. ದ್ವಿಗು ಸಮಾಸ

ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸವೆನ್ನಿಸುತ್ತದೆ.

ಉದಾಹರಣೆ:

ಒಂದು+ಕಟ್ಟು=ಒಗ್ಗಟ್ಟು
ಎರಡು+ಮಡಿ=ಇಮ್ಮಡಿ
ಮೂರು+ಪುರಿ=ಮುಪ್ಪುರಿ
ಪಂಚ+ಇಂದ್ರಿಯ=ಪಂಚೇಂದ್ರಿಯ

ಈ ಪದಗಳಲ್ಲಿ ಪೂರ್ವಪದ ಸಂಖ್ಯಾವಾಚಕಗಳಾಗಿವೆ. ಪೂರ್ವಪದ ಸಂಖ್ಯಾವಾಚಕವಾಗಿದ್ದು, ಉತ್ತರಪದ ನಾಮಪದವಾಗಿದ್ದರೆ ಅದು ದ್ವಿಗು ಸಮಾಸ.

4. ಅಂಶಿ ಸಮಾಸ

ಪೂರ್ವೋತ್ತರ ಪದಗಳು ಅಂಶಾಂಶಿ ಭಾವ ಸಂಬಂಧದಿಂದ ಸೇರಿ ಪೂರ್ವ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಅಂಶಿ ಸಮಾಸವೆನ್ನುವರು.

ಉದಾಹರಣೆ:

ತಲೆಯ+ಮುಂದು=ಮುಂದಲೆ
ಕೈಯ+ಅಡಿ=ಅಂಗೈ
ಕಾಲಿನ+ಮುಂದು=ಮುಂಗಾಲು

5. ದ್ವಂದ್ವ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿ ಉಳ್ಳ ಸಮಾಸಕ್ಕೆ ದ್ವಂದ್ವ ಸಮಾಸವೆಂದು ಹೆಸರು.

ಉದಾಹರಣೆ:

ಆನೆಯೂ ಕುದುರೆಯೂ ಒಂಟೆಯೂ	= ಆನೆಕುದುರೆಒಂಟೆಗಳು
ಗಿಡವೂ ಮರವೂ ಬಳ್ಳಿಯೂ	= ಗಿಡಮರಬಳ್ಳಿಗಳು
ಕೆರೆಯೂ ಕಟ್ಟೆಯೂ ಬಾವಿಯೂ	= ಕೆರೆಕಟ್ಟೆಬಾವಿಗಳು

9th_Kannada_Reader Term II.indd 114 29-01-2019 16:32:53

ಗಿರಿ+ವನ+ದುರ್ಗ = ಗಿರಿವನದುರ್ಗಗಳು
ಸೂರ್ಯ+ಚಂದ್ರ+ನಕ್ಷತ್ರ = ಸೂರ್ಯಚಂದ್ರನಕ್ಷತ್ರಗಳು
ಕರಿ+ತುರಗ+ರಥ = ಕರಿತುರಗರಥಗಳು
ಗುಡುಗು+ಸಿಡಿಲು+ಮಿಂಚು = ಗುಡುಗುಸಿಡಿಲುಮಿಂಚುಗಳು ಇತ್ಯಾದಿ.

6. ಬಹುವ್ರೀಹಿ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಪೂರ್ವಪದ ಉತ್ತರ ಪದಗಳಲ್ಲಿ ಯಾವುದರ ಅರ್ಥವೂ ಮುಖ್ಯವಾಗಿರದೆ ಅನ್ಯ ಪದದ ಅರ್ಥ ಮುಖ್ಯವಾಗಿದ್ದರೆ ಅದಕ್ಕೆ ಬಹುವ್ರೀಹಿ ಸಮಾಸ ಎಂದು ಹೆಸರು.

ಉದಾಹರಣೆ:

ಮೂರು ಕಣ್ಣುಗಳು ಯಾರಿಗೆ ಇವೆಯೋ ಅವನು–ಮುಕ್ಕಣ್ಣ
ಕಮಲದಂತಹ ಮುಖವು ಯಾರಿಗೆ ಇದೆಯೋ ಅವಳು–ಕಮಲಮುಖಿ

7. ಕ್ರಿಯಾ ಸಮಾಸ

ಪೂರ್ವಪದವು ನಾಮಪದವಾಗಿದ್ದು ಉತ್ತರ ಪದವು ಕ್ರಿಯಾರೂಪವಾಗಿದ್ದರೆ ಕ್ರಿಯಾಸಮಾಸವಾಗುವುದು.

ಉದಾಹರಣೆ:

ಮೈಯನ್ನು+ತಡವು=ಮೈದಡವು
ಕಣ್ಣನ್ನು+ತೆರೆ=ಕಣ್ದೆರೆ

8. ಗಮಕ ಸಮಾಸ

ಪೂರ್ವಪದವು ಸರ್ವನಾಮ ಅಥವಾ ಕೃದಂತವಾಗಿದ್ದು, ಉತ್ತರಪದವು ನಾಮಪದವಾಗಿದ್ದರೆ ಗಮಕಸಮಾಸವಾಗುವುದು.

ಉದಾಹರಣೆ:

ಅವನು+ಹುಡುಗ=ಆ ಹುಡುಗ
ಅದು+ಕಲ್ಲು=ಆ ಕಲ್ಲು
ಮಾಡಿದುದು+ಅಡಿಗೆ=ಮಾಡಿದಡಿಗೆ
ಸಿಡಿಯುವುದು+ಮದ್ದು=ಸಿಡಿಮದ್ದು
ಹುರಿದ+ಕಡಲೆ=ಹುರಿಗಡಲೆ

ಅರಿ ಸಮಾಸ

ಕನ್ನಡ ಮತ್ತು ಸಂಸ್ಕೃತ ಶಬ್ದಗಳನ್ನು ಸೇರಿಸಿ ಮಾಡುವ ಸಮಾಸವನ್ನು ಅರಿಸಮಾಸವೆನ್ನುತ್ತಾರೆ. ಇದೊಂದು ದೋಷ. ರೂಢಿಯ ವ್ಯಾಕರಣದ ಪ್ರಕಾರ ಇದು ನಿಷಿದ್ಧ. ಆದರೆ ಭಾಷೆಯಲ್ಲಿ ಇಂತಹ ಪ್ರಯೋಗಗಳು ಕಂಡು ಬರುತ್ತವೆ. ಪೂರ್ವದ ಪ್ರಸಿದ್ಧ ಕವಿಗಳು ಮಾಡಿರುವ ಪ್ರಯೋಗಗಳಲ್ಲಿ ಬಿರುದಾವಳಿಗಳಲ್ಲಿ ಗಮಕ ಮತ್ತುಕ್ರಿಯಾ ಸಮಾಸಗಳಲ್ಲಿ ಅರಿಸಮಾಸವನ್ನು ದೋಷವೆಂದು ಪರಿಗಣಿಸಬಾರದು.

ಉದಾಹರಣೆ:

ಪೂರ್ವ ಕವಿ ಪ್ರಯೋಗಕ್ಕೆ – ತುರಗದಳ, ಮಂಗಳಾರತಿ
ಬಿರುದಾವಳಿಗೆ – ದಳಮುಖಾದಿತ್ಯ, ರಾಯಕೋಲಾಹಲ.
ಗಮಕಸಮಾಸಕ್ಕೆ – ಪೊಡೆವ ಭೇರಿ, ಆ ಕಾರ್ಯ.
ಕ್ರಿಯಾಸಮಾಸಕ್ಕೆ – ಧೈರ್ಯ ಹೊಂದು, ಧರ್ಮ ಮಾಡು.

9th_Kannada_Reader Term II.indd 115 29-01-2019 16:32:53

ಘಟಕ
ಎಂಟು

ಜೀವನ ಸಾರ್ಥಕ್ಯ



9th_Kannada_Reader Term III.indd 116 29-01-2019 16:40:50

ಘಟಕ ಎಂಟು

ವಿಜಯ ನಗರ ಸಾಮ್ರಾಜ್ಯ
ಉದಯ–ಉನ್ನತಿ–ಅವನತಿ

– ಬಿ.ಜಿ.ಬಣಕಾರ



ಅಧಿಕಾರದ ಅಹಂಕಾರ, ಸಂಪತ್ತಿನ ಗರ್ವ ಹಾಗೂ ಬಲವಂತನೆಂಬ ಹೆಮ್ಮೆ ಇವುಗಳು ಮಾನವನನ್ನು ಒಂದಲ್ಲಾ ಒಂದು ದಿನ ಅಧೋಗತಿಗೊಯ್ಯುವುವು. ಹಿಂದಿನ ಪುರಾಣ ಹಾಗೂ ಇತಿಹಾಸಗಳನ್ನು ಅವಲೋಕಿಸಿದರೆ ಇಂತಹ ಅನೇಕ ನಿದರ್ಶನಗಳು ನಮಗೆ ಎಚ್ಚರಿಕೆಯನ್ನು ನೀಡುವೆ. ಮರಭಿಮಾನದಿಂದ ಮೆರೆದು, ನಾಶವಾದ ಸಂದರ್ಭಗಳೂ ಅನೇಕ. ಇತಿಹಾಸ, ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ದರ್ಶನ, ಸಾಹಿತ್ಯ ಸೃಷ್ಟಿ, ಸಂಗೀತ, ನರ್ತನ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆಗೈದ ರಾಜವಂಶವೊಂದರ ಉಗಮ, ವಿಜಯ, ಉನ್ನತಿ, ಅವನತಿಗಳ ಸಚಿತ್ರ ದರ್ಶನವನ್ನು ಈ ಪಾಠವು ನೀಡುತ್ತದೆ.



9th_Kannada_Reader Term III.indd 117 29-01-2019 16:40:50

ಯಾದವ ವಂಶದ ಕೊನೆಯ ರಾಜ ಶಂಕರದೇವನು ಅಲ್ಲಾವುದ್ದೀನನಿಗೆ ಕರಾರು ಪ್ರಕಾರ ನಡೆದುಕೊಳ್ಳದೇ ಇದ್ದುದರ ಪರಿಣಾಮವಾಗಿ ಅಲ್ಲಾವುದ್ದೀನನ ಕಮಾಂಡರ್ ಮಲ್ಲಿಕ್‌ಕಾಫರನು ಕ್ರಿ.ಶ. 1312ರಲ್ಲಿ ಶಂಕರದೇವನನ್ನು ಸೆರೆ ಹಿಡಿದು ಬಗ್ಗು ಬಡೆದು ದೇವಗಿರಿ ಹಾಗೂ ಶಂಕರನ ಅರಮನೆಯನ್ನು ವಶ ಪಡಿಸಿಕೊಂಡನು. ಕ್ರಿ.ಶ.1316ರಲ್ಲಿ ಶಂಕರ ದೇವನ ಭಾವ, ರಾಮದೇವನ ಅಳಿಯ ಹರಿಪಾಲನು ತಲೆಯೆತ್ತಿ ಮಹಮದನ ಗವರ್ನರನನ್ನು ಹೊರಹಾಕಿ ಮತ್ತೆ ಅಧಿಕಾರಕ್ಕೆ ಬಂದನು. ನಂತರ ಅಲ್ಲಾವುದ್ದೀನನು, ಕಾಫರನಿಂದ ವಿಷಪ್ರಾಷನವಾಗಿ ಮರಣ ಹೊಂದಿದನು. ಕೆಲವೇ ದಿನಗಳಲ್ಲಿ ಕಾಫರನೂ ಸಹ ಮುಬಾರಕನಿಂದ ಕೊಲ್ಲಲ್ಪಟ್ಟು, ಮುಬಾರಕನೇ ಅಧಿಕಾರಕ್ಕೆ ಬಂದನು. ಕ್ರಿ.ಶ.1318ರಲ್ಲಿ ಹರಿಪಾಲನನ್ನು ಇವನು ಜೀವಂತವಾಗಿ ಸೆರೆ ಹಿಡಿದು, ರಾಜಧಾನಿಯ ದ್ವಾರಕ್ಕೆ ಅವನ ತಲೆಯನ್ನು ಕಟ್ಟಿ ಅವನು ಮರಣ ಹೊಂದಿದ ಮೇಲೆ ಯಾದವ ವಂಶವೇ ನಾಶವಾಯಿತು. ಕ್ರಿ.ಶ. 1338ರಲ್ಲಿ ತುಘಲಕ್ ಮಹಮದನು ತನ್ನ ಸಾಮ್ರಾಜ್ಯದ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಬದಲಾಯಿಸಿ, ದೇವಗಿರಿಗೆ ದೌಲತಾಬಾದ್ ಎಂದು ಹೆಸರು ಕೊಟ್ಟನು.

1338ರಲ್ಲಿ ಯಾದವರ ದೇವಗಿರಿಯು ದೌಲತಾಬಾದ್ ಆದ ಮೇಲೆ ಅಲ್ಲಿಗೆ, ಯಾದವರ 125 ವರ್ಷಗಳ ಮೇಲ್ಪಟ್ಟ ಆಳ್ವಿಕೆ ಅಸ್ತಂಗತವಾಯಿತು. ಕನ್ನಡ ನಾಡಿನ ಹೊಯ್ಸಳ ರಾಜರ ರಾಜಧಾನಿ ದೋರಸಮುದ್ರ(ಹಳೇಬೀಡು) ಹಾಗೂ ತೆಲಂಗಾಣ ಅರಸರ ರಾಜಧಾನಿಯಾಗಿದ್ದ ಓರಂಗಲ್ ನಾಡುಗಳು ತುಘಲಕ್ ಮಹಮದನ ಬೇಟೆ ಹಾಗೂ ಲೂಟಿಯ ರಣರಂಗಗಳಾಗಿದ್ದವು. ಅವನ ದುಡುಕಿನ ಕ್ರಮದಿಂದ ಅಲ್ಲಲ್ಲಿ ಬಂಡಾಯ ಪ್ರಾರಂಭವಾಗಿತ್ತು. ಆ ಸಂದರ್ಭದಲ್ಲಿ ಸಾರ್ವಜನಿಕ ಕ್ಷೋಭೆ, ಕೋಲಾಹಲದ ಸದವಕಾಶ ಮಾಡಿಕೊಂಡು ಯಾದವ ಕುಲವಂಶಕ್ಕೆ ಸೇರಿದ ಸಂಗಮ ದೇವ ಹಾಗೂ ಕಾಮಾಂಬಿಕೆಯರ ಮಕ್ಕಳಾದ – ಹಕ್ಕ(ಹರಿಹರ), ಕಂಪ, ಬುಕ್ಕ, ಮಾರಪ್ಪ ಮತ್ತು ಮುದ್ದಪ್ಪ ಈ ಐವರಲ್ಲಿ – ಹಕ್ಕ ಮತ್ತು ಬುಕ್ಕ ಇವರೀರ್ವರೂ ಕ್ರಿ.ಶ.1336ರಲ್ಲಿ ಪೂರ್ವ ಕಾಲದ ಕಿಷ್ಕಿಂಧಾ ಎನ್ನಿಸಿದ್ದ ತುಂಗಭದ್ರಾ ನದೀ ತೀರದ ಪಂಪಾಸ್ಥಾನ (ವಿಜಯನಗರ)ದಲ್ಲಿ ಜನ ಬೆಂಬಲವನ್ನು ಪಡೆದು, ಅಲ್ಲಿನ ಪಾಳೇಗಾರರಾಗಿ ತಮ್ಮ ಆಳ್ವಿಕೆಯ ರಾಜ್ಯವನ್ನು ಸ್ಥಾಪಿಸಿದರು. ಹಕ್ಕಬುಕ್ಕರ ಆರಾಧ್ಯ ದೈವ ಜಗದೀಶ್ವರ ವಿರೂಪಾಕ್ಷ ಪಂಪಾಪತಿಯು ಕುಲದೇವತೆಯಾಗಿ ಹೇಮಕೂಟವೇ ರಕ್ಷಣಾಕೋಟೆಯ ಪ್ರಕಾರವಾಗಿ ಮುಂದೆ ಈ ಸ್ಥಳ ರಾಜಧಾನಿ ವಿಜಯನಗರವಾಗಿ ಪರಿಣಮಿಸಿತು. ಈ ಸಾಮ್ರಾಜ್ಯ ಸ್ಥಾಪನೆ ಮಾಡುವಲ್ಲಿ ಶೃಂಗೇರಿಯ ಜಗದ್ಗುರು ಶಂಕರಾಚಾರ್ಯರ ಸಂಸ್ಥಾನಕ್ಕೆ ಸಂಬಂಧಿಸಿದ ಬುದ್ಧಿವಂತ ಚತುರ ಮಾಧವ ಅಥವಾ ಶಂಕರಾಚಾರ್ಯರ ಆರ್ಥಿಕ ನೆರವು ಕೂಡ ನೆರವಾಗಿದೆ. ಹಕ್ಕ – ಬುಕ್ಕರ ಸಹೋದರ ಕಂಪರಾಜನು ನೆಲ್ಲೋರ, ಕಡಪಾ ಪ್ರದೇಶಗಳ ಆಡಳಿತವನ್ನು ಸ್ವಾಧೀನ ಪಡಿಸಿಕೊಂಡನು. ಮುಂದೆ ಕಂಪನ ಮಗ ಸಂಗಮನ ಆಳ್ವಿಕೆಯ ಕಾಲದಲ್ಲಿ ಮಾಧವ ಅಥವಾ ವಿದ್ಯಾರಣ್ಯರ ಸಹೋದರ ಸಾಯಣ್ಣನನ್ನೇ ತನ್ನ ಮಂತ್ರಿಯಾಗಿ ನೇಮಿಸಿಕೊಂಡನು. ಹಕ್ಕಬುಕ್ಕರ ಇನ್ನೊಬ್ಬ ಸಹೋದರ ಮಾರಪ್ಪ ನಾಯಕನು, ಕದಂಬ ರಾಜ್ಯವನ್ನು ವಶಪಡಿಸಿಕೊಂಡು, ಚಂದ್ರಗುತ್ತಿ ನಾಡನ್ನು ಆಳಲು ಪ್ರಾರಂಭಿಸಿದ. ಅಲ್ಲಲ್ಲಿದ್ದ ಹಿಂದೂ ಪಾಳೇಗಾರರ ಬೆಂಬಲ ಪಡೆದು ಓರಂಗಲ್ಲಿನಿಂದ ಸುಲ್ತಾನ್ ಮಹಮದೀಯರನ್ನು ಓಡಿಸಿದ್ದಾರೆ. ಬುಕ್ಕರಾಯನು 1355ರಲ್ಲಿ ಹೊಯ್ಸಳ ದೇಶದ ಗೌರಿಬಿದನೂರು ನಾಡಿನ ಹೊಸೂರನ್ನು ವಶಪಡಿಸಿಕೊಂಡು ಅಲ್ಲಿಂದ ಸಹ ಆಳ್ವಿಕೆ ಮಾಡಿದ್ದಾನೆ. ಸಂಗಮನ ಮಕ್ಕಳಾದ ವಿಜಯನಗರದ ಪಾಳೇಗಾರ ಅರಸರು ಸಾಹಸಿಗಳಾಗಿ, ಧೈರ್ಯಶಾಲಿಗಳಾಗಿ, ಅಲ್ಲಲ್ಲಿಯ ನಾಡನ್ನು ವಶಪಡಿಸಿಕೊಳ್ಳುತ್ತಾ, ವೈರಿಗಳನ್ನು ಹಿಮ್ಮೆಟ್ಟುತ್ತಾ ಕನ್ನಡ ನಾಡಿನ ಬಹುಭಾಗವನ್ನು ತೆಲಂಗಾಣ ನಾಡನ್ನು, ಕ್ಯಾನರಾ ಕರಾವಳಿ ನಾಡನ್ನೂ ಆಳುವಲ್ಲಿ ಜಯಶೀಲರಾಗುತ್ತಾ ಮುನ್ನಡೆದಿದ್ದಾರೆ. ಆದರೆ ಉತ್ತರದ ಬಹುಮನಿ ಅರಸರನ್ನು ಬಗ್ಗಿಸುವಲ್ಲಿ

9th_Kannada_Reader Term III.indd 118 29-01-2019 16:40:50

ಜಯಶೀಲರಾಗದೆ ಆಗಾಗ ಯುದ್ಧ ಮಾಡುತ್ತಾ ಮೈತ್ರಿ ಒಪ್ಪಂದ ಮಾಡಿಕೊಳ್ಳುತ್ತಲೇ ಹೊರಟಿದ್ದಾರೆ.

ವಿಜಯ ನಗರದ ಅರಸರಾದ ಹರಿಹರ, ಬುಕ್ಕರಾಯ, ಹರಿಯಪ್ಪ ಒಡೆಯರ್, ದೇವರಾಯ, ಮಲ್ಲಿಕಾರ್ಜುನ, ವಿಜಯರಾಯ, ವಿರೂಪಾಕ್ಷ, ನರಸಿಂಹ, ಕೃಷ್ಣರಾಯ, ಅಚ್ಯುತರಾಯ, ಸದಾಶಿವರಾಯ, ರಾಮರಾಯ, ತಿರುಮಲರಾಯ, ಶ್ರೀರಂಗರಾಯ, ವೆಂಕಟಪತಿರಾಯ, ರಾಮದೇವರಾಯ, ಎರಡನೇ ಶ್ರೀರಂಗರಾಯ ಮೊದಲಾದ ಅರಸರು 1336ರಿಂದ 1664ರವರೆಗೆ 328 ವರ್ಷ ದೀರ್ಘ ವರ್ಷ ಕಾಲ ವಿಜಯನಗರ ಸಾಮ್ರಾಜ್ಯವನ್ನು ಆಳಿದ್ದಾರೆ. ಆಫ್ಘಾನ್ ಮೂಲದ ಬಹುಮನಿ ಸುಲ್ತಾನರಾದ ಹಸನ್‌ಗಂಗೂ, ಅಲ್ಲಾ ಉದ್ದೀನ್, ಮಹಮದ್ ಶಹಾ, ಮುಜಹೀದ್ ಶಹಾ, ಷಮಸುದ್ದೀನ ಶಹಾ, ಫಿರೋಜ್ ಶಹಾ, ಅಹಮದ್ ಶಹಾ, ಅಲ್ಲಾವುದ್ದೀನ್ ಶಹಾ, ಹುಮಾಯೂನ್ ಶಹಾ, ನಿಜಾಮುದ್ದೀನ್ ಶಹಾ, ಎರಡನೇ ಮಹಮದ್ ಶಹಾ ಮೊದಲಾದವರು ಬಹುಮನಿ ರಾಜ್ಯವನ್ನು 1347ರಿಂದ 1482ರವರೆಗೆ ಸುಮಾರು 115 ವರ್ಷಗಳು ಆಳಿದ್ದು, ಬಹುಮನಿ ಹಾಗೂ ವಿಜಯ ನಗರ ಅರಸರ ನಡುವೆ ಎಲ್ಲಾ ತರಹದ ಯುದ್ಧ ಒಪ್ಪಂದ ಆದದ್ದುಂಟು. ಫಿರೋಜ್ ಷಾ ಮತ್ತು ದೇವರಾಜರ ಸೈನ್ಯದ ನಡುವೆ ಯುದ್ಧ ನಡೆದು ದೇವರಾಜನ ಮಗನ ಹತ್ಯೆಯಾಗಿ ಕೊನೆಗೆ ಮೈತ್ರಿ ಏರ್ಪಟ್ಟು ಗಡಿರೇಖೆ ಗೊತ್ತು ಪಡಿಸಿಕೊಂಡು ದೇವರಾಜನು ಸುಲ್ತಾನನಿಗೆ 40 ಲಕ್ಷ ಹಣ ಕೊಟ್ಟು, ತನ್ನ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿಸಿಕೊಂಡಿದ್ದಾನೆ. 1406ರಲ್ಲಿ ಫಿರೋಜ್ ಶಹಾ ಹಾಗೂ ವಿಜಯನಗರದ ಅರಸರ ನಡುವೆ ಯುದ್ಧವಾಗಿ, ಒಪ್ಪಂದ, ಮೈತ್ರಿ ಪ್ರಕಾರ ಹೇರಳ ಹಣದೊಂದಿಗೆ ಬಂಕಾಪುರ ಕೋಟೆಯನ್ನು ಸುಲ್ತಾನನಿಗೆ ಕೊಟ್ಟು, ರಾಜನ ಮಗಳನ್ನು ಸುಲ್ತಾನನ ಮಗನಿಗೆ ಅತಿ ವಿಜೃಂಭಣೆಯಿಂದ ಮದುವೆ ಮಾಡಿಸಿಕೊಟ್ಟು ಪರಸ್ಪರ ರಕ್ತಸಂಬಂಧವನ್ನೂ ಬೆಳೆಸಿದರು. ಈ ಮದುವೆಯಲ್ಲಿ ಹೇರಳವಾದ ವಜ್ರ ವೈಢೂರ್ಯ, ಮುತ್ತು ರತ್ನಗಳ ಉಡುಗೊರೆ ಕೊಟ್ಟು, ವೈಭವೋಪೇತ ರತ್ನಖಚಿತ ಪಲ್ಲಕ್ಕಿಗಳಲ್ಲಿ ಮದುಮಕ್ಕಳ ಮೆರವಣಿಗೆಯಾಗಿ ಪರಸ್ಪರ ಒಬ್ಬರನ್ನೊಬ್ಬರು ಬೀಳ್ಕೊಟ್ಟಿದ್ದಾರೆ. 1417ರಲ್ಲಿ ಫಿರೋಜ್ ಶಹಾ ಹಾಗೂ ದೇವರಾಯನ ನಡುವೆ ಮತ್ತೆ ಯುದ್ಧ ನಡೆದು ಅದರಲ್ಲಿ ಸುಲ್ತಾನ ಸೋತು ಸತ್ತು, ಅವನ ಸೇನೆ ಭಾರೀ ಪ್ರಮಾಣದಲ್ಲಿ ಸಂಹಾರವಾಗಿ ಬಿಜಾಪುರ ಕೋಟೆ ಬಹುಮಟ್ಟಿಗೆ ನಾಶವಾಗಿದೆ. ಫಿರೋಜ್ ಶಹಾನ ಉತ್ತರಾಧಿಕಾರಿಯಾದ ಅಹಮದ್ ಶಹಾನು ವಿಜಯನಗರದವರೊಂದಿಗೆ ಯುದ್ಧ ಪ್ರಾರಂಭಿಸಲಾಗಿ ಅವನನ್ನು ಹಿಮ್ಮೆಟ್ಟಿಸಿದ್ದಾದರೂ ಮುಂದೆ ಸಾಗಿ, ವಿಜಯನಗರವನ್ನು ಧ್ವಂಸ ಮಾಡುತ್ತಾ, ಕರುಣೆಯಿಲ್ಲದೆ 20 ಸಾವಿರಕ್ಕೂ ಹೆಚ್ಚು ಮಹಿಳೆ ಮತ್ತು ಮಕ್ಕಳನ್ನು ಸಂಹಾರ ಮಾಡಿ ಮೂರು ದಿನಗಳವರೆಗೆ ಸುಖ ಭೋಜನ ಮಾಡಿದ್ದಾನೆ. ವಿಜಯನಗರ ಸೇನೆ ಹಂಗು ತೊರೆದು ಉಗ್ರರಾಗಿ, ಸುಲ್ತಾನನ ವಿರುದ್ಧ ಯುದ್ಧ ಸಾರಿದಾಗ ಸುಲ್ತಾನನು ಸ್ವಲ್ಪದರಲ್ಲಿಯೇ ಪಾರಾಗಿ ಮತ್ತೆ ಮೈತ್ರಿ ಮಾಡಿಕೊಂಡು ಅಹಮದ್ ಶಹಾನು ತನ್ನ ದೇಶಕ್ಕೆ ಹೋಗಿ ತನ್ನ ರಾಜಧಾನಿಯನ್ನು ಕಲಬುರಗಿಯಿಂದ ಬೀದರ್‌ಗೆ ಬದಲಾಯಿಸಿದ್ದಾನೆ. ಬಹುಮನೀ ರಾಜ್ಯವು ಅವಸಾನಕ್ಕೆ ತುತ್ತಾಗಿ, ಒಡೆದು 1489ರಲ್ಲಿ ಬಿಜಾಪುರ, ಅಹಮದ್ ನಗರ, ಗೋಲ್ಕೊಂಡಾ, ಬಿರಾರ ಮತ್ತು ಬೀದರ್ ಹೀಗೆ ಐದು ರಾಜ್ಯಗಳಾಗಿವೆ. ವಿಜಯನಗರ ಅಥವಾ ಬಿಜಾನಗರ ರಾಜ್ಯವು ರಾಜಾಧಿರಾಜ ದೇವರಾಯ ರಾಜನ ಆಳ್ವಿಕೆಯಲ್ಲಿ ಭಾರೀ ವಿಶಾಲ, ವಿಸ್ತಾರ ಹಾಗೂ ಸರ್ವಾಂಗೀಣ ಅಭಿವೃದ್ಧಿ ಹಾಗೂ ಸುಖ ಸಂಪತ್ತಿನಿಂದ ಕೂಡಿತ್ತೆಂದು ಬ್ರಾಹ್ಮಣರ ಆಡಳಿತ ಅತಿ ಉತ್ತಮವಾಗಿತ್ತೆಂದು, ಬೆಂಗಾಳದಿಂದ ಮಲಬಾರ ಅರಸರ ದ್ವೀಪದಿಂದ ಕಲಬುರಗಿವರೆಗೆ ವಿಸ್ತರಿಸಿತ್ತೆಂದು, ಫಲವತ್ತಾದ ಪ್ರದೇಶವಿತ್ತೆಂದು, ಮೂರು ನೂರು ಸಮುದ್ರ ದಂಡೆಯ ಬಂದರುಗಳಿದ್ದುವೆಂದು, ಹನ್ನೊಂದು ಲಕ್ಷ ಸೈನಿಕರಿದ್ದರೆಂದು, ಒಂದು ಸಾವಿರ ಆನೆಗಳಿದ್ದವೆಂದು, ದೇಶದಲ್ಲಿಯೇ ಒಬ್ಬ ನಿರಂಕುಶ ರಾಜಾಧಿರಾಜನೆಂದು ವಿಜಯನಗರಕ್ಕೆ 1441ರಲ್ಲಿ ಭೇಟಿ ಕೊಟ್ಟ ಪರ್ಷಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕನೆಂಬುವನು

9th_Kannada_Reader Term III.indd 119 29-01-2019 16:40:50

ಉಲ್ಲೇಖಿಸಿದ್ದು ಉಂಟು. ಇದೊಂದು ಶ್ರೀಮಂತ ರಾಜ್ಯವಾಗಿ ವಜ್ರವೈಢೂರ್ಯ, ಮುತ್ತುರತ್ನ, ಬೆಳ್ಳಿ ಬಂಗಾರ ಹೇರಳವಾಗಿದ್ದು, ಅವೆಲ್ಲವೂ ಸಂತೆಯಲ್ಲಿ ಮುಕ್ತವಾಗಿ ಮಾರಾಟವಾಗುತ್ತಿತ್ತೆಂದು, ಹೇರಳ ಸಂಪತ್ತಿನಿಂದ ಕೂಡಿದ್ದು, ಸುಂದರವಾದ ಏಳು ಸುತ್ತಿನ ಕೋಟೆಯಿಂದ ಸುತ್ತುವರೆದ ಅರಮನೆ ಇದೆಯೆಂದು ಸಹ ವರ್ಣಿಸಿದ್ದಾನೆ. 1516ರಲ್ಲಿ ವಿಜಯನಗರಕ್ಕೆ ಭೇಟಿ ಕೊಟ್ಟ ಎಡ್ವರ್ಡ್ ಬಾರದೇಸ್ ಕೂಡ ವಿಜಯನಗರದ ಬಗ್ಗೆ ಹಾಗೂ ಅರಸು ಕೃಷ್ಣರಾಯನ ಆಡಳಿತವನ್ನು ವರ್ಣಿಸಿದ್ದಾಗಿ ಇತಿಹಾಸ ಸಾರುತ್ತಿದೆ.

ವಿಜಯನಗರ ಸಾಮ್ರಾಜ್ಯದ ಅನೇಕ ಅರಸರು ತಮ್ಮ ಮಂತ್ರಿಗಳ ಕೈಗೊಂಬೆಗಳಾದ ಬಗ್ಗೆ, ವಿಲಾಸಿಗಳಾದ ಬಗ್ಗೆ, ದುಂದುಗಾರರಾದ ಬಗ್ಗೆ, ವೈಭವಪ್ರಿಯರಾಗಿ, ದುರಹಂಕಾರಿಗಳಾದ ಬಗ್ಗೆ, ದುರಾಡಳಿತ ಮಾಡಿದ ಬಗ್ಗೆ ಇತಿಹಾಸದ ಪುಟಗಳು ವ್ಯಕ್ತ ಪಡಿಸಿವೆ. ತಿರುಮಲರಾಯ ರಾಜನು ಕ್ರೂರ ಹಾಗೂ ದುರಾಡಳಿತ ಮಾಡಿ ಪ್ರಜೆಗಳ, ಅನೇಕ ದೊರೆಗಳ ಆಕ್ರೋಶಕ್ಕೆ ಎದುರಾಗಿ ವಿರೋಧ ಕಟ್ಟಿಕೊಂಡಾಗ, ಪ್ರಜೆಗಳು ಹಾಗೂ ಕೆಲವು ದೊರೆಗಳು ತಿರುಮಲರಾಯನನ್ನು ಹತ್ತಿಕ್ಕಲು ಸುಲ್ತಾನ ಇಬ್ರಾಹಿಂ ಆದಿಲ್ ಶಹಾನ ನೆರವನ್ನು ಬೇಡಿದ ಬಗ್ಗೆ ಸಹ ತಿಳಿದು ಬರುತ್ತದೆ. ರಾಜಕುಮಾರನನ್ನು ಕೊಂದು ತಿರುಮಲರಾಯನು ಅಧಿಕಾರಕ್ಕೆ ಬಂದುದಾಗಿ ಉಲ್ಲೇಖವಿದೆ. ವಿಜಯನಗರ ಅರಸರು ಅಹಮದ್ ನಗರ ಸುಲ್ತಾನನ ವಿರುದ್ಧ ಬಿಜಾಪುರದ ಸುಲ್ತಾನನನ್ನು ಬೆಂಬಲಿಸಿದ್ದಾರೆ. ಡಖ್ಖನ್ ದೇಶದ ನಾಲ್ಕು ಪ್ರಮುಖ ಮಹಮದನ್ ಅರಸರು ಸೇರಿ ಒಗ್ಗಟ್ಟಿನಿಂದ ವಿಜಯನಗರವನ್ನು ಆಕ್ರಮಿಸಲು ತೀರ್ಮಾನಿಸಿ, 1564ರಲ್ಲಿ ಬಿಜಾಪುರ, ಗೋಲ್ಕೊಂಡಾ, ಅಹಮದ್ ನಗರ, ಬೀದರ್ ಸೇನೆಗಳು ಬಿಜಾಪುರದಲ್ಲಿ ಸೇರಿ ವಿಜಯನಗರದತ್ತ ಧಾವಿಸಲಾಗಿ, ರಾಮರಾಜನು ಸಹ ತನ್ನ ಸಹೋದರರ ಸೈನ್ಯದೊಂದಿಗೆ ವೈರಿಗಳನ್ನು ಎದುರಿಸಲು ಸಜ್ಜಾಗಿ, ಹೊರಟು ಎರಡೂ ಸೇನೆಗಳು ದಿನಾಂಕ 25.01.1565ರಂದು ತಾಳಿಕೋಟೆಯ ಬಳಿ ಯುದ್ಧಕ್ಕೆ ಎದುರು ಬದುರು ಸೇರಿದವು. ಬಲಬದಿಗೆ ಬಿಜಾಪುರದ ಅಲಿ ಆದಿಲ್‌ಶಾಹಿಯ ದಂಡು, ಎಡಬದಿಗೆ ಬೀದರಿನ ಅಲಿಬರೀವ್ ಶಹಾ ಮತ್ತು ಗೋಲ್ಕೊಂಡದ ಇಬ್ರಾಹಿಂ ಕುತುಬ್ ಶಹಾನ ದಂಡು, ನಡುಮಧ್ಯೆ ಅಹಮದ್ ನಗರದ ಹುಸೇನ್ ನಿಜಾಂ ಶಹಾನ ದಂಡು – ಹೀಗೆ ಮುಸಲ್ಮಾನ ಅರಸರ ದಂಡು ಒಂದೆಡೆಗಾದರೆ; ಈ ದಂಡಿನ ಎದುರುಭಾಗದಲ್ಲಿ, ಎಡಬದಿಗೆ ಸಹೋದರ ತಿರುಮಲರಾಜನ ದಂಡು, ಬಲಬದಿಗೆ ಮತ್ತೊಬ್ಬ ಸಹೋದರ ವೆಂಕಟಾದ್ರಿಯ ದಂಡು, ನಡುಮಧ್ಯೆ ರಾಮರಾಜನ ದಂಡು ಸೇರಿ ಗಜ ಸೇನೆ ಫಿರಂಗಿಯೊಂದಿಗೆ ಯುದ್ಧ ಪ್ರಾರಂಭಿಸಲು ರಾಮರಾಜನು ಯುದ್ಧವನ್ನು ಆರಂಭಿಸಲು ಆಜ್ಞೆ ಮಾಡಿ, ಎರಡು ಸೇನೆಗಳ ನಡುವೆ ಘನಘೋರ ಯುದ್ಧ ನಡೆದು ಎರಡೂ ಕಡೆ ಭಾರೀ ಪ್ರಮಾಣದ ಸೇನೆ ನಾಶವಾಗಿ, ಆತಂಕದಿಂದ ಹುಚ್ಚೆದ್ದ ಆನೆಯಿಂದ ವಿಜಯನಗರ ಸೇನೆಗೆ ಭಾರೀ ಅನಾಹುತವುಂಟಾಗಿ ಮುಸ್ಲಿಂ ಸೇನೆ ಇದರ ಸದುಪಯೋಗ ಮಾಡಿಕೊಂಡು, ಮುಸ್ಲಿಂ ಸೇನೆ ಹಿಂದೂ ಸೈನ್ಯದತ್ತ ನುಗ್ಗಿ ಸೈನ್ಯವನ್ನು ಹಿಮ್ಮೆಟ್ಟಿ ರಾಮರಾಜನನ್ನು ಸೆರೆ ಹಿಡಿದು, ಅವನ ತಲೆಯನ್ನು ಸಂಹರಿಸಿ ಈಟಿಯ ತುದಿಯ ಮೇಲೆ ಸಿಕ್ಕಿಸಿ, ಅಳಿದುಳಿದ ಎರಡೂ ಸೇನೆಗಳಿಗೆ ಪ್ರದರ್ಶಿಸಲಾಗಿದೆ. ರಾಮರಾಯ ರಾಜನ ಕೊಲೆಯಾಗಿ ತುಂಡಾದ ತಲೆಯ ಚೆಂಡಾಟವನ್ನು ನೋಡಿದ ಹಿಂದೂ ಸೈನಿಕರು ದಿಕ್ಕುಪಾಲಾಗಿ ಓಡುತ್ತಿದ್ದಾಗಲೇ ಮುಸ್ಲಿಂ ಸೈನ್ಯ ಅವರನ್ನು ಬೆನ್ನಟ್ಟಿ ಸದೆ ಬಡೆಯಿತು. ಸುಲ್ತಾನರ ಒಂದು ಭಾಗದ ದಂಡು ಆನೆಗೊಂದಿಯತ್ತ ಸಾಗಲಾಗಿ ಉಳಿದೆಲ್ಲ ದಂಡು ವಿಜಯನಗರಕ್ಕೆ ನುಗ್ಗಿ ಸಂಹಾರ, ಸುಲಿಗೆ ಮಾಡಿ ರಾಜಧಾನಿಯನ್ನು ಸರ್ವನಾಶ ಮಾಡಿ ಎಲ್ಲ ರೀತಿಯ ಆಕ್ರಮಣಗಳನ್ನೂ ಹದ್ದು ಮೀರಿ ಮಾಡಲಾಯಿತು. ಇಲ್ಲಿಗೆ ವಿಜಯನಗರ ಸಾಮ್ರಾಜ್ಯ ತಾಳಿಕೋಟೆ ಯುದ್ಧದ ಪರಿಣಾಮವಾಗಿ ಪತನಗೊಂಡು ಹಾಳುಹಂಪೆಯಾಯಿತು. 1676ರಲ್ಲಿ ಟಿಪ್ಪೂ ಸುಲ್ತಾನನು ದಕ್ಷಿಣ ದೇಶದ ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಂಡ ಮೇಲೆ ಆನೆಗುಂದಿಗೆ ದಂಡೆತ್ತಿ

9th_Kannada_Reader Term III.indd 120 29-01-2019 16:40:50

ಬಂದು ವಶಪಡಿಸಿಕೊಂಡ ಮೇಲೆ ವಿಜಯನಗರದ ಪತನದ ನಂತರ ಆನೆಗೊಂದಿ ರಾಜ್ಯ ಸಹ ಅವಸಾನ ಹೊಂದಿ ವಿಜಯನಗರ ಅರಸರ ಅವಸಾನದ ದಾರಿಯಲ್ಲೇ ಆನೆಗೊಂದಿ ಅರಸರೂ ಸಹ ಬಹುದೂರ ಹೋಗಿ ಇತಿಹಾಸದಿಂದ ಕಣ್ಮರೆಯಾದರು. ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತು ಎಂಬ ಗಾದೆ ಮಾತಿನ ಹಾಗೆ ವಿಜಯನಗರ ಅರಸರ ಆಳ್ವಿಕೆ ಮೊದಲು ಮೇಲೆ ಮೇಲೆ ಉನ್ನತವಾಗಿ ಇದ್ದದ್ದು ಬರಬರುತ್ತಾ ಕೆಳಕೆಳಗೆ ಅವನತಿಗೆ ಬಂದು ಅವಸಾನಕ್ಕೆ ಈಡಾದವು ಎಂಬುದನ್ನೇ ಈ ಗಾದೆ ಮಾತು ಈಗಲೂ ಈ ಸೀಮೆಯಲ್ಲಿ ಸಾರಿ ಸಾರಿ ಹೇಳುತ್ತಿದೆ. ಬ್ರಿಟೀಷ್ ಹಾಗೂ ಮುಸ್ಲಿಂ ಪೂರ್ವದ ಪಾಳೇಗಾರರ ಆಡಳಿತ ವೈಖರಿಯನ್ನು ಇತಿಹಾಸದ ಪುಟಗಳಿಂದ ನೋಡಿದರೆ ಅನೇಕರಲ್ಲಿ ಕೊಲೆ, ಸುಲಿಗೆ, ಕೊಳ್ಳೆ, ಲೂಟಿ, ವಿಷಪ್ರಾಷನ, ದಂಡಿನ ದರ್ಬಾರ, ಒತ್ತಾಯದಿಂದ ದಂಡಿಗೆ ಸೇರಿಸುವಿಕೆ, ದ್ವೇಷ, ಅಸೂಯೆ, ಹಿಂಸೆ, ಕೋಟೆ ಕೊತ್ತಳ ಕಂದಕಗಳ ನಿರ್ಮಾಣ–ಧ್ವಂಸ, ನಿರ್ದಯ ಕಾಳೆಗದಲ್ಲೇ ಕಾಲ ಹರಣ, ದುರಹಂಕಾರ, ಬೆಳ್ಳಿಬಂಗಾರ, ಮುತ್ತುರತ್ನ, ವಜ್ರ ವೈಢೂರ್ಯ ಸಂಗ್ರಹ–ಬಳಕೆ, ಅತ್ಯಾಚಾರ, ಅನಾಚಾರ, ಜನಸಂಹಾರ, ಹಯ–ಗಜ ಸಂಹಾರ, ಸೇನೆ ಸಂಹಾರ, ತೆರ ಹಾಗೂ ಇತ್ಯಾದಿ ಮಾನವ ಮಾರಕಗಳೇ ಅತೀ ಹೆಚ್ಚಾಗಿ ಜನಜೀವನವೇ ಗಂಡಾಂತರಕ್ಕೆ ಈಡಾದಾಗ ಈ ಎಲ್ಲ ಬಹುತೇಕ ಪಾಳೇಗಾರರನ್ನು ಪರಕೀಯರಾದ ಫ್ರೆಂಚ್, ಮುಸ್ಲಿಂ, ಇಂಗ್ಲೀಷರು ಸದೆ ಬಡಿದು, ಸಣ್ಣ–ದೊಡ್ಡ ರಾಜ್ಯಗಳನ್ನು ಮಾಡಿ ಬ್ರಿಟೀಷ್ ಸರ್ಕಾರ ಉತ್ತಮ ಆಡಳಿತ ಮಾಡಿ ಸ್ವತಂತ್ರ ಯೋಧರ ಹೋರಾಟದ ಫಲವಾಗಿ ಭಾರತೀಯ ಪ್ರಜೆಗಳಿಗೆ ಕೊಟ್ಟು ನಿರ್ಗಮಿಸಿ ಈಗ ಸ್ವತಂತ್ರ ರಾಷ್ಟ್ರವಾಗಿ ಪ್ರಜಾಸತ್ತೆ ಅಸ್ತಿತ್ವದಲ್ಲಿ ಬಂದು ರಕ್ತಸಂಬಂಧಿಗಳಾದ ಹಿಂದೂ–ಮುಸ್ಲಿಂ–ಕ್ರಿಶ್ಚಿಯನ್ ಭಾರತೀಯರೆಲ್ಲಾ ಪ್ರಜಾಪ್ರಭುಗಳು ಪಾಳೇಗಾರರ ವಾರ್ಷಿಕೋತ್ಸವ ಶತಮಾನೋತ್ಸವಗಳನ್ನು ಆಚರಿಸಿ, ಕಾಲ ಹಾಗೂ ಕಾಸು ಹರಣ ಮಾಡದೆ ಪ್ರಜಾಸತ್ತೆಯ ಪೀಠಾರೋಹಣ ದಿನಗಳನ್ನು ಆಚರಿಸುತ್ತಾ, ಪ್ರಜಾಪ್ರತಿನಿಧಿಗಳ ಹಾಗೂ ಸರಕಾರಗಳ ವಾರ್ಷಿಕೋತ್ಸವಗಳನ್ನು ನೆರವೇರಿಸುತ್ತಾ ಜನತೆಗೆ ಅವರವರ ವಾರ್ಷಿಕ ಆಡಳಿತ ಹಾಗೂ ಅಭಿವೃದ್ಧಿಯ ಕಾಲಕಾಲದ ವರದಿಯನ್ನು ಜನತೆಗೆ ನೀಡುತ್ತಾ, ಪ್ರಜಾತಂತ್ರ ವ್ಯವಸ್ಥೆಯ ಉತ್ತಮ ಭವಿಷ್ಯದತ್ತ ಗಮನ ಕೊಡುವುದು ಒಳ್ಳೆಯದು.

ಕೃತಿ–ಕರ್ತೃ ಪರಿಚಯ



ಬಿ.ಜಿ.ಬಣಕಾರರು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಚಿಕ್ಕ ನಾಟಿ ಎಂಬ ಗ್ರಾಮದಲ್ಲಿ 22.07.1927 ರಂದು ಜನಿಸಿದರು. ಬಸವಣ್ಣೆಪ್ಪ, ಗಡ್ಲೆಪ್ಪ ಗೌಡ ಬಣಕರ್ ಎಂಬುದು ಇವರ ಪೂರ್ಣ ಹೆಸರು. ಪ್ರಾರಂಭದಿಂದಲೂ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದರಿಂದ ಮುಂದೆ ರಾಜ–ಕಾರಣದಲ್ಲಿ ಮಿನುಗಿದರು. 1972ರಿಂದ ಸತತವಾಗಿ ಕಾಂಗ್ರೆಸ್, ಜನತಾ ದಳ ಪಕ್ಷೇತರ ಶಾಸಕರಾಗಿ ಹಿರೇಕೆರೂರು ಕ್ಷೇತ್ರದಿಂದ ಆಯ್ಕೆ ಯಾದರು. ಆ ಅವಧಿಯಲ್ಲಿ ತಮ್ಮ ಕ್ಷೇತ್ರಕ್ಕೆ ಅಪೂರ್ವವಾದ ಸೇವೆ ಸಲ್ಲಿಸಿ, ಕ್ಷೇತ್ರದ ಅಭಿವೃದ್ಧಿ ಪಥಕ್ಕೆ ಹೆದ್ದಾ–ರಿಯನ್ನು ಹಾಕಿದರು. ದೇವರಾಜ ಅರಸು ಅವರ ಸಂಪುಟದಲ್ಲಿ ಪಶುಸಂಗೋಪನಾ ಸಚಿವರಾಗಿ ರಾಮಕೃಷ್ಣ ಹೆಗ್ಡೆಯವರ ಅವಧಿಯಲ್ಲಿ ವಿಧಾನ ಸಭೆಯ ಸಭಾಪತಿಯಾಗಿಯೂ ಅಧಿಕಾರವನ್ನು ವಹಿಸಿಕೊಂಡು ಕರ್ನಾಟಕದ ಉತ್ತರೋತ್ತರ ಅಭಿವೃದ್ಧಿಗೆ ಭದ್ರಬುನಾದಿ ಹಾಕಿದರು. ಸಾಹಿತ್ಯ, ಇತಿಹಾಸಗಳಲ್ಲಿ ಆಸಕ್ತಿಯನ್ನು ಹೊಂದಿದ್ದ ಇವರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಈ ಪಾಠದಲ್ಲಿ ವಿಜಯ ನಗರ ಸಾಮ್ರಾಜ್ಯದ ಐತಿಹಾಸಿಕ ದರ್ಶನವನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ಇವರು ತಮ್ಮ 91ನೇ ಇಳಿವಯಸ್ಸಿನಲ್ಲಿ ತೀರಿಕೊಂಡರು.

9th_Kannada_Reader Term III.indd 121 29-01-2019 16:40:51

ಪದಗಳ ಅರ್ಥ

ಕರಾರು–ನಿಬಂಧನೆ, ಷರತ್ತು; ಬಗ್ಗುಬಡಿ–ಮಣಿಸು, ಗದರಿಸು; ದುಡುಕು–ಗಡಿಬಿಡಿ, ಆತುರದಿಂದ ಕೂಡಿರುವಿಕೆ; ಕ್ಷೋಭೆ–ಗೊಂದಲ, ಅಶಾಂತಿ; ಪಾಳೇಗಾರ–ಸಣ್ಣಪ್ರಾಂತ್ಯದ ಮುಖಂಡ; ಉಲ್ಲೇಖ–ಬರೆಹ, ಉದ್ಧರಿಸು; ಮೈತ್ರಿ–ಸ್ನೇಹ, ಗೆಳೆತನ; ಹೇರಳ–ಅಧಿಕ, ಬಹಳ; ಧ್ವಂಸ–ನಾಶ, ಅಳಿವು; ಹಂಗು ತೊರೆದು–ಬಾಂಧವ್ಯವನ್ನು ಬಿಟ್ಟು, ಋಣವನ್ನು ಮೀರಿ; ಉಗ್ರ–ಕೋಪ, ತೀಕ್ಷ್ಣ; ಅವಸಾನ–ಅಂತ್ಯ, ಸಾವು; ನಿರಂಕುಶ–ಹಿಡಿತವಿಲ್ಲದ; ಕೈಗೊಂಬೆ–ದಾಸನಾಗು; ವಿಲಾಸಿ–ಕಾಮುಕ; ದುಂದುಗಾರ–ಅಪವ್ಯಯ ಮಾಡುವವ; ಆಕ್ರೋಶ–ಸಿಟ್ಟು, ಕೋಪ; ಹತ್ತಿಕ್ಕು–ಹತೋಟಿಯಲ್ಲಿಡು, ನಿಯಂತ್ರಿಸು; ನೆರವು–ಸಹಾಯ, ಬೆಂಬಲ; ಸದೆಬಡೆ–ಪುಡಿಮಾಡು, ನಾಶ ಮಾಡು; ಹದ್ದುಮೀರಿ–ಎಲ್ಲೆ ಮೀರಿ, ಮಿತಿಮೀರಿ; ಪತನ–ಅವನತಿ, ನಾಶ; ಪ್ರಾಶನ–ಉಣಿಸು; ಕಂದಕ–ಕೋಟೆಯ ಸುತ್ತಲೂ ಇರುವ ಅಗಳು; ಗಂಡಾಂತರ–ಅಪಾಯ, ವಿಪತ್ತು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಯಾದವ ವಂಶದ ಕೊನೆಯ ರಾಜ ಯಾರು ?
2. ದೇವಗಿರಿಗೆ ದೌಲತಾಬಾದ್ ಎಂದು ಯಾರು ಹೆಸರು ಕೊಟ್ಟರು ?
3. ಯಾದವರ ಆಳ್ವಿಕೆ ಯಾವಾಗ ಅಸ್ತಂಗತವಾಯಿತು ?
4. ನೆಲ್ಲೂರು, ಕಡಪಾ ದೇಶಗಳನ್ನು ಯಾರು ಸ್ವಾಧೀನ ಪಡಿಸಿಕೊಂಡರು ?
5. ಬಹುಮನೀ ರಾಜ್ಯವು ಅವಸಾನಕ್ಕೆ ತುತ್ತಾಗಿ ಯಾವ ಯಾವ ಐದು ರಾಜ್ಯಗಳಾಗಿ ಬೇರ್ಪಟ್ಟವು ?
6. 1516ರಲ್ಲಿ ವಿಜಯನಗರಕ್ಕೆ ಭೇಟಿ ಕೊಟ್ಟ ವಿದೇಶೀಯನಾರು ?
7. ಯಾವ ಗಾದೆ ಮಾತು ವಿಜಯನಗರ ಸಾಮ್ರಾಜ್ಯದ ಅವನತಿಯನ್ನು ಅಣಕಿಸುತ್ತದೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಲ್ಲಿಕ್‌ಕಾಫರನು ಯಾವ ಸ್ಥಳವನ್ನು ವಶಪಡಿಸಿಕೊಂಡನು ?
2. ಸಂಗಮ ದೇವ ಕಾಮಾಂಬಿಕೆಯರ ಮಕ್ಕಳು ಯಾರು ಯಾರು ? ಅವರಲ್ಲಿ ಯಾರು ವಿಜಯನಗರದಲ್ಲಿ ರಾಜ್ಯವನ್ನು ಸ್ಥಾಪಿಸಿದರು ?
3. ವಿಜಯ ನಗರ ಸಾಮ್ರಾಜ್ಯದ ಅರಸು ಪರಂಪರೆಯಲ್ಲಿ ಬರುವ ಅರಸರ ಹೆಸರುಗಳನ್ನು ತಿಳಿಸಿರಿ ಹಾಗೂ ಅವರು ಎಷ್ಟು ವರ್ಷಗಳ ಕಾಲ ವಿಜಯನಗರ ರಾಜ್ಯವನ್ನು ಆಳಿದರು ?
4. ಆಫ್ಘಾನ್ ಮೂಲದ ಬಹುಮನಿ ಸುಲ್ತಾನರ ಹೆಸರುಗಳನ್ನು ತಿಳಿಸಿರಿ. ಅವರು ಎಷ್ಟು ವರ್ಷಗಳ ಕಾಲ ಬಹುಮನಿ ರಾಜ್ಯವನ್ನು ಆಳಿದರು ?
5. ಅಬ್ದುಲ್ ರಜಾಕನು ವಿಜಯನಗರ ಸಾಮ್ರಾಜ್ಯವನ್ನು ಕುರಿತು ಏನೆಂದು ಉಲ್ಲೇಖಿಸಿದ್ದಾನೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಕುರಿತು ಬರೆಯಿರಿ.
2. ಹಕ್ಕಬುಕ್ಕ ಹಾಗೂ ಇತರ ಸಹೋದರರು ಹೇಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರು ?
3. ವಿಜಯನಗರ ಹಾಗೂ ಬಹುಮನಿ ಸುಲ್ತಾನ ಫಿರೋಜ್ ಶಹಾರ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ.
4. ವಿಜಯನಗರ ರಾಜ್ಯವು ದೇವರಾಯನ ಆಳ್ವಿಕೆಯಲ್ಲಿ ಹೇಗೆ ಸರ್ವಾಂಗೀಣ ಅಭಿವೃದ್ಧಿ ಪಡೆಯಿತು ?
5. ತಾಳೀಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡ ವಿವರವನ್ನು ನೀಡಿರಿ.
6. ಬ್ರಿಟೀಷ್ ಹಾಗೂ ಮುಸ್ಲಿಂ ಪೂರ್ವದ ಪಾಳೇಗಾರರ ಆಡಳಿತ ವ್ಯೆಖರಿಯಲ್ಲಿ ಯಾವ ರೀತಿಯ ಮಾನವ ಮಾರಕಗಳನ್ನು ಕಾಣುತ್ತೇವೆ?

9th_Kannada_Reader Term III.indd 122 29-01-2019 16:40:51

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಉಪಯೋಗಿಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿ.

ಬಗ್ಗು ಬಡಿ, ವಶಪಡಿಸು, ಅಸ್ತಂಗತ, ಕೋಲಾಹಲ, ದಿಕ್ಕುಪಾಲು, ಹಿಮ್ಮೆಟ್ಟು, ಒಪ್ಪಂದ, ಸರ್ವಾಂಗೀಣ, ಕೈಗೊಂಬೆ, ಸದೆಬಡೆ.

2. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಸೆರೆಯಾಳು, ತಲೆಯನ್ನು, ಕಾಮಾಂಬಿಕೆ, ಜಗದೀಶ್ವರ, ವಿರೂಪಾಕ್ಷ, ಶಂಕರಾಚಾರ್ಯ, ಸದುಪಯೋಗ, ಚೆಂಡಾಟ.

3. ಈ ಕೆಳಕಂಡ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

ರಾಜ, ಸ್ಥಾನ, ವಿಸ್ತಾರ, ಶ್ರೀ, ರತ್ನ.

4. ಈ ಕೆಳಗಿನ ಪದಗಳ ವಿರುದ್ಧ ಪದಗಳನ್ನು ತಿಳಿಸಿರಿ.

ಪೂರ್ವ, ಕೊನೆ, ಬಲ, ಬುದ್ಧಿವಂತ, ಆಚಾರ, ಆತಂಕ, ವ್ಯವಸ್ಥೆ, ಸದುಪಯೋಗ.

5. ಕೆಳಗಿನ ಪದಗಳನ್ನು ವಿಗ್ರಹ ವಾಕ್ಯ ಮಾಡಿ, ಸಮಾಸದ ಹೆಸರನ್ನು ಬರೆಯಿರಿ.

ಅರಮನೆ, ತಲೆಯೆತ್ತಿ, ವಿರೂಪಾಕ್ಷ, ಪಂಪಾಪತಿ, ಕಣ್ಮರೆ.

5. ಕೆಳಗಿನ ಪದಗಳ ಲಿಂಗ, ವಚನ, ವಿಭಕ್ತಿಗಳನ್ನು ಹೆಸರಿಸಿ.

ಶಂಕರದೇವನ, ಪುರದಲ್ಲಿ, ಅರಸರನ್ನು, ಸೈನಿಕರಿಂದ, ಕಾಮಾಂಬಿಕೆಯ, ತಿರುಮಲರಾಯನಿಗೆ.

ಚಟುವಟಿಕೆ

1. ಹಂಪೆ ಹಾಗೂ ಬಿಜಾಪುರಗಳಿಗೆ ಭೇಟಿ ನೀಡಿ, ಐತಿಹಾಸಿಕ ಪ್ರಸಿದ್ಧ ಕಟ್ಟಡಗಳನ್ನು ನೋಡಿ ಆನಂದಿಸಿರಿ.
2. ಕರ್ನಾಟಕದ ಇನ್ನಿತರ ಐತಿಹಾಸಿಕ ಪ್ರಸಿದ್ಧ ನಗರಗಳಿಗೆ ಭೇಟಿ ನೀಡಿ ಆ ಕುರಿತಂತೆ ಆಲ್ಬಂ ಒಂದನ್ನು ತಯಾರಿಸಿರಿ.



9th_Kannada_Reader Term III.indd 123 29-01-2019 16:40:51

ಘಟಕ ಎಂಟು

ಕರುಣಾಳು ರಾಘವನಲ್ಲಿ ತಪ್ಪಿಲ್ಲ

– ಲಕ್ಷ್ಮೀಶ



ರಾಮಾಯಣ ಮತ್ತು ಮಹಾಭಾರತಗಳು ನಮ್ಮ ದೇಶದ ಮಹಾಕಾವ್ಯಗಳು. ರಾಮಾಯಣವನ್ನು ವಾಲ್ಮೀಕಿಯೂ, ಮಹಾಭಾರತವನ್ನು ವ್ಯಾಸರೂ ಬರೆದಿರುವರು. ಮಹಾಕಾವ್ಯಗಳು ರೂಪುಗೊಂಡ ಕಾಲದ ಸಮಾಜದ ಸಂಸ್ಕೃತಿ, ಜೀವನ ದರ್ಶನ, ಜೀವನ ಮೌಲ್ಯ, ಚಿಂತನೆಗಳ ವಿವರಣೆ, ವಿಮರ್ಶೆಗಳನ್ನು ಅವು ಒಳಗೊಂಡಿರುತ್ತವೆ. ಈ ದೃಷ್ಟಿಯಿಂದ ಮಹಾಕಾವ್ಯಗಳ ಅಧ್ಯಯನ ಅಮೂಲ್ಯ. ಮಾನವ ಸಂಸ್ಕೃತಿಯ ವಿಕಾಸಗಳನ್ನು ಗುರುತಿಸಲೂ ಅವು ಸಹಕಾರಿ. ಜನಾಪವಾದವು ಯಾರನ್ನೂ ಬಿಟ್ಟಿಲ್ಲ. ಪರಮ ಪಾವನೆಯಾದ, ಪತಿವ್ರತಾ ಶಿರೋಮಣಿಯಾದ ಸೀತಾದೇವಿಯು ಕೂಡ ಅಪವಾದಕ್ಕೆ ತುತ್ತಾದಳು ಎಂದ ಮೇಲೆ ಇನ್ನುಳಿದವರ ಪಾಡೇನು? ರಾವಣಾದಿಗಳ ಸಂಹಾರವಾದ ಮೇಲೆ, ಶ್ರೀರಾಮನು ಅಯೋಧ್ಯಾ ನಗರದಲ್ಲಿ ರಾಜ್ಯ ಪರಿಪಾಲನೆ ಮಾಡುತ್ತಿದ್ದ ಸಂದರ್ಭದಲ್ಲಿ ಓರ್ವ ಪ್ರಜೆಯ ನಿಂದನೆಯ ಮಾತುಗಳಿಂದಾಗಿ ಗರ್ಭಿಣಿಯಾದ ಸೀತೆಯನ್ನು ಲಕ್ಷ್ಮಣನ ಜೊತೆ ಕಾಡಿಗೆ ಕಳುಹಿಸುತ್ತಾನೆ. ಗೊಂಡಾರಣ್ಯದಲ್ಲಿ ಅನಾಥೆಯಾದ ಜಾನಕಿಯು ಯಾವೊಂದು ಅಪರಾಧವೂ ಇಲ್ಲದೆ ತನ್ನನ್ನು ತೊರೆದ ಸನ್ನಿವೇಶವನ್ನು ಕುರಿತು ಲಕ್ಷ್ಮಣನೊಂದಿಗೆ ಪ್ರಶ್ನಿಸುವಲ್ಲಿ ವ್ಯಕ್ತವಾಗುವ ಸೀತೆಯ ಪ್ರತಿಭಟನೆ ಹಾಗೂ ವ್ಯಂಗ್ಯದ ಧ್ವನಿ ಮತ್ತು ಸೀತೆಯ ಪ್ರಶ್ನೆಗಳಿಗೆ ನಿರುತ್ತರನಾದ ಲಕ್ಷ್ಮಣ, ಸುತ್ತಲಿನ ಪ್ರಕೃತಿಗೆ ಕೈಮುಗಿದು ಪ್ರಾರ್ಥಿಸುವ ಸಂದರ್ಭವು ಪ್ರಕೃತ ಪದ್ಯಭಾಗವಾಗಿದೆ.



9th_Kannada_Reader Term III.indd 124 29-01-2019 16:40:51

ರಾಯ ಕೇಳಿಂತಿಂತು ರಾಘವೇಶ್ವರನ ರಮ
ಣೀಯ ಗುಣಮಾಲೆಯಂ ನೆನೆನೆನೆದು ಹಂಬಲಿಸು
ತಾಯತಾಂಬಕಿ ಮತ್ತೆ ಮೈಮರೆಯುತೆಚ್ಚರುತೆ ಪಾವಗಿದ ಪಸುಳೆವೊಲಿರೆ ॥
ತಾಯೆ ನಿನ್ನಂ ಬಿಟ್ಟು ಪೋಗಲಾರೆಂ ಪೋಗ
ದೀಯವಸ್ಥೆಯೊಳಿರ್ದೊಡಣ್ಣನೇಗೈದಪನೊ
ಹಾಯೆಂದು ಲಕ್ಷ್ಮಣಂ ಶೋಕಗದ್ಗದನಾಗೆ ಸೀತೆ ಮಗುಳಿಂತೆಂದಳು ॥1॥

ತಂದೆ ಲಕ್ಷ್ಮಣ ನಿನ್ನೊಳೆಂದೊಡಿನ್ನೇನಹುದು
ಹಿಂದಣ ಜನಸ್ಥಾನದಂದದೊಳ್ ಪೋಗು ನೀಂ
ಕೊಂದು ಕೊಂಬೊಡೆ ತನ್ನ ಬೆಂದೊಡಲೊಳಿದೆ ಬಸಿರದಂದುಗಂ ಕಾನನದೊಳು ॥
ಬಂದುದಂ ಕಾಣ್ಬೆ ನಾನಿಂದು ಕೌಸಲೆಯಡಿಗೆ
ವಂದಿಸಿದೆನಪರಾಧಮೊಂದುಮಿಲ್ಲದೆ ತನ್ನ
ಕಂದನೆನ್ನಂ ತೊರೆದುದಂ ದೇವಿಗೊರೆವುದೆನುತಂದಳಲ್ದಳ್ ಮೃಗಾಕ್ಷಿ ॥2॥

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ
ಗೀಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು ॥
ಲೋಕದರಸೇಗೈದೊಡಂ ತನ್ನ ಕಿಂಕರರ್
ಬೇಕು ಬೇಡೆಂದು ಪೇಳರೆ ಭರತ ಶತ್ರುಘ್ನ
ರೀಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ॥3॥

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ
ದೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು ॥
ನಡೆ ಪೋಗು ನಿಲ್ಲದಿರ್ ನಿನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಮೆಂದು ಸೀತೆ ಕಂಬನಿಗಳಂ
ಮಿಡಿದಾರ್ತೆಯಾಗಿರಲ್ ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ ॥4॥

ಎಲೆ ನವಸ್ಥಳಗಳಿರ ವೃಕ್ಷಂಗಳಿರ ಮೃಗಂ
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು ॥
ಎಲೆ ಧರ್ಮ ದೇವತೆ ಜಗಜ್ಜನನಿ ಜಾಹ್ನವಿಯೆ
ಸಲಹಿಕೊಳ್ವುದು ತನ್ನ ಮಾತೆಯಂ ಜಾನಕಿಯ
ನೆಲೆತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು ॥5॥

9th_Kannada_Reader Term III.indd 125 29-01-2019 16:40:51

ಕವಿ–ಕಾವ್ಯ ಪರಿಚಯ



ಲಕ್ಷ್ಮೀಶ ಕವಿಯು ಹದಿನಾರನೆಯ ಶತಮಾನದಲ್ಲಿದ್ದನೆಂದೂ ದೇವನೂರು ಇವನ ಹುಟ್ಟೂರೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. 'ಜೈಮಿನಿ ಭಾರತ' ಇವನು ರಚಿಸಿದ ಮಹಾಕಾವ್ಯ. ಮಹಾಭಾರತದ ಅಶ್ವಮೇಧ ಪರ್ವಕ್ಕೆ ರಾಮಾಯಣದ ಉತ್ತರ ಕಾಂಡದ ಕತೆಯೂ ಗಮನಾರ್ಹ ಪ್ರಮಾಣದಲ್ಲಿ ಯುಕ್ತವಾಗಿ ಸೇರಿ ಜನಪ್ರಿಯವಾದ ಮತ್ತೊಂದು ಕಾವ್ಯದ ಸಂಪರ್ಕ ಲಭಿಸಿದ್ದು ಈ ಕೃತಿಯ ಇನ್ನೊಂದು ವಿಶೇಷ. ಇವನಿಗೆ 'ಕರ್ಣಾಟ ಕವಿ ಚೂತವನ ಚೈತ್ರ' ಎಂಬ ಬಿರುದು ಇದೆ. ಜೈಮಿನಿ ಭಾರತದಲ್ಲಿ ಕಥನ ಶಕ್ತಿ, ಉಪಮಾ ಸಮೃದ್ಧಿ, ಗೇಯತೆಗೆ ಪುಷ್ಟಿ ಕೊಡುವ ಆದರೆ ಅರ್ಥಕ್ಕೆ ಮಾರಕವಲ್ಲದ ನಾದಮಯತೆ, ವೀರ, ಕರುಣ ರಸಗಳ ಸೃಷ್ಟಿಯಲ್ಲಿ ಅಸಾಧಾರಣ ಪ್ರತಿಭೆ ಮುಂತಾದ ಕಾವ್ಯ ಗುಣಗಳಿವೆ. ವ್ಯಾಸ ಭಾರತದ ಅಶ್ವಮೇಧಿಕ ಪರ್ವದ ಕತೆಯನ್ನು ಜೈಮಿನಿ ಮುನಿಯು ವಿಸ್ತಾರವಾಗಿ ಸಂಸ್ಕೃತದಲ್ಲಿ ಬರೆದನು. ಅದನ್ನೇ ಲಕ್ಷ್ಮೀಶನು ಕನ್ನಡದಲ್ಲಿ ವಾರ್ಧಕ ಷಟ್ಪದಿಯಲ್ಲಿ ಬರೆದಿರುವನು. ಒಟ್ಟಿನಲ್ಲಿ ಲಕ್ಷ್ಮೀಶನ ಕಾವ್ಯವಾಣಿ ಮಂಜುಳವಾಣಿ, ಕರ್ಣಾನಂದವನ್ನುಂಟು ಮಾಡಿ ಓದುಗರ ಹೃದಯವನ್ನೇ ಸೂರೆಗೊಳ್ಳುತ್ತದೆ.

ಪೂರ್ವ ಕಥೆ

ಕೌರವರ ವಧೆಯಿಂದ ಖಿನ್ನನಾಗಿದ್ದ ಧರ್ಮರಾಯನಿಗೆ ವೇದವ್ಯಾಸ ಮಹರ್ಷಿಗಳು ಅಶ್ವಮೇಧ ಯಾಗವನ್ನು ಮಾಡುವುದರಿಂದ ಮನಃಶಾಂತಿ ಉಂಟಾಗುವುದೆಂದೂ ಬೋಧಿಸುತ್ತಾನೆ. ಅದೇ ಪ್ರಕಾರ ಧರ್ಮರಾಯನು ಯಜ್ಞದೀಕ್ಷಿತನಾಗಿ, ಯಜ್ಞಾಶ್ವದ ಬೆಂಗಾವಲಿಗೆ ಅರ್ಜುನ, ವೃಷಕೇತು, ಮುಂತಾದವರನ್ನು ಕಳುಹಿಸುತ್ತಾನೆ. ಆ ಯಜ್ಞಾಶ್ವವು ಭೂಮಂಡಲವನ್ನು ಸುತ್ತುತ್ತಾ ಮಣಿಪುರಕ್ಕೆ ಬರುತ್ತದೆ. ಮಣಿಪುರದರಸು ಬಭ್ರುವಾಹನನು ಯಜ್ಞಾಶ್ವವನ್ನು ಕಟ್ಟಲು, ಅವನ ತಾಯಿ 'ಚಿತ್ರಾಂಗದೆ' ಅರ್ಜುನನು ಬಭ್ರುವಾಹನನ ತಂದೆ ಎಂಬ ವಿಷಯವನ್ನು ತಿಳಿಸುತ್ತಾಳೆ. ಆಗ ಬಭ್ರುವಾಹನನು ಸಂಭ್ರಮದಿಂದ ಅರ್ಜುನನಲ್ಲಿ ಶರಣಾಗತಿ ಬಯಸಿ ಬರಲು, ಅರ್ಜುನನಿಂದ ಅವಮಾನಿತನಾಗಿ, ಅವರಿಬ್ಬರಲ್ಲಿ ಘೋರ ಸಂಗ್ರಾಮ ನಡೆಯುತ್ತದೆ. ಇದು ರಾಮ ಮತ್ತು ಲವಕುಶರ ಯುದ್ಧದಂತಿತ್ತು. ಈ ಸಂದರ್ಭದಲ್ಲಿ ಜೈಮಿನಿಯು ಪಾಂಡವ ವಂಶೀಯನಾದ ಜನಮೇಜಯ ರಾಜನಿಗೆ ಸಂಗ್ರಹವಾಗಿ, ರಾಮಾಯಣದ ಉತ್ತರ ಕಾಂಡದ ಕಥೆಯನ್ನು ತಿಳಿಸುತ್ತಾನೆ.

ಪದಗಳ ಅರ್ಥ

ಆಯತಾಂಬಕಿ–ಅಗಲವಾದ ಕಣ್ಣುಳ್ಳವಳು, ಸುಂದರಿ, ಸೀತೆ; ಪಾವಗಿದ – ಪಾವು + ಅಗಿದ = ಹಾವು ಕಚ್ಚಿದ; ನಿಸ್ತೇಜಳಾದ–ಕಳೆಗುಂದಿದ, ಕಾಂತಿಹೀನಳಾದ, ಆಯಾಸಹೊಂದಿದ; ಜನಸ್ಥಾನ–ಪ್ರಾಚೀನ ದಂಡಕಾರಣ್ಯದ ಒಂದು ಭಾಗದ ಹೆಸರು, ಜನರು ವಾಸಿಸುತ್ತಿದ್ದ ಸ್ಥಳ; ಕೊಂದುಕೊಂಬೊಡೆ–ಆತ್ಮಹತ್ಯೆ ಮಾಡಿಕೊಳ್ಳಲು; ದಂದುಗ–ಕಷ್ಟ; ಕಾಕುತ್ಸ್ಥ–ಕಾಕುತ್ಸ್ಥ ಎಂಬ ರಾಜನ ವಂಶದಲ್ಲಿ ಹುಟ್ಟಿದವನು, ಶ್ರೀರಾಮ; ವಿಪಿನ–ಕಾಡು; ತಳುವು–ತಡಮಾಡು; ಗುಲ್ಮ–ಪೊದೆ, ಮುಳ್ಳುಕಂಟಿಗಳಿಂದ ಕೂಡಿದ ಜಾಗ; ಪಂಚಭೂತ–ಪ್ರಪಂಚದ ಪದಾರ್ಥಗಳ ಮೂಲ ವಸ್ತುಗಳು(ಭೂಮಿ, ನೀರು, ಅಗ್ನಿ, ವಾಯು, ಆಕಾಶ); ಜಾಹ್ನವಿ–ಜಹ್ನು ಋಷಿಯ ಮಗಳು, ಜಹ್ನು ಮಹರ್ಷಿಯ ಕಿವಿಯಿಂದ ಹೊರಕ್ಕೆ ಬಂದ ನದಿ, ಗಂಗಾನದಿ.

9th_Kannada_Reader Term III.indd 126 29-01-2019 16:40:51

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲಕ್ಷ್ಮೀಶನ ಬಿರುದು ಯಾವುದು ?
2. ಸೀತೆಯು ಏನನ್ನು ನೆನೆದು ಶೋಕಿಸಿದಳು ?
3. ಹಿಂದೆ ಜನಸ್ಥಾನದಲ್ಲಿ ನಡೆದ ಯಾವ ಘಟನೆಯನ್ನು ಸೀತೆ ನೆನಪಿಸಿಕೊಂಡಳು?
4. ಕೌಸಲ್ಯೆಗೆ ಸೀತೆಯು ಯಾವ ಸಂದೇಶವನ್ನು ನೀಡಿದಳು ?
5. ಸೀತೆಯು ತನಗೆ ಕಾಡಿನಲ್ಲಿ ಯಾರ ನೆರವುಂಟು ಎಂದು ಹೇಳುತ್ತಾಳೆ ?
6. ಸೀತೆಯು ಏಕೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ ಎಂದು ಹೇಳುತ್ತಾಳೆ?
7. 'ಎನ್ನೊಳು ಅಪರಾಧವುಂಟು' ಎಂದು ಸೀತೆ ಏಕೆ ನೊಂದುಕೊಳ್ಳುತ್ತಾಳೆ ?
8. ಧರ್ಮದೇವತೆಯನ್ನು ಕುರಿತು ಲಕ್ಷ್ಮಣನು ಏನೆಂದು ಪ್ರಾರ್ಥಿಸಿದನು ?
9. 'ನಿನ್ನ ಮಗಳಿವಳು' ಎಂದು ಲಕ್ಷ್ಮಣನು ಯಾರಲ್ಲಿ ಪ್ರಾರ್ಥಿಸಿದನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸೀತೆಯು ಲಕ್ಷ್ಮಣನಿಗೆ ಏನೆಂದು ಹೇಳಿ ದುಃಖಿಸಿದಳು ?
2. ಲಕ್ಷ್ಮಣನು ಶೋಕಗದ್ಗದನಾಗಿ ಸೀತೆಗೆ ಏನು ಹೇಳಿದನು ?
3. ಜಾನಕಿಯನ್ನು ರಕ್ಷಿಸಬೇಕೆಂದು ಲಕ್ಷ್ಮಣನು ಯಾರು ಯಾರಲ್ಲಿ ವಿನಂತಿಸಿದನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸೀತಾ ಪರಿತ್ಯಾಗ ಪದ್ಯದಲ್ಲಿ ಜಾನಕಿಯು ಲಕ್ಷ್ಮಣನ ಬಳಿ ಯಾವ ಯಾವ ಪ್ರಶ್ನೆಗಳನ್ನು ಕೇಳಿದಳು ?
2. 'ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಎಂದು ಸೀತೆ ಏಕೆ ಹೇಳುತ್ತಾಳೆ ?

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.**
   ರಾಯ, ಸುಖ, ಮೃಗ, ದೆಸೆ, ಪಕ್ಷಿ, ವನ, ಸ್ಥಾನ.
2. **ಈ ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
   ರಾಘವೇಶ್ವರ, ಮೃಗಾಕ್ಷಿ, ತಪ್ಪಿಲ್ಲ, ನೆರವುಂಟು, ಆಯತಾಂಬಿಕೆ, ಪಾವಗಿದ.
3. **ಕೆಳಗಿನ ಪದಗಳ ವಿಗ್ರಹ ವಾಕ್ಯಗಳನ್ನು ಬರೆದು ಸಮಾಸದ ಹೆಸರನ್ನು ತಿಳಿಸಿ.**
   ಕ್ರಿಮಿಕೀಟ, ಮೈಮರೆ, ಕೈಮುಗಿ, ಭೂದೇವಿ, ಜಾಹ್ನವಿ, ಸೌಮಿತ್ರಿ, ಪಂಚಭೂತ.

ಚಟುವಟಿಕೆ

1. ಲಕ್ಷ್ಮಣ ಮತ್ತು ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ಬರೆದು ನಾಟಕೀಯವಾಗಿ ಅಭಿನಯಿಸಿರಿ.
2. ರಾಜಧರ್ಮವನ್ನು ಮೆರೆಸಲು ರಾಮನು, ಕೌಟುಂಬಿಕ ಧರ್ಮವನ್ನು ಕಡೆಗಣಿಸಿದನೇ ಎಂಬುದರ ಕುರಿತು ಚರ್ಚಾಕೂಟ ಏರ್ಪಡಿಸಿರಿ.

9th_Kannada_Reader Term III.indd 127 29-01-2019 16:40:51

ಪೂರಕ ಪದ್ಯ

ಘಟಕ ಎಂಟು

ಕೋರಿಕೆ

– ಈಶ್ವರ ಸಣಕಲ್ಲ



ಎಲ್ಲರ ಸುಖದಲ್ಲಿಯೇ ತನ್ನ ಬದುಕಿನ ಸುಖದ ಬಿಂದುವನ್ನು ಕಂಡುಕೊಳ್ಳುವೆನೆಂಬ ಭರವಸೆಯ ವ್ಯಕ್ತಿಗಳೂ ಪ್ರಪಂಚದಲ್ಲಿ ದೊರೆಯುವುದು ಅಪರೂಪ. ಇಂತಹ ಸ್ವಾರ್ಥ, ತ್ಯಾಗ, ಹೃದಯ ವೈಶಾಲ್ಯ ಇವೇ ಮೊದಲಾದ ಗುಣಗಳಿಂದ ಮಾನವನು ಮಹಾ ಮಾನವನೆನಿಸಿಕೊಳ್ಳುತ್ತಾನೆ. ಇಂತಹ ಗುಣಗಳ ಸಾಕ್ಷಾತ್ಕಾರವನ್ನು, 'ಕೋರಿಕೆ' ಕವನವು ಸಾಕ್ಷೀಕರಿಸುತ್ತದೆ.









9th_Kannada_Reader Term III.indd 128 29-01-2019 16:40:52

ಜಗವೆಲ್ಲ ನಗುತಿರಲಿ
ಜಗದಳುವು ನನಗಿರಲಿ !
ನಾನಳಲು ಜಗವೆನ್ನನೆತ್ತಿಕೊಳದೇ ?
ನಾನಕ್ಕು ಜಗವಳಲು, ನೋಡಬಹುದೇ ? ॥೧॥

ತೆರವಾಗಿ ನನ್ನೆದೆಯು
ಧರೆಯೆದೆಯು ಉಕ್ಕಿರಲಿ ।
ಧರೆಯೊಳಗೆ ತೇಲಿಸುವೆನೆನ್ನೆದೆಯನು
ಧರೆ ಬತ್ತಿ, ಎನ್ನೆದೆಯು ಉಕ್ಕಲೇನು ? ॥೨॥

ಪೊಡವಿಯೈಸಿರಿವಡೆದು
ಬಡತನವು ನನಗಿರಲಿ ।
ಕೈಯೊಡ್ಡೆ ಪೊಡವಿಯೆನಗಿಕ್ಕದೇನು !
ಪೊಡವಿಯೇ ಮೈಯ್ಯಳಿಯೆ ಮಾಡಲೇನು ? ॥೩॥

ವಿಶ್ವವನು ತುಂಬಿರುವ
ಈಶ್ವರನೇ ಅಳತೊಡಗೆ ।
ಸೈತಿಡಲು, ಸೈಪಿಡಲು ಬರುವನಾವಂ ?
ಹೇ ! ತಂದೆ ! ಎನಲೆನ್ನಲವನೇ ಕಾವಂ! ॥೪॥

9th_Kannada_Reader Term III.indd 129 29-01-2019 16:40:52

ಕವಿ–ಕಾವ್ಯ ಪರಿಚಯ

ಈಶ್ವರ ಸಣಕಲ್ಲ ಅವರು ಬಿಜಾಪುರ ಜಿಲ್ಲೆಯ ರಬಕವಿಯವರು. 'ಕೋರಿಕೆ' ಎನ್ನುವ ಈ ಕವನವನ್ನು ಅವರು ಬರೆದಿರುವ, 'ಕೋರಿಕೆ' ಎಂಬ ಅದೇ ಹೆಸರಿನ ಕವನ ಸಂಗ್ರಹದಿಂದಲೇ ಆಯ್ದುಕೊಳ್ಳಲಾಗಿದೆ. ಇವರ ಕವನಗಳಲ್ಲಿ ಜೀವನ ಹೋರಾಟದ ಭಾವಗಳು ಎದ್ದು ಕಾಣುತ್ತವೆ. ಹಲವಾರು ಪ್ರಶಸ್ತಿ ಪುರಸ್ಕೃತರಾದ ಇವರ, 'ಬಟ್ಟೆ', 'ಕೋರಿಕೆ' ಮೊದಲಾದವು ಉತ್ತಮ ಕೃತಿಗಳು. ಕರ್ನಾಟಕ ವಿಶ್ವವಿದ್ಯಾಲಯದ 'ವಚನ ಸಂಶೋಧನಾ ವಿಭಾಗ'ದಲ್ಲಿ ಸೇವೆ ಸಲ್ಲಿಸಿದ ಸಂದರ್ಭ ಇವರ ಜೀವನದ ಅಪೂರ್ವ ನಿಮಿಷಗಳು ಎನ್ನುತ್ತಾರೆ ಸ್ವತಃ ಕವಿ ಸಣಕಲ್ಲರು.

ಪದಗಳ ಅರ್ಥ

ತೆರವು–ಬರಿದು; ಐಸಿರಿ–ಸಂಪತ್ತು; ಪೊಡವಿ–ಭೂಮಿ; ಮೈಯಳಿ–ಮರಣಹೊಂದು; ಸೈತಿಡು–ಕ್ರಮಗೊಳಿಸು, ನೇರಗೊಳಿಸು; ಸೈಪಿಡು–ಸಮಾಧಾನ ಪಡಿಸು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿಯು ದೇವರನ್ನು ಏನೆಂದು ಬೇಡಿದ್ದಾನೆ ?
2. ಬಡತನವು ತನಗಿರಲಿ ಎಂದು ಕವಿ ಏಕೆ ಹಂಬಲಿಸಿದ್ದಾನೆ ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. 'ಕೋರಿಕೆ' ಕವನದ ಮುಖ್ಯ ಸಾರಾಂಶವನ್ನು ಬರೆಯಿರಿ .

ಚಟುವಟಿಕೆ

1. 'ಕೋರಿಕೆ' ಕವನದಂತಹ ಭಾವಯುತ ಕವನಗಳನ್ನು ಸಂಗ್ರಹಿಸಿರಿ.
2. ಮಹಾಮಾನವರ ಚಿತ್ರಗಳನ್ನು ಗುರುಗಳ ಸಹಾಯದಿಂದ ಸಂಗ್ರಹಿಸಿ ಒಂದು ಆಲ್ಬಂ ಅನ್ನು ತಯಾರಿಸಿ.





9th_Kannada_Reader Term III.indd 130 29-01-2019 16:40:52

ಉಪಪಠ್ಯ

ಘಟಕ ಎಂಟು

ನಮ್ಮ ಸೈನಿಕರು



ಹೆತ್ತ ತಾಯಿಯಂತೆ ಜನ್ಮಕೊಟ್ಟ ಭೂಮಿಯೂ ಶ್ರೇಷ್ಠ. ಮಾತೃಭೂಮಿಯನ್ನು ವೈರಿಗಳಿಂದ ರಕ್ಷಿಸುವುದು ಪ್ರತಿಯೊಬ್ಬ ದೇಶಭಕ್ತ ಪ್ರಜೆಯ ಕರ್ತವ್ಯ. ಸೇನೆಗೆ ಸೇರಲು ಹಲವರು ಉತ್ಸುಕರಾಗಿದ್ದರೂ, ಮಾನಸಿಕವಾಗಿ ಅವರನ್ನು ಮತ್ತೆ ಹುರಿದುಂಬಿಸುವುದಕ್ಕಾಗಿ ಸೇನಾಧಿಕಾರಿಗಳು ಹಲವು ರೀತಿಯ ಪ್ರದರ್ಶನಗಳನ್ನು ಹಮ್ಮಿಕೊಳ್ಳುತ್ತಾರೆ. ಉದಾಹರಣೆಗೆ ಇತ್ತೀಚೆಗೆ ನಡೆದ ಚೆನ್ನೈ, ಬೆಂಗಳೂರು ನಗರಗಳ 'ಏರ್ ಷೋ'ವನ್ನು ನೆನಪಿಸಿಕೊಳ್ಳಬಹುದು. ಇವುಗಳಿಂದ ಪ್ರಜೆಗಳು ಅಧಿಕ ಸಂಖ್ಯೆಯಲ್ಲಿ ಆಕರ್ಷಿತರಾಗಿ ಸೇನೆಗೆ ಸೇರಿ ದೇಶವನ್ನು ರಕ್ಷಿಸುವ ಸಂಕಲ್ಪಗೈಯುತ್ತಾರೆ. ಈಗೀಗಂತೂ ಹಲವು ಮಾರಕಾಸ್ತ್ರಗಳು, ತೀವ್ರವಾದ ಸಂಘಟನೆಗಳು ಹೆಚ್ಚುತ್ತಿರುವುದರಿಂದ ಯಾವ ಸಮಯದಲ್ಲಿ ಏನು ನಡೆಯಬಹುದೆಂಬುದನ್ನು ಊಹಿಸಲೂ ಅಸಾಧ್ಯ. ಅದರಿಂದಾಗಿ ಸೇನೆಯು ಹಗಲು ರಾತ್ರಿ ದೇಶದ ರಕ್ಷಣೆಯಲ್ಲಿ ತೊಡಗಿರಬೇಕಾಗುತ್ತದೆ. ಸೇನೆಯಲ್ಲಿರುವ ಸೈನಿಕರು ಪ್ರಾಣವನ್ನೇ ಮುಡಿಪಾಗಿಟ್ಟು ದೇಶದ ರಕ್ಷಣೆಯಲ್ಲಿ ಯಾವ ಪಾತ್ರವನ್ನು ವಹಿಸುತ್ತಿದ್ದಾರೆ ಎಂಬುದನ್ನು ವಿವರಿಸುವ ಪಾಠವೇ ನಮ್ಮ ಸೈನಿಕರು.

ಅಲ್ಲಿ ನಾಡಿನುತ್ತರದಲಿ
ಪರ್ವತಗಳ ಎತ್ತರದಲಿ
ಝಗಮಗಿಸಿದ ಸೂರ್ಯರೆ
ವಜ್ರೋಪಮ ವೀರ್ಯರೆ
ಇಗೋ, ವಂದನೆ ನಿಮಗೆ!

ನಾವೆಲ್ಲ ನಮ್ಮ ನಮ್ಮ ಮನೆಗಳಲ್ಲಿ ಬೆಚ್ಚಗೆ ಕುಳಿತು ಹರಟುತ್ತಿರುವಾಗ, ಕೊರೆಯುವ ಚಳಿಯ ನಮ್ಮ ಹಿಮಾಲಯದ ಗಡಿಗಳಲ್ಲಿ ನಮ್ಮ ಸೈನಿಕರು ಗಡುಸಾದ ಸಮವಸ್ತ್ರ ತೊಟ್ಟು, ಬಂದೂಕು ಹಿಡಿದು ಗಡಿಗಳನ್ನು ಕಾಯುತ್ತಿರುತ್ತಾರೆ ಎಂಬುದು ನಿಮಗೆ ಗೊತ್ತೇ? ಕೇವಲ ಹಿಮಾಲಯದ ಗಡಿಗಳಲ್ಲಷ್ಟೇ ಅಲ್ಲ, ರಾಜಾಸ್ಥಾನದ ಮರುಭೂಮಿಯಲ್ಲೂ ಅಸ್ಸಾಮಿನ ಗುಡ್ಡಗಾಡುಗಳಲ್ಲೂ, ನಮ್ಮ ದೇಶವನ್ನು ಮೂರು ಕಡೆಯಿಂದ, ಸುತ್ತುವರಿದಿರುವ ಸಮುದ್ರ



ಪ್ರದೇಶದಲ್ಲೂ ವೈರಿಗಳು ಆಕ್ರಮಣ ಮಾಡದಂತೆ ಸದಾ ಜಾಗರೂಕತೆಯಿಂದ ನೋಡಿಕೊಳ್ಳುತ್ತಿರುತ್ತಾರೆ. ಹಾಗೇನಾದರೂ ಅಪಾಯದ ಸಂದರ್ಭ ಬಂದರೆ ಕೂಡಲೇ ಮೇಲಧಿಕಾರಿಗಳಿಗೆ ಸುದ್ದಿ ಕಳಿಸಿ ಅಗತ್ಯವಾದಲ್ಲಿ ಹೆಚ್ಚಿನ ಸೈನ್ಯ ಅಲ್ಲಿಗೆ ಬರುವಂತೆ ಮಾಡಿಕೊಳ್ಳುತ್ತಾರೆ. ನಿಷ್ಕಾವಂತ ಕಾವಲುಗಾರ ಮನೆಯನ್ನು ಕಾಯುವಂತೆ ನಮ್ಮ ಸೈನಿಕರು ಈ

9th_Kannada_Reader Term III.indd 131 29-01-2019 16:40:53

ತಿಳಿದುಕೊಳ್ಳಿರಿ



ಫೀಲ್ಡ್ ಮಾರ್ಷಲ್ ಕಾರ್ಯಪ್ಪ

ಫೀಲ್ಡ್ ಮಾರ್ಷಲ್ ಕೊದಂಡೇರ ಮಾದಪ್ಪ ಕಾರ್ಯಪ್ಪ ಅವರು ಭಾರತ ಸೇನೆಯ ಪ್ರಥಮ ಕಮಾಂಡರ್ ಇನ್ ಚೀಫ್. ಇವರು 28.1.1899ರಂದು ಮಡಿಕೇರಿ ಸಮೀಪದ ಶನಿವಾರ ಸಂತೆಯಲ್ಲಿ ಜನಿಸಿದರು. ತಂದೆ : ಮಾದಪ್ಪ; ತಾಯಿ : ಕಾವೇರಿ. ಪ್ರಾಥಮಿಕ ಪ್ರೌಢ ವಿದ್ಯಾಭ್ಯಾಸವನ್ನು ಮಡಿಕೇರಿಯಲ್ಲಿಯೇ ಮುಗಿಸಿ ಉನ್ನತ ವ್ಯಾಸಂಗವನ್ನು ಚೆನ್ನೈನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಮುಗಿಸಿದರು. ಹರೆಯದಲ್ಲಿ ಹಾಕಿ, ಟೆನಿಸ್ ಕ್ರೀಡೆಗಳಲ್ಲಿ ಆಸಕ್ತಿ ಹೊಂದಿದ್ದರು. 1918ರ ಪ್ರಥಮ ವಿಶ್ವಯುದ್ಧದ ಬಳಿಕ ಭಾರತೀಯರನ್ನು ಸೇನೆಯಲ್ಲಿ ಸೇರಿಸಿಕೊಳ್ಳಬೇಕೆಂಬ ಒತ್ತಾಯವನ್ನು ದೇಶದ ನಾಯಕರು ಬ್ರಿಟಿಷ್ ಅಧಿಕಾರಿಗಳ ಮೇಲೆ ಹೇರಿದರು. ಮುಂದೆ ಕಠಿಣ ಪರೀಕ್ಷೆಗಳ ನಂತರ ಆಯ್ಕೆಯಾದ ಕೆಲವೇ ಭಾರತೀಯರಲ್ಲಿ ಕಾರ್ಯಪ್ಪನವರೂ ಒಬ್ಬರು. ಮೊದಲು ಇಂದೂರಿನ ಡ್ಯಾಲಿ ಕೆಡೆಟ್ ಕಾಲೇಜಿನಲ್ಲಿ ಸೇರ್ಪಡೆಗೊಂಡರು. ಬಳಿಕ ಮುಂಬೈನಲ್ಲಿ ಪದಾತಿ ದಳಕ್ಕೆ ನಿಯುಕ್ತರಾದರು. ಮುಂದೆ ಇರಾಕ್‌ಗೆ ವರ್ಗಾವಣೆ. ಅಲ್ಲಿಯ ಬಂಡುಕೋರರನ್ನು ಹತೋಟಿಗೆ ತಂದ ಅವರ ಪ್ರಾವೀಣ್ಯಕ್ಕೆ ಮೆಚ್ಚಿ ಬ್ರಿಟೀಷ್ ಆಡಳಿತವು ಅವರನ್ನು ಭಾರತಕ್ಕೆ ಮರಳಲು ಹೇಳಿ ವಾಯುವ್ಯ ಗಡಿ ಪ್ರದೇಶಕ್ಕೆ ಕಳುಹಿಸಿತು. ಅಲ್ಲೂ ಪಠಾಣರ ವಿರುದ್ಧ ಹೋರಾಟ ಮೇಲಧಿಕಾರಿಗಳ ಮೆಚ್ಚುಗೆ ಪಡೆದರು. ಮುಂದೆ ಬ್ರಿಗೇಡಿಯರ್ ಆಗಿ ಭಡ್ತಿ ನೀಡಲಾಯಿತು. 1941ರಿಂದ ಇರಾಕ್, ಸಿರಿಯಾ, ಇರಾನ್, ಬರ್ಮಾ, ಮುಂತಾದೆಡೆಗಳಲ್ಲಿ ಸೇನಾದಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಸ್ವಾತಂತ್ರ್ಯ ನಂತರ ಕಾರ್ಯಪ್ಪನವರಿಗೆ ಮೇಜರ್ ಜನರಲ್ ಪದವಿಯನ್ನು ನೀಡಿ ಜನವರಿ 15ರಂದು ಜನರಲ್ ಆಗಿ ಬಡ್ತಿಯನ್ನು ನೀಡಿ ಭಾರತೀಯ ಸೈನ್ಯದ ವರಿಷ್ಠ ನಾಯಕ ರಾಗಿ 1953ರಲ್ಲಿ ಸೇನೆಯಿಂದ ನಿವೃತ್ತರಾದರು. ಬಳಿಕ 1956ರವರೆಗೆ ನ್ಯೂಝಿಲೆಂಡ್, ಆಸ್ಟ್ರೇಲಿಯಾ ದೇಶಗಳ ಹೈಕಮೀಷನರ್ ಆಗಿಯೂ ಕಾರ್ಯ ನಿರ್ವಹಿಸಿದರು. ಭಾರತ ಸರಕಾರ 1986ರಲ್ಲಿ 'ಫೀಲ್ಡ್ ಮಾರ್ಷಲ್' ಎಂಬ ಬಿರುದನ್ನೂ ನೀಡಿದಾಗ ಅವರಿಗೆ 87 ವರ್ಷವಾಗಿತ್ತು. 1993ರ ಮೇ, 15ರಂದು ತಮ್ಮ 94ನೇ ವಯಸ್ಸಿನಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರು ಸ್ವರ್ಗಸ್ಥರಾದರು.



ದೇಶವನ್ನು ಕಾಯುತ್ತಾರೆ, ಕಾಪಾಡುತ್ತಾರೆ. ಇಂಥ ಸೈನಿಕರಿಗೆ ಕನ್ನಡದ ಕವಿಯೊಬ್ಬರು ಮೇಲ್ಕಂಡ ಕವಿತೆಯಲ್ಲಿ ನಾಡಿನ ಜನರ ಪರವಾಗಿ ವಂದನೆ ಸಲ್ಲಿಸಿದ್ದಾರೆ.

ಮನೆಯ ರಕ್ಷಣೆಗಿಂತ ದೇಶದ ರಕ್ಷಣೆ ತುಂಬ ಕಷ್ಟ. ಮನೆಗಾದರೆ ಕಿಟಕಿ ಬಾಗಿಲುಗಳಿರುತ್ತವೆ. ಅದನ್ನು ಮುಚ್ಚಿ ಬೀಗ ಹಾಕಬಹುದು. ಆದರೆ ದೇಶಕ್ಕೆ ಬೀಗ ಹಾಕುವುದು ಸಾಧ್ಯವಿಲ್ಲವಲ್ಲ! ಆದ್ದರಿಂದ ಈ ಕೆಲಸಕ್ಕಾಗಿ ವಿಶೇಷವಾದ ಶಿಕ್ಷಣ ಪಡೆದ ಲಕ್ಷಾಂತರ ಜನರ ಒಂದು ದೊಡ್ಡ ಪಡೆಯೇ ಬೇಕಾಗುತ್ತದೆ. ದೇಶವನ್ನು ರಕ್ಷಿಸಲೆಂದೇ ಇರುವ ಈ ಜನರ ಸಮೂಹಕ್ಕೆ 'ಸೈನ್ಯ' ಎಂದು ಹೆಸರು. ಸೈನ್ಯದಲ್ಲಿರುವ ಜನರನ್ನು 'ಸೈನಿಕರು' ಅಥವಾ 'ಯೋಧರು' ಎಂದು ಸಾಮಾನ್ಯವಾಗಿ ಕರೆಯುತ್ತೇವೆ.

ಭಾರತದ ಸೈನ್ಯದಲ್ಲಿ ಅನೇಕ ಲಕ್ಷ ಯೋಧರಿದ್ದಾರೆ. ನಮ್ಮ ಸೈನ್ಯವು ಇಂದು ಪ್ರಪಂಚದ ಅತ್ಯುತ್ತಮ ಸೈನ್ಯಗಳಲ್ಲಿ ಒಂದಾಗಿದೆ. ನಮ್ಮ ಸೈನ್ಯದಲ್ಲಿ ಅತ್ಯಂತ ಆಧುನಿಕ ರೀತಿಯ ಶಸ್ತ್ರಾಸ್ತ್ರಗಳಿವೆ. ಅವುಗಳನ್ನು ಬಳಸಲು ಹಲವು ರೀತಿಯ ತರಬೇತಿ ಪಡೆದ ನಿಷ್ಣಾತ ಯೋಧರಿದ್ದಾರೆ. ಅವರು ನಮ್ಮ ದೇಶವನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಿಗೆ ಪ್ರೀತಿಸುತ್ತಾರೆ. ಅವರು ಜಾತಿ, ಭಾಷೆ, ರಾಜ್ಯ ಎಂದೆಲ್ಲ ಭೇದವೆಣಿಸದೆ ಎಲ್ಲಾ ಭಾರತೀಯರನ್ನೂ ತಮ್ಮ ಬಂಧುಗಳೆಂದು ಭಾವಿಸಿದ್ದಾರೆ. ಸಮಸ್ತ ಭಾರತೀಯರ ರಕ್ಷಣೆಗಾಗಿ ಹೋರಾಡಲು ಅವರು ಸದಾಸಿದ್ಧರಾಗಿರುತ್ತಾರೆ. ಇಂಥ ದೇಶಭಕ್ತ ಸೈನಿಕರು ಇರುವುದರಿಂದಲೇ ಭಾರತ ಹಲವು ಬಾರಿ ಯುದ್ಧ ಮಾಡಿ ಜಯಶಾಲಿಯಾಗಿದೆ.

9th_Kannada_Reader Term III.indd 132 29-01-2019 16:40:53

ನಮ್ಮ ಯೋಧರ ಬಗ್ಗೆ ನಾವು ಹೆಮ್ಮೆ ಪಡಬೇಕು. ಅಂಥ ಗೌರವಾನ್ವಿತ ಜನ ಅವರು.

ನಮ್ಮ ಸೈನ್ಯದಲ್ಲಿ ಮುಖ್ಯವಾಗಿ ಮೂರು ವಿಭಾಗಗಳಿವೆ. ಇವನ್ನು ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆ ಎನ್ನುತ್ತೇವೆ. ಭೂಮಿಯ ಮೇಲೆ ಓಡಾಡುತ್ತಾ ರಕ್ಷಣಾ ಕೆಲಸ ಮಾಡುವ ಸೈನ್ಯದ ವಿಭಾಗವೇ 'ಭೂಸೇನೆ'. ಸಮುದ್ರದಲ್ಲಿ ನೌಕೆಗಳಲ್ಲಿ ಸಂಚರಿಸುತ್ತಾ ರಕ್ಷಣಾ ಕಾರ್ಯ ಮಾಡುವ ಸೈನ್ಯದ ವಿಭಾಗವೇ 'ನೌಕಾಸೇನೆ'. ವಿಮಾನಗಳಲ್ಲಿ ಹಾರಾಡುತ್ತಾ ರಕ್ಷಣೆಯ ಕೆಲಸ ಮಾಡುವ ವಿಭಾಗವೇ 'ವಾಯುಸೇನೆ'. ಯುದ್ಧದ ಸಂದರ್ಭದಲ್ಲಿ ಈ ಮೂರೂ ವಿಭಾಗಗಳು ಪರಸ್ಪರ ಸಹಕರಿಸಿ ಹೊಂದಾಣಿಕೆಯಿಂದ ಕೆಲಸ ಮಾಡುತ್ತವೆ. ಉದಾಹರಣೆಗೆ ವಾಯುಸೇನೆಯು ತನ್ನ ವಿಮಾನ, ಹೆಲಿಕಾಪ್ಟರ್‌ಗಳ ಮೂಲಕ ಭೂಸೇನೆಗೆ ಆಹಾರ, ಮದ್ದುಗುಂಡುಗಳನ್ನು ಸರಬರಾಜು ಮಾಡುತ್ತದೆ. ಅದೇ ರೀತಿ ನೌಕಾಸೇನೆಯು ತನ್ನ ನೌಕೆಗಳ ಮೇಲಿರುವ ನಿಲ್ದಾಣದಲ್ಲಿ ಯುದ್ಧ ವಿಮಾನಗಳು ಇಳಿಯಲು ಹಾರಲು ಅನುಕೂಲ ಮಾಡಿಕೊಡುತ್ತವೆ.



ನಮ್ಮ ಇಡೀ ಸೈನ್ಯವು ರಾಷ್ಟ್ರಪತಿಗಳ ಹತೋಟಿಯಲ್ಲಿರುತ್ತದೆ. ಸೈನ್ಯದ ಹಾಗೂ ರಾಷ್ಟ್ರರಕ್ಷಣೆಯ ಕೆಲಸಗಳನ್ನು ನೋಡಿಕೊಳ್ಳಲು ನಮ್ಮ ಕೇಂದ್ರ ಸರ್ಕಾರದಲ್ಲಿ ರಕ್ಷಣಾ ಇಲಾಖೆ ಇದೆ. ರಕ್ಷಣಾ ಮಂತ್ರಿಯು ಈ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇದಲ್ಲದೆ, ನಮ್ಮ ಸೈನ್ಯದ ಮೂರೂ ವಿಭಾಗಗಳಲ್ಲಿ ಪ್ರತಿಯೊಂದಕ್ಕೂ ಒಬ್ಬೊಬ್ಬ ಮುಖ್ಯಾಧಿಕಾರಿ

ತಿಳಿದುಕೊಳ್ಳಿರಿ



ಜನರಲ್ ತಿಮ್ಮಯ್ಯ

ಜನರಲ್ ಕೊದಂಡೇರ ಸುಬ್ಬಯ್ಯ ತಿಮ್ಮಯ್ಯ 30.03.1906ರಂದು ಮಡಿಕೇರಿಯಲ್ಲಿ ಜನಿಸಿದರು. ಇವರು 1957ರಿಂದ 1961ರವರೆಗೆ ಭಾರತ ಭೂ ಸೇನೆಯ ದಂಡನಾಯಕರಾಗಿದ್ದರು. ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪೂರೈಸಿದರು.

ಇವರಲ್ಲಿ ಸೈನಿಕರ ವೀರತ್ವ ರಕ್ತಗತವಾಗಿದ್ದುದರಿಂದ 1926ರಲ್ಲಿ ತಮ್ಮ ಸೈನಿಕ ವೃತ್ತಿಗೆ ಮೊದಲ ಹೆಜ್ಜೆ ಇರಿಸಿದರು. 1935ರಲ್ಲಿ ನೀನಾ ಕಾರ್ಯಪ್ಪ ಅವರೊಂದಿಗೆ ವಿವಾಹವಾಯಿತು. ಎರಡನೇ ಮಹಾಯುದ್ಧದಲ್ಲಿ ಪಾಲ್ಗೊಂಡ ಇವರು 1957ರಲ್ಲಿ ಭಾರತೀಯ ಸೇನೆಯ ಆರನೇ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು. ಸತತ 35 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿದ್ದ ಜನರಲ್ ತಿಮ್ಮಯ್ಯ 1961ರಲ್ಲಿ ನಿವೃತ್ತಿ ಹೊಂದಿದರು. ಭಾರತೀಯ ಸೇನೆಯಿಂದ ನಿವೃತ್ತ ಹೊಂದಿದ ಬಳಿಕ ಸಂಯುಕ್ತ ರಾಷ್ಟ್ರಗಳ ಶಾಂತಿ ಸ್ಥಾಪಕ ಸೈನ್ಯದ ಮುಖ್ಯಸ್ಥರಾಗಿ ಗ್ರೀಕಿನ ಸೈಪ್ರಸ್‌ನಲ್ಲಿದ್ದರು.

1965ರ ಡಿಸೆಂಬರ್ 17ರಂದು ಸೈಪ್ರಸ್‌ನಲ್ಲಿಯೇ ಕೊನೆಯುಸಿರೆಳೆದರು. ಧೀರ ಸೇನಾನಿ ಜನರಲ್ ತಿಮ್ಮಯ್ಯ ಅವರಿಗೆ ಭಾರತ ಸರ್ಕಾರ ಪದ್ಮ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

9th_Kannada_Reader Term III.indd 133 29-01-2019 16:40:54

ಇರುತ್ತಾರೆ. ಭೂಸೇನೆಯ ಮುಖ್ಯಸ್ಥರನ್ನು 'ಜನರಲ್' ಎನ್ನುತ್ತಾರೆ. ನೌಕಾಸೇನೆಯ ಮುಖ್ಯಸ್ಥರನ್ನು 'ಅಡ್ಮಿರಲ್' ಎಂದೂ, ವಾಯುಪಡೆಯ ಮುಖ್ಯಸ್ಥರನ್ನು 'ಏರ್‌ಚೀಫ್ ಮಾರ್ಷಲ್' ಎಂದೂ ಕರೆಯುತ್ತಾರೆ. ಇವರಿಗೆ ಸಹಾಯಕರಾಗಿ ವಿವಿಧ ದರ್ಜೆಯ ಅನೇಕ ಅಧಿಕಾರಿಗಳಿರುತ್ತಾರೆ.

ನಮ್ಮ ಸೈನ್ಯದ ಪ್ರತಿವಿಭಾಗದಲ್ಲೂ ಅನೇಕ ಉಪವಿಭಾಗಗಳಿರುತ್ತವೆ. ಇವು ಬೇರೆ ಬೇರೆ ಕೆಲಸಗಳನ್ನು ನೋಡಿಕೊಳ್ಳುತ್ತವೆ. ಸೈನ್ಯದಲ್ಲಿ ಡಾಕ್ಟರ್‌ಗಳು, ಎಂಜಿನಿಯರ್‌ಗಳು, ಡ್ರೈವರ್‌ಗಳು, ಯಂತ್ರ ರಿಪೇರಿ ಮಾಡುವವರು ಹೀಗೆ ಹಲವು ಬಗೆಯ ನೌಕರ ವರ್ಗದವರು ಇರುತ್ತಾರೆ. ಇವರು ಅಗತ್ಯ ತರಬೇತಿಯನ್ನು ಪಡೆದಿರುತ್ತಾರೆ.

ಕೇವಲ ಗಡಿಗಳನ್ನು ಕಾಯುವುದು, ಯುದ್ಧ ಮಾಡುವುದು ಇವಿಷ್ಟೇ ಸೈನಿಕರ ಕೆಲಸವಲ್ಲ. ನಾಗರಿಕರ ಹಿತಕ್ಕಾಗಿಯೂ ಆಗಾಗ್ಗೆ ಸೈನಿಕರನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಪ್ರವಾಹ ಬಂದಾಗ, ಭೀಕರ ಅಪಘಾತಗಳಾದಾಗ, ಭೂಕಂಪ ಸಂಭವಿಸಿದಾಗ ಜನರ ಆಸ್ತಿಪಾಸ್ತಿ ಹಾಗೂ ಪ್ರಾಣರಕ್ಷಣೆಗಾಗಿ ಸೈನ್ಯದ ನೆರವು ಬೇಕಾಗುತ್ತದೆ.

ಸೈನಿಕರು ಸಮವಸ್ತ್ರ ಧರಿಸುತ್ತಾರೆ. ಸಮವಸ್ತ್ರದಲ್ಲಿ ವ್ಯತ್ಯಾಸಗಳಿರುತ್ತವೆ. ಈ ವ್ಯತ್ಯಾಸಗಳಿಂದಾಗಿ ಅವರು ಸೈನ್ಯದ ಯಾವ ವಿಭಾಗಕ್ಕೆ ಹಾಗೂ ಯಾವ ದರ್ಜೆಗೆ ಸೇರಿದವರೆಂಬುದನ್ನು ಗುರ್ತಿಸಬಹುದು. ಆದರೆ ಎಲ್ಲ ವಿಭಾಗದ ಸೈನಿಕರ ಮೂಲ ಮಂತ್ರ ಒಂದೇ. ಅದು : 'ನಾವು ಭಾರತೀಯರು, ರಾಷ್ಟ್ರ ರಕ್ಷಣೆ ನಮ್ಮ ಹೊಣೆ'.

ಶಿಸ್ತು ಸೈನ್ಯದ ಜೀವಾಳ. ಯಾವುದೇ ದರ್ಜೆಯ ಅಧಿಕಾರಿಯೇ ಆದರೂ ತನಗೊಪ್ಪಿಸಿದ ಕೆಲಸವನ್ನು ಆ ಸಮಯಕ್ಕೆ ಸರಿಯಾಗಿ ಮಾಡಲೇಬೇಕು. ಇದು ಸೈನ್ಯದ ನಿಯಮ. ಈ ಕರ್ತವ್ಯ ನಿಷ್ಠೆಯೇ ಸೈನಿಕರು ಅಪಾಯವನ್ನು ಎದುರಿಸಿ ಹೋರುಡುವಂತೆ ಮಾಡುತ್ತದೆ. ಹಿಂದಿನ ಹಲವು ಯುದ್ಧಗಳಲ್ಲಿ ನಮ್ಮ ಸಹಸ್ರಾರು ಸೈನಿಕರು ಮೇಲ್ಮಟ್ಟದ ಕರ್ತವ್ಯ ನಿಷ್ಠೆ ತೋರಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ್ದಾರೆ. ನವಭಾರತಕ್ಕಾಗಿ ಸಾವನ್ನಪ್ಪಿ ಅವರು ಅಮರರಾಗಿದ್ದಾರೆ.

ನಾವಳಿದೆವು...

ನಮ್ಮೆಲ್ಲವುಗಳ ಮೇಲೆ

ಮೂಡುವುದು ಮೂಡುವುದು ನೋಡು

ನವಭಾರತ ಲೀಲೆ ?

ಇದು ಸಂಗ್ರಾಮಭೂಮಿಯಲ್ಲಿನ ಪ್ರತಿಯೊಬ್ಬ ಯೋಧನ ಮನೋಭಾವ. ಆತ ಎಂದೂ ವಿಪತ್ತಿಗೆ ಹೆದರುವುದಿಲ್ಲ. ಸಂತೋಷದಿಂದಲೇ ಅದನ್ನು ಎದುರಿಸಲು ಮುಂದಡಿ ಇಡುತ್ತಾನೆ.

ನಡೆ ಮುಂದೆ ನಡೆ ಮುಂದೆ

ನುಗ್ಗಿ ನಡೆ ಮುಂದೆ

ಜಗ್ಗದೆಯೆ ಕುಗ್ಗದೆಯೆ

ಹಿಗ್ಗಿ ನಡೆ ಮುಂದೆ !

ಹೀಗೆ ಉತ್ಸಾಹದಿಂದ ನಡೆದು ಕಷ್ಟಗಳ ಸರಮಾಲೆಯನ್ನು ಎದುರಿಸಲು ಸಿದ್ಧವಾಗಿರುವ ನಮ್ಮ ಸೈನಿಕರಿಂದಾಗಿ ನಮ್ಮ ದೇಶ ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಹೆಮ್ಮೆಯಿಂದ ಬದುಕಲು ಸಾಧ್ಯವಾಗಿದೆ. ಅವರಂತೆಯೇ ನಾವೂ ನಿಷ್ಠೆಯಿಂದ ದೇಶಕ್ಕಾಗಿ ದುಡಿಯಬೇಕು. ಎಲ್ಲರೂ ಒಂದೆಂಬ ಭಾವನೆಯಿಂದ ಬದುಕಬೇಕು. ಯೋಧರನ್ನು ಗೌರವಿಸಬೇಕು. ಆಗಲೇ, ಅವರ ತ್ಯಾಗಕ್ಕೆ ಸೂಕ್ತ ಗೌರವ ಸಲ್ಲಿಸಿದಂತೆ ಆಗುತ್ತದೆ.

ಪದಗಳ ಅರ್ಥ

ವಜ್ರೋಪಮ–ವಜ್ರಕ್ಕೆ ಸಮಾನವಾದ; ಅತ್ಯಂತ ಗಟ್ಟಿಯಾದ; ವೀರ್ಯ–ಶಕ್ತಿ; ಪಹರೆ–ಕಾವಲು; ಸಂಗ್ರಾಮ–ಯುದ್ಧ; ಯೋಧ–ಸೈನಿಕ.

9th_Kannada_Reader Term III.indd 134 29-01-2019 16:40:54

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸೈನ್ಯದ ಮುಖ್ಯ ಕರ್ತವ್ಯವೇನು ?
2 ನಮ್ಮ ಸೈನಿಕರ ಮೂಲ ಮಂತ್ರ ಯಾವುದು ?
3 ಭಾರತ ಸೇನೆಯ ಮುಖ್ಯ ವಿಭಾಗಗಳಾವುವು ?
4. ಸೈನ್ಯದ ಜೀವಾಳವಾಗಿರುವ ಗುಣ ಯಾವುದು ?
5 ಯೋಧರ ಬಗ್ಗೆ ನಾವು ಹೇಗೆ ನಡೆದುಕೊಳ್ಳಬೇಕು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನಮ್ಮ ಸೈನಿಕರು ಎಲ್ಲೆಲ್ಲಿ ಪಹರೆ ಮಾಡುತ್ತಿರುತ್ತಾರೆ ?
2. ವೈರಿಗಳಿಂದ ಅಪಾಯ ಉಂಟಾದಾಗ ಸೈನಿಕರು ಏನು ಮಾಡುತ್ತಾರೆ ?
3. ಯುದ್ಧ ಮಾತ್ರವಲ್ಲದೆ ಬೇರೆ ಯಾವ ಯಾವ ಕೆಲಸಗಳಿಗೆ ಸೈನ್ಯದ ಸಹಾಯವನ್ನು ಪಡೆಯುತ್ತೇವೆ ?

ಚಟುವಟಿಕೆ

1. ಸೇನೆಯ ವಿವಿಧ ವಿಭಾಗಗಳ ಸೈನಿಕರಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
2. ಸೈನ್ಯಕ್ಕೆ ಸೇರಲು ಹೊಂದಿರಬೇಕಾದ ಅರ್ಹತೆಗಳಾವುವು ಎಂಬುದನ್ನು ಕೇಳಿ ತಿಳಿದುಕೊಳ್ಳಿರಿ.
3. ನಿಮ್ಮ ಶಾಲೆಯಲ್ಲಿ ನಡೆಯುವ ಸ್ಕೌಟ್, ಎನ್.ಸಿ.ಸಿ. ಮುಂತಾದವುಗಳಲ್ಲಿ ನೀವು ಸೇರಿ ನಿಮ್ಮ ದೇಹ ದಾರ್ಢ್ಯತೆಯನ್ನು ಹಾಗೂ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಳ್ಳಿರಿ.



9th_Kannada_Reader Term III.indd 135 29-01-2019 16:40:55

ಘಟಕ ಎಂಟು

ಅಲಂಕಾರಗಳು

ಮಾನವನ ನಾಗರಿಕತೆ, ಸಂಸ್ಕೃತಿಗಳು ಬೆಳೆದ ಹಾಗೆ ಅವನ ಸೌಂದರ್ಯ ಪ್ರಜ್ಞೆಯೂ ಬೆಳೆಯಿತು. ವಾಸ ಮಾಡುವ ಮನೆ, ಧರಿಸುವ ವೇಷ–ಭೂಷಣಗಳು ಎಲ್ಲವೂ ಸುಂದರವಾಗಿರಬೇಕೆಂದು ಬಯಸಿದರು. ಹಾಗೆಯೇ ತಾವಾಡುವ ಮಾತುಗಳಲ್ಲಿಯೂ ಸೌಂದರ್ಯ ತುಂಬಿದ್ದು ಕಿವಿಗೆ ಇಂಪಾಗಿ, ಹೃದಯಕ್ಕೆ ಮಧುರವಾಗಿ, ಆಕರ್ಷಕವಾಗಿರಬೇಕೆಂದು ಅಪೇಕ್ಷಿಸಿದರು. ಅದಕ್ಕಾಗಿ ಮನ ಸೆಳೆಯುವಂತಹ, ಚಮತ್ಕಾರದ ಶಬ್ದಗಳನ್ನು ಬಳಸುವುದು ಮತ್ತು ಮೋಹಕವಾದ ಅರ್ಥ ಚಮತ್ಕೃತಿಯನ್ನು ವೈವಿಧ್ಯಮಯವಾಗಿ ಧ್ವನಿಸಲು ಕಲಿತರು. ಹೀಗೆ ಮನುಷ್ಯ ಭಾಷೆಯ ಮೂಲಕ ತನ್ನ ಮಾತಿನ ಬರಹದ ಸೌಂದರ್ಯವನ್ನು ಹೆಚ್ಚಿಸಲು ಮಾಡಿದ ಪ್ರಯತ್ನದ ಫಲವೇ ಅಲಂಕಾರಗಳು. ಮಗುವಿನ ಮುಖ ಅಂದವಾಗಿದೆ ಎಂದು ಹೇಳಿದರೆ ಇಲ್ಲಿ ಯಾವ ಅಲಂಕಾರವೂ ಇಲ್ಲ. ಬದಲಿಗೆ ಮಗುವಿನ ಮುಖ ಪೂರ್ಣ ಚಂದ್ರನಂತೆ ಅಂದವಾಗಿದೆ ಎಂದು ಹೋಲಿಸಿ ಹೇಳಿದರೆ ಅಲಂಕಾರವಾಗುತ್ತದೆ.

ಕವಿ ಪ್ರತಿಭೆ ಭಾಷೆಯ ಮೂಲಕ ಅಭಿವ್ಯಕ್ತವಾದಾಗ ಮೈದೋರುವ ಶಬ್ದಾರ್ಥ ವೈಚಿತ್ರ್ಯಗಳೇ ಅಲಂಕಾರಗಳು. ಇವು ಕಾವ್ಯದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಅಲಂಕಾರಗಳು ಸಹಜವಾಗಿ ಅರ್ಥದ ಸೊಗಸಿನೊಂದಿಗೆ ಬಂದಾಗ ಕಾವ್ಯದ ಸತ್ವ, ಚೆಲುವು ವೃದ್ಧಿಸುತ್ತೆ. ಅಸಹಜವಾಗಿ ಒತ್ತಾಯದಿಂದ ಬಂದರೆ ಅದು ಅಲಂಕಾರ ಎನ್ನಿಸಿಕೊಳ್ಳುವುದಿಲ್ಲ. ಅವು ಕಾವ್ಯದ ಶೋಭೆಯನ್ನು ಹೆಚ್ಚಿಸುವುದಿಲ್ಲ. ಕಾವ್ಯಗಳಲ್ಲಿ ರಸ, ಧ್ವನಿ, ಅಲಂಕಾರ, ಹೆಚ್ಚಾದಾಗ ಶಬ್ದಾನಂದವನ್ನು ಉಂಟು ಮಾಡುತ್ತವೆ. ಕಾವ್ಯಗಳಲ್ಲಿ ಶಬ್ದ, ಅರ್ಥ ಇವುಗಳ ವೈಚಿತ್ರ್ಯದಿಂದ ಉಂಟಾಗುವ ಸೌಂದರ್ಯಕ್ಕೆ ಅಲಂಕಾರವೆಂದು ಹೆಸರು. ಅಲಂಕಾರಗಳಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳೆಂಬ ಎರಡು ವಿಧಗಳಿವೆ. ಸಂಸ್ಕೃತದ ಅಲಂಕಾರಿಕರಲ್ಲಿ ಭರತ, ದಂಡಿ, ರುದ್ರಟ, ಭಾಮಹ, ವಾಮನ, ರಾಜಶೇಖರ ಮುಂತಾದವರು ಪ್ರಮುಖ ಅಲಂಕಾರ ಶಾಸ್ತ್ರಜ್ಞರು. ಕನ್ನಡದಲ್ಲಿ ಶ್ರೀವಿಜಯ, ನಾಗವರ್ಮ, ಮಾಧವ, ತಿರುಮಲಾರ್ಯ ಮುಂತಾದವರು ಪ್ರಸಿದ್ಧರು. ಶಬ್ದಾಲಂಕಾರದಲ್ಲಿ ಪ್ರಮುಖವಾಗಿ 3 ವಿಧಗಳಿವೆ. ಅರ್ಥಾಲಂಕಾರದಲ್ಲಿ 120ಕ್ಕೂ ಅಧಿಕ ಬಗೆಗಳಿವೆ.

ಶಬ್ದಾಲಂಕಾರಗಳು

ಶಬ್ದಾಲಂಕಾರದಲ್ಲಿ ಕಿವಿಗಳಿಗೆ ಇಂಪನ್ನುಂಟು ಮಾಡುವ ಅರ್ಥ ರಹಿತವಾದ ಶಬ್ದಗಳ ಜೋಡಣೆ, ಚಮತ್ಕಾರಗಳಿರುತ್ತವೆ.

ಉದಾಹರಣೆ :

ಹಾಡು ಹೇಳಲು ಏಕೆ ಶಬ್ದಾಲಂಕಾರ
ಹಾಡುವುದೆ ಹಕ್ಕಿ ರಾಗ ಪ್ರಸ್ತಾರದನುಸಾರ
ಭಾವಕೋಶವ ಒಡೆದು ಸ್ವರ ಹೊಮ್ಮಿದಾಗ
ಅದುವೆ ಹಾಡಾಗುವುದು ತನ್ನತನ್ನಂತೆ.

ಶಬ್ದಾಲಂಕಾರದಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಅವು :

1. ಅನುಪ್ರಾಸ
2. ಯಮಕ
3. ಚಿತ್ರಕವಿತ್ವ.

9th_Kannada_Reader Term III.indd 136 29-01-2019 16:40:55

1. ಅನುಪ್ರಾಸ

ಅನುಪ್ರಾಸದಲ್ಲಿ ವೃತ್ತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ಎರಡು ವಿಧಗಳಿವೆ.

ಅ) ವೃತ್ತ್ಯನುಪ್ರಾಸ : ಒಂದು, ಎರಡು, ಮೂರು ಅಕ್ಷರಗಳು ಮತ್ತೆ ಮತ್ತೆ ಪುನರಾವರ್ತಿತವಾದರೆ ವೃತ್ಯನುಪ್ರಾಸವಾಗುತ್ತದೆ.

ಉದಾಹರಣೆ 1

ಎಳೆಗಿಳಿಗಳ ಬಳಗಂ ಗಳ
ಗಳನಿಳಿತಂದೆಳಸಿ ಬಳಸಿ ಸುಳಿದೊಳವುಗುತಂ
ನಳನಳಿಸಿ ಬೆಳೆದು ಕಳಿಯದ
ಕಳವೆಯ ಕಳಶಂಗಳಂ ಕರಂ ಖಂಡಿಸುಗುಂ

ಈ ಪದ್ಯದಲ್ಲಿ ಗ, ಳ, ಕ ಅಕ್ಷರಗಳು ಮತ್ತೆ ಮತ್ತೆ ಪುನರಾವರ್ತಿತವಾಗಿರುವುದನ್ನು ಕಾಣಬಹುದು.

ಉದಾಹರಣೆ 2

'ಬಲ್ಲವನೇ ಬಲ್ಲ ಬೆಲ್ಲದ ಸವಿಯ'

ಇಲ್ಲಿ ಲ ಮತ್ತು ಬ ಅಕ್ಷರಗಳು ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಅ) ಛೇಕಾನುಪ್ರಾಸ : ಎರಡೆರಡು ವ್ಯಂಜನಾಕ್ಷರಗಳು ಜೋಡಿಯಾಗಿ ಪದ್ಯದ ಸಾಲುಗಳಲ್ಲಿ ಹಲವೆಡೆ ಪುನರಾವರ್ತಿತವಾಗಿದ್ದರೆ ಅದನ್ನು ಛೇಕಾನುಪ್ರಾಸ ಎನ್ನುವರು.

ಉದಾಹರಣೆ 1

ಕೆಲದೊಳ್ ಪುಳಿಂದಿಯಿರೆ ಪೆ
ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ
ಚಲದಿಂ ಕಾಡಂ ಕಾಡಂ
ಸಲೆ ಪಸಿವಂ ಮರೆದು ತಣಿದು ಬೇಡಂ ಬೇಡಂ

ಈ ಪದ್ಯದಲ್ಲಿ ನೋಡಂ ನೋಡಂ, ಕಾಡಂ ಕಾಡಂ, ಬೇಡಂ ಬೇಡಂ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಉದಾಹರಣೆ 2

ಉಗುಳಿ ಉಗುಳಿ ರೋಗ
ಹಾಡಿ ಹಾಡಿ ರಾಗ
ಮಾಡಿ ಮಾಡಿ ಕೆಟ್ಟರು
ನೀಡಿ ನೀಡಿ ಕೆಟ್ಟರು

ಇಲ್ಲಿ ಉಗುಳಿ ಉಗುಳಿ, ಹಾಡಿ ಹಾಡಿ, ನೀಡಿ ನೀಡಿ, ಮಾಡಿ ಮಾಡಿ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿವೆ.

2. ಯಮಕ

ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದಗಳು ಒಂದು ಪದ್ಯದ ಆದಿ, ಮಧ್ಯ ಅಥವಾ ಅಂತ್ಯ ಸ್ಥಾನಗಳಲ್ಲಿ ನಿಯತವಾಗಿ ಮತ್ತೆ ಮತ್ತೆ ಬರುವುದನ್ನು ಯಮಕಾಲಂಕಾರ ಎನ್ನುವರು.

9th_Kannada_Reader Term III.indd 137 29-01-2019 16:40:55

ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನರಾವರ್ತಿತವಾಗಿದ್ದರೆ ಅದನ್ನು ಯಮಕಾಲಂಕಾರ ಎನ್ನುವರು.

ಉದಾಹರಣೆ 1 :

ಅಲ್ಲಿಗಲ್ಲಿಗೆ ಬೆಳೆದ ಬೆಳಿಗಳಿಂ ಮೆಳೆಗಳಿಂ
ದಲ್ಲಿಗಲ್ಲಿಗೆ ವನಸ್ಥಲಗಳಿಂ ಕೊಳಗಳಿಂ
ದಲ್ಲಿಗಲ್ಲಿಗೆ ರನ್ನದೆರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ
ದಲ್ಲಿಗಲ್ಲಿಗೆ ನರೆದ ಶುಕಗಳಿಂ ಪಿಕಗಳಿಂ
ದಲ್ಲಿಗಲ್ಲಿಗೆ ಗವಾಸ್ವದಗಳಿಂ ನದಿಗಳಿಂದಾದೇಶಮೊಪ್ಪಿರ್ದುದು

ಈ ಪದ್ಯದಲ್ಲಿ ಪ್ರತಿಸಾಲಿನ ಆದಿಯಲ್ಲಿ 'ಅಲ್ಲಿಗಲ್ಲಿಗೆ' ಎಂಬ ಪದ ನಿಯತವಾಗಿ ಮತ್ತೆ ಮತ್ತೆ ಬಂದಿದೆ. ಹೀಗೆ ಒಂದು ಪದವೇ ಮತ್ತೆ ಮತ್ತೆ ಪುನರಾವರ್ತಿತವಾದರೆ ಅದನ್ನು ಯಮಕ ಎಂದು ಕರೆಯಲಾಗುವುದು.

ಉದಾಹರಣೆ 2 :

ಎಳೆವಾಸೆ ತೊಡರ್ದುದೆನೆ ಮಿಸು
ಪೆಳೆವಾಸೆಯ ದೆಸೆಯೆ ನಿಂದಳಂ ಕೈವಿಡಿದೊ
ಲ್ದೆಳೆವಾಸೆಯಾಂತನಂಬುಜ
ದೆಳೆವಾಸೆಡೆಗೊಂಡ ಪುಳಿನದೆಡೆಗವನೀಶಂ

ಈ ಪದ್ಯದಲ್ಲಿ ಎಳವಾಸೆ ಎನ್ನುವ ಪದವು ನಿಯತವಾಗಿ ಮತ್ತೆ ಮತ್ತೆ ಬಂದಿರುವುದನ್ನು ಕಾಣಬಹುದು.

3. ಚಿತ್ರಕವಿತ್ವ

ಅಕ್ಷರಗಳನ್ನೂ ಪದಗಳನ್ನೂ ಕುಶಲತೆಯಿಂದ ಆರಿಸಿ ಜೋಡಿಸಿ ಕವಿಗಳು ಉಂಟು ಮಾಡುವ ಶಬ್ದ ವೈಚಿತ್ರ್ಯಕ್ಕೆ ಚಿತ್ರಕವಿತ್ವ ಎಂದು ಹೆಸರು. ಅಕ್ಷರ ಅಥವಾ ಪದಗಳ ಚಮತ್ಕಾರ ಹುಟ್ಟಿಸಿ ರಚಿಸಿದ ಪದ್ಯಗಳೇ ಚಿತ್ರಕವಿತ್ವ

ಉದಾಹರಣೆ 1 :

ನನ್ದನ ನನ್ದನ ನಿನ್ನೊ
ನ್ದನ್ದದ ಮೈ ಮುನ್ದೆ ನಿನ್ದುದೆನ್ದೆನೆ ಮುದದಿ
ನ್ದನ್ದಿನ್ದುನ್ದೆನ್ನದೆ ನೀ
ನೆನ್ದುಂ ಮನ್ಮನದೆ ನಿಮ್ಮಿನಿನ್ದೀ ಮುದಮಂ

ಇದರಲ್ಲಿನ ದ, ನ, ಮ – ಅಕ್ಷರಗಳು ಮತ್ತೆ ಮತ್ತೆ ಬಂದಿರುವುದನ್ನು ಗಮನಿಸಿರಿ.

9th_Kannada_Reader Term III.indd 138 29-01-2019 16:40:55

ಘಟಕ
ಒಂಬತ್ತು

ನೀತಿ–ತತ್ವ–ಚಿಂತನೆ



9th_Kannada_Reader Term III.indd 139 29-01-2019 16:40:56

ಘಟಕ ಒಂಬತ್ತು

ಡಾ॥ ಅಂಬೇಡ್ಕರರ ಚಿಂತನೆ

–ಡಿ.ಕೆ ಶಾಮಸುಂದರ



" ..ಇಂದು ಬೌದ್ಧಧರ್ಮವನ್ನು ಸ್ವೀಕಾರ ಮಾಡಿರುವ ನಾನು ದೇಶದ ಪರಮಹಿತ ಸಾಧನೆಯನ್ನೂ ಮಾಡುತ್ತಿದ್ದೇನೆ. ಹೇಗೆಂದರೆ ಬೌದ್ಧಧರ್ಮವು ಭಾರತೀಯ ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಈ ದೇಶದ ಸಂಸ್ಕೃತಿ, ಇತಿಹಾಸ ಹಾಗೂ ಪರಂಪರೆಗಳಿಗೆ ಯಾವ ಆಘಾತವೂ ಉಂಟಾಗಬಾರದೆಂಬ ಎಚ್ಚರಿಕೆಯನ್ನು ನಾನು ವಹಿಸಿದ್ದೇನೆ".

ಅಪಾರವಾದ ರಾಷ್ಟ್ರಪ್ರೇಮವನ್ನು ಸಾರುವ ಈ ಮಾತುಗಳನ್ನು ಹೇಳಿದವರು ಡಾ. ಬಾಬಾಸಾಹೇಬ್ ಭೀಮ್ ರಾವ್ ಅಂಬೇಡ್ಕರ್. ಭಾರತದೇಶ ಕಂಡ ಅಸಾಧಾರಣ ಧುರೀಣರ ಪೈಕಿ ಇವರೂ ಒಬ್ಬರು.

ದಪ್ಪ ಮೈಕಟ್ಟು, ಸಾಧಾರಣ ಎತ್ತರದ ನಿಲುವು, ಗಂಭೀರಭಾವದ ದುಂಡುಮುಖ, ಅಗಲವಾದ ಹಣೆ, ಕನ್ನಡಕದೊಳಗಿನ ಬೆಳಗುವ ಕಣ್ಣುಗಳು, ಆತ್ಮಾಭಿಮಾನ ಆತ್ಮವಿಶ್ವಾಸಗಳನ್ನು ಪ್ರತಿಬಿಂಬಿಸುವ ವ್ಯಕ್ತಿತ್ವ, ಇದು ಡಾ॥ ಅಂಬೇಡ್ಕರರ ಬಾಹ್ಯ ಚಹರೆ.

ಮಹಾರಾಷ್ಟ್ರದಲ್ಲಿರುವ ಒಂದು ಸಣ್ಣಹಳ್ಳಿ ಮಹೌ. ಇಲ್ಲಿನ ರಾಮ್‌ಜಿ ಸಕ್ಪಾಲ ಭೀಮಾಬಾಯಿ ದಂಪತಿಗಳಿಗೆ 1891ನೇ ಏಪ್ರಿಲ್ 14 ರಂದು ಒಂದು ಗಂಡುಮಗು ಹುಟ್ಟಿತು. ಈ ದಂಪತಿಗಳ ಹದಿನಾಲ್ಕನೆಯ ಮಗು ಅದು. ಭೀಮ ಎಂದು ಹೆಸರಿಟ್ಟರು. ಭೀಮ ಆರು ವರ್ಷ ವಯಸ್ಸಿನಲ್ಲಿದ್ದಾಗ ತಾಯಿಯನ್ನು ಕಳೆದುಕೊಂಡ. ರಾಮ್‌ಜಿಯ ತಂಗಿ ಮೀರಾಬಾಯಿಯ ಪಾಲನೆ ಪೋಷಣೆಯಲ್ಲಿ ಭೀಮನ ಬೆಳವಣಿಗೆ ಸಾಗಿತು.

ಭಕ್ತಿಪಂಥವು ಮಹಾರಾಷ್ಟ್ರದಲ್ಲಿ ಗಾಢವಾದ ಪ್ರಭಾವವನ್ನು ಬೀರಿದ್ದ ಕಾಲ ಅದು. ಭೀಮನ ಮನೆತನದ ಹಿರಿಯರು ಪಾರಂಪಾರಿಕವಾಗಿ ದೈವಭಕ್ತಿಯ ಸಂಪ್ರದಾಯಕ್ಕೆ ಸೇರಿದವರು. ಈ ಸಂಸ್ಕಾರ ಈ ಮಗುವಿಗೂ ರವಾನೆಯಾಯ್ತು. ರಾಮ್‌ಜಿಗೆ ತನ್ನ ಕಿರಿಯಮಗನ ಓದಿನ ಬಗ್ಗೆ ವಿಶೇಷವಾದ ಆಸಕ್ತಿ. ಮಗನನ್ನು ಭಜನೆ, ಪುರಾಣ ಪ್ರವಚನಗಳಲ್ಲಿ ತೊಡಗಿಸುತ್ತಿದ್ದರು. ಇಂಗ್ಲಿಷ್ ಭಾಷೆಯನ್ನು ಭಾಷಾಂತರ ಕಲೆಯನ್ನು, ಯಥಾಶಕ್ತಿ ಗಣಿತಶಾಸ್ತ್ರವನ್ನು ಹೇಳಿಕೊಡುತ್ತಿದ್ದರು. ತನ್ನ ಆರ್ಥಿಕ ಅಡೆತಡೆಗಳ ನಡುವೆಯೂ ಶಕ್ತಿಮೀರಿ ಅನುಕೂಲಗಳನ್ನು ಒದಗಿಸಿಕೊಟ್ಟು ಮಗನ ಯಶೋಭಿವೃದ್ಧಿಗೆ ಅನುವು ಮಾಡಿಕೊಟ್ಟರು.

9th_Kannada_Reader Term III.indd 140 29-01-2019 16:40:56

ಭೀಮ ಪ್ರಾರಂಭದಲ್ಲಿ ಓದಿನ ಕಡೆಗೆ ಹೆಚ್ಚು ಒಲವು ತೋರಿಸಲಿಲ್ಲವಾದರೂ ಇದೇ ಸ್ಥಿತಿ ಮುಂದುವರಿಯಲಿಲ್ಲ. ಜೀವನದಲ್ಲಿ ಮಹತ್ತರವಾದ ಏನನ್ನಾದರೂ ಸಾಧಿಸಬೇಕಾದರೆ ಜ್ಞಾನ ಸಂಚಯನ ಅತ್ಯಗತ್ಯ ಎಂಬ ಅರಿವು ಹುಡುಗನಲ್ಲಿ ಮೂಡಿತು. ಅಚಲವಾದ ಇಚ್ಛಾಶಕ್ತಿಯಿಂದ ಏನೆಲ್ಲವನ್ನೂ ಸಾಧಿಸಲು ಸಾಧ್ಯ. ಭೀಮ ಇದನ್ನು ಸಾಧಿಸಿ ತೋರಿಸಿದ. ಮುಂದೆ ಆತನ ರೀತಿಯೇ ಬದಲಾಯಿತು. ಎಷ್ಟೇ ಎಡರುತೊಡರುಗಳು ಬಂದಾಗ್ಯೂ ಓದು ಅವಿರತವಾಗಿ ಮುಂದುವರಿಯಿತು. ವಿದ್ಯಾಭ್ಯಾಸದ ಅವಧಿಯಲ್ಲಿ ದಾರುಣವಾದ ಎಷ್ಟೋ ಕಟು ಅನುಭವಗಳು ಆದದ್ದುಂಟು. ಪ್ರೀತಿ–ಔದಾರ್ಯಗಳ ಮಾನವೀಯ ಮೌಲ್ಯಗಳನ್ನು ಮೆರೆದ ಬಡೋದೆಯ ಸಯಾಜಿರಾವ್ ಮಹಾರಾಜ್, ಕೊಲ್ಲಾಪುರದ ಸಾಹುಮಹಾರಾಜ್, ಕೇಲೂಸ್ಕರ್ ರವರಂತಹ ಹಿರಿಯರ ನೆರವೂ ಲಭ್ಯವಾಯಿತು. ಸಾತಾರೆ, ಮುಂಬಯಿ, ಅಮೆರಿಕಾ, ಲಂಡನ್‌ಗಳಲ್ಲಿ ವಿದ್ಯಾಭ್ಯಾಸದ ಸಾಧನೆಯ ಪಥದಲ್ಲಿ ಸಾಗಿದ ಭೀಮ ಸಿದ್ಧಪುರುಷನಾದ. ಈಗ ಆತ ಡಾ.ಬಿ.ಆರ್ ಅಂಬೇಡ್ಕರ್, ಎಂ.ಎ., ಪಿ.ಎಚ್ ಡಿ (ಕೊಲಂಬಿಯಾ), ಎಂ.ಎಸ್.ಸಿ., ಡಿ.ಎಸ್ ಸಿ (ಲಂಡನ್), ಬಾರ್ – ಅಟ್ – ಲಾ.

ಬಾಬಾ ಸಾಹೇಬರು ರಚಿಸಿದ ಕೆಲವು ಪ್ರಮುಖ ಕೃತಿಗಳು:

1. ಪ್ರಾಚೀನ ಭಾರತದಲ್ಲಿ ವ್ಯಾಪಾರೋದ್ಯಮ.
2. ಭಾರತದಲ್ಲಿಯ ಜಾತಿಗಳು, ಅವುಗಳ ಉಗಮ ಮತ್ತು ವಿಕಾಸ.
3. ಭಾರತದಲ್ಲಿಯ ಚಿಕ್ಕ ಹಿಡುವಳಿಗಳ ಸಮಸ್ಯೆಗೆ ಪರಿಹಾರ.
4. ಬ್ರಿಟಿಷ್ ಇಂಡಿಯಾದಲ್ಲಿಯ ಹಣಕಾಸು ವ್ಯವಸ್ಥೆಯ ವಿಕಾಸ (ಪಿ.ಎಚ್‌ಡಿ. ಮಹಾಪ್ರಬಂಧ)
5. ಬ್ರಿಟಿಷ್ ಇಂಡಿಯಾದಲ್ಲಿಯ ಕೇಂದ್ರ ಹಣಕಾಸು ವ್ಯವಸ್ಥೆಯ ವಿಕೇಂದ್ರಿಕರಣ (ಎಂ.ಎಸ್ ಸಿ. ಪದವಿಯನ್ನು ಗಳಿಸಿಕೊಟ್ಟ ಮಹಾಪ್ರಬಂಧ)
6. ರೂಪಾಯಿ ಸಮಸ್ಯೆ (ಡಿ.ಎಸ್ ಸಿ ದೊರಕಿಸಿದ ಕೃತಿ)

ಅಂಬೇಡ್ಕರರ ಕೃತಿಗಳನ್ನು ಅವಲೋಕಿಸಿದರೆ, ತನ್ನ ರಾಷ್ಟ್ರದ ಪ್ರಮುಖವಾದ ಸಮಸ್ಯೆಗಳ ಬಗೆಗೆ ಅವರಿಗಿದ್ದ ಪ್ರಕಾಂಡವಾದ ತಿಳುವಳಿಕೆ ವ್ಯಕ್ತವಾಗುತ್ತದೆ. ದೇಶವನ್ನು ಕಾಡುತ್ತಿದ್ದ ಯಾವುದೇ ಪ್ರಮುಖ ಸಮಸ್ಯೆಗೆ ಕಾರಣ ಹಾಗೂ ಪರಿಹಾರವನ್ನು ಕಂಡುಕೊಳ್ಳುವ ಅಧಿಕಾರಯುತವಾದ ಅರ್ಹತೆ ಅವರಿಗಿತ್ತು.

ಜ್ಞಾನ ದಾಹಕ್ಕೆ ಕೊನೆಯೆಂಬುದಿಲ್ಲ. ದೇಶ ವಿದೇಶಗಳಲ್ಲಿ ಅಧ್ಯಯನ ಮಾಡಿ ಉನ್ನತೋನ್ನತ ಪದವಿಗಳನ್ನು ಪಡೆದರೂ ಬಾಬಾಸಾಹೇಬರ ಜ್ಞಾನದ ಹಂಬಲಕ್ಕೆ ಕೊನೆ ಬರಲಿಲ್ಲ. ಆಜೀವಪರ್ಯಂತವೂ ಇವರು ಪುಸ್ತಕ ಪ್ರೇಮಿಯಾಗಿ ಉಳಿದರು.

ಬಾಬಾಸಾಹೇಬರು ವಿದ್ಯಾಭ್ಯಾಸ ಮುಗಿಸಿದ ನಂತರದ ಜೀವನ ಒಂದು ಅವಿರತವಾದ ಹೋರಾಟದ ಬದುಕು. ಹೆಜ್ಜೆಹೆಜ್ಜೆಗೂ ಅಪಮಾನ ಪರಂಪರೆಗಳು, ದೌರ್ಜನ್ಯ–ಅನ್ಯಾಯಗಳು ಇವರನ್ನು ಕಾಡತೊಡಗಿದವು. ಇದು ತನ್ನೊಬ್ಬನ ಕತೆಯಲ್ಲ, ಲಕ್ಷೋಪಲಕ್ಷ ದೀನದಲಿತರ ದೈನಂದಿನ ದಾರುಣ ಕತೆಯಿದು. ಇಂಥ ಅಸಮತೆಯ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸಿಡಿದೇಳುವ, ದನಿಯಿರದವರ ದನಿಯಾಗುವ ಗುರುತರವಾದ ಹೊಣೆಗಾರಿಕೆಯನ್ನು ಬಾಬಾ ನಿರ್ವಹಿಸಬೇಕಾಯಿತು. 'ಚೌದಾರ್ ಕೆರೆ' ಗೆ ಐತಿಹಾಸಿಕವಾದ ಬೃಹತ್ ಜಾಥಾ ನಡೆಸಿ ದಲಿತರಿಗೆ ನಿಷಿದ್ಧವಾಗಿದ್ದ ಕೆರೆಯ ನೀರನ್ನು ಕುಡಿದ ಸಾಂಕೇತಿಕವಾದ ಈ ಘಟನೆ ಅಪಾರವಾದ ಸಾಮಾಜಿಕ ಪರಿಣಾಮವನ್ನು ಉಂಟುಮಾಡಿತು. 'ಮೂಕನಾಯಕ', 'ಬಹಿಷ್ಕೃತ ಭಾರತ' ದಂತಹ ಪತ್ರಿಕೆಗಳನ್ನು ಪ್ರಾರಂಭಿಸಿ ದಲಿತರ ಸಮಸ್ಯೆಗಳನ್ನು ಚರ್ಚಿಸಿದರು. ದಲಿತರ ಹಿತರಕ್ಷಣೆಗಾಗಿ ದುಡಿದರು. ಶಿಕ್ಷಣದ ಪ್ರಾಮುಖ್ಯವನ್ನರಿತಿದ್ದ ಇವರು ಮುಂಬಯಿಯಲ್ಲಿ ಒಂದು ಮಾದರಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸಿ ನೆಹರೂ, ಗಾಂಧಿಯವರಂತಹ ನಾಯಕರೊಡನೆ ವ್ಯವಹರಿಸುತ್ತಾ ತಮ್ಮ ನಿರ್ಭೀತ ವಿಚಾರಧಾರೆಯನ್ನು ಮಂಡಿಸುತ್ತಾ

9th_Kannada_Reader Term III.indd 141 29-01-2019 16:40:57

ದೇಶದ ಹಾಗೂ ಜನಸ್ತೋಮದ ಹಿತವನ್ನು ಕಾಯ್ದುಕೊಂಡುಬಂದ ಮುತ್ಸದ್ದಿ ಇವರು.

"ಭಾರತದ ಸಂವಿಧಾನ"ದ ರಚನೆಯು ಡಾ. ಅಂಬೇಡ್ಕರವರ ಪ್ರಮುಖ ಸಾಧನೆಗಳಲ್ಲಿ ಒಂದು. ಸಂವಿಧಾನ ರಚನೆಯಲ್ಲಿ ಇವರ ಪ್ರಕಾಂಡವಾದ ಮೇಧಾಶಕ್ತಿ, ವಿದ್ವತ್ತೆ, ದೂರದರ್ಶಿತ್ವಗಳು ಮೂಡಿಬಂದಿವೆ. ನವಸಮಾಜ ವ್ಯವಸ್ಥೆಯ ನಿರ್ಮಾಣಕ್ಕೆ ಅನುವಾಗುವ ರೀತಿನೀತಿಗಳನ್ನು ಸಂವಿಧಾನದಲ್ಲಿ ಅಳವಡಿಸಿದರು. ಲೋಕತಂತ್ರದಲ್ಲಿ ಉದ್ಭವಿಸಬಹುದಾದ ಬಿಕ್ಕಟ್ಟುಗಳು, ಇಂಥ ಸಂಕಷ್ಟಕರ ಪರಿಸ್ಥಿತಿಗಳಲ್ಲಿ ಅನುಸರಿಸಬೇಕಾದ ವಿಧಿ-ವಿಧಾನ ಹಾಗೂ ಮಾರ್ಗೋಪಾಯಗಳು ಇವನ್ನೆಲ್ಲಾ ಸಂವಿಧಾನ ರಚನೆಯ ಸಂದರ್ಭದಲ್ಲಿಯೇ ಸ್ಪಷ್ಟವಾಗಿ ಅಳವಡಿಸಿದರು. ಭವಿಷ್ಯತ್ತನ್ನು ಭೇದಿಸಿ ಕಾಲಗರ್ಭದಲ್ಲಿ ದೂರದೂರಕ್ಕೆ ದೃಷ್ಟಿಯನ್ನು ಹಾಯಿಸಬಲ್ಲ ಅಂಬೇಡ್ಕರರ ಅಪೂರ್ವವಾದ ವಿಚಾರ ಕ್ಷಮತೆಯನ್ನು "ಭಾರತದ ಸಂವಿಧಾನ"ದಲ್ಲಿ ಹಾಸುಹೊಕ್ಕಾಗಿ ಕಾಣಬಹುದು. ಈ ಶತಮಾನ ಕಂಡ ಅದ್ವಿತೀಯ 'ಸಂವಿಧಾನ ಶಿಲ್ಪಿ' ಇವರು.

ಅಂಬೇಡ್ಕರರು ದಲಿತ ವರ್ಗದ ನೇತಾರರು ಮಾತ್ರವಲ್ಲ, ವಿಶಾಲವಾದ ಜೀವನ ದೃಷ್ಟಿ – ಧೋರಣೆಗಳನ್ನು ಹೊಂದಿದ್ದ ಸಮಸ್ತ ಜನಸ್ತೋಮದ ಹಿತಚಿಂತಕರಿವರು.

ಶ್ರೇಷ್ಠ ಶಿಕ್ಷಣವೇತ್ತ, ಆದರ್ಶ ರಾಜಕಾರಣಿ, ಅದ್ವಿತೀಯ ಸಂವಿಧಾನಶಿಲ್ಪಿ, ಚಿಕಿತ್ಸಕ ದೃಷ್ಟಿಕೋನದ ಸಮಾಜಶಾಸ್ತ್ರಜ್ಞ, ಮೇಧಾವಿ ಅರ್ಥಶಾಸ್ತ್ರಜ್ಞ, ಹೀಗೆ ಹಲವು ವಿಶೇಷ ಗುಣಸಂಪತ್ತುಗಳ ಆಗರ ಡಾ.ಅಂಬೇಡ್ಕರರ ವ್ಯಕ್ತಿತ್ವ.

ತಮ್ಮ ಜನತೆಗೆ ಡಾ. ಅಂಬೇಡ್ಕರರ ಸಂದೇಶ ಇದು: "ಜೀವನೋದ್ದೇಶದ ಪಾವಿತ್ರ್ಯದ ಬಗೆಗೆ ನಿಮ್ಮಲ್ಲಿ ಅಚಲವಾದ ನಂಬಿಕೆಯಿರಲಿ. ಗುರಿ ಉದಾತ್ತವಾಗಿದ್ದಲ್ಲಿ ಜೀವನೋದ್ದೇಶವು ಮಹೋನ್ನತವೂ ಶೋಭಾಯಮಾನವೂ ಆಗುತ್ತದೆ. ಒಡನಾಡಿಗಳ ಬಗೆಗಿನ ತಮ್ಮ ಕರ್ತವ್ಯವೇನೆಂಬುದರ ಅರಿವಿರುವವರು ಪುಣ್ಯಶಾಲಿಗಳು."

ಕೃತಿ–ಕರ್ತೃ ಪರಿಚಯ:

ಡಿ.ಕೆ ಶ್ಯಾಮಸುಂದರ ರಾವ್ ಇವರು ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ದಾಸಲಕುಂಟೆಯವರು. ಶ್ರೀಯುತರು ಈಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ – ಕುಣಿಗಲ್ ತುಮಕೂರು ಜಿಲ್ಲೆ, ಇಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಒಳ್ಳೆಯ ಅನುವಾದಕರು ಹಾಗೂ ಲೇಖಕರು. ಇವರ ಅನುವಾದ ಕೃತಿಯಾದ 'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ' ಜನ ಮೆಚ್ಚುಗೆ ಪಡೆದಿದೆ.

ಪದಗಳ ಅರ್ಥ:

ಅರಿವು – ತಿಳಿವು; ಮಹತ್ತರ – ಶ್ರೇಷ್ಠ; ಯಥಾಶಕ್ತಿ – ಶಕ್ತ್ಯಾನುಸಾರ; ಪರಿಹಾರ – ನಿವಾರಣೆ; ಪ್ರಕಾಂಡ – ಉತ್ತಮ, ಶ್ರೇಷ್ಠವಾದ; ಅವಲೋಕನ – ಪರಿಶೀಲನ; ನಿಷಿದ್ಧ – ಬಹಿಷ್ಕರಿಸಿದ; ಸಾಂಕೇತಿಕ – ಸೂಚಿಸುವ; ಸಕ್ರಿಯ – ಕ್ರಿಯಾತ್ಮಕವಾದ; ಭೇದಿಸು – ಒಡೆ; ನೇತಾರ – ಮಾರ್ಗದರ್ಶಕ; ಅದ್ವಿತೀಯ – ಅಸಮಾನ; ಮುತ್ಸದ್ದಿ – ಚಾಣಾಕ್ಷ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಡಾ. ಅಂಬೇಡ್ಕರ್‌ರವರ ಪೂರ್ಣ ಹೆಸರೇನು?
2. ಡಾ. ಅಂಬೇಡ್ಕರ್ ಹುಟ್ಟಿದ್ದು ಯಾವಾಗ ಮತ್ತು ಯಾವ ಊರಿನಲ್ಲಿ?
3. ಡಾ. ಅಂಬೇಡ್ಕರ್‌ರವರ ತಂದೆ ತಾಯಿ ಯಾರು?
4. ಡಾ. ಅಂಬೇಡ್ಕರ್‌ರವರ ವಿದ್ಯಾರ್ಥಿ ದೆಸೆಯಲ್ಲಿ ಯಾವ ಯಾವ ಹಿರಿಯರ ನೆರವು ದೊರೆಯಿತು?
5. ಡಾ.ಅಂಬೇಡ್ಕರ್ ಪಿ.ಎಚ್ ಡಿ ಪಡೆದದ್ದು ಎಲ್ಲಿ?
6. ಡಾ. ಅಂಬೇಡ್ಕರ್ ಪ್ರಕಟಿಸಿದ ಪತ್ರಿಕೆಗಳಾವುವು?
7. 'ಚೌದಾರ್ ಕೆರೆ' ಯ ಪ್ರಕರಣದ ಉದ್ದೇಶವೇನು?
8. 'ಸಂವಿಧಾನ ಶಿಲ್ಪಿ' ಎಂದು ಯಾರನ್ನು ಕರೆಯುತ್ತಾರೆ?

9th_Kannada_Reader Term III.indd 142 29-01-2019 16:40:57

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಡಾ. ಅಂಬೇಡ್ಕರ್‌ರವರ ರಾಷ್ಟ್ರಪ್ರೇಮ ಎಂತಹದ್ದು?
2. ರಾಮ್ ಜಿ ಯವರು ಅಂಬೇಡ್ಕರ್‌ರವರ ಓದಿಗೆ ಹೇಗೆ ನೆರವಾದರು?
3. ಡಾ.ಅಂಬೇಡ್ಕರರ ಕೃತಿಗಳಾವುವು?
4. 'ಭಾರತದ ಸಂವಿಧಾನ'ದ ರಚನೆಯಲ್ಲಿ ಅಂಬೇಡ್ಕರರ ಪಾತ್ರವೇನು?
5. ಜನತೆಗೆ ಅಂಬೇಡ್ಕರರ ಸಂದೇಶವೇನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಡಾ. ಅಂಬೇಡ್ಕರವರ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ.
2. ಹಿಂದುಳಿದವರ ಏಳಿಗೆಗಾಗಿ ಅಂಬೇಡ್ಕರ್ ರವರು ಕೈಗೊಂಡ ಕಾರ್ಯಗಳಾವುವು? ವಿವರಿಸಿ.

ಭಾಷಾಭ್ಯಾಸ

1. ಈ ಪದಗಳ ವಿರುದ್ಧಾರ್ಥ ಪದಗಳನ್ನು ಬರೆಯಿರಿ.

ಸಂಸ್ಕೃತಿ, ಅಸಾಧಾರಣ, ಅನುಕೂಲ, ಸಾಧ್ಯ, ಅನುಭವ, ಪ್ರೀತಿ, ಅರ್ಹತೆ, ಅನ್ಯಾಯ, ನಂಬಿಕೆ, ಪುಣ್ಯ.

2. ಈ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

ಧರ್ಮ, ಮುಖ, ವರ್ಷ, ಭಕ್ತಿ, ಜ್ಞಾನ, ಪುಸ್ತಕ, ಸಂಸ್ಥೆ, ದೃಷ್ಟಿ.

3. ಈ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ.

ಆತ್ಮಾಭಿಮಾನ, ವಿದ್ಯಾಭ್ಯಾಸ, ವ್ಯಾಪಾರೋದ್ಯಮ, ಲಕ್ಷೋಪಲಕ್ಷ, ಅತ್ಯಗತ್ಯ, ಉನ್ನತೋನ್ನತ, ಮಾರ್ಗೋಪಾಯ, ಜೀವನೋದ್ದೇಶ, ಮಹೋನ್ನತ.

4. ಈ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ

ರಾಷ್ಟ್ರಪ್ರೇಮ, ಆತ್ಮವಿಶ್ವಾಸ, ಅವಲೋಕಿಸು, ಹೊಣೆಗಾರಿಕೆ, ಶೋಭಾಯಮಾನ.

5. ಈ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಡಾ. ಅಂಬೇಡ್ಕರರು ಸ್ವೀಕರಿಸಿದ ಧರ್ಮ_____
2. ಡಾ. ಅಂಬೇಡ್ಕರರು _____ಕೆರೆಗೆ ಐತಿಹಾಸಿಕ ಜಾಥಾ ನಡೆಸಿದರು.
3. _____ಎಂಬುದು ಅಂಬೇಡ್ಕರರ ಮೊದಲ ಹೆಸರು.
4. ಅಂಬೇಡ್ಕರರು ಡಿ.ಎಸ್ ಸಿ ಪದವಿಗಾಗಿ ಬರೆದ ಕೃತಿ_____

ಚಟುವಟಿಕೆ

1. ಈ ಪಾಠದಲ್ಲಿ ಬಂದಿರುವ ಜೋಡು ನುಡಿ ಹಾಗೂ ದ್ವಿರುಕ್ತಿಗಳನ್ನು ಪಟ್ಟಿಮಾಡಿ.
2. ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದ ರಾಷ್ಟ್ರಭಕ್ತರ ಜೀವನಚರಿತ್ರೆಗಳನ್ನು ಸಂಗ್ರಹಿಸಿ ಓದಿರಿ.

9th_Kannada_Reader Term III.indd 143 29-01-2019 16:40:57

ಕಾವ್ಯ ಕಣಜ

ಘಟಕ ಒಂಬತ್ತು

ಆನಂದಮಯ ಈ ಜಗಹೃದಯ

– ರಾಷ್ಟ್ರಕವಿ ಕುವೆಂಪು



ಈ ಜಗತ್ತು ಆನಂದಮಯವಾದುದು. ಸೂರ್ಯ ಚಂದ್ರರ ಉದಯ, ಪ್ರಕೃತಿಯಲ್ಲಿನ ರಮಣೀಯ, ರೌದ್ರ, ಸುಂದರ ಶಾಂತ ಸನ್ನಿವೇಶಗಳು ರೋಮಾಂಚನ ಅನುಭವವನ್ನು ಉಂಟು ಮಾಡುತ್ತದೆ. ನಿಸರ್ಗದ ಚೆಲುವೇ ಚೆಲುವು. ಈ ಪ್ರಕೃತಿಯು ಪರಮಾತ್ಮನ ಅನುಭೂತಿಯನ್ನು ಕೊಡುತ್ತದೆ. ಸತ್ಯಂ ಶಿವಂ ಸುಂದರಂ ಎಂಬ ಆಧ್ಯಾತ್ಮಿಕ ಚಿಂತನೆ ಈ ಕವನದ ಆಶಯವಾಗಿದೆ.



9th_Kannada_Reader Term III.indd 144 29-01-2019 16:40:58

ಆನಂದಮಯ ಈ ಜಗಹೃದಯ
ಏತಕೆ ಭಯ ? ಮಾಣೊ !
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ ‖

ಬಿಸಿಲಿದು ಬರಿ ಬಿಸಿಲಲ್ಲವೊ
ಸೂರ್ಯನ ಕೃಪೆ ಕಾಣೊ !
ಸೂರ್ಯನು ಬರಿ ರವಿಯಲ್ಲವೊ
ಆ ಭ್ರಾಂತಿಯ ಮಾಣೊ ‖

ರವಿ ವದನವೆ ಶಿವ ಸದನವೊ
ಬರಿದು ಕಣ್ಣದು ಮಣ್ಣೊ
ಶಿವನಿಲ್ಲದೆ ಸೌಂದರ್ಯವೆ ?
ಶವ ಮುಖದಾ ಕಣ್ಣೊ ‖

ಉದಯದೊಳೇನ್ ? ಹೃದಯವ ಕಾಣ್
ಅದೆ ಅಮೃತದ ಹಣ್ಣೊ !
ಶಿವ ಕಾಣದೆ ಕವಿ ಕುರುಡನೊ
ಶಿವ ಕಾವ್ಯದ ಕಣ್ಣೊ ‖

9th_Kannada_Reader Term III.indd 145 29-01-2019 16:40:58

ಕವಿ–ಕಾವ್ಯ ಪರಿಚಯ



ಈ ಕವನವನ್ನು ರಾಷ್ಟ್ರಕವಿ ಕುವೆಂಪುರವರು ರಚಿಸಿದ್ದಾರೆ. 'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ.ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಡಿಸೆಂಬರ್ 29, 1904ರಲ್ಲಿ ಜನಿಸಿದರು. ತಂದೆ ವೆಂಕಟಪ್ಪ ಗೌಡರು. ತಾಯಿ ಸೀತಮ್ಮನವರು. ಬಾಲ್ಯದಿಂದಲೂ ಪ್ರಕೃತಿಯ ಮಡಿಲಲ್ಲಿ ಬೆಳೆದ ಈ ಕವಿಗೆ ಪ್ರಕೃತಿಯೇ ಪರಮಾತ್ಮನ ದರ್ಶನವನ್ನು ನೀಡುತ್ತದೆ.

ಕನ್ನಡ ಸಾಹಿತ್ಯ ನವೋದಯದ ಶಿಖರ ಸಾಹಿತಿಗಳಲ್ಲಿ ಒಬ್ಬರಾದ ಕುವೆಂಪುರವರು ಕನ್ನಡ ಸಾಹಿತ್ಯದ ನವೋದಯದ ಎಲ್ಲ ಪ್ರಕಾರಗಳಲ್ಲಿಯೂ ಸಾಹಿತ್ಯ ಸೃಷ್ಟಿಸಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಕುವೆಂಪುರವರು ಪ್ರಾಧ್ಯಾಪಕ, ಪ್ರಾಂಶುಪಾಲರಾಗಿಯೂ ಕಾರ್ಯ ನಿರ್ವಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಕೊಳಲು, ನವಿಲು, ಪಾಂಚಜನ್ಯ, ಕಬ್ಬಿಗನ ಕೈಬುಟ್ಟಿ ಮುಂತಾದ ಕವನ ಸಂಕಲನಗಳನ್ನೂ; ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ ಎಂಬ ಎರಡು ಬೃಹತ್ ಕಾದಂಬರಿಗಳನ್ನೂ; ಜಲಗಾರ, ಮಹಾರಾತ್ರಿ, ಸ್ಮಶಾನ ಕುರುಕ್ಷೇತ್ರಂ, ಬೆರಳ್ಗೆಕೊರಳ್ ಮುಂತಾದ ನಾಟಕಗಳನ್ನೂ; ಶ್ರೀರಾಮಾಯಣ ದರ್ಶನಂ ಎನ್ನುವ ಮಹಾಛಂದಸ್ಸಿನ ಮೇರು ಕೃತಿಯೆನಿಸಿರುವ ಮಹಾಕಾವ್ಯವನ್ನೂ ರಚಿಸಿದ್ದಾರೆ. ಇದರೊಂದಿಗೆ ಬಿಡಿ ಕವನಗಳು, ವಿಮರ್ಶಾ ಕೃತಿಗಳು, ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. 'ನೆನಪಿನ ದೋಣಿಯಲ್ಲಿ' ಎಂಬುದು ಅವರ ಆತ್ಮ ಕಥನ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಹಲವು ಗೌರವ ಪುರಸ್ಕಾರಗಳು ಈ ಮಹಾಕವಿಗೆ ಸಂದಿದೆ. ಮುಖ್ಯವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ, ಭಾರತೀಯ ಜ್ಞಾನ ಪೀಠ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಮುಂತಾದವು. ನವೆಂಬರ್ 9, 1994ರಲ್ಲಿ ವಿಧಿ ವಶರಾದರು.

ಪದಗಳ ಅರ್ಥ

ಜಗ–ವಿಶ್ವ, ಲೋಕ; ಕೃಪೆ–ಅನುಗ್ರಹ; ಭ್ರಾಂತಿ–ಭ್ರಮೆ; ಮಾಣು–ಬಿಡು; ವದನ–ಮುಖ; ಸದನ–ಮನೆ; ಮಣ್ಣೋ–ವ್ಯರ್ಥ(ನಿಷ್ಪ್ರಯೋಜಕ); ಶವ–ಹೆಣ; ಉದಯ–ಬೆಳಿಗ್ಗೆ, ಆರಂಭ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಈ ಜಗತ್ತು ಹೇಗಿದೆ ?
2. ಯಾವುದು ದೇವರ ದಯೆಯೆಂದು ಕವಿ ತಿಳಿಸಿದ್ದಾರೆ ?
3. ನಾವು ಯಾವ ಭ್ರಾಂತಿಯನ್ನು ಬಿಡಬೇಕು ?
4. ಶಿವ ಸದನವು ಯಾವುದೆಂದು ಕವಿ ಬಣ್ಣಿಸಿದ್ದಾರೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1 ಈ ಜಗತ್ತು ಆನಂದಮಯವಾಗಿರಲು ಕಾರಣವೇನು?
2. ಸೂರ್ಯೋದಯ, ಚಂದ್ರೋದಯವನ್ನು ಕವಿ ಹೇಗೆ ಬಣ್ಣಿಸಿದ್ದಾರೆ ?
3. 'ಯಾವುದನ್ನು ಶವ ಮುಖದ ಕಣ್ಣು' ಎಂದು ಕವಿ ಕರೆದಿದ್ದಾರೆ ?
4. 'ಅಮೃತದ ಹಣ್ಣು' ಎಂಬುದು ಯಾವುದು ? ತಿಳಿಸಿ.

9th_Kannada_Reader Term III.indd 146 29-01-2019 16:40:59

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. 'ಆನಂದಮಯ ಈ ಜಗ ಹೃದಯ' ಕವನದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಸೂರ್ಯೋದಯ, ಚಂದ್ರೋದಯ, ರವಿಯಲ್ಲ,

2. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸಿ.

ಸೌಂದರ್ಯ, ಅಮೃತ, ಶಿವಸದನ, ಹೃದಯ.

3. ಕೆಳಗಿನ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಸೂರ್ಯ, ಚಂದ್ರ, ಸದನ, ಆನಂದ, ಜಗ.

4. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಭಯ, ದಯೆ, ಉದಯ, ಹಣ್ಣು, ಬಿಸಿಲು.

ಚಟುವಟಿಕೆ

1. ನವೋದಯ ಕವಿಗಳ ಪ್ರಕೃತಿ ಗೀತೆಗಳನ್ನು ಸಂಗ್ರಹಿಸಿ ಓದಿರಿ.
2. ಸೂರ್ಯೋದಯ, ಚಂದ್ರೋದಯಗಳನ್ನು ಕುರಿತಾದ ಸ್ವಂತ ಕವನಗಳನ್ನು ರಚಿಸಿರಿ.
3. ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ. ಅಲ್ಲಿನ ಸೂರ್ಯೋದಯ ಹಾಗೂ ಚಂದ್ರೋದಯಗಳ ಅನುಭವವನ್ನು ಕುರಿತು ಬರೆಯಿರಿ.



9th_Kannada_Reader Term III.indd 147 29-01-2019 16:41:00

ಪೂರಕ ಪದ್ಯ

ಘಟಕ ಒಂಬತ್ತು

ನೀತಿ

– ಕನಕದಾಸ

ಅಜ್ಞಾನಿಗಳ ಕೂಡ ಅಧಿಕ ಸ್ನೇಹಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು । ॥ಪ॥

ಉಂಬುಡುವುದಕ್ಕಿಲ್ಲದ ಅರಸನೋಲಗಕ್ಕಿಂತ
ತುಂಬಿದೂರೊಳಗೆ ತಿರಿದುಂಬುವುದೆ ಲೇಸು
ಹಂಬಲಿಸಿ ಹಾಳರಟೆ ಹೊಡೆಯುವುದಕ್ಕಿಂತ ಹರಿ
ಯೆಂಬ ದಾಸರ ಕೊಡೆ ಸಂಭಾಷಣೆಯೆ ಲೇಸು । ॥1॥

ಒಡನೆ ಹಂಗಿಸುವನೋಗರವನುಂಬುವುದಕಿಂತ
ಕುಡಿನೀರು ಕುಡಿದುಕೊಂಡಿರುವುದೇ ಲೇಸು
ಬಿಡದೆ ಬಾಂಧವರೊಡನೆ ಕಡಿದಾಡುವುದಕಿಂತ
ಅಡವಿಯೊಳಜ್ಞಾತವಾಸವೇ ಲೇಸು । ॥2॥

ಮಸೆಯಲಿಹ ಮತ್ಸರದ ನೆರೆಯೊಳಗಿರುವುದಕಿಂತ
ಹಸನಿಲ್ಲದ ಹಾಳುಗುಡಿಯೆ ಲೇಸು
ಬಿಸಜಾಕ್ಷ ಕಾಗಿನೆಲೆಯಾದಿ ಕೇಶವರಾಯ
ವಸುಮತಿಯೊಳು ನಿನ್ನ ದಾಸತ್ವವೇ ಲೇಸು । ॥3॥

9th_Kannada_Reader Term III.indd 148 29-01-2019 16:41:00



ಕವಿ – ಕೃತಿ ಪರಿಚಯ:

ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿದ್ದ ಬೀರಪ್ಪ ಮತ್ತು ಬಚ್ಚಮ್ಮ ಎಂಬ ದಂಪತಿಗಳ ಮಗನಾಗಿ ಹುಟ್ಟಿದ ಕನಕದಾಸರು ವ್ಯಾಸರಾಯರ ಶಿಷ್ಯರಲ್ಲಿ ಪ್ರಮುಖರಾದವರು. ಇವರು ಪುರಂದರದಾಸರ ಸಮಕಾಲೀನರು. ಇವರ ಆರಾಧ್ಯ ದೇವರು ಹಾವೇರಿ ಜಿಲ್ಲೆಯ ಕಾಗಿನೆಲೆಯ ಆದಿಕೇಶವ. ಕಾಲ ಸುಮಾರು 16ನೆಯ ಶತಮಾನ. ಕನಕದಾಸರು ಬಾಡ ಗ್ರಾಮದ ಸುತ್ತಲಿನ 28 ಗ್ರಾಮಗಳಿಗೆ ನಾಡಗೌಡ ಮತ್ತು ದಣ್ಣಾಯಕನಾಗಿದ್ದವರು. ಇವರು ಕೀರ್ತನೆಗಳನ್ನಲ್ಲದೆ ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯ ಚರಿತ್ರೆಗಳೆಂಬ ಷಟ್ಪದಿ ಕಾವ್ಯಗಳನ್ನೂ, ಮೋಹನತರಂಗಿಣಿ ಎಂಬ ಸಾಂಗತ್ಯ ಕೃತಿಯನ್ನು ರಚಿಸಿದ್ದಾರೆ. ಕನಕದಾಸರ ಪ್ರಸ್ತುತ ಕೀರ್ತನೆಯಲ್ಲಿ ಯಾವುದು ಲೇಸು ಯಾವುದು ಲೇಸಲ್ಲವೆಂಬುದನ್ನು ವಿವರಿಸಿದ್ದಾರೆ.

ಪದಗಳ ಅರ್ಥ

ಅಧಿಕ = ಹೆಚ್ಚು; ಉಂಬು=ಉಣ್ಣು; ಓಲಗ=ಸಭೆ; ತಿರಿದು = ಭಿಕ್ಷೆಬೇಡಿ; ಲೇಸು=ಒಳ್ಳೆಯದು; ಹಂಗಿಸು=ಅಪಮಾನಿಸು, ಅವಹೇಳನ ಮಾಡು, ನಿಂದಿಸು (ಮಾಡಿದ ಉಪಕಾರವನ್ನು ಆಡಿತೋರಿಸು); ಓಗರ=ಅನ್ನ; ಅಜ್ಞಾತ=ಕಾಣದಂತೆ (ರಹಸ್ಯ);ಬಿಸಜಾಕ್ಷ=ವಿಷ್ಣು (ಬಿಸಜ=ಕಮಲ, ಅಕ್ಷಿ=ಕಣ್ಣು, ಕಮಲದಂತೆ ಕಣ್ಣುಳ್ಳವನು); ವಸುಮತಿ=ಭೂಮಿ.

ಅಭ್ಯಾಸ

I. ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ:

1. ಯಾರೊಡನೆ ಸ್ನೇಹಕ್ಕಿಂತ ಯಾರೊಡನೆ ಜಗಳವೇ ಲೇಸು?
2. ಯಾವುದಕ್ಕಿಂತ ಊರೊಳಗೆ ಭಿಕ್ಷೆ ಬೇಡುವುದು ಲೇಸು?
3. ಹಾಳು ಹರಟೆಗಿಂತ ಯಾವುದು ಮೇಲು?
4. ಮತ್ಸರದ ನೆರೆಗಿಂತ ಯಾವುದು ಉತ್ತಮ?



9th_Kannada_Reader Term III.indd 149 29-01-2019 16:41:00

ಉಪಪಠ್ಯ

ಘಟಕ ಒಂಬತ್ತು

ಮಗಳಿಗೆ ಹುಟ್ಟಿದ ಹಬ್ಬದ ಪತ್ರ

– ಜವಾಹರಲಾಲ ನೆಹರು

ಅನುವಾದ:ಸಿದ್ಧವನಹಳ್ಳಿ ಕೃಷ್ಣಶರ್ಮ



ಇಂದಿರಾ ಪ್ರಿಯದರ್ಶಿನಿಗೆ ಅವಳು ಹುಟ್ಟಿದ ಹಬ್ಬದ ದಿನ

ಸೆಂಟ್ರಲ್ ಜೈಲ್, ನೈನಿ

26.10.1930

ನಿನ್ನ ಹುಟ್ಟಿದ ಹಬ್ಬದ ದಿನ ಆಶೀರ್ವಾದಗಳನ್ನು, ಉಡುಗೊರೆಗಳನ್ನು ಪಡೆಯುವುದು ನಿನ್ನ ಅಭ್ಯಾಸ. ಆಶೀರ್ವಾದಳಿಗೇನು ಕಡಿಮೆ; ಬೇಕಾದಷ್ಟನ್ನು ಕಳಿಸುತ್ತೇನೆ. ಆದರೆ ನೈನಿ ಸೆರೆಮನೆಯಿಂದ ನಾನು ನಿನಗೇನು ಬಹುಮಾನ ಕಳುಹಿಸಲಿ, ಹೇಳು? ನನ್ನ ಬಹುಮಾನಗಳು ನಿಸ್ಸಾರ, ನಿರ್ಧನ. ಯಕ್ಷಿಣಿಯೋ, ಕಿನ್ನರಿಯೋ ನೀಡುವ – ಕೋಟೆಯ ಗೋಡೆಗಳಂತಿರುವ ಸೆರೆಮನೆಯ ಗೋಡೆಗಳು ಸಹ ತಡೆಯಲಾರದ – ಗಾಳಿಯ, ಮನಸಿನ, ನಿರಾಕಾರದ ವಸ್ತುವದು.

ಪ್ರಿಯ! ನೀ ಚೆನ್ನಾಗಿ ಬಲ್ಲೆ; ಉಪದೇಶ ಮಾಡುವದೆನೆಗೆ ಇಷ್ಟವಿಲ್ಲ; ಬುದ್ಧಿವಾದ ಕೊಡುವುದೆಂದರೆ ನನಗೆ ಬೇಸರ. ಯಾವಾಗಲಾದರೂ ಹಾಗೆ ಮಾಡಬೇಕೆಂಬಾಸೆಯಾದಾಗಲೆಲ್ಲ ನಾನೆಂದೋ ಓದಿದ " ಬಹಳ ಬುದ್ಧಿವಂತ"ನ ಕತೆ ನೆನಪಿಗೆ ಬರುತ್ತದೆ. ಈ ಕತೆ ಇರುವ ಪುಸ್ತಕವನ್ನು ಒಂದು ದಿನ ನೀನೆ ಓದುವೆ. ಹದಿಮೂರು ನೂರು ವರ್ಷಗಳ ಹಿಂದೆ ಜ್ಞಾನಾರ್ಜನೆಗಾಗಿ, ವಿವೇಕಸಾಧನೆಗಾಗಿ ಚೀನಾದೇಶದಿಂದ ಪ್ರಯಾಣಿಕನೊಬ್ಬ ಬಂದ

9th_Kannada_Reader Term III.indd 150 29-01-2019 16:41:00

ಭರತಖಂಡಕ್ಕೆ. ಹ್ಯೂಯನ್ ತ್ಸಾಂಗ್ ಎಂಬುದವನ ಹೆಸರು. ಉತ್ತರದ ಮೇರುಗಿರಿಗಳೇನು, ಮರುಭೂಮಿಗಳೇನು; ಅವುಗಳನ್ನೆಲ್ಲ ದಾಟಿ ಬಂದ; ವಿಪತ್ತುಗಳನ್ನೆದುರಿಸಿ ಬಂದ; ಅಡ್ಡಿ ಆತಂಕಗಳನ್ನೆಲ್ಲ ನಿವಾರಿಸಿಕೊಂಡು ಬಂದ; ಅವನ ಜ್ಞಾನದಾಹವಂತಹುದು! ಭಾರತದಲ್ಲವನು ಬಹುಕಾಲವಿದ್ದ; ಇದ್ದಷ್ಟು ಕಾಲ ನಾಲಂದಾ ಎಂಬ ಮಹಾಘಟಿಕಾಸ್ಥಾನದಲ್ಲಿ ತಾನೂ ಕಲಿತ, ಪರರಿಗೂ ಕಲಿಸಿದ. ನಾಲಂದಾ ಆಗ ಪಾಟಲೀಪುತ್ರದ ಬಳಿ ಇತ್ತು. ಈಗ ಅದನ್ನು ಪಾಟ್ನಾ ಎಂದು ಕರೆಯುವರು. ಹ್ಯೂಯೆನ್ ತ್ಸಾಂಗನು ವಿದ್ಯಾಪಾರಂಗತನಾದ, ' ಧರ್ಮಜ್ಞ ಚಕ್ರೇಶ್ವರ' ನೆಂಬ ಬಿರುದನ್ನು ಪಡೆದ. ಬುದ್ಧ ಧರ್ಮವದು ಅವನು ಆಸೇತು ಹಿಮಾಚಲ ಪ್ರವಾಸ ಮಾಡಿದ; ದೇಶವನ್ನೆಲ್ಲ ನೋಡಿದ. ಪೂರ್ವಕಾಲದಲ್ಲಿ ದೇಶದಲ್ಲಿ ವಾಸವಾಗಿದ್ದ ಜನರ ಜೀವನವನ್ನೆಲ್ಲ ಗ್ರಹಿಸಿದ. ಆಮೇಲೆ ತನ್ನ ಪ್ರವಾಸ ಕುರಿತೊಂದು ಪುಸ್ತಕವನ್ನು ಬರೆದ. ನನ್ನ ಮನಸ್ಸಿಗೆ ಬಂದ ಕತೆ ಈ ಪುಸ್ತಕದಲ್ಲಿದೆ. ದಕ್ಷಿಣ ದೇಶದಿಂದ ಕರ್ಣಸುವರ್ಣವೆಂಬ ನಗರಕ್ಕೆ ಒಬ್ಬ ಬಂದನಂತೆ. ಬಿಹಾರದಲ್ಲಿ ಈಗ ಭಾಗಲ್ಪುರವೆಂಬ ಊರಿದೆಯಲ್ಲ ಅದರ ಬಳಿ ಇತ್ತಂತೆ ನಗರ. ಈ ಮನುಷ್ಯ ತನ್ನ ನಡುವಿಗೆ ತಾಮ್ರದ ಹಲಗೆಗಳನ್ನು ಬಿಗಿದಿದ್ದನಂತೆ. ತಲೆಯ ಮೇಲೊಂದು ಉರಿಯುವ ಪಂಜನ್ನುಹೊತ್ತಿದ್ದನಂತೆ. ಆ ಪುಸ್ತಕದಲ್ಲಿ ಹಾಗೆ ಬರೆದಿದೆ.

ಶೋಭಾಯಮಾನವಾದ ಮುಖಮುದ್ರೆ ಗಂಭೀರವಾದ ಗತಿ; ಕೈಲಿ ಕಟ್ಟಿಗೆ ಹಿಡಿದು, ಈ ವಿಚಿತ್ರ ವೇಷಧಾರಿ ಲೋಕಸಂಚಾರ ಮಾಡುತ್ತಿದ್ದಾನೆ. ' ಇದೇನು ವೇಷ' ವೆಂದು ಯಾರಾದರೂ ಕೇಳಿದರೆ "ನನ್ನ ಜ್ಞಾನವಷ್ಟಿದೆ. ಈ ತಾಮ್ರದ ರೇಕುಗಳನ್ನು ಬಿಗಿಸದೆ ಹೋದೆನಾದರೆ ನನ್ನ ಹೊಟ್ಟೆ ಬಿರಿದೀತು. ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡೆನಗೆ 'ಅನಿಷ್ಟ' ಅನಿಸುತ್ತದೆ. ಅವರೆಲ್ಲ ಕತ್ತಲೆಯಲ್ಲಿ ತಡವಿ ಆಡುತ್ತಿದ್ದಾರೆ. ಅವರಿಗಾಗಿ ನಾ ನನ್ನ ನೆತ್ತಿಯ ಮೇಲೆ ದೀಪ ಹೊತ್ತಿದ್ದೇನೆ" ಅನ್ನುವನು.

ಒಳ್ಳೆದು; ನನ್ನ ಹೊಟ್ಟೆ ಬಿರಿದೊಡೆಯುವುದೆಂಬ ಭಯ ನನಗಿಲ್ಲ. ಅಷ್ಟು ಜ್ಞಾನ ನನಗಿಲ್ಲ. ಆದಕಾರಣ ನಾನು ತಾಮ್ರದ ರೇಕು ಬಿಗಿಸಬೇಕಾಗಿಲ್ಲ; ರಣಕವಚವನ್ನು ತೊಡಬೇಕಾಗಿಲ್ಲ. ಏನೇ ಆಗಲಿ, ನನ್ನ ಜ್ಞಾನವಷ್ಟೇ ಇರಲಿ, ಅದು ನನ್ನ ಹೊಟ್ಟೆಯಲ್ಲಿ ಮಾತ್ರ ಇಲ್ಲ . ಅದೆಲ್ಲಾದರೂ ಇರಲಿ, ಮತ್ತಷ್ಟು ಜ್ಞಾನಕ್ಕೆ ಸ್ಥಳವಿದೆ. ಸ್ಥಳ ಸಾಲದೆಂಬ ಮಾತಿಗೆ ಅವಕಾಶವಿಲ್ಲ; ಬೇಕಾದಷ್ಟಿದೆ. ನನ್ನ ಜ್ಞಾನವಿಷ್ಟು ಅಲ್ಪವಾಗಿರಲು, ನಾನು ಸರ್ವಜ್ಞನೆಂದು ಹೇಳಿಕೊಂಡು ಹೇಗೆ ತಾನೆ ಜ್ಞಾನಭೋದೆ ಮಾಡಲಿ? ಸರಿ ಯಾವುದು, ತಪ್ಪು ಯಾವುದು, ಮಾಡಬಹುದಾದುದು ಯಾವುದು, ಮಾಡಬಾರದುದು ಯಾವುದೆಂಬುದನ್ನು ತಿಳಿಯಬೇಕಾದರೆ ಪರೋಪದೇಶ ಮಾಡುವುದರಿಂದ ಅದು ಲಭಿಸುವುದಿಲ್ಲ. ವಾದ, ಸಂಭಾಷಣೆ ಮಾಡುವುದರಿಂದ ಲಭಿಸುತ್ತದೆ. ವಾದ ಮಾಡುತ್ತಾ ಕೊಂಚ ಮಟ್ಟಿಗೆ ಧರ್ಮಬೋಧೆಯಾಗುತ್ತದೆ; ಕೊಂಚ ಕೊಂಚವಾಗಿ ಸತ್ಯ ಹೊರಬೀಳುತ್ತದೆ. ನಿನ್ನೊಡನೆ ನಾನೆಷ್ಟೋ ಮಾತಾನಾಡಿದ್ದೇನೆ; ಅದೆಲ್ಲ ನಿನಗೆ ಸವಿ. ನಾವಿಬ್ಬರು ಎಷ್ಟೋ ವಿಷಯಗಳನ್ನು ಕುರಿತು ಚರ್ಚೆ ಮಾಡಿದ್ದೇವೆ ಆದರೆ ಈ ಲೋಕ ವಿಸ್ತಾರ. ನಮ್ಮ ಈ ಲೋಕದಿಂದಾಚೆ ಅತ್ಯಾಶ್ಚರ್ಯಕರವಾದ, ದೃಗ್ಗೋಚರವಲ್ಲದ ಲೋಕಗಳೆಷ್ಟೋ ಇವೆ. ಆದಕಾರಣ ನನಗೆ ಬೇಸರ ಎಂದರೇನು? ಹ್ಯೂಯನ್ ತ್ಸಾಂಗನು ಹೇಳಿದ ಕಥೆಯಲ್ಲಿ ಬರುವ ಅವಿವೇಕಿ, ಅಹಂಕಾರಿಯಂತೆ ನಾವೆಲ್ಲ ಜ್ಞಾನಭಂಡಾರಗಳು, ನಾವು ತಿಳಿದುಕೊಳ್ಳಬೇಕಾದುದ್ದೇನು ಇಲ್ಲವೆಂಬ ಭಯದ ಕಲ್ಪನೆಗೆ ಕಾರಣವಿಲ್ಲ. ಅಂತಹವರು ಹೊಸ ವಿಷಯಗಳನ್ನು ತಿಳಿದುಕೊಳ್ಳುವುದರಿಂದಾಗುವ, ಶೋಧನೆಯಿಂದಾಗುವ ಆನಂದವೇನು ಬಲ್ಲರು.? ಆ ಮಹ ಸಾಹಸದ ಸುಖ ಅವರಿಗೇನು ಗೊತ್ತು?

ಆದ ಕಾರಣ ನಾನು ಉಪದೇಶ ಮಾಡಬಾರದು. ಆಗಾದರೆ ನಾನೇನು ಮಾಡಬೇಕು? ಒಂದು ಕಾಗದ ಬರೆದರೆ ಮಾತನಾಡಿದಂತಾಯಿತೇ? ಅಬ್ಬಬ್ಬಾ ಎಂದರೆ ಅದು ಏಕಮುಖದೊಂದು ವ್ಯಾಪಾರ. ನಾನೇನಾದರೂ ಹೇಳೋಣ ಅದೇನಾದರೂ ಉಪದೇಶದಂತೆ ಕಂಡುಬಂದರೆ ಅದೊಂದು ವಿಷಗುಳಿಗೆಯೆಂದೂ, ನುಂಗಬೇಕೆಂದೂ ಅಂದುಕೊಂಡು ನುಂಗಬೇಡ. ನೀನು ವಿಚಾರ ಮಾಡಬೇಕೆಂಬ ಉದ್ದೇಶದಿಂದ ನಾನು ಸೂಚನೆಮಾಡಿದ್ದೇನೆಂದು ಭಾವಿಸಿಕೋ. ನಾವಿಬ್ಬರೂ ಕಲಿತು ಮಾತನಾಡುತ್ತಿರುವ ಹಾಗೇಯೇ ಅಂದುಕೋ.

9th_Kannada_Reader Term III.indd 151 29-01-2019 16:41:00

ಚರಿತ್ರೆಗಳಲ್ಲಿ ಜನಾಂಗದ ಜೀವನದ ಮಹಾಘಟ್ಟಗಳನ್ನು ಕುರಿತು ಓದುತ್ತೇವೆ; ಮಹಾ ಮಹಾ ಸ್ತ್ರೀಪುರುಷರನ್ನು ಕುರಿತು ಅವರು ಮಾಡಿದ ಮಹಾತ್ಕಾರ್ಯಗಳನ್ನು ಕುರಿತು ಓದುತ್ತೇವೆ. ಒಮ್ಮೊಮ್ಮೆ ಕನಸುಕಾಣುತ್ತ, ಮೈಮರೆತು ನಾವು ಆ ಕಾಲದವರಾಗಿ, ಅಂದಿನ ವೀರರಂತೆ, ವೀರನಾರಿಯರಂತೆ ಮಹತ್ಕಾರ್ಯಗಳನ್ನು ಮಾಡುತ್ತೇವೆ. ಜೀನ್ ದಾರ್ಕ್ ಕಥೆಯನ್ನು ಮೊದಲು ನೀನು ಓದಿದಾಗ ಅದು ಹೇಗೆ ನಿನ್ನನ್ನು ಮುಗ್ಧಗೊಳಿಸಿತೋ, ಚಿತ್ತಾಕರ್ಷಣ ಮಾಡಿತೆಂಬುದು ನಿನಗೆ ನೆನಪಿದೆಯೆ? 'ನಾನು ಜೀನದಾರ್ಕಿನಂತಾಗಬೇಕು' ಎಂಬುದು ನಿನ್ನ ಆಶಯವಾಗಿರಲಿಲ್ಲವ? ಸಾಧಾರಣ ಪುರುಷರು, ಸಾಧಾರಣ ಸ್ತ್ರೀಯರು ವೀರರಲ್ಲ. ಅನ್ನ ಬಟ್ಟೆ, ಹೆಂಡತಿ ಮಕ್ಕಳು, ಉಪ್ಪು ಮೆಣಸಿನಕಾಯಿ – ಸದಾ ತಾಪತ್ರಯವೇ ಅವರಿಗೆ. ಮಹತ್ಕಾರ್ಯ ಸಾಧನೆಗಾಗಿ ಜನಾಂಗವೇ ಶ್ರದ್ಧೋತ್ಸಾಹದಿಂದ ಏಳುತ್ತದೆ. ಆಗ ಕೇವಲ ಸಾಮಾನ್ಯ ಗಂಡಸರೂ ಹೆಂಗಸರೂ ಸಹ ವೀರಪುರುಷರಾಗುತ್ತಾರೆ. ವೀರ ರಮಣಿಯರೆನಿಸುತ್ತಾರೆ; ಚರಿತ್ರೆಯು ಚೈತನ್ಯಭರಿತವಾಗುತ್ತದೆ. ಮಹಾಯುಗ ನಿರ್ಮಾಣವಾಗುತ್ತದೆ. ಮಹಾನಾಯಕರಲ್ಲಿ ಅದೇನೋ ಇದೆ. ಅವರು ಜನಪದಕ್ಕೆ ಸ್ಫೂರ್ತಿಕೊಡುವರು. ಅವರಿಂದ ಮಹತ್ಕಾರ್ಯಗಳನ್ನು ಮಾಡಿಸುವರು.

ನೀನು ಹುಟ್ಟಿದ್ದು 1917ನೇಯ ವರ್ಷ. ಇತಿಹಾಸದೊಳಗದು ಮಹಾವರ್ಷ. ಆ ವರ್ಷ ಮಹಾನಾಯಕನೊಬ್ಬ ಬಂದ. ಬಡವರೆಂದರೆ, ನೋವು ತಿನ್ನುವವರೆಂದರೆ ಆತನ ಹೃದಯ ಪೂರ್ಣಪ್ರೇಮಪಾತ್ರ. ಆತನ ಸಹಾನುಭೂತಿ ಅತ್ಯಪೂರ್ವ. ಆತ ಬಂದು ತನ್ನ ಜನರಿಗೆಲ್ಲ "ಇತಿಹಾಸದಲ್ಲಿ ಉತ್ಕೃಷ್ಟವೂ, ಆಚಂದ್ರಾರ್ಕಸ್ಥಾಯಿಯೂ ಆದ ಅಧ್ಯಾಯವನ್ನು ಬರೆಯಿರಿ". ಎಂದು ಹೇಳಿ ಅವರ ಕೈಯಿಂದ ಬರೆಯಿಸಿದ. ನೀನು ಹುಟ್ಟಿದ ತಿಂಗಳಲ್ಲೇ ಲೆನಿನ್ ಮಹಾವಿಪ್ಲವ ಕಾರ್ಯವನ್ನಾರಂಭಿಸಿದ್ದು; ಆರಂಭಿಸಿ ರಷ್ಯಾ ಸೈಬೀರಿಯಾ ದೇಶಗಳ ರೂಪರೇಖೆಗಳನ್ನೇ ಪರಿವರ್ತನಗೊಳಿಸಿಬಿಟ್ಟ. ಇಂದು ಭಾರತದಲ್ಲಿ ಮತ್ತೊಬ್ಬ ಮಹಾನಾಯಕ ಬಂದ; ಕಷ್ಟ ನಿಷ್ಠೂರಗಳಿಗೆ ಸಿಕ್ಕಿದವರೆಂದರೆ ಆತನ ಪ್ರೇಮ ಅಪಾರ; ಅವರಿಗೆ ಸಹಾಯಮಾಡಲು ಉಗ್ರ ಆವೇಶದ ಆತುರವಾತನಿಗೆ. ಆತ ನಮ್ಮ ಜನರಿಗೆಲ್ಲಾ ಮಹತ್ಕಾರ್ಯ ಸಾಧನೆ ಮಾಡಲು, ಗಂಭೀರ ಬಲಿದಾನ ಮಾಡಲು ಸ್ಫೂರ್ತಿ ಕೊಡುತ್ತಿದ್ದಾನೆ. ಬಲಿದಾನ ಮಾಡಿ ತಾವು ಸ್ವಾತಂತ್ರ್ಯ ಪಡೆಯಬೇಕು; ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ ದುಃಖದ ಭಾರವಿಳಿಸಬೇಕು; ಇದು ಆತನಾಶೆ. ಬಾಪೂಜಿ ಈಗ ಸೆರೆಮನೆಯಲ್ಲಿದ್ದಾರೆ. ಆದರೇನು? ಅವರ ಸಂದೇಶ ಯಕ್ಷಿಣಿಯು ಕೋಟ್ಯಾವಧಿ ಭಾರತೀಯರ ಹೃದಯಗಳನ್ನು ಸೂರೆಗೊಂಡಿದೆ. ಗಂಡಸರು, ಹೆಂಗಸರು, ಮಕ್ಕಳು ಸಹ ತಮ್ಮ ಮುರುಕು ಗುಡಿಸಲುಗಳಿಂದ ಹೊರಬಿದ್ದು ಸ್ವಾತಂತ್ರ್ಯ ಸೈನಿಕರಾಗಿದ್ದಾರೆ. ಭಾರತದಲ್ಲಿ ನಾವಿಂದು ಚರಿತ್ರೆಯನ್ನು ನಿರ್ಮಿಸುತ್ತಿದ್ದೇವೆ. ನೀನೂ ನಾನು ಎಂತಹ ಭಾಗ್ಯಶಾಲಿಗಳೋ, ನಡೆಯುತ್ತಿರುವುದನ್ನೆಲ್ಲ ನಮ್ಮ ಕಣ್ಣಾರೆ ನೋಡುತ್ತಿದ್ದೇವೆ. ಈ ಮಹಾನಾಟಕದಲ್ಲಿ ನಾವೂ ಸಹ ಕೊಂಚ ಪಾತ್ರ ವಹಿಸುತ್ತಿದ್ದೇವೆ.

ಈ ಮಹೋದ್ಯಮದಲ್ಲಿ ನಾವು ಹೇಗೆ ವರ್ತಿಸೋಣ? ಇದರಲ್ಲಿ ನಾವು ಯಾವ ಪಾತ್ರ ವಹಿಸೋಣ? ನಮ್ಮ ಪಾಲಿಗೆ ಯಾವ ಕೆಲಸ ಬರುವುದೋ ನಾ ಹೇಳಲಾರೆ. ಯಾವ ಕೆಲಸವೇ ಬೀಳಲಿ ನಾವಿದನ್ನು ಮಾತ್ರ ನೆನಪನಲ್ಲಿಡಬೇಕು. ನಮ್ಮ ಉದ್ಯಮಕ್ಕೆ ಅಪಕೀರ್ತಿ ಬರುವಂತಹ ಕಾರ್ಯವೊಂದನ್ನು ನಾವು ಮಾಡಲಾಗದು; ನಮ್ಮ ಜನರಿಗೆ ಅವಮಾನವಾಗುವಂತಹ ಕೆಲಸವೊಂದನ್ನು ನಾವು ಮಾಡಲಾಗದು. ನಾವು ಭಾರತದ ಯೋಧರೆನಿಸುವುದಾದರೆ ಭಾರತದ ಮಾನ ಮರ್ಯಾದೆ ನಮ್ಮ ಕೈಲಿದೆ. ಆ ಮಾನ ಮರ್ಯಾದೆ ಪವಿತ್ರವಾದ ಧರ್ಮಸ್ಥೆಯ. ಅನೇಕ ಸಾರಿ ಏನು ಮಾಡಬೇಕೆಂಬ ವಿಚಾರದಲ್ಲಿ ನಾವು ದಿಙ್ಮೂಢರಾಗಿರಬಹುದು. ಸರಿ ಯಾವುದು, ತಪ್ಪು ಯಾವುದೆಂದು ನಿರ್ಣಯ ಮಾಡುವುದು ಸುಲಭವಲ್ಲ. ನೀನು ಸಂದೇಹದಲ್ಲಿ ಬಿದ್ದಾಗ ಒಂದು ಸಣ್ಣ ಪರೀಕ್ಷೆ ನಡೆಸೆಂದು ಸೂಚನೆ ಮಾಡುತ್ತೇನೆ. ಆ ಪರೀಕ್ಷೆಯಿಂದ ನಿನಗೆ ಸಹಾಯವಾಗಬಹುದು. ರಹಸ್ಯದಲ್ಲಿ ಒಂದನ್ನೂ ಮಾಡಬೇಡ; ಮರೆ ಮಾಡಬೇಕೆಂದೆನಿಸುವ ಯಾವ ಕಾರ್ಯಕ್ಕೂ ಕೈ ಹಾಕಬೇಡ. ತೆರೆಯ ಮರೆಯಲ್ಲಿ ಕೆಲಸ ಮಾಡಬೇಕೆಂದು ಅನಿಸುವುದೆಂದರೇನರ್ಥ? ನಿನಗೆ ಭಯವೆಂದು ಅದಕ್ಕರ್ಥ. ಭಯವು ಒಳ್ಳೆಯದಲ್ಲ, ನಿನಗೆ ಯೋಗ್ಯವಾದುದಲ್ಲ. ನಿರ್ಭಯವಾಗಿರು. ಆಗಬೇಕಾದುದೆಲ್ಲ ಆಗುತ್ತದೆ; ನಡೆಯಬೇಕಾದುದೆಲ್ಲ ನಡೆಯುತ್ತದೆ; ನೀನು ಧೈರ್ಯಶಾಲಿಯಾದರೆ ನಿನಗೆ ಭಯವಾಗುವುದಿಲ್ಲ. ತಲೆ

9th_Kannada_Reader Term III.indd 152 29-01-2019 16:41:00

ತಗ್ಗಿಸುವಂತಹ ಕೆಲಸ ಮಾಡುವುದಿಲ್ಲ. ನಿನಗೆ ಗೊತ್ತಿಲ್ಲವೆ? ನಮ್ಮ ಸ್ವಾತಂತ್ರ್ಯದ ಸಂಗ್ರಾಮದಲ್ಲಿ, ಬಾಪೂಜಿಯ ನಾಯಕತ್ವದಲ್ಲಿ ರಹಸ್ಯಕ್ಕೆಡೆಯಿಲ್ಲ, ತೆರೆಮರೆಗವಕಾಶವಿಲ್ಲ. ಮುಚ್ಚುಮರೆ ಮಾಡಬೇಕಾದ್ದೇನಿದೆ ನಮಗೆ? ನಾವು ಮಾಡುತ್ತಿರುವುದಕ್ಕಾಗಿ ನಮಗೆ ಭಯವೆ? ನಾವು ಆಡುತ್ತಿರುವುದಕ್ಕಾಗಿ ನಮಗೆ ಭಯವೆ? ಜಗದ್ಸಾಕ್ಷಿ ಸೂರ್ಯನಿದಿರಿಗೆ, ಬೆಳಕಿನಲ್ಲಿ ಕೆಲಸ ಮಾಡುತ್ತೇವೆ. ನಮ್ಮ ಸ್ವಂತ ಜೀವನದಲ್ಲೂ ಸಹ ಸೂರ್ಯನ ಸ್ನೇಹವನ್ನೇ ಮಾಡೋಣ, ಬೆಳಕಿನಲ್ಲಿ ಕೆಲಸ ಮಾಡೋಣ, ರಹಸ್ಯದಲ್ಲಿ ಒಂದು ಕೆಲಸವೂ ಬೇಡ; ಕಣ್ಮರೆಯ ಕೆಲಸ ಬೇಡವೇ ಬೇಡ. ಏಕಾಂತವಿರಲಿ, ಇರಬೇಕು; ಏಕಾಂತಕ್ಕೂ ರಹಸ್ಯಕ್ಕೂ ವ್ಯತ್ಯಾಸವಿದೆ. ಪ್ರಿಯಾ! ನೀನು ಹಾಗೆ ಮಾಡಿದ್ದಾದರೆ ನೀನು ಜ್ಯೋತಿಯ ಮಗುವೆನಿಸುವೆ. ಏನೇ ಬಂದೊದಗಲಿ ನಿರ್ಭಯಳೆನಿಸುವೆ. ನಿರ್ಮಲೆಯೆನಿಸುವೆ, ನಿಶ್ಚಲಳೆನೆಸುವೆ.

ನಾನು ಬಹು ದೀರ್ಘವಾದ ಪತ್ರ ಬರೆದಿದ್ದೇನೆ. ಆದರೂ ನಾನು ಹೇಳಬೇಕಾದ್ದೆಷ್ಟೋ ಇದೆ. ಒಂದು ಪತ್ರದಲ್ಲಿ ಎಷ್ಟು ಹಿಡಿಸೀತು? ನಮ್ಮ ನಾಡಿನಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಮಹಾ ಸಂಗ್ರಾಮವನ್ನು ಕಣ್ಣಾರೆ ನೋಡುತ್ತಿರುವ ನೀನೇ ಭಾಗ್ಯಶಾಲಿಯೆಂದು ನಾನು ಹೇಳಿದೆನಲ್ಲವೆ? ಇನ್ನೊಂದಂಶದಲ್ಲೂ ನೀನು ಭಾಗ್ಯಶಾಲಿ; ಮಹಾ ವೀರಮಾತೆ ನಿನ್ನ ಮಾತೆ; ಮಹಾದ್ಭುತ ಸ್ತ್ರೀ ನಿನ್ನ ತಾಯಿ. ನಿನಗೊಂದು ಸಂದೇಹವಾಯಿತು, ನೀನೊಂದು ಕಷ್ಟಕ್ಕೆ ಸಿಕ್ಕಿದೆ, ಆಕೆಗಿಂತ ಉತ್ತಮ ಗೆಳತಿಯುಂಟೆ ?

ಮಗೂ, ಇಂದಿಗಿಷ್ಟು ಸಾಕು. ನೀನು ದೊಡ್ಡವಳಾಗಿ ವೀರರಮಣಿಯೆನಿಸು; ಭಾರತಮಾತೆಯ ಸೇವೆ ಸಲ್ಲಿಸು. ಪೂರ್ಣ ವಾತ್ಸಲ್ಯದಿಂದ ಹರಸುವೆನು.

ಕೃತಿ– ಕರ್ತೃ ಪರಿಚಯ:

ಶ್ರೀ ಕೃಷ್ಣಶರ್ಮರು ಚಿತ್ರದುರ್ಗ ಜಿಲ್ಲೆಯ ಸಿದ್ಧವನಹಳ್ಳಿಯವರು. ಕನ್ನಡದ ಪ್ರಸಿದ್ಧ ಲೇಖಕರಲ್ಲಿ ಇವರು ಒಬ್ಬರು. ಗಾಂಧಿ ಸಾಹಿತ್ಯವನ್ನು ವಿಶಿಷ್ಟ ರೀತಿಯಲ್ಲಿ ಕನ್ನಡಕ್ಕೆ ಕೊಟ್ಟವರು. ವ್ಯಕ್ತಿ–ಚಿತ್ರ ನಿರೂಪಣೆಯಲ್ಲಿ ಶ್ರೀಯುತರದು ಸಿದ್ಧಹಸ್ತ. 'ಮಾತಿನ ಮಂಟಪ', 'ವರ್ಧಾಯಾತ್ರೆ' 'ದೀಪಮಾಲೆ', 'ಪರ್ಣಕುಟಿ' 'ಕನ್ನಡದ ಕಿಡಿಗಳು', 'ನಿರ್ಭಾಗ್ಯ ಬೋರೇಗೌಡ', ಮುಂತಾದವು ಇವರ ಶ್ರೇಷ್ಠ ಕೃತಿಗಳು. ಶ್ರೀಯುತರು ಕನ್ನಡ – ಇಂಗ್ಲೀಷ್ ಭಾಷೆಗಳಲ್ಲಿ ಪರಿಣಿತರು. ಪ್ರಸ್ತುತ ಪಾಠವನ್ನು ಶ್ರೀಯುತರು ಅನುವಾದಿಸಿದ ಪಂಡಿತ ಜವಾಹರಲಾಲನೆಹರು ಅವರ ಪ್ರಸಿದ್ಧ ಗ್ರಂಥ 'ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ' ಯ ಅನುವಾದಗ್ರಂಥ 'ಜಗತ್ ಕಥಾವಲ್ಲರಿ'ಯಿಂದ ಆಯ್ದುಕೊಳ್ಳಲಾಗಿದೆ. ಜಗತ್ಕಥಾವಲ್ಲರಿ ಪತ್ರಗಳ ಸಂಕಲನ. ಭಾರತದ ಸ್ವಾಂತಂತ್ರ್ಯ ಸಂಗ್ರಾಮದಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ಶಿಕ್ಷೆಯಾಗಿತ್ತು. ಆಗ ಬಿಡುವಿನ ದಿನಗಳಲ್ಲಿ ಬೇರೆ – ಬೇರೆ ಸೆರೆಮನೆಗಳಲ್ಲಿ, ಬೇರೆ – ಬೇರೆ ಕಾಲದಲ್ಲಿ (1930 ಅಕ್ಟೋಬರ್ ನಿಂದ 1933 ಆಗಸ್ಟರ ರವರೆಗೆ, ಮೂರು ವರ್ಷಗಳಲ್ಲಿ) ಪತ್ರರೂಪದಲ್ಲಿ ಬರೆದ



ಪುಸ್ತಕ ಇದು. ಪಂಡಿತ ಜವಾಹರಲಾಲ ನೆಹರು ಅವರು ತಮ್ಮ ಮಗಳಿಗೆ ಜಗತ್ತಿನ ಇತಿಹಾಸವನ್ನೇ ಪತ್ರಗಳ ಮೂಲಕ ಪರಿಚಯಿಸಿದ್ದಾರೆ. ಐತಿಹಾಸಿಕ, ಸಾಹಿತ್ಯಕ, ಹಾಗೂ ಕಲಾತ್ಮಕ ದೃಷ್ಟಿಯಿಂದ ಈ ಪತ್ರಗಳ ತೀರಾ ಮಹತ್ವದ್ದಾಗಿವೆ. ಆತ್ಮೀಯ ಭಾವದ ಬರಹ ಈ ಪತ್ರಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಅಂಥ ಪತ್ರಗಳಲ್ಲಿ ಒಂದನ್ನು ಇಲ್ಲಿ ಕೊಡಲಾಗಿದೆ.

9th_Kannada_Reader Term III.indd 153 29-01-2019 16:41:01

ಪದಗಳ ಅರ್ಥ:

ಉಡುಗೊರೆ – ಕಾಣಿಕೆ; ನಿಸ್ಸಾರ – ಸಾರವಿಲ್ಲದ; ನಿರ್ಘನ – ಭಾರವಿಲ್ಲದ; ಯಕ್ಷಿಣಿ – ಇಂದ್ರಜಾಲವಿದ್ಯೆ; ಕಿನ್ನರಿ – ಕಿನ್ನರಸ್ತ್ರೀ; ಘಟಿಕಾಸ್ಥಾನ – ಮಹಾವಿದ್ಯಾಲಯ; ಸರ್ವಜ್ಞ – ಎಲ್ಲವನ್ನು ತಿಳಿದವನು; ದೃಗ್ಗೋಚರ – ಕಣ್ಣಿಗೆ ಕಾಣುವ; ಉತ್ಕೃಷ್ಟ – ಶ್ರೇಷ್ಠ; ಆಚಂದ್ರಾರ್ಕ – ಚಂದ್ರ ಸೂರ್ಯರಿರುವವರೆಗೆ, ದೀರ್ಘಕಾಲ; ಮಹಾವಿಪ್ಲವ – ಮಹಾಕ್ರಾಂತಿ; ಯೋಧ – ವೀರ; ಜಗತ್ಸಾಕ್ಷಿ – ಲೋಕಕ್ಕೆ ಸಾಕ್ಷಿಯಾದ; ನಿಶ್ಚಲ – ಸ್ಥಿರವಾದ; ನಿರ್ಭಯ – ಭಯವಿಲ್ಲದ; ವಾತ್ಸಲ್ಯ – ಪ್ರೀತಿ; ನಿರಾಕಾರ – ಆಕಾರವಿಲ್ಲದ; ರೇಕು – ಲೋಹದ ತಗಡು; ದಿಙ್ಮೂಢ – ಕಂಗೆಟ್ಟವನು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಗಳ ಹುಟ್ಟಿದ ಹಬ್ಬದಂದು ನೆಹರು ಕಳುಹಿಸಿದ ಉಡುಗೊರೆ ಯಾವುದು?
2. ನೆಹರುರವರು ತಾವು ಎಂದೋ ಓದಿದ ಯಾವ ಕತೆ ನೆನಪಿಗೆ ಬರುತ್ತದೆ?
3. ಹ್ಯೂಯೆನ್ ತ್ಸಾಂಗನಿಗೆ ಇದ್ದ ಬಿರುದು ಯಾವುದು?
4. ಹ್ಯೂಯನ್ ತ್ಸಾಂಗನು ಯಾವ ದೇಶದಿಂದ ಬಂದವನು?
5. ಸಾಮಾನ್ಯ ಗಂಡಸರೂ, ಹೆಂಗಸರೂ ಸಹ ಯಾವಾಗ ವೀರರಾಗುತ್ತಾರೆ?
6. ಇಂದಿರಾ ಪ್ರಿಯದರ್ಶಿನಿಯವರು ಹುಟ್ಟಿದ ವರ್ಷ ಯಾವುದು?
7. ಯಾರ ಸಂದೇಶವು ಕೋಟ್ಯಾವಧಿ ಭಾರತೀಯರ ಹೃದಯಗಳನ್ನು ಸೂರೆಗೊಂಡಿತು?
8. ಸಂದೇಹ ಬಂದಾಗ ಏನು ಮಾಡಬೇಕೆಂದು ನೆಹರುರವರು ಮಗಳಿಗೆ ಸೂಚಿಸಿದರು?
9. ಯಾವ ಕಾರ್ಯವನ್ನು ನಾವು ಮಾಡಲಾಗದು ಎಂದು ನೆಹರು ತಿಳಿಸುತ್ತಾರೆ?
10. ಕಷ್ಟಕ್ಕೆ ಸಿಕ್ಕಾಗ 'ಉತ್ತಮ ಗೆಳತಿ' ಯಾರಾಗುತ್ತಾರೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ಸೆರೆಮನೆಯ ಗೋಡೆಗಳೂ ಸಹ ತಡೆಯಲಾರದ ಉಡುಗೊರೆ ಯಾವುದು?
2. ಹ್ಯೂಯೆನ್ ತ್ಸಾಂಗನ ಜ್ಞಾನಾರ್ಜನೆಯ ಪರಿ ಎಂತಹದು?
3. ನನ್ನ ನೆತ್ತಿಯ ಮೇಲೆ ದೀಪ ಹೊತ್ತಿದ್ದೇನೆಂದು ಯಾರು ಹೇಳುತ್ತಾರೆ? ಏಕೆ?
4. ಪರೋಪದೇಶದಿಂದ ಯಾವುದು ಲಭಿಸುವುದಿಲ್ಲ? ಏಕೆ?
5. ಚರಿತ್ರೆಯು ಚೈತನ್ಯ ಭರಿತವಾಗುವುದು ಯಾವಾಗ?
6. ಮಹಾನಾಯಕ ಲೆನಿನ್ನರ ಬಗ್ಗೆ ನೆಹರುರವರ ಅಭಿಪ್ರಾಯವೇನು?
7. ನೆಹರು ಅವರು ನಾವು ಭಾಗ್ಯಶಾಲಿಗಳೆಂದು ಮಗಳಿಗೆ ಹೇಳಲು ಕಾರಣವೇನು?
8. ಕಣ್ಮರೆಯ ಕೆಲಸ ಬೇಡವೇ ಬೇಡವೆಂದು ನೆಹರು ಅವರ ಮಗಳಿಗೆ ಹೇಳಿದ್ದು ಏಕೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹ್ಯೂಯನ್ ತ್ಸಾಂಗನ ಸಾಧನೆಯನ್ನು ವಿವರಿಸಿ.
2. ಮಹಾಯುಗದ ನಿರ್ಮಾಣ ಯಾವಾಗ ಆಗುತ್ತದೆ? ವಿವರಿಸಿ
3. ಮಹಾನಾಯಕರಾದ ಗಾಂಧೀಜಿಯವರ ಕಾರ್ಯಸಾಧನೆಯನ್ನು ತಿಳಿಸಿರಿ.

ಚಟುವಟಿಕೆ

1. ವಿವಿಧ ರೀತಿಯ ಪತ್ರಗಳನ್ನು ಬರೆಯುವ ವಿಧಾನಗಳನ್ನು ತಿಳಿಯಿರಿ.

9th_Kannada_Reader Term III.indd 154 29-01-2019 16:41:01

ವ್ಯಾಕರಣ

ಘಟಕ ಒಂಬತ್ತು

ಛಂದಸ್ಸು

ನೀವು ಓದುತ್ತಿರುವ ಪಠ್ಯಪುಸ್ತಕಗಳಲ್ಲಿ ಹಲವು ಬಗೆಯ, ಹಲವು ಸಾಲುಗಳನ್ನು ಒಳಗೊಂಡ ಪದ್ಯಗಳನ್ನು ಕಂಡಿರುತ್ತೀರಿ. ಇವುಗಳನ್ನು ರಚಿಸಿರುವ ಕವಿಗಳು ಕೆಲವು ನಿಯಮಗಳನ್ನು ಅನುಸರಿಸುತ್ತಾರೆ. ಅವರು ಯಾವ ಬಗೆಯ ನಿಯಮಗಳನ್ನು ಅನುಸರಿಸಿ ಪದ್ಯಗಳನ್ನು ರಚಿಸಿರುತ್ತಾರೆ ಎಂಬುದನ್ನು ಅರಿಯಲು ಕುತೂಹಲದಿಂದಿರುವಿರಿ. ಕವಿಗಳು ಯಾವ ನಿಯಮದಲ್ಲಿ ಪದ್ಯಗಳನ್ನು ರಚಿಸಿರುವರೋ ಆ ಕ್ರಮಗಳನ್ನು ತಿಳಿಸುವ ಶಾಸ್ತ್ರವೇ ಛಂದಶಾಸ್ತ್ರ.

ಪದ್ಯಗಳು ಪಾದ ಅಥವಾ ಸಾಲುಗಳಿಂದಲೂ, ಆ ಸಾಲುಗಳು ಗಣ, ಪ್ರಾಸ, ಯತಿ ಮುಂತಾದ ನಿಯಮಗಳಿಂದಲೂ ಕೂಡಿರುತ್ತವೆ.

ಎರಡು ಸಾಲುಗಳಿಂದ ಕೂಡಿದ್ದರೆ – ದ್ವಿಪದಿ
ಮೂರು ಸಾಲುಗಳಿಂದ ಕೂಡಿದ್ದರೆ – ತ್ರಿಪದಿ
ನಾಲ್ಕು ಸಾಲುಗಳಿಂದ ಕೂಡಿದ್ದರೆ – ಚೌಪದಿ, ಕಂದ, ವೃತ್ತ, ಸಾಂಗತ್ಯ.

ಪದ್ಯಗಳು ಸಾಮಾನ್ಯವಾಗಿ ಕೆಲವು ಚಿಕ್ಕವು, ಇನ್ನು ಕೆಲವು ಉದ್ದನೆಯ ಸಾಲುಗಳಿಂದ ಕೂಡಿರುತ್ತವೆ. ಕೆಲವು ವಿಧ ವಿಧ ನಿಯಮಗಳಿಂದ ಕೂಡಿರುತ್ತವೆ. ಇವುಗಳೆಲ್ಲವುಗಳ ಕಿರು ಪರಿಚಯವನ್ನು ತಿಳಿಯೋಣ.

ಪ್ರಾಸ

ಪ್ರಾಸವಿಲ್ಲದ ಪದವ ಏಸು ಹಾಡಿದರೇನು? ಎಂದು ಸರ್ವಜ್ಞ ಕವಿಯು ಪದ್ಯ ರಚನೆಯಲ್ಲಿನ ಪ್ರಾಸದ ಪ್ರಾಮುಖ್ಯತೆಯನ್ನು ತಿಳಿಸಿದ್ದಾನೆ. ಪದ್ಯದ ಪ್ರತಿಯೊಂದು ಸಾಲಿನ ಒಂದನೆಯ ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿಯ ವ್ಯಂಜನ ಬಂದರೆ ಅದಕ್ಕೆ ಆದಿಪ್ರಾಸವೆಂದೂ, ಪದ್ಯದ ಪ್ರತಿ ಸಾಲಿನ ಕೊನೆಯಲ್ಲಿ ಒಂದೇ ರೀತಿಯ ಅಕ್ಷರಗಳು ಬಂದರೆ ಅಂತ್ಯ ಪ್ರಾಸವೆಂದೂ ಕರೆಯುತ್ತಾರೆ.

ಗಣ

ಗಣ ಎಂದರೆ ಗುಂಪು ಅಥವಾ ಸಮೂಹ ಎಂದು ಅರ್ಥ. ಛಂದಶಾಸ್ತ್ರದಲ್ಲಿ ಪದ್ಯದ ಪಾದಗಳಲ್ಲಿರುವ ಅಕ್ಷರಗಳ/ಮಾತ್ರೆಗಳ/ಅಂಶಗಳ ಗುಂಪಿಗೆ ಗಣ ಎಂದು ಕರೆಯುತ್ತಾರೆ.

ಅಕ್ಷರ ಗಣ

ಮೂರು ಮೂರು ಅಕ್ಷರಗಳಿಗೆ ಒಂದೊಂದು ಗಣವಾಗಿ ವಿಂಗಡಿಸಿದರೆ ಅವುಗಳನ್ನು ಅಕ್ಷರ ಗಣವೆನ್ನುವರು.

ಮಾತ್ರಾ ಗಣ

ಮೂರು, ನಾಲ್ಕು ಅಥವಾ ಐದರಂತೆ ನಿರ್ದಿಷ್ಟ ಮಾತ್ರೆಗಳನ್ನಾಗಿ ವಿಂಗಡಿಸಿದರೆ ಅವುಗಳನ್ನು ಮಾತ್ರಾಗಣವೆನ್ನುವರು.

ಅಂಶ ಗಣ

ಅಂಶಗಳ ಪರಿಮಾಣಗಳನ್ನನುಸರಿಸಿ ಅಂಶಗಳ ಸಂಖ್ಯೆಯನ್ನು ಆಧರಿಸಿ ಗಣಗಳನ್ನಾಗಿ ವಿಂಗಡಿಸಿದರೆ ಅವುಗಳನ್ನು ಅಂಶಗಣವೆನ್ನುವರು.

9th_Kannada_Reader Term III.indd 155 29-01-2019 16:41:01

ಮಾತ್ರಾಗಣಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನು ತಿಳಿದುಕೊಳ್ಳೋಣ. ಮಾತ್ರೆ ಎಂದರೆ ಅಳತೆ ಮಾಡು ಎಂದು ಛಂದಶಾಸ್ತ್ರದ ಅರ್ಥ. ಕನ್ನಡ ಅಕ್ಷರಗಳು ಉಚ್ಚಾರಣೆಗೆ ತೆಗೆದುಕೊಳ್ಳುವ ಕಾಲವನ್ನು ಗಮನದಲ್ಲಿಟ್ಟುಕೊಂಡು ಮಾತ್ರೆಯ ಲೆಕ್ಕ ಮಾಡಲಾಗುತ್ತದೆ. ಮಾತ್ರೆಯಲ್ಲಿ ಮೂರು ವಿಧಗಳಿವೆ. ಅವುಗಳು, ಲಘು, ಗುರು ಹಾಗೂ ಪ್ಲುತ.

ಲಘು

ಒಂದು ಹ್ರಸ್ವಸ್ವರ ಅಥವಾ ಹ್ರಸ್ವ ಸ್ವರ ಸಹಿತವಾದ ಒಂದು ವ್ಯಂಜನವನ್ನು ಉಚ್ಚರಿಸಲು ತೆಗೆದುಕೊಳ್ಳುವ ಕುಲವನ್ನು ಒಂದು ಮಾತ್ರೆ ಎಂದೂ, ಅದನ್ನು 'ಲಘು' ಎಂದೂ ಕರೆಯುತ್ತಾರೆ.

ಉದಾಹರಣೆ :

ಅ, ಇ, ಉ, ಎ, ಒ

ಕ, ಗಿ, ಚು, ಡೆ, ಪೊ

ಈ ಅಕ್ಷರಗಳ ಮೇಲೆ 'ᴗ' ಈ ಚಿಹ್ನೆಯನ್ನು ಹಾಕಿ ಲಘುಗಳನ್ನು ಗುರುತಿಸುತ್ತಾರೆ.

ಉದಾ: ᴗᴗᴗ ᴗᴗᴗᴗ
ಜನನಿ, ಪವನಜ

ಗುರು

ದೀರ್ಘ ಸ್ವರಗಳು ಮತ್ತು ದೀರ್ಘ ಸ್ವರ ಸಹಿತವಾದ ವ್ಯಂಜನಗಳು, ಅನುಸ್ವಾರ, ವಿಸರ್ಗಗಳಿಂದ ಕೂಡಿದ ಅಕ್ಷರಗಳು, ಒತ್ತಕ್ಷರದ ಹಿಂದಿನ ಅಕ್ಷರಗಳು, ಸ್ವರ ರಹಿತ ವ್ಯಂಜನದ ಹಿಂದಿನ ಅಕ್ಷರಗಳು, ಷಟ್ಪದಿಯಲ್ಲಿ ಬರುವ ಮೂರನೆಯ ಹಾಗೂ ಆರನೆಯ ಸಾಲುಗಳ ಕೊನೆಯ ಲಘು ಅಕ್ಷರಗಳು, ಗುರು ಅಕ್ಷರಗಳಾಗುತ್ತವೆ. ಈ ಅಕ್ಷರಗಳ ಮೇಲೆ '–' ಈ ಚಿಹ್ನೆಯನ್ನು ಹಾಕಿ ಗುರುವನ್ನು ಗುರುತಿಸುತ್ತಾರೆ.

ಗುರು ಅಕ್ಷರಗಳು :

1. ದೀರ್ಘ ಸ್ವರ ಮತ್ತು ದೀರ್ಘ ಸ್ವರ ಸಹಿತವಾದ ವ್ಯಂಜನಗಳು
   ಉದಾಹರಣೆ : ಆ, ಈ, ಊ, ಏ, ಐ
   ಕಾ, ಕೀ, ಕೂ, ಕೇ, ಕೈ ಇತ್ಯಾದಿ ದೀರ್ಘ ಸ್ವರಾನ್ವಿತವಾದ ಗುಣಿತಾಕ್ಷರಗಳು.
2. ಅನುಸ್ವಾರ, ವಿಸರ್ಗಗಳಿಂದ ಕೂಡಿದ ಅಕ್ಷರಗಳು
   ಉದಾಹರಣೆ : ತಂದೆ, ಅಂದ, ದುಃಖ, ಅಂತಃಪುರ.
3. ಒತ್ತಕ್ಷರದ ಹಿಂದಿನ ಅಕ್ಷರಗಳು
   – ᴗ –ᴗᴗ – ᴗ – ᴗᴗ
   ಉದಾಹರಣೆ : ಅಮ್ಮ, ಕನ್ನಡ, ಪದ್ಯ, ಷಟ್ಪದಿ.
4. ಸ್ವರ ರಹಿತ ವ್ಯಂಜನದ ಹಿಂದಿನ ಅಕ್ಷರಗಳು
   ಉದಾಹರಣೆ : ಮೇಣ್, ಪೆಣ್, ಕಾಣ್, ಪಾಲ್ ಇತ್ಯಾದಿ.
5. ಷಟ್ಪದಿಯಲ್ಲಿ ಬರುವ ಮೂರನೆಯ, ಆರನೆಯ ಸಾಲುಗಳ ಕೊನೆಯ ಲಘು ಅಕ್ಷರಗಳು ಗುರು ಅಕ್ಷರಗಳಾಗುವುವು.
   ಉದಾಹರಣೆ : ಕರುಣಾಳು ರಾಘವನಲ್ಲಿ ತಪ್ಪಿಲ್ಲ – ಪದ್ಯಕ್ಕೆ ಗುರು ಲಘು ಹಾಕಿ ತಿಳಿಯಿರಿ.

ಪ್ಲುತ

'ಗುರು' ಸಂಜ್ಞೆಯಿಂದ ಕೂಡಿದ ದೀರ್ಘಾಕ್ಷರಗಳನ್ನು ಎಳೆದು ಉಚ್ಚರಿಸಿದರೆ ಅವುಗಳಿಗೆ ಮೂರು ಮಾತ್ರೆಗಳ ಅಥವಾ ಅದಕ್ಕಿಂತ ಹೆಚ್ಚಿನ ಕಾಲಾವಧಿ ಬೇಕು. ಇದನ್ನು ಪ್ಲುತ ಎಂದು ಕರೆಯುವರು. ಇದನ್ನು 'ऽ' ಚಿಹ್ನೆಯಿಂದ ಗುರುತಿಸುವರು. ಇದನ್ನೂ ಕೂಡ ಗುರು ಎಂದೇ ಪರಿಗಣಿಸಲಾಗುವುದು. ಎರಡು ಅಥವಾ ಅದಕ್ಕಿಂತ ಹೆಚ್ಚು ಕಾಲಾವಕಾಶ ತೆಗೆದುಕೊಂಡರೂ ಅದನ್ನು ಒಂದು ದೀರ್ಘವೆಂದೇ/ಗುರುವೆಂದೇ ಪರಿಗಣಿಸಲಾಗುವುದು.

9th_Kannada_Reader Term III.indd 156 29-01-2019 16:41:01

ಪ್ರಸ್ತಾರ

ಪದ್ಯದ ಸಾಲುಗಳಲ್ಲಿರುವ ವರ್ಣ/ಅಕ್ಷರಗಳಿಗೆ ಗುರು–ಲಘುಗಳನ್ನು ನಿಯಮಾನುಸಾರವಾಗಿ ಗುರುತಿಸುವುದಕ್ಕೆ ಪ್ರಸ್ತಾರ ಹಾಕುವುದು ಎನ್ನುವರು.

ಷಟ್ಪದಿ

ಇಲ್ಲಿ ಮಾತ್ರಾ ಗಣಕ್ಕೆ ಸಂಬಂಧಿಸಿದ ಛಂದೋಪ್ರಕಾರದಲ್ಲಿ ಪ್ರಸಿದ್ಧವಾಗಿರುವ ಷಟ್ಪದಿಯನ್ನು ಕುರಿತು ತಿಳಿದುಕೊಳ್ಳೋಣ. ಷಟ್ಪದಿ ಎಂದರೆ ಆರು ಸಾಲು ಎಂದು ಅರ್ಥ. ಆರು ಸಾಲಿನ ಷಟ್ಪದಿ ಛಂದೋ ಪ್ರಕಾರಗಳನ್ನು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ಹಾಗೂ ವಾರ್ಧಕ ಎಂದು ಆರು ವಿಭಾಗಗಳನ್ನಾಗಿ ಗುರುತಿಸುವರು. ಈ ಆರು ಬಗೆಗಳಲ್ಲಿ ಭಾಮಿನಿ ಹಾಗೂ ವಾರ್ಧಕ ಷಟ್ಪದಿಗಳಲ್ಲಿಯೇ ಹೆಚ್ಚಾಗಿ ಕನ್ನಡದ ಕವಿಗಳು ಕಾವ್ಯ ರಚಿಸಿರುತ್ತಾರೆ. ಕನ್ನಡದ ಮೇರು ಕವಿಗಳೆನಿಸಿರುವ ಕುಮಾರವ್ಯಾಸ, ರಾಘವಾಂಕ, ಲಕ್ಷ್ಮೀಶ, ಚಾಮರಸ ಮೊದಲಾದವರು ಷಟ್ಪದಿಯಲ್ಲಿಯೇ ಕಾವ್ಯ ರಚಿಸಿರುವರು .

ಭಾಮಿನಿ ಷಟ್ಪದಿ

1, 2, 4, 5ನೆಯ ಪಾದಗಳು ಸಮಾನವಾಗಿದ್ದು ಮೂರರ ಅನಂತರ ನಾಲ್ಕು ಮಾತ್ರೆಯ ಗಣ ನಿಯಮಿತವಾಗಿ ಬಂದು, ಒಟ್ಟು ನಾಲ್ಕು ಗಣಗಳು ಅಂದರೆ, 14 ಮಾತ್ರೆಗಳು ಪ್ರತಿ ಸಾಲಿನಲ್ಲೂ ಬರುತ್ತವೆ. 3,6ನೆಯ ಸಾಲುಗಳು ಒಂದಕ್ಕೊಂದು ಸಮಾನವಾಗಿದ್ದು, ಮೂರರ ಅನಂತರ ನಾಲ್ಕು ಮಾತ್ರೆಯ ಗಣಗಳೂ ಮತ್ತು ಮೇಲೊಂದು ಗುರುವೂ ಬಂದು ಒಟ್ಟು 23 ಮಾತ್ರೆಗಳು ಪ್ರತಿ ಸಾಲಿನಲ್ಲಿರುತ್ತವೆ. ಇಲ್ಲಿ ∪ – ∪
ಈ ಬಗೆಯ ಮಧ್ಯೆ ಗುರುವುಳ್ಳ ಗಣವು ಎಲ್ಲಿಯೂ ಬರಕೂಡದು.

ಉದಾಹರಣೆ :

– ∪ ∪ ∪∪∪ – ∪ ∪ ∪ ∪∪
ಕಾರಮುಗಿಲಿನ ಗರ್ಜನೆಯ ಕಿವಿ

– ∪ – ∪ ∪ – ∪ – ∪∪
ಯಾರೆಕೇಳುವ ಸೋಗೆಯಂತಿರೆ

– ∪ ∪ ∪∪∪ – ∪ ∪ ∪ – ∪ ∪ ∪ ∪∪ – –
ಹಾರಯಿಸುತಲಿ ಯಲ್ಲಮನ ಮದ್ದಳೆಯ ದನಿಗೇಳ್ದು

(ಹೀಗೆಯೇ ಮುಂದಿನ ಮೂರು ಸಾಲುಗಳಿರುತ್ತವೆ)

ವಾರ್ಧಕ ಷಟ್ಪದಿ

1, 2, 4, 5ನೆಯ ಪಾದಗಳು ಸಮಾನವಾಗಿದ್ದು 5 ಮಾತ್ರೆಯ ನಾಲ್ಕು ಗಣಗಳು ಅಂದರೆ 20 ಮಾತ್ರೆಗಳು ಪ್ರತಿ ಸಾಲಿನಲ್ಲೂ ಬರುತ್ತವೆ. 3, 6ನೇ ಸಾಲುಗಳು ಒಂದಕ್ಕೊಂದು ಸಮಾನವಾಗಿದ್ದು 5 ಮಾತ್ರೆಯ 6 ಗಣಗಳು ಹಾಗೂ ಮೇಲೊಂದು ಗುರುವೂ ಬಂದು ಒಟ್ಟು 32 ಮಾತ್ರೆಗಳು ಪ್ರತಿ ಸಾಲಿನಲ್ಲೂ ಬರುತ್ತವೆ.

ಉದಾಹರಣೆ :

∪∪∪ ∪∪ – ∪ – ∪ ∪ – ∪ – – ∪
ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ

∪ ∪ – ∪ – – ∪ – – ∪ – ∪ ∪ ∪
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ

∪ ∪ – ∪ ∪ ∪ – ∪ ∪ ∪ – ∪ – ∪ – – ∪ – – ∪ – –
ದೊಡಲಂಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲರಲ್ವೇಡ ನೀನು

(ಹೀಗೆಯೇ ಮುಂದಿನ ಮೂರು ಸಾಲುಗಳಿರುತ್ತವೆ)

9th_Kannada_Reader Term III.indd 157 29-01-2019 16:41:01

ಘಟಕ
ಹತ್ತು

ಮಾನವೀಯತೆ–ವ್ಯಕ್ತಿತ್ವ



9th_Kannada_Reader Term III.indd 158 29-01-2019 16:41:03

ಘಟಕ ಹತ್ತು

ನಿನ್ನಲ್ಲೂ ಅದ್ಭುತ ಶಕ್ತಿಯಿದೆ

–ಎ.ಆರ್. ಕೃಷ್ಣಶಾಸ್ತ್ರಿ



ಕೆಲವರಲ್ಲಿ ವಿಶಿಷ್ಟ ಶಕ್ತಿ ಇರುತ್ತದೆ. ಆ ಶಕ್ತಿಯ ಪ್ರದರ್ಶನ ಆಗುವುದು ಇತರರು ಅವರನ್ನು ಹುರಿದುಂಬಿಸಿದಾಗ. ಇತರರ ಪ್ರೇರಕ ಮಾತುಗಳು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ ಹಾಗೂ ಎಂತಹ ಕಠಿಣ ಕೆಲಸವನ್ನಾದರೂ ಮಾಡಲು ಮನಸ್ಸು ಉತ್ಸುಕವಾಗುತ್ತದೆ. ನೀವು ಕ್ರೀಡೆಗಳಲ್ಲಿ ಕ್ರೀಡಾಪಟುಗಳನ್ನು ಹುರಿದುಂಬಿಸುವ ಪರಿಯನ್ನು ನೋಡಿರಬಹುದು. ಇಂತಹ ಹಲವು ಪ್ರಸಂಗಗಳು ಪುರಾಣ, ಇತಿಹಾಸಗಳಲ್ಲೂ ಕಾಣಸಿಗುತ್ತವೆ. ನೀವು ರಾಮಾಯಣದ ಕಥೆಯನ್ನು ಕೇಳಿದ್ದೀರಿ. ರಾವಣ ಸೀತೆಯನ್ನು ಕದ್ದು ಲಂಕೆಯಲ್ಲಿ ಬಂಧಿಸಿರುತ್ತಾನೆ. ಆಗ ರಾಮ ಲಕ್ಷ್ಮಣರು ವಾನರ ಸೇನೆಯೊಂದಿಗೆ ಸಮುದ್ರದ ಬಳಿ ಬರುತ್ತಾರೆ. ಆದರೆ ಸಮುದ್ರವನ್ನು, ದಾಟಿ ಲಂಕೆಯನ್ನು, ತಲುಪುವುದು ಹೇಗೆ? ಎಂದು ಚಿಂತಿತರಾಗುತ್ತಾರೆ. ಆಗ ಹನುಮ ಸಮುದ್ರವನ್ನು ಜಿಗಿದು ಲಂಕೆಯನ್ನು ತಲುಪುತ್ತಾನೆ. ಹನುಮಂತನ ಈ ಸಾಹಸಕ್ಕೆ ಪ್ರೇರಣೆ ದೊರೆತದ್ದು ಹೇಗೆ? ಇಲ್ಲಿರುವ ಕಥೆಯನ್ನು ಓದಿ...









ಕಣ್ಣು ನಿಲುಕುವವರೆಗೂ ಎಲ್ಲೆಡೆ ನೀರು. ನೀಲ ಸಾಗರ. ಆಕಾಶವೂ ನೀಲಿ, ಸಮುದ್ರವೂ ನೀಲಿ. ಬೆಳ್ಳಂಬೆಳದಿಂಗಳು ಸಹ ನೀಲಿಯಂತೆ ಭಾಸವಾಗುತ್ತಿತ್ತು. ಅದರ ಮಧ್ಯೆ ಪುಟಿದೇಳುವ ಆನೆಯಾಕಾರದ ಅಲೆಗಳು ದಂಡೆಗೆ ಅಪ್ಪಳಿಸುತ್ತಿವೆ. ಅಬ್ಬಾ! ಏನಿದರ ರುದ್ರ ನರ್ತನ! ಏನಿದರ ಭಯಂಕರ ಧ್ವನಿ! ಭೀತಿ ಹುಟ್ಟಿಸುತ್ತಿತ್ತು.

ಕಪಿವೀರರು ಲಂಕೆಗೆ ಹಾರಿ ಸೀತಾಮಾತೆಯನ್ನು ಕಾಣಬೇಕೆಂಬ ಉತ್ಸಾಹದಿಂದ ಬಂದಿದ್ದರು. ಆದರೆ ಭಯಾನಕ ಕಡಲನ್ನು ಕಂಡರು. ಈ ಸಮುದ್ರ ಈಜಲು ಸಾಧ್ಯವಿಲ್ಲ, ಹಾರಲು ಸಾಧ್ಯವಿಲ್ಲ. ಅವರಿಗೆ ದಿಕ್ಕು ತೋಚದಾಯಿತು. ಮುಂದಿನ ದಾರಿ ಯೋಚಿಸುತ್ತಾ ವಿಶ್ರಮಿಸಿದರು. ಬೆಳಕು ಹರಿಯಿತು.

9th_Kannada_Reader Term III.indd 159 29-01-2019 16:41:03

ಅರುಣೋದಯ. ಕಪಿಗಳೆಲ್ಲ ದಿನಚರಿ ಮುಗಿಸಿ ಫಲಾಹಾರ ಮಾಡಿದವು. ಮತ್ತೆ ಸಮುದ್ರದ ಬಳಿಗೆ ಬಂದವು. ಜಾಂಬವಂತನು, ಆಹಾ! ಕಡಲು ಶಾಂತವಾಗಿದೆ. ಆದರೆ ಲಂಕೆಯೇ ಕಾಣದು. ದಕ್ಷಿಣ ದಿಕ್ಕಿಗೆ ಲಂಕೆ ಇದೆ ಎಂಬ ಕಲ್ಪನೆ ಬಿಟ್ಟರೆ ಬೇರೇನೂ ತಿಳಿಯದು. ಹೇಗೆ ಹೋಗುವುದು? ಎಂದು ಯೋಚಿಸಹತ್ತಿದ ಹನುಮ ಸಾಗರವನ್ನು ದಿಟ್ಟಿಸಿ ನೋಡಿದ. ನಿರಾಸೆ ಕವಿಯಿತು. ಅಲ್ಲಿಂದ ಮುಂದೆ ನಡೆದು ಒಂದು ಕೋಡುಗಲ್ಲನ್ನು ಏರಿ ಚಿಂತಿತನಾದನು.

ಇತ್ತ ಕಪಿಗಳು ಸೇರಿದವು. ಸಮುದ್ರವನ್ನು ಜಿಗಿಯಲು ತಮಗಿರುವ ಶಕ್ತಿ–ಸಾಮರ್ಥ್ಯವನ್ನು ಹೇಳತೊಡಗಿದವು. ನಾನು ಹತ್ತು ಯೋಜನ ಜಿಗಿಯಬಲ್ಲೆನೆಂದು ಮರಿಕಪಿಯೊಂದು ಹೇಳಿದರೆ, ಇನ್ನೊಂದು ಕಪಿ ಮೂವತ್ತು ಯೋಜನ ಹಾರಬಲ್ಲೆ ಎಂದಿತು. ಮಗದೊಂದು ನಲವತ್ತು ಯೋಜನ ಎಂದಿತ್ತು. ಅಂಗದ ಹಾಗೂ ಜಾಂಬವರಿಗೆ ಕಪಿಗಳ ಮಾತುಗಳು ಕೇಳಿ ಹೆಮ್ಮೆಯೆನಿಸಿತು. ಆ ಕಠಿಣ ಪ್ರಸಂಗದಲ್ಲಿಯೂ ಅವರಾಡುವ ಮಾತುಗಳು ಆಶಾದಾಯಕವಾಗಿದ್ದವು. ಆದರೆ ಲಂಕೆಗೆ ಹೋಗಲು ಈ ಸಾಮರ್ಥ್ಯ ಸಾಲದು ಎಂಬ ಅರಿವು ಅವರಿಗಿತ್ತು.

ಅವರೆಲ್ಲರೂ ಸೇರಿ ಹನುಮನ ಹತ್ತಿರ ಬಂದರು. "ಹನುಮ, ಸಮುದ್ರ ಜಿಗಿಯುವ ಬದಲು ಇಲ್ಲಿ ಏಕೆ ಸುಮ್ಮನೆ ಕುಳಿತಿರುವೆ" ಎಂದಾಗ ಹನುಮನು "ಜಾಂಬವಂತರೆ ನಾನೊಂದು ಕಪಿ, ಚಿಕ್ಕವನು, ಟೊಂಗೆಯಿಂದ ಟೊಂಗೆಗೆ ಹಾರಬಲ್ಲೆ, ಮರದಿಂದ ಮರಕ್ಕೆ ಜಿಗಿಯಬಹುದು. ಆದರೆ ಮಹಾಸಾಗರವನ್ನು ನಾನು ಹೇಗೆ ಹಾರಬಲ್ಲೆ, ಗೇಲಿ ಮಾಡದಿರಿ" ಎಂದನು.

"ಹನುಮ, ನೀನು ಚಿಕ್ಕವನಾದರೂ ನೀನೊಬ್ಬ ಕಪಿರಾಜನ ಮಗ. ನಿನ್ನಪ್ಪ ಬಹಳ ಶೂರ" ಎಂದ ಅಂಗದ.

"ಅಪ್ಪ ರಾಜನಾದ ಮಾತ್ರಕ್ಕೆ ಮಗನಿಗೆ ಆ ಶಕ್ತಿ ಇರಲು ಸಾಧ್ಯವೇ? ನನ್ನ ಶಕ್ತಿಯನ್ನು ನಾನು ಬಲ್ಲೆ. ಅಂದರೆ, ನಾನೊಂದು ಕೋತಿ, ಹಲವು ಸ್ನೇಹಿತರೊಡನೆ ಸೇರಿ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಜಿಗಿದಿರಬಹುದು. ಮರವನ್ನು ಏರಿ ಕೊಂಬೆಯ ತುದಿಯಲ್ಲಿಯ ಹಣ್ಣನ್ನು ತಿಂದಿರಬಹುದು. ಹಲವರನ್ನು ಬಾಲ ಬೀಸಿ ಹೊಡೆದಿರಬಹುದು. ಕೆಲವರನ್ನು ಕಂಡು ಅಣಕಿಸಿ ದಕ್ಕಿಸಿಕೊಂಡಿರಬಹುದು. ಇಷ್ಟು ಮಾತ್ರಕ್ಕೆ ನಾನು ಶಕ್ತಿವಂತನೆಂದು ಭಾವಿಸುವುದು ಸರಿಯಲ್ಲ."

"ಹನುಮ, ನಿನ್ನ ಶಕ್ತಿ ಸಾಮರ್ಥ್ಯ ನಿನಗಿಂತ ನಾವು ಚೆನ್ನಾಗಿ ಬಲ್ಲೆವು. ನೀನು ಮಗುವಾಗಿದ್ದಾಗ ಅರುಣನನ್ನು ಕೆಂಪು ಹಣ್ಣೆಂದು ಭಾವಿಸಿದೆ. ಅದನ್ನು ತಿನ್ನಲು ಆಕಾಶಕ್ಕೆ ಜಿಗಿದೆ. ಸೂರ್ಯನ ನೆತ್ತಿಗೆ ಹಾರಿದ್ದೆ. ನಿನಗೆ ಬಹಳ ಶಕ್ತಿಯಿದೆ. ನೀನು ಮನಸ್ಸು ಮಾಡಿದರೆ ಸಪ್ತ ಸಾಗರವನ್ನು ಈಜಬಲ್ಲೆ. ಹಿಮಾಲಯವನ್ನೆತ್ತಿ ಕುಕ್ಕಬಲ್ಲೆ. ಪಾತಾಳವನ್ನು ಕಲಕಬಲ್ಲೆ. ನಿನಗೆ ಈ ಚಿಕ್ಕ ಸಮುದ್ರ ಸಮಸ್ಯೆಯಾಗದು."

"ಹಿರಿಯರಾದ ಜಾಂಬವರೇ! ನಾನು ಮಗುವಾಗಿದ್ದಾಗ ಅರುಣನನ್ನು ಕೆಂಪು ಹಣ್ಣೆಂದು ಬಗೆದು ಆಕಾಶಕ್ಕೆ ಹಾರಿದ್ದು ನಿಜ! ಆದರೆ ಸಾಧಿಸಿದ್ದೇನು? ಇಂದ್ರನಿಂದ ಹೊಡೆತ ತಿಂದು ಭೂಮಿಗೆ ಬೀಳಲಿಲ್ಲವೆ? ಇಂದು ಎಲ್ಲಿದೆ ನನಗೆ ಅಂದಿನ ಶಕ್ತಿ? ಸುಮ್ಮನೆ ಹೊಗಳಬೇಡಿ. ನನ್ನಿಂದ ಸಮುದ್ರ ಉಲ್ಲಂಘಿಸುವುದು ಆಗದು. ನಾನೊಬ್ಬ ಸಾಮಾನ್ಯ."

"ಆಂಜನೇಯ, ನಿನ್ನ ಶಕ್ತಿ ನಿನಗೆ ತಿಳಿಯದು. ಸೂರ್ಯದೇವನಿಂದ ಶಸ್ತ್ರವಿದ್ಯೆ ಕಲಿತೆ. ಗುರು ದಕ್ಷಿಣೆಯಲ್ಲಿ ಅವನ ಮಗ ಸುಗ್ರೀವನ ಪ್ರಾಣ ರಕ್ಷಣೆ ಮಾಡಿದೆ. ಋಷ್ಯಮೂಕ ಪರ್ವತದಲ್ಲಿ ಶ್ರೀರಾಮನನ್ನು ಸಂಧಿಸಿ ಮೈತ್ರಿ ಸ್ಥಾಪಿಸಿದೆ. ಶ್ರೀರಾಮನ ಆಶೀರ್ವಾದ ನಿನಗಿದೆ."

"ವರ್ಣನೆ ಸಾಕು ಮಾಡಿ ಅಂಗದರೆ. ಆಶೀರ್ವಾದ ಮಾತ್ರಕ್ಕೆ ಎಲ್ಲ ಸಾಧನೆ ಸಾಧ್ಯವಿಲ್ಲ. ನೀವೇಕೆ ಪ್ರಯತ್ನಿಸಬಾರದು? ತಮಗೂ ದೇವರ ಆಶೀರ್ವಾದವಿದೆ."

"ಸತ್ಯ. ಖಂಡಿತ ನಮಗೆಲ್ಲ ದೇವರ ಆಶೀರ್ವಾದವಿದೆ. ಆದರೆ ಆ ಕೆಲಸಕ್ಕೆ ಬೇಕಾದ ದೈಹಿಕ ಶಕ್ತಿ ಇಲ್ಲ. ಅದಕ್ಕಿಂತ ಹೆಚ್ಚಾಗಿ ಮಾನಸಿಕ ಸಾಮರ್ಥ್ಯ ಬೇಕು. ಅದಿಲ್ಲ ನಮ್ಮಲ್ಲಿ."

9th_Kannada_Reader Term III.indd 160 29-01-2019 16:41:03

"ಮಾನಸಿಕ ಸಾಮರ್ಥ್ಯ ಏನು ಹಾಗೆಂದರೆ?" ಹನುಮ ಕೇಳಿದ.

"ಹುಟ್ಟಿನಿಂದ ಎಲ್ಲರಿಗೂ ಮಾನಸಿಕ ಸಾಮರ್ಥ್ಯವಿರುತ್ತದೆ. ಅದನ್ನು ಕೆಲವರು ಬೆಳೆಸಿಕೊಳ್ಳುತ್ತಾರೆ, ದುಡಿಸಿಕೊಳ್ಳುತ್ತಾರೆ. ಹೊಸಹೊಸ ಪ್ರಯೋಗಗಳಿಗೆ ಒಡ್ಡಿಕೊಂಡು ಗಟ್ಟಿಗೊಳಿಸಿಕೊಳ್ಳುತ್ತಾರೆ. ನಿನಗೆ ಆ ಸಾಧನೆ ಇದೆ. ಆತ್ಮ ವಿಶ್ವಾಸ ಹೊಂದು. ನಿನ್ನಲ್ಲಿ ಶಕ್ತಿಯಿದೆ. ಆದ ಕಾರಣ ಕೋಡುಗಲ್ಲಿನ ಮೇಲೆ ಕುಳಿತು ಯೋಚನೆ ಮಾಡುತ್ತಿರುವೆ."

"ಅದು ನಿರಾಶೆಯ ಸೂಚಕವಲ್ಲವೆ?"

"ಹುಚ್ಚಪ್ಪ, ಅದು ನಿರಾಶೆಯಲ್ಲ, ಚಿಂತನೆ! ನೀನಾರೆಂಬುದನ್ನು ಅರಿತುಕೋ. ನಿನ್ನಲ್ಲಿ ಪರಮಶಕ್ತಿಯಿದೆ. ಒಮ್ಮೆ ಮೈಕೊಡವಿ ಸೆಟೆದು ನಿಲ್ಲು. ನನ್ನಲ್ಲೂ ಸಮುದ್ರ ಉಲ್ಲಂಘಿಸುವ ಶಕ್ತಿಯಿದೆ ಎಂದು ಒಮ್ಮೆ ಕೂಗು. ದೊಡ್ಡ ಹೆಜ್ಜೆಯಿಡು. ನೀನು ಬೆಳೆಯುವೆ. ಶ್ರೀರಾಮನ ಆದೇಶ ನೆನಪಿಸಿಕೊ. ಸೀತಾಮಾತೆಯ ಕಾಣುವ ಹಂಬಲ ತೀವ್ರವಾಗಲಿ. ಜಗಜ್ಜನನಿಗೆ ಮಹಾ ಮಾಂಗಲ್ಯ ಮುದ್ರಿಕೆ ಕೊಡುವುದು ಬೇಡವೆ? ಇದು ನಿನ್ನ ಕರ್ತವ್ಯವಲ್ಲವೆ? ನಿನ್ನ ಬಗ್ಗೆ ಅವಿಶ್ವಾಸ ಬೇಡ" ಎಂದು ಅಂಗದ ಉತ್ತೇಜನ ನೀಡಿದ.

"ಆಂಜನೇಯ, ನೀನು ಮಾನಸಿಕವಾಗಿ ಸಿದ್ಧನಾಗು, ನೀನು ಕಿಂಕರ ಅಲ್ಲ. ಶಂಕರ. ಏಳು ಎದ್ದೇಳು ಜಾಗೃತನಾಗು. ಅಂತರಂಗದ ಕೀಳರಿಮೆ ತೊರೆ. ನೋಡು ಆಗಸದೆಡೆಗೆ, ಆ ನಿನ್ನ ಅರುಣ ಕ್ಷಣ ಕ್ಷಣಕ್ಕೂ ಬೆಳೆದು ಸೂರ್ಯನಾಗಿದ್ದಾನೆ. ಅವರ ಪ್ರಖರತೆ ಗಮನಿಸು. ಸಾವಿರ ಪಟ್ಟು ಹೆಚ್ಚಿಸಿದ್ದಾನೆ. ನೀನೋ ಬಲಶಾಲಿ. ಮನಸ್ಸಿದ್ದರೆ ಮಾರ್ಗವಿದೆ. ಏಳು, ಎಚ್ಚರಾಗು" ಎಂದು ಜಾಂಬವನು ತಿಳುವಳಿಕೆ ಹೇಳಿದನು.

ಆಗ ಹನುಮಂತನು "ಹೌದು! ಹೌದು! ಕರ್ತವ್ಯಕ್ಕೆ ನನ್ನನ್ನು ಎಚ್ಚರಿಸಿದಿರಿ. ಧನ್ಯವಾದ" ಎಂದು ಎದ್ದು ನಿಂತನು. ಶ್ರೀರಾಮನನ್ನು ನೆನಪಿಸಿಕೊಂಡನು. ವಾನರ ನಾಯಕರನ್ನು ವಂದಿಸಿದ. ನನ್ನಲ್ಲೂ ಶಕ್ತಿಯಿದೆ ಎಂದು ವಿಶ್ವಾಸದಿಂದ ಮನಸ್ಸಿನಲ್ಲಿ ಹೇಳಿಕೊಂಡನು. ನೋಡು ನೋಡುವಷ್ಟರಲ್ಲಿ ತ್ರಿವಿಕ್ರಮನಾಗಿ ಬೆಳೆದ. ಅವನ ಬಾಲ ಬೆಟ್ಟದಂತೆ ಹಬ್ಬಿತು. ಅದರ ಮೇಲೆ ಕುಳಿತು, ಆ ಮಹಾಸಾಗರ ನೋಡಿದ. ಅದೊಂದು ಪುಟ್ಟ ಸರೋವರದಂತೆ ಕಂಡಿತು. ಅದರಲ್ಲೊಂದು ಲಂಕೆ ಚಿಕ್ಕ ನಡುಗಡ್ಡೆ, ಸುತ್ತಲೂ ದಟ್ಟ ಕಾಡು. ಆ ಅರಣ್ಯದಲ್ಲಿ ರಾಕ್ಷಸಿಯರ ನಡುವೆ ತಾಯಿ ಸೀತಾದೇವಿಯನ್ನು ನೋಡಿದ. ತಕ್ಷಣ ಹೋ ಎಂದು ಕೂಗಿದ. 'ಅಮ್ಮ ನಾನು ಬಂದೆ' ಎಂದು ಸಾಗರ ಉಲ್ಲಂಘನೆಗಾಗಿ ಜಿಗಿದ. ಇದನ್ನು ಕಂಡು ಅಂಗದ ಜಾಂಬವರು ಜೈ ಶ್ರೀರಾಮ ಎಂದರು. "ಜಯ ಹನುಮಾನ್" ಎಂದು ಜಯಕಾರ ಹಾಕಿದರು.

ಪದಗಳ ಅರ್ಥ

ಅಂತರಂಗ – ಒಳಗಿನ, ಅರುಣ – ಸೂರ್ಯ, ಆಶಾದಾಯಕ – ಭರವಸೆಯಿಂದ ಕೂಡಿದ, ಕಡಲು – ಸಮುದ್ರ, ಕೆರಳಿದ – ಸಿಟ್ಟಿಗೆದ್ದ, ಕೀಳರಿಮೆ – ಹೀನತನ, ಟೊಂಗೆ – ಕೊಂಬೆ, ದಂಡೆ – ದಡ; ತೀರ, ದಿಕ್ಕು ತೋಚದಾಯಿತು – ದಾರಿ ಕಾಣದಾಯಿತು, ನಿಲುಕು – ಕಣ್ಣಿಗೆ ಕಾಣುವಷ್ಟು ದೂರ, ಮೈಕೊಡವು – ಧೈರ್ಯದಿಂದ ಮೇಲೇಳು, ಯೋಜನ – ಸುಮಾರು ಒಂಬತ್ತು ಮೈಲು, ವರ್ಣನೆ – ಹೊಗಳಿಕೆ; ಬಣ್ಣನೆ, ಅಮಿತ – ಮಿತಿಯಲ್ಲದ, ಅರುಣೋದಯ – ಸೂರ್ಯೋದಯ, ಉಲ್ಲಂಘನೆ – ಹಾರು; ದಾಟು, ಕವಿ – ಮುಸುಕು, ಕಿಂಕರ – ಸೇವಕ, ಜಗಜ್ಜನನಿ – ಲೋಕಮಾತೆ, ತಡಿ – ದಡ, ದಕ್ಕಿಸಿ – ಪಡೆದು, ದಿಟ್ಟಿಸಿ – ವೀಕ್ಷಿಸಿ, ಬಲ್ಲೆವು – ತಿಳಿದಿದ್ದೇವೆ, ಮಿಗಿಲು – ಹೆಚ್ಚು, ರುದ್ರನರ್ತನ – ಭಯಂಕರ, ಹಂಬಲ – ಆಸೆ; ಉತ್ಸಾಹ.

ಟಿಪ್ಪಣಿ:

1. ಜಾಂಬವಂತ – (ಕರಡಿ) ಇವನು ಕೃತಯುಗ, ತ್ರೇತಾಯುಗ, ದ್ವಾಪರಯುಗದಲ್ಲಿಯೂ ಇದ್ದನೆಂಬ ಪ್ರತೀತಿ.
2. ಅಂಗದ – ವಾಲಿ ಮತ್ತು ತಾರೆಯ ಮಗ.
3. ಹನುಮ – ಅಂಜನಾದೇವಿಯ ಮಗ
4. ಸಪ್ತಸಾಗರ – ಏಳು ಸಮುದ್ರಗಳು: ಲವೆಣ (ಉಪ್ಪು), ಇಕ್ಷು (ಕಬ್ಬಿನ ಹಾಲು), ಸುರ (ಮದ್ಯ), ಸರ್ಪಿಸ್ (ತುಪ್ಪ), ದಧಿ (ಮೊಸರು), ಕ್ಷೀರ (ಹಾಲು), ಜಲ (ನೀರು).

9th_Kannada_Reader Term III.indd 161 29-01-2019 16:41:03

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಮುದ್ರ ಅಲೆಗಳು ಯಾವ ಗಾತ್ರದಲ್ಲಿದ್ದವು?
2. ಕಪಿವೀರರು ಲಂಕೆಯಲ್ಲಿ ಯಾರನ್ನು ಕಾಣುವ ಉತ್ಸಾಹದಲ್ಲಿದ್ದರು?
3. ಮಗುವಾಗಿದ್ದಾಗ ಹನುಮನು ಅರುಣನನ್ನು ಏನೆಂದು ಭಾವಿಸಿದನು?
4. ಆಂಜನೇಯನು ಸೂರ್ಯದೇವನಿಂದ ಯಾವ ವಿದ್ಯೆ ಕಲಿತನು?
5. ಹನುಮನು ನೋಡು ನೋಡುವಷ್ಟರಲ್ಲಿ ಯಾವ ರೀತಿ ಬೆಳೆದನು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

1. ಸಮುದ್ರದ ಅಲೆಗಳ ರುದ್ರ ನರ್ತನವನ್ನು ವರ್ಣಿಸಿರಿ.
2. ಜಾಂಬವಂತನು ಕಡಲನ್ನು ನೋಡಿ ಏನೆಂದು ಯೋಚಿಸಿದನು?
3. ಕಪಿಗಳು ತಮ್ಮ ಶಕ್ತಿ ಸಾಮರ್ಥ್ಯಗಳ ಬಗ್ಗೆ ಏನೆಂದು ಮಾತನಾಡುತ್ತಿದ್ದವು?
4. ಮಾನಸಿಕ ಸಾಮರ್ಥ್ಯದ ಬಗ್ಗೆ ಹನುಮಂತನಿಗೆ ಏನು ಹೇಳಲಾಯಿತು?
5. ತ್ರಿವಿಕ್ರಮನಾಗಿ ಬೆಳೆದ ಹನುಮನಿಗೆ ಸಾಗರ ಹಾಗೂ ಲಂಕೆ ಹೇಗೆ ಕಂಡವು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹನುಮಂತನು ತನ್ನ ಶಕ್ತಿ ಸಾಮರ್ಥ್ಯದ ಬಗ್ಗೆ ಅಂಗದನಿಗೆ ಏನು ಹೇಳಿದನು?
2. ಅಂಗದನು ಹನುಮಂತನಲ್ಲಿ ಯಾವ ಶಕ್ತಿ ಸಾಮರ್ಥ್ಯಗಳಿವೆ ಎಂದು ತಿಳಿಸಿದನು?
3. ಅಂಗದನು ಹನುಮಂತನನ್ನು ಯಾವ ಮಾತುಗಳಿಂದ ಉತ್ತೇಜಿಸಿದನು?
4. ಜಾಂಬವಂತನು ಆಂಜನೇಯನಿಗೆ ಏನೆಂದು ತಿಳಿ ಹೇಳಿದನು?
5. ಹನುಮಂತನು ಸಾಗರವನ್ನು ಜಿಗಿಯಲು ಹೇಗೆ ಸಾಧ್ಯವಾಯಿತು?

IV. ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ತಿಳಿಸಿ.

1. "ಹನುಮ ಸಮುದ್ರ ಜಿಗಿಯುವ ಬದಲು ಇಲ್ಲಿ ಏಕೆ ಸುಮ್ಮನೆ ಕುಳಿತಿರುವೆ."
   ಯಾರು ಹೇಳಿದರು?
   _____
   ಯಾರಿಗೆ ಹೇಳಿದರು?
   _____
2. "ನಿನ್ನಲ್ಲಿ ಪರಮಶಕ್ತಿಯಿದೆ"
   ಯಾರು ಹೇಳಿದರು?
   _____
   ಯಾರಿಗೆ ಹೇಳಿದರು?
   _____
3. "ಏಳು ಎದ್ದೇಳು ಜಾಗೃತನಾಗು."
   ಯಾರು ಹೇಳಿದರು?
   _____
   ಯಾರಿಗೆ ಹೇಳಿದರು?
   _____

ಭಾಷಾಭ್ಯಾಸ

1. ಕೆಳಗಿನ ವಾಕ್ಯಗಳಲ್ಲಿರುವ ಪದಗಳನ್ನು ಹಿಂದೆ ಮುಂದೆ ಮಾಡಿದೆ. ನೀವು ಅವುಗಳನ್ನು ಸರಿಪಡಿಸಿ ಬರೆಯಿರಿ.

1. ಅಪ್ಪಳಿಸುತ್ತಿವೆ ಆನೆಯಾಕಾರದ ದಂಡೆಗೆ ಅಲೆಗಳು.
2. ಮಾತ್ರಕ್ಕೆ ಅಪ್ಪ ಇರಲು ರಾಜನಾದ ಮಗನಿಗೆ ಸಾಧ್ಯವೇ? ಆ ಶಕ್ತಿ.
3. ಸಾಮರ್ಥ್ಯವಿರುತ್ತದೆ ಹುಟ್ಟಿನಿಂದ ಮಾನಸಿಕ ಎಲ್ಲರಿಗೂ.
4. ಮಾರ್ಗವಿದೆ ನೀನೋ ಏಳು ಬಲಶಾಲಿ ಎಚ್ಚರಾಗು ಮನಸ್ಸಿದ್ದರೆ.

9th_Kannada_Reader Term III.indd 162 29-01-2019 16:41:03

2. ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ.

ದಿಟ್ಟಿಸಿ, ಅರುಣೋದಯ, ಹೆಮ್ಮೆ, ಆಶಾದಾಯಕ, ಕೀಳರಿಮೆ,

3. ಕೊಟ್ಟಿರುವ ಪದಗಳಿಗೆ ಸಮನಾರ್ಥಕ ಪದಗಳನ್ನು ಬರೆಯಿರಿ.

ಮಾದರಿ: ದಂಡೆ – ತೀರ; ದಡ; ತಡಿ.

1. ಸಮುದ್ರ _____
2. ಆಕಾಶ _____
3. ತಾಯಿ _____
4. ಸೂರ್ಯ _____
5. ಗೆಳೆಯ _____

4. ವಿರುದ್ಧ ಪದ ಹೇಳಿರಿ (ಒಬ್ಬರು ಒಂದು ಪದ ಹೇಳಿದರೆ ಇನ್ನೊಬ್ಬರು ಅದಕ್ಕೆ ವಿರುದ್ಧ ಪದ ಹೇಳಬೇಕು)

ಮಾದರಿ:

(ಒಬ್ಬನು)		(ಇನ್ನೊಬ್ಬನು)
ಕತ್ತಲು	x	ಬೆಳಕು
ತಂಪು	x	_____
ಹತ್ತಿರ	x	_____

5. ಅಂತ್ಯಾಕ್ಷರ ಪದ ಕಟ್ಟಿರಿ:

ಮಾದರಿ: ರಾಮ > ಮರ > ರಜ > ಜನ > ನಮನ > ನಗು > ಗುಣ

1. ರಾಜ >
2. ಹನುಮ >
3. ಆನೆ >
4. ಆಕಾಶ >
5. ನಾಯಕ >

6. ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ ಬರೆಯಿರಿ.

1. ಆನೆಯಾಕಾರ = _____ + _____
2. ಪುಟಿದೇಳು = _____ + _____
3. ಫಲಾಹಾರ = _____ + _____
4. ಕೋಡುಗಲ್ಲು = _____ + _____
5. ಅರುಣೋದಯ = _____ + _____

ಚಟುವಟಿಕೆ

1. ಭಾರತದಲ್ಲಿ ಹಲವು ವ್ಯಕ್ತಿಗಳು ಮೌಲ್ಯಗಳಿಗೆ ಹೆಸರಾಗಿದ್ದಾರೆ. ಅವರನ್ನು ನೆನಪಿನಲ್ಲಿಡಿ.

ವ್ಯಕ್ತಿ	ಮೌಲ್ಯ
ಶ್ರವಣಕುಮಾರ	ಪಿತೃಭಕ್ತಿ
ಹರಿಶ್ಚಂದ್ರ	ಸತ್ಯ
ದುರ್ಯೋಧನ	ಛಲ
ಭೀಮ	ಬಲ
ದಧೀಚಿ	ತ್ಯಾಗ
ಕರ್ಣ	ದಾನ
ಮೀರಾ	ಭಕ್ತಿ
ಕೃಷ್ಣ–ಕುಚೇಲ	ಸ್ನೇಹ
ಮಹಾವೀರ	ಅಹಿಂಸೆ

2. ಮಕ್ಕಳ ರಾಮಾಯಣ ಕಥಾ ಪುಸ್ತಕಗಳನ್ನು ಓದಿರಿ.
3. ಮಕ್ಕಳಿಗೆ ಹನುಮ, ಅಂಗದ, ಜಾಂಬವಂತರ ವೇಷ ಹಾಕಿಸಿ ಹನುಮಂತನೊಡನೆ ನಡೆಯುವ ಸಂಭಾಷಣೆ ಹೇಳಿಸಿ.

9th_Kannada_Reader Term III.indd 163 29-01-2019 16:41:03

ಘಟಕ ಹತ್ತು

ನೆನಪಿದೆಯೆ ನಿನಗೆ?

– ಡಾ॥ ಜಿ.ಎಸ್.ಶಿವರುದ್ರಪ್ಪ



ಪ್ರತಿಯೊಬ್ಬರೂ ಬೆಳೆಯುತ್ತಾ ಹೋದಂತೆ ತಮ್ಮ ತಮ್ಮ ಬಾಲ್ಯ ಜೀವನವನ್ನು ನೆನಪಿಸಿಕೊಳ್ಳಲು ಇಷ್ಟಪಡುತ್ತಾರೆ. ಅದು ತುಂಬಾ ಸವಿಯಾದ ನೆನಪಾಗಿರುತ್ತದೆ. ಇಲ್ಲಿ ಕವನದ ನಾಯಕ ತನ್ನ ಗೆಳತಿಯೊಡನೆ ಬಾಲ್ಯದಲ್ಲಿ ಕಳೆದ ಸವಿಯಾದ ಘಟನೆಗಳನ್ನು ನೆನಪಿಸಿಕೊಂಡು ಅವು ಮರುಕಳಿಸಬೇಕೆಂದು ಆಶಿಸುತ್ತಾನೆ.

ನಾವಿಬ್ಬರೂ ಅಂದು
ಹೊಳೆಯ ದಡದಲಿ ನಿಂದು
ಮರಳುಮನೆಗಳ ಕಟ್ಟಿ
ಆಟವಾಡಿದ ದಿವಸ
ನೆನಪಿದೆಯೆ ನಿನಗೆ?

ಮುಂಗಾರು ಮಳೆ ಹೊಯ್ದು
ನಾವಿಬ್ಬರೂ ತೊಯ್ದು –
ನಿಂತಾಗ ಮರಳಮನೆ
ಕೊಚ್ಚಿಹೋದಾ ದಿವಸ
ನೆನಪಿದೆಯೇ ನಿನಗೆ?

ಈ ಮರಳು ನನಗೆಂದು
ಆ ಮರಳು ತನಗೆಂದು
ಹೊಡೆದಾಡಿ ಜತೆ ಬಿಟ್ಟು
ಆಟವಾಡಿದ ದಿವಸ
ನೆನಪಿದೆಯೆ ನಿನಗೆ?

ಮರುದಿವಸ ಒಂದಾಗಿ
ಮರಳುಮನೆಗಳ ಕಟ್ಟಿ
ಕೈಯ ಚಪ್ಪಳೆ ತಟ್ಟಿ
ಹಾಡಿಕುಣಿದಾ ದಿವಸ
ನೆನಪದೆಯೆ ನಿನಗೆ?

ಅಂದು ಹರಿದಾ ಹೊಳೆಯೆ
ಇಂದಿಗೂ ಹರಿಯುತ್ತಿದೆ
ಬಾ ಗೆಳತಿ ಮತ್ತೊಮ್ಮೆ ಆಟವಾಡೋಣ
ಬಾಲ್ಯದುದ್ಯಾನವನು ಮರಳಿ ಕಟ್ಟೋಣ!

9th_Kannada_Reader Term III.indd 164 29-01-2019 16:41:03

ಕವಿ–ಕಾವ್ಯ ಪರಿಚಯ



ರಾಷ್ಟ್ರಕವಿ ಡಾ॥ ಜಿ. ಎಸ್.ಶಿವರುದ್ರಪ್ಪನವರು 1926ನೇ ಇಸವಿ ಫೆಬ್ರವರಿ 7ನೇ ತಾರೀಖು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ಜನಿಸಿದರು. ಇವರು ಮೈಸೂರು, ಬೆಂಗಳೂರು ಮತ್ತು ಉಸ್ಮಾನಿಯ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ. 'ಸಾಮಗಾನ', 'ಪ್ರೀತಿ ಇಲ್ಲದ ಮೇಲೆ', 'ಕಾರ್ತೀಕ', 'ದೀಪದ ಹೆಜ್ಜೆ', 'ದೇವಶಿಲ್ಪಿ', 'ಚೆಲುವು ಒಲವು', 'ವಿಮರ್ಶೆಯ ಪೂರ್ವ ಪಶ್ಚಿಮ', 'ಸೌಂದರ್ಯ ಸಮೀಕ್ಷೆ', 'ಕಾವ್ಯಾರ್ಥ ಚಿಂತನ', 'ಗಂಗೆಯ ಶಿಖರದಲ್ಲಿ' ಮೊದಲಾದವುಗಳು ಇವರ ಪ್ರಮುಖ ಕೃತಿಗಳಾಗಿವೆ. ಇವರು **ರಾಷ್ಟ್ರಕವಿ** ಪುರಸ್ಕಾರವನ್ನು ಪಡೆದಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅವರು ಡಿಸೆಂಬರ್ ೨೩, ೨೦೧೩ರಲ್ಲಿ ನಿಧನರಾದರು.

'ನೆನಪಿದೆಯೇ ನಿನಗೆ' ಕವನವನ್ನು ಇವರ 'ಪ್ರೀತಿ ಇಲ್ಲದ ಮೇಲೆ' ಎಂಬ ಕವನಸಂಕಲನದಿಂದ ಆರಿಸಲಾಗಿದೆ.

ಪದಗಳ ಅರ್ಥ

ಉದ್ಯಾನ	–	ತೋಟ
ಜತೆ ಬಿಡು	–	ಸಂಗ ಬಿಡು
ತೊಯ್ದು	–	ನೀರಿನಿಂದ ನೆನೆದು
ಮರಳಿ	–	ಮತ್ತೆ, ಪುನಃ
ಮರಳು	–	ಉಸುಕು
ಹೊಳೆ	–	ಹರಿಯುವ ನೀರು, ನದಿ

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಹೊಳೆಯ ದಂಡೆಯ ಮೇಲೆ ಕವನದ ನಾಯಕನು ಗೆಳತಿಯೊಡನೆ ಆಡಿದ ಆಟ ಯಾವುದು?
2. ಕವನದಲ್ಲಿ ಹೇಳಿರುವಂತೆ ಕವನದ ನಾಯಕನು ಗೆಳತಿಯೊಡನೆ ಕಟ್ಟಿದ ಮರಳುಮನೆ ಕೊಚ್ಚಿಹೋಗಿದ್ದು ಏಕೆ?
3. ಬಾಲ್ಯದಲ್ಲಿ ಕವನದ ನಾಯಕನು ಗೆಳತಿಯೊಡನೆ ಜತೆ ಬಿಡಲು ಕಾರಣವಾಗುತಿದ್ದ ಸನ್ನಿವೇಶ ಯಾವುದು?
4. ಜತೆ ಬಿಟ್ಟ ಕವನದ ನಾಯಕನು ಮತ್ತು ಗೆಳತಿ ಮರುದಿನ ಒಂದಾಗಿ ಹೇಗೆ ಸಂಭ್ರಮಿಸುತ್ತಿದ್ದರು?
5. ಕವನದ ನಾಯಕನು ಗೆಳತಿಯನ್ನು ಮೊತ್ತೊಮ್ಮೆ ಬಾ ಎಂದು ಏಕೆ ಕರೆಯುತ್ತಿದ್ದಾನೆ?
6. 'ನೆನಪಿದೆಯೆ ನಿನಗೆ?' ಕವಿತೆಯ ಆಕರ ಕೃತಿ ಯಾವುದು?

II. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:

1. ಕವನದ ನಾಯಕನು ಗೆಳತಿಯೊಡನೆ ಕಟ್ಟಿದ ಮರಳಿನ ಮನೆ ಕೊಚ್ಚಿಹೋದ ಸನ್ನಿವೇಶನವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
2. ಕವನದ ನಾಯಕನು ಮತ್ತು ಗೆಳತಿಯು ಹೊಳೆಯ ದಂಡೆಯಲ್ಲಿ ಆಟವಾಡುತಿದ್ದ ಬಗೆಯನ್ನು ಕುರಿತು ಬರೆಯಿರಿ.
3. ಬಾಲ್ಯದ ಉದ್ಯಾನವನ್ನು ಹೇಗೆ ಕಟ್ಟಬೇಕೆಂದು ಕವನದ ನಾಯಕನು ಬಯಸಿದ್ದಾರೆ?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ.

1. ಕವಿಯು 'ನೆನಪಿದೆಯೆ ನಿನಗೆ?' ಕವನದ ಮೂಲಕ ಕವನದ ನಾಯಕನ ಬಾಲ್ಯದ ನೆನಪುಗಳನ್ನು ಹೇಗೆ ಕಟ್ಟಿಕೊಟ್ಟಿದ್ದಾರೆ?

9th_Kannada_Reader Term III.indd 165 29-01-2019 16:41:03

ಭಾಷಾಭ್ಯಾಸ

1. ಬಿಡಿಸಿ ಬರೆದಿರುವ ಪದಗಳನ್ನು ಸೇರಿಸಿ ಬರೆಯಿರಿ:

1. ಕೊಚ್ಚಿ ಹೋದ + ಆ ದಿವಸ
2. ಹೊಡೆದು + ಆಡಿ
3. ನಾವು + ಇಬ್ಬರೂ
4. ಆಟ + ಆಡಿದ
5. ಆಟ + ಆಡೋಣ
6. ಬಾಲ್ಯದ + ಉದ್ಯಾನ

2. ಕೆಳಗಿನ ಪದಗಳನ್ನು ಓದಿಕೊಂಡು ಬರೆಯಿರಿ:

ಕೊಚ್ಚಿಹೋದಾ ದಿವಸ, ಬಾಲ್ಯದುದ್ಯಾನ

3. ಬಿಟ್ಟಿರುವ ಸಾಲುಗಳನ್ನು ಸೇರಿಸಿ ನಿಮ್ಮ ಸಹಪಾಠಿಗಳೆದುರು ಗಟ್ಟಿಯಾಗಿ ಓದಿ ಬರೆಯಿರಿ:

1. ಮರಳುಮನೆಗಳ ಕಟ್ಟಿ

   _____

   ನೆನಪಿದೆಯೆ ನಿನಗೆ?
2. ನಿಂತಾಗ ಮರಳಮನೆ

   _____

   ನೆನಪಿದೆಯೇ ನಿನಗೆ?
3. ಹೊಡೆದಾಡಿ ಜತೆ ಬಿಟ್ಟು

   _____

   ನೆನಪಿದೆಯೆ ನಿನಗೆ?
4. ಕೈಯ ಚಪ್ಪಳೆ ತಟ್ಟಿ

   _____

   ನೆನಪಿದೆಯೆ ನಿನಗೆ?



9th_Kannada_Reader Term III.indd 166 29-01-2019 16:41:05

ಪೂರಕ ಪದ್ಯ

ಘಟಕ ಹತ್ತು

ಭೂಮಿತಾಯಿ

– ಜನಪದ



ಜನಪದರು ಮಣ್ಣಿನ ಮಕ್ಕಳು. ಭೂಮಿಯನ್ನು ತಾಯಿ ಎಂದೇ ಭಾವಿಸಿದವರು. ಮಣ್ಣಿನ ಒಡನಾಟದಲ್ಲೇ ಬದುಕು ಕಂಡವರು. ಭೂತಾಯಿ ತನ್ನನ್ನು ನಂಬಿದವರನ್ನು ಎಂದೂ ನಿರಾಶೆಗೊಳಿಸುವುದಿಲ್ಲ. ನಮ್ಮನ್ನು ಕೈಬಿಡುವುದಿಲ್ಲ ಎಂಬ ನಂಬಿಕೆಯಿಂದ ಆಕೆಯ ಸೇವೆಯನ್ನು ಮಾಡುತ್ತಾ ತಮ್ಮ ತುತ್ತಿನ ಚೀಲ ತುಂಬಿಕೊಳ್ಳುವವರು. ಜನಪದರು ಭೂತಾಯಿಯನ್ನು ಪ್ರಾರ್ಥಿಸುವ ಪರಿ ಅನೇಕ ತ್ರಿಪದಿಗಳಲ್ಲಿ ವ್ಯಕ್ತವಾಗಿದೆ. ಅಂತಹ ಕೆಲವು ತ್ರಿಪದಿಗಳನ್ನು ಇಲ್ಲಿ ನೀಡಲಾಗಿದೆ.

ಹೊಸ ಬಂಡಿ ಮೇಲೆ ಹಸುವಿನ ಗೊಬ್ರತಂದೆ
ಹಸಿರ ಭೂದೇವಿ ಹಾಕ್ತೇನೆ । ನನ ತಾಯವ್ವ
ಹಸಿದ ಕಂದಯ್ನ ಕಾಯವ್ವ ॥೧॥

ಹೂಡೋದು ಹೊಸ ಎತ್ತು ಹೂಡ್ಯಾನು ಹೊಸ ಮಗ
ಕೂಗು ಕೇಳಮ್ಮ ಭೂದೇವಿ । ನಿನಮಗ
ಸೆರಗು ಕಟ್ಟವನೆ ದುಡಿಯೋಕೆ ॥೨॥

ಭೂದೇವಿ ನೀಡವ್ವ ಭಾರಿ ಪೈರಾಗಲವ್ವ
ಬಡವನ ಹರಕೆ ಕೇಳವ್ವ । ಭೂಮಿತಾಯಿ
ನಿನ್ಗೆ ಜೋಡಿ ಹಣ್ಣಾಯಿ ಒಡೆಸೇನು ॥೩॥

ಮಾರುದ್ದ ಪೈರಾಗಲೀ ಮೊಳುದ್ದದ ತೆನೆಯಾಗಲಿ
ಬಡವನ ಮನೆಗೆ ಸಿರಿಬರಲಿ । ಭೂಮಿತಾಯಿ
ಕಂದಯ್ನ ಹಸಿವು ಇಂಗೋಗ್ಲಿ ॥೪॥

ಹನ್ನೆರಡು ಎತ್ತಿನ ಬಾರಿ ಹೊನ್ನೆಗಂಬ ಮೇಟಿ
ಚಿನ್ನದ ಕೊಂಬೀನ ಬಸವಣ್ಣ । ತುಳಿದ್ಯಾವೋ
ಚೆನ್ನಿಗನಣ್ಣಯ್ನ ಕಳದಲಿ ॥೫॥

9th_Kannada_Reader Term III.indd 167 29-01-2019 16:41:05

ಉಪಪಠ್ಯ

ಘಟಕ ಹತ್ತು

ಮಾಸ್ತಿಯವರ ಮಾತೃಪ್ರೇಮ

– ಬೆಳಗೆರೆ ಕೃಷ್ಣಶಾಸ್ತ್ರಿ



ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಕುರಿತಂತೆ ಗೌರವದ ಭಾವನೆ ಇದೆ. ಅದರಲ್ಲೂ ತಾಯಿಯನ್ನು ಕುರಿತಂತೆ ಅತಿ ಹೆಚ್ಚಿನ ಪ್ರೀತಿ ಆದರಗಳಿವೆ. ಇದಕ್ಕೆ ಕನ್ನಡ ಹಿರಿಯ ಚೇತನ ಮಾಸ್ತಿಯವರು ಒಂದು ಆದರ್ಶ. ಅವರಿಗೆ ಸ್ತ್ರೀಯರ ಬಗ್ಗೆ ಹಾಗೂ ಅವರ ತಾಯಿಯ ಬಗ್ಗೆ ಇದ್ದ ಗೌರವ ವಿಶೇಷವಾದುದು. ಮಾಸ್ತಿಯವರಿಗೆ ಸ್ತ್ರೀಯರ ಬಗೆಗೆ ಇದ್ದ ಗೌರವವನ್ನು ಲೇಖಕರಾದ ಬೆಳಗೆರೆ ಕೃಷ್ಣಶಾಸ್ತ್ರಿಗಳು ಈ ಗದ್ಯಭಾಗದಲ್ಲಿ ನಿರೂಪಿಸಿದ್ದಾರೆ.



1975ನೇ ಇಸವಿ ಅಂತರಾಷ್ಟ್ರೀಯ ಮಹಿಳಾ ವರ್ಷ. ಒಂದು ಮಧ್ಯಾಹ್ನ ಪೂಜ್ಯ ಮಾಸ್ತಿಯವರನ್ನು ಅವರ ನಿವಾಸದಲ್ಲಿ ಕಂಡೆ. ಕುಶಲ ಪ್ರಶ್ನೆಗಳಾಗುವಷ್ಟರಲ್ಲೇ ಕೆಲವು ಮಹಿಳೆಯರು ಮಾಸ್ತಿಯವರನ್ನು ಕಾಣಲು ಬಂದರು. ಮಾಸ್ತಿ ಎಂದಿನಂತೆ ಕೈ ಜೋಡಿಸಿ 'ಬನ್ನಿ ಅಮ್ಮ ಬನ್ನಿ ತಾಯಿ' ಎಂದು ಅವರನ್ನೆಲ್ಲಾ ಬರಮಾಡಿಕೊಂಡರು. 'ತಾವೆಲ್ಲ ಬಂದ ಕಾರಣ ಏನೆಂದು ಕೇಳಬಹುದೇ?' ಎಂದರು ಮಾಸ್ತಿ ಹಸನ್ಮುಖರಾಗಿ.

ಅವರೆಲ್ಲ ಯಾವುದೋ ಮಹಿಳಾ ಸಂಘದವರೆಂದು ತಿಳಿಸಿ, 'ಇದು ಮಹಿಳಾ ವರ್ಷ ಅಲ್ಲವೇ. ಆದ್ದರಿಂದ ಮಹಿಳೆಯರ ಬಗೆಗೆ ತಮ್ಮ ಅನುಭವ, ಅನಿಸಿಕೆ, ಸಲಹೆ ಇತ್ಯಾದಿಗಳನ್ನು ತಮ್ಮಿಂದಲೇ ತಿಳಿಯಬೇಕೆಂದು ಬಂದೆವು' ಎಂದರು ಒಬ್ಬ ಹಿರಿಯರು. ಮಾಸ್ತಿ ಅದಕ್ಕೆ:

ಬಹಳ ಸಂತೋಷ, ತಾವು ನಮ್ಮ ಮನೆಗೆ ಬಂದು ಈ ವಿಚಾರವಾಗಿ ಕೇಳುತ್ತಿರುವುದು ತುಂಬಾ ಸಂತೋಷದ ಮಾತು. ನಮ್ಮಲ್ಲಿ ಹೆಣ್ಣನ್ನು ಆದಿಶಕ್ತಿ, ಲಕ್ಷ್ಮೀ,

9th_Kannada_Reader Term III.indd 168 29-01-2019 16:41:06

ಪಾರ್ವತಿ, ಸರಸ್ವತಿ, ಭಾಗೀರಥೀ, ಗೀರ್ವಾಣಿ ಎಂದೆಲ್ಲಾ ಕರೆದಿದ್ದಾರೆ. ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ಗಂಡುದೇವರುಗಳನ್ನು ಹೆಸರಿಸುವಾಗ ಪಾರ್ವತಿ ಪರಮೇಶ್ವರ, ಲಕ್ಷ್ಮೀನಾರಾಯಣ, ವಾಗ್ಪತಿ ಎಂದು ಹೆಣ್ಣಿನ ಹೆಸರನ್ನು ಮುಂದುಮಾಡಿ ಕರೆಯುವಲ್ಲಿ ಏನೋ ವಿಶೇಷವಿದೆ. ಜಗತ್ತಿನಲ್ಲಿ ಗಂಡು ಎಷ್ಟು ಮುಖ್ಯವೋ ಹೆಣ್ಣೂ ಅಷ್ಟೇ ಮುಖ್ಯ ಎಂದು ವಿವರಿಸಿದರು.

ಆಗ ಹದಿವಯಸ್ಸಿನ ಒಬ್ಬಾಕೆ 'ನಾನೊಂದು ಪ್ರಶ್ನೆ ಕೇಳಲೇ ಸಾರ್' ಎಂದಳು.

'ಕೇಳಿ, ಕೇಳಿ, ಏನು ಬೇಕಾದರೂ ಕೇಳಿ, ಸಂಕೋಚವೇಕೆ' ಎಂದರು ಮಾಸ್ತಿ ನಗುತ್ತ.

'ತಾವು ವಯಸ್ಸಿನಲ್ಲಿದ್ದಾಗ ತಮ್ಮ ಹೆಂಡತಿಯಲ್ಲದೆ ಬೇರೊಬ್ಬ ಹೆಂಗಸನ್ನು ಪ್ರೀತಿಸಿದ್ದು ಉಂಟೇ ಸಾರ್' ಎಂದು ಕೇಳಿದರು. ಅಲ್ಲಿದ್ದವರಿಗೆಲ್ಲಾ ಸಿಡಿಲೆರಗಿದಂತಾಯಿತು. ಎಲ್ಲರೂ ಆಕೆಯನ್ನು ದುರುಗುಟ್ಟಿಕೊಂಡು ನೋಡಿದರು. ಆದರೆ ಮಾಸ್ತಿ ನಗುನಗುತ್ತಲೇ 'ಹೌದಮ್ಮ ತಾಯಿ, ನಿಮ್ಮ ಮಾತು ನಿಜ, ನಾನು ನನ್ನ ಹೆಂಡತಿಯನ್ನಲ್ಲದೆ ಬೇರೆ ಹೆಂಗಸನ್ನು ಪ್ರೀತಿಸಿದ್ದುಂಟು' ಎಂದರು.

ನೆರೆದವರಿಗೆಲ್ಲ ದಿಗ್ಭ್ರಮೆಯಾಯಿತು. ಪ್ರಶ್ನೆ ಕೇಳಿದ ಆಕೆ ಒಂದು ಬಲವಾದ ಕೋಟೆಯನ್ನೇ ಗೆದ್ದಂತೆ ಗತ್ತಿನಿಂದ ಅಲ್ಲಿದ್ದವರನ್ನೆಲ್ಲಾ ತಲೆ ಎತ್ತಿ ನೋಡಿದರು.

ಮಾಸ್ತಿ ಮುಂದುವರೆದು "ಹೇಳಬೇಕಾ? ನಾನು ಗಾಢವಾಗಿ ಪ್ರೀತಿಸಿದ ಆ ಹೆಣ್ಣು ಯಾರೆಂದು ತಿಳಿಯಬೇಕೆನ್ನುವಿರಾ?" ಎಂದರು. ಆಕೆಗೆ ಇಮ್ಮಡಿ ಹಿಗ್ಗಾಯಿತು.

ಮಾಸ್ತಿ ಹಸನ್ಮುಖಿಯಾಗಿಯೇ ಮಾತನಾಡಿದರು. 'ಕೇಳಿ ನನ್ನ ಧರ್ಮಪತ್ನಿಯಲ್ಲದೆ ನಾನು ವಿಶೇಷವಾಗಿ ಪ್ರೀತಿಸಿದ ಆ ಹೆಣ್ಣು ನನ್ನ ತಾಯಿ. ನನ್ನ ಹೆತ್ತವ್ವ. ನನಗೆ ಜನ್ಮವಿತ್ತ ದೇವತೆ' ಎಂದರು.

ಆಕೆಯ ಬಾಯಿಂದ ಬಂತು 'ಅಯ್ಯೋ ಅಷ್ಟೇನೇ' ಎಂಬ ಉದ್ಗಾರ.

ಕೂಡಲೆ ಮಾಸ್ತಿ ಕಣ್ಣರಳಿಸಿ ನುಡಿದರು. 'ಏಕೆ ಅಯ್ಯೋ ಎನ್ನುತ್ತೀರಿ, ನಾನು ನನ್ನ ತಾಯಿಯನ್ನು ವಿಶೇಷವಾಗಿ ಪ್ರೀತಿಸಿದ್ದು ತಪ್ಪೆ' ಎನ್ನುತ್ತ ಅಲ್ಲಿದ್ದವರನ್ನೆಲ್ಲಾ ಒಮ್ಮೆ ದಿಟ್ಟಿಸಿ ಮತ್ತೆ ನುಡಿದರು.

'ಹಾಗಾದರೆ ನೀವು ನಿಮ್ಮ ತಾಯಿಯನ್ನು ಪ್ರೀತಿಸುವುದಿಲ್ಲವೇ? ತಾಯಿ ಇಲ್ಲದೆ ನಾವೇ? ನಮ್ಮನ್ನು ಹೊತ್ತು, ಹೆತ್ತು, ಸಾಕಿ ಸಲಹಿ ದೊಡ್ಡವರನ್ನಾಗಿ ಮಾಡಲಿಲ್ಲವೇ? ನಮಗೆ ಸ್ವಲ್ಪ ಆರೋಗ್ಯ ಕೆಟ್ಟರೂ ನೆಗಡಿ, ಕೆಮ್ಮು, ಜ್ವರ ಬಂದರೂ ನಮ್ಮ ತಾಯಿ ಗಾಬರಿಗೊಳ್ಳಲಿಲ್ಲವೇ? ನಮಗಾಗಿ ಔಷಧಿ ಪಥ್ಯಗಳನ್ನು ತಾನು ಪಾಲಿಸಲಿಲ್ಲವೇ? ಹೊಟ್ಟೆ ಬಟ್ಟೆ ಕಟ್ಟಲಿಲ್ಲವೇ? ನಮ್ಮನ್ನು ಹಾಗೆ ಜೋಪಾನ ಮಾಡದಿದ್ದರೆ ನಾವೆಲ್ಲಿರುತ್ತಿದ್ದೆವು?' ಎಂದು ಮಾತು ಮುಂದರೆಸಿದರು, 'ನೋಡಿ, ನನ್ನ ತಾಯಿ ಇದ್ದಷ್ಟು ದಿನಗಳು ನಾನು ಬೆಳಗ್ಗೆ ಎದ್ದ ಕೂಡಲೇ ಅವರೆಲ್ಲಿದ್ದರೂ ಅಲ್ಲಿಗೆ ಹೋಗಿ ಅವರ ಪಾದ ಮುಟ್ಟಿ ನಮಸ್ಕರಿಸಿದ ನಂತರವೇ ನನ್ನ ದಿನಚರಿ ಪ್ರಾರಂಭವಾಗುತ್ತಿತ್ತು. ಈಚೆಗೆ ಅವರು ತೀರಿಕೊಂಡ ಮೇಲೆ ಅವರ ಭಾವಚಿತ್ರವನ್ನು ಪಾದಗಳು ಕಾಣುವಂತೆ ದೊಡ್ಡದಾಗಿ ಮಾಡಿಸಿ ಆ ಒಳಬಾಗಿಲ ಮೇಲೆ ಹಾಕಿದ್ದೇನೆ, ನೋಡಿ. ಈಗಲೂ ಪ್ರತಿನಿತ್ಯ ಎದ್ದಕೂಡಲೆ ಆ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ ಮೇಲೆಯೇ ನನ್ನ ಮುಂದಿನ ಕೆಲಸ. ನಿಮಗದು ಚಿತ್ರದ ಗೊಂಬೆಯಾಗಿ ಕಾಣಿಸಬಹುದು. ಆದರೆ ಅದರಲ್ಲಿ ನಾನು ನನ್ನ ತಾಯಿಯನ್ನು ಕಾಣುತ್ತೇನೆ. ಮಹಿಳಾವರ್ಷ ಆಚರಿಸುತ್ತಿರುವ ನಿಮಗೆಲ್ಲ ಈ ವಿಚಾರದಲ್ಲಿ ಸ್ಪಷ್ಟವಾದ ನಿಶ್ಚಯವಿರಬೇಕು. ಮಹಿಳೆಯರ ಹಿರಿಮೆಯನ್ನು ಮೆರೆಯುವಾಗ ತಾಯಿಯ ಮಹಿಮೆಯನ್ನು ಮರೆಯಬಾರದು', 'ತಾಯಿಗಿಂತ ದೊಡ್ಡ ವಸ್ತು ಉಂಟೇ' ಎಂದರು.

ಕೃತಿ– ಕರ್ತೃ ಪರಿಚಯ:



ಬೆಳಗೆರೆ ಕೃಷ್ಣಶಾಸ್ತ್ರಿಗಳು ೨೨ನೇ ಮೇ ೧೯೧೬ರಲ್ಲಿ ಜನಿಸಿದರು. ಇವರು ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದರು. ವಿನೋಬಾಭಾವೆಯೊಂದಿಗೆ ಭೂದಾನ ಚಳುವಳಿಯಲ್ಲಿ ಭಾಗವಹಿಸಿದ್ದರು. 'ತುಂಬಿ' ಎಂಬುದು ಇವರ ಕಥಾಸಂಕಲನ. 'ಹಳ್ಳಿಮೇಷ್ಟ್ರು' ಮತ್ತು 'ಹಳ್ಳಿಚಿತ್ರ', ಆಕಸ್ಮಿಕ', 'ಯೇಗ್ದಾಗೆಲ್ಲಾ ಏತೆ' ಇವರು ರಚಿಸಿದ ಕೆಲವು ಪ್ರಮುಖ ಕೃತಿಗಳು. ಶಾಸ್ತ್ರಿಗಳು ದಿನಾಂಕ ೨೨–೦೩–೨೦೧೩ರಂದು ನಿಧನರಾದರು.

'ಸಾಹಿತಿಗಳ ಸ್ಮೃತಿ' ಎಂಬ ಇವರ ಕೃತಿಯಿಂದ ಮಾಸ್ತಿಯವರ ಮಾತೃಪ್ರೇಮ ಗದ್ಯಭಾಗವನ್ನು ಆರಿಸಲಾಗಿದೆ.

9th_Kannada_Reader Term III.indd 169 29-01-2019 16:41:06

ಮಾಸ್ತಿಯವರ ಪರಿಚಯ:

'ಮಾಸ್ತಿ ಕನ್ನಡದ ಆಸ್ತಿ' ಎಂದು ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕೋಲಾರ ಜಿಲ್ಲೆಯ ಮಾಸ್ತಿ ಎಂಬ ಊರಿನಲ್ಲಿ ೦೬–೦೬–೧೮೯೧ರಲ್ಲಿ ಜನಿಸಿದರು. ಕನ್ನಡ ಸಣ್ಣಕತೆಗಳ ಜನಕ ಎನಿಸಿದ ಇವರು ಕತೆ, ಕಾದಂಬರಿ, ಕಾವ್ಯ ವಿಮರ್ಶೆ ಹೀಗೆ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. 'ಚೆನ್ನಬಸವನಾಯಕ', 'ಚಿಕವೀರರಾಜೇಂದ್ರ', 'ಭಾವ', ಮುಂತಾದವುಗಳು ಅವರ ಕೃತಿಗಳು. ಅವರಿಗೆ ಜ್ಞಾನಪೀಠ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ. ಶ್ರೀಯುತರು ೧೯೮೪ ರಲ್ಲಿ ನಿಧನರಾದರು.

ಪದಗಳ ಅರ್ಥ:

ಗತ್ತು – ಅಹಂಕಾರ, ಗಾಢವಾಗಿ – ಬಹಳವಾಗಿ, ಗಾಬರಿ – ಹೆದರಿಕೆ, ಗೀರ್ವಾಣಿ – ಸರಸ್ವತಿ, ಜೋಪಾನ – ರಕ್ಷಣೆ, ದಿಗ್ಭ್ರಮೆ – ಆಶ್ಚರ್ಯ, ದಿಟ್ಟಿಸು – ನೋಡು, ದಿನಚರಿ – ದಿನದ ಕೆಲಸ, ನಿವಾಸ – ವಾಸ ಮಾಡುವ ಸ್ಥಳ (ಮನೆ), ನಿಶ್ಚಯ – ನಿರ್ಧಾರ, ಹಸನ್ಮುಖ – ನಗುಮುಖ.

ಟಿಪ್ಪಣಿ:

ವಾಗ್ಪತಿ – ವಾಗ್ ಎಂದರೆ ಮಾತು–ವಿದ್ಯೆ. ವಿದ್ಯೆಗೆ ಅಧಿದೇವತೆಯಾದ ಸರಸ್ವತಿ ಪತಿ ಬ್ರಹ್ಮ. (ವಿದ್ಯೆಯ ಅಧಿಪತಿಯಾದ ಸರಸ್ವತಿಯನ್ನು 'ಅಧಿದೇವತೆ' ಎನ್ನುತ್ತಾರೆ).

ಸಿಡಿಲೆರಗು – ಸಿಡಿಲು ಇದ್ದಕ್ಕಿದ್ದಂತೆ ಹೊಡೆಯುತ್ತದೆ. ಆಗ ಗಾಬರಿಯಾಗುತ್ತದೆ. ಸಿಡಿಲೆರಗು ಎಂದರೆ ಒಮ್ಮೆಲೆ ಗಾಬರಿಯಾಗು, ಭಯಗೊಳ್ಳು ಎಂದರ್ಥವಾಗುತ್ತದೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಅಂತರರಾಷ್ಟ್ರೀಯ ಮಹಿಳಾವರ್ಷ ಎಂದು ಯಾವ ವರ್ಷವನ್ನು ಆಚರಿಸಲಾಯಿತು?
2. ಮಾಸ್ತಿಯವರು ತಮ್ಮನ್ನು ಕಾಣಲು ಬಂದ ಮಹಿಳೆಯರನ್ನು ಹೇಗೆ ಸ್ವಾಗತಿಸಿದರು?
3. ಮಾಸ್ತಿಯವರನ್ನು ಕಾಣಲು ಮಹಿಳೆಯರು ಏಕೆ ಬಂದಿದ್ದರು?
4. ಮಾಸ್ತಿಯವರು ನಮ್ಮಲ್ಲಿ ಹೆಣ್ಣನ್ನು ಯಾವ ಯಾವ ಹೆಸರುಗಳಿಂದ ಕರೆಯಲಾಗಿದೆ ಎಂದು ಹೇಳಿದರು?
5. ಹದಿವಯಸ್ಸಿನಾಕೆ ಮಾಸ್ತಿಯವರನ್ನು ಕೇಳಿದ ಪ್ರಶ್ನೆ ಯಾವುದು?
6. ಮಾಸ್ತಿಯವರ ಯಾವ ಮಾತು ನೆರೆದವರಿಗೆಲ್ಲ ದಿಗ್ಭ್ರಮೆಯನ್ನು ಉಂಟು ಮಾಡಿತು?
7. ಮಾಸ್ತಿಯವರಿಗೆ ಪ್ರಶ್ನೆ ಕೇಳಿದಾಕೆಯ ಹಿಗ್ಗು ಇಮ್ಮಡಿಯಾಯಿತೇಕೆ?
8. ಮಾಸ್ತಿಯವರು ತಮ್ಮ ಹೆಂಡತಿಯನ್ನಲ್ಲದೆ ಪ್ರೀತಿಸಿದ್ದ ಮತ್ತೊಂದು ಹೆಣ್ಣು ಯಾರು?

ಭಾಷಾಭ್ಯಾಸ

I. ಈ ಕೆಳಗೆ ಪ್ರತಿ ಹೇಳಿಕೆಯ ಕೆಳಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಗುರುತಿಸಿ.

1. 'ಅಲ್ಲಿದ್ದವರಿಗೆಲ್ಲಾ ಸಿಡಿಲೆರಗಿದಂತಾಯಿತು' ಎಂಬಲ್ಲಿ ಸಿಡಿಲೆರಗಿದಂತಾಯಿತು ಎಂದರೆ
   ಅ. ಗಾಬರಿಯಾಯಿತು
   ಆ. ಸಿಡಿಲು ಬಿದ್ದ ಹಾಗಾಯಿತು
   ಇ. ಸಿಡಿಮಿಡಿಗೊಳ್ಳುವಂತಾಯಿತು
   ಈ. ಕೋಪ ಬಂದಿತು

2. 'ಇಮ್ಮಡಿ' ಎಂಬ ಪದದ ಅರ್ಥ
   ಅ. ಇಂಪಾದ ನುಡಿ
   ಆ. ಎರಡರಷ್ಟು
   ಇ. ಹಿಂದಿನ ಕಾಲು
   ಈ. ಎರಡು ಕಡೆ

3. ಕೆಳಗಿನ ಪದಗಳಲ್ಲಿ ಸರಿಯಾದ ರೂಪ
   ಅ. ಸ್ಥಾನಾಮಾನ
   ಆ. ಸ್ಥಾನಮಾನ
   ಇ. ಸ್ಥಾನಮನ
   ಈ. ಸ್ಥಾನಾಮನ

4. ಮಾಸ್ತಿಯವರು ಪಡೆದ ಪ್ರಶಸ್ತಿ
   ಅ. ನೊಬೆಲ್ ಪ್ರಶಸ್ತಿ
   ಆ. ಜ್ಞಾನಪೀಠ ಪ್ರಶಸ್ತಿ
   ಇ. ನೆಹರು ಪ್ರಶಸ್ತಿ
   ಈ. ಪಂಪ ಪ್ರಶಸ್ತಿ

9th_Kannada_Reader Term III.indd 170 29-01-2019 16:41:06

ಘಟಕ ಹತ್ತು

ವ್ಯಾಕರಣ 

ಕಾಲ ಸೂಚಕ ಕ್ರಿಯಾಪದ

ಭಾಗ – ಅ

ಕ್ರಿಯೆಯ ಅರ್ಥವನ್ನು ಕೊಡುವ ಪದಗಳೆಲ್ಲವೂ ಕ್ರಿಯಾಪದಗಳು. ಕ್ರಿಯಾಪದದ ಮೂಲರೂಪವೇ ಕ್ರಿಯಾಪ್ರಕೃತಿ. ಕ್ರಿಯಾಪ್ರಕೃತಿಯನ್ನು ಧಾತು ಎನ್ನುವರು. ಧಾತುವಿಗೆ ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುತ್ತವೆ. ಈ ಎರಡರ ನಡುವೆ ಕ್ರಮವಾಗಿ ಉತ್ತ, ದ, ವ, ಎಂಬ ಕಾಲಸೂಚಕ ಪ್ರತ್ಯಯಗಳು ಸೇರಿ ಕೆಲಸ ನಡೆಯುವ ಕಾಲವನ್ನು ತಿಳಿಸುತ್ತವೆ. ಇದರಲ್ಲಿ ಭೂತಕಾಲ, ವರ್ತಮಾನ ಕಾಲ ಮತ್ತು ಭವಿಷ್ಯತ್ ಕಾಲ ಎಂದು ಮೂರು ಬಗೆಗಳಿವೆ.

ಭೂತಕಾಲ:

ಧಾತುಗಳಿಗೆ ಭೂತಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ಭೂತಕಾಲದ ಕ್ರಿಯಾಪದಗಳು ಎನಿಸುವುವು. ಭೂತಕಾಲದಲ್ಲಿ 'ದ' ಎಂಬ ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾ: ಓದಿದನು, ತಿಂದಳು, ಬಂದಿತು, ಹಾಡಿದರು, ಬಂದೆನು.

ವರ್ತಮಾನ ಕಾಲ:

ಧಾತುಗಳಿಗೆ ವರ್ತಮಾನ ಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ವರ್ತಮಾನ ಕಾಲದ ಕ್ರಿಯಾಪದಗಳು ಎನಿಸುವುವು. ವರ್ತಮಾನ ಕಾಲದಲ್ಲಿ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾ: ತಿನ್ನುತ್ತಾನೆ, ಓದುತ್ತಾಳೆ, ಬರುತ್ತದೆ, ಹಾಡುತ್ತಾರೆ, ಬರೆಯುತ್ತಾರೆ.

ಭವಿಷ್ಯತ್ ಕಾಲ:

ಧಾತುಗಳಿಗೆ ಭವಿಷ್ಯತ್ ಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ಭವಿಷ್ಯತ್ ಕಾಲದ ಕ್ರಿಯಾಪದಗಳು ಎನಿಸುವುವು. ಭವಿಷ್ಯತ್ ಕಾಲದಲ್ಲಿ 'ವ' ಎಂಬ ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾ: ಬರುವನು, ಬರುವರು, ಹಾಡುವರು, ಬರೆಯುವರು, ತಿನ್ನುವನು.

ಭಾಗ – ಆ

ಕೆಳಗೆ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಸೂಚಕ ಕ್ರಿಯಾಪದವುಳ್ಳ ವಾಕ್ಯಗಳಿವೆ. ನೀವೂ ಈ ರೀತಿ ಮೂರು ಕಾಲಗಳನ್ನು ಸೂಚಿಸುವ ಕೆಲವು ವಾಕ್ಯಗಳನ್ನು ರಚಿಸಿರಿ.

1. ಮಾಸ್ತಿಯವರನ್ನು ಅವರ ನಿವಾಸದಲ್ಲಿ ಕಂಡೆ.
2. ನನ್ನ ದಿನಚರಿ ಪ್ರಾರಂಭವಾಗುತ್ತದೆ.
3. ನನ್ನ ದಿನಚರಿಯನ್ನು ಮುಂದೆ ಬರೆಯುವೆನು.

9th_Kannada_Reader Term III.indd 171 29-01-2019 16:41:06

ಗಾದೆ ವಿಸ್ತರಣೆ

ಜನಪದ ಸಾಹಿತ್ಯದ ಪ್ರಮುಖ ಭಾಗವಾಗಿರುವ ಗಾದೆಗಳು ಜನಸಾಮಾನ್ಯರ ಅನುಭವದ ಗಣಿಯಾಗಿದ್ದು 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಹಿರಿಮೆಗೆ ಪಾತ್ರವಾಗಿದೆ. ಆಕಾರದಲ್ಲಿ ವಾಮನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ. ಕನ್ನಡದಲ್ಲಿ 'ಗಾದೆ' ಪದಕ್ಕೆ ಸಂವಾದಿಯಾಗಿ 'ನಾಣ್ಣುಡಿ', 'ಸೂಕ್ತಿ', 'ಲೋಕೋಕ್ತಿ' ಎಂಬ ಪದಗಳೂ ಪ್ರಚಲಿತದಲ್ಲಿವೆ. ಸಂಭಾಷಣೆಯ ಮತ್ತು ಬರವಣಿಗೆಯ ಸಂದರ್ಭದಲ್ಲಿ ಸಮಯೋಚಿತವಾಗಿ ಗಾದೆಗಳನ್ನು ಬಳಸುವುದರಿಂದ ಸಾಹಿತ್ಯ ಸೌಂದರ್ಯ ಹೆಚ್ಚುವುದಲ್ಲದೆ, ಹೇಳಬೇಕೆಂದಿರುವ ವಿಷಯವನ್ನು ಮನಮುಟ್ಟುವಂತೆ ರಸವತ್ತಾಗಿ ಹೇಳಲು ಸಾಧ್ಯವಾಗುತ್ತದೆ. ಗಾದೆಗಳ ಸಂಗ್ರಹಣೆ ಒಂದು ಉತ್ತಮ ಹವ್ಯಾಸವಾಗಿದೆ. ಗಾದೆಗಳ ಅಂತರಾರ್ಥವನ್ನು ಬಿಡಿಸಿ, ವಿವರಿಸಿ ಹೇಳುವುದನ್ನು 'ಗಾದೆ ವಿಸ್ತರಣೆ' ಎನ್ನಲಾಗುತ್ತದೆ. ನೀವು ಗಾದೆ ವಿಸ್ತರಿಸುವುದನ್ನು ಕಲಿಯಬೇಕು. ಅದಕ್ಕಾಗಿ ಇಲ್ಲಿ ಎರಡು ನಿದರ್ಶನಗಳನ್ನು ಕೊಡಲಾಗಿದೆ.

'ಕೈ ಕೆಸರಾದರೆ ಬಾಯಿ ಮೊಸರು'

ಇದೊಂದು ಅರ್ಥಪೂರ್ಣವಾದ ಎಲ್ಲರಿಗೂ ಅನ್ವಯವಾಗುವ ಮಾತು. 'ಕಷ್ಟಪಟ್ಟರೆ ಫಲವುಂಟು', 'ಆಳಾಗಿ ದುಡಿ, ಅರಸಾಗಿ ಉಣ್ಣು' ಎಂಬುವ ಅರ್ಥದ ದೃಷ್ಟಿಯಿಂದ ಈ ಗಾದೆಗೆ ಪರ್ಯಾಯ ಗಾದೆಗಳಾಗಿವೆ. ಬದುಕು ಸಾರ್ಥಕವಾಗುವುದು ದುಡಿಮೆಯಿಂದ. ದುಡಿಮೆಯಲ್ಲಿ ಮೇಲು–ಕೀಳು ಎಂಬುದಿಲ್ಲ. ಶ್ರದ್ಧೆಯಿಂದ, ಪರಿಶ್ರಮದಿಂದ ದುಡಿಮೆ ಮಾಡಿದಾಗ ಅದು ನಮಗೆ ಉತ್ತಮ ಫಲವನ್ನು ಕೊಡುತ್ತದೆ. ನಮ್ಮನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತದೆ. ಬದುಕಿನ ಕಷ್ಟ–ನಷ್ಟಗಳನ್ನು ನಮ್ಮ ಅರಿವಿಗೆ ತಂದು, ನಮ್ಮನ್ನು ದೈಹಿಕವಾಗಿಯೂ, ಮಾನಸಿಕವಾಗಿಯೂ ಸದೃಢರನ್ನಾಗಿ ಮಾಡುತ್ತದೆ. ಈ ಗಾದೆಯು ವ್ಯಕ್ತಿ ಮತ್ತು ದೇಶದ ಅಭಿವೃದ್ಧಿಯ ಕೀಲಿಕೈಯಾಗಿದೆ. ಶ್ರಮಪಟ್ಟು ದುಡಿಯೋಣ, ಖುಷಿಯಾಗಿ ಬಾಳೋಣ.

'ಅತಿಯಾಸೆ ಗತಿಗೇಡು'

ಇದೊಂದು ಜನಪ್ರಿಯವಾದ ಅರ್ಥಪೂರ್ಣವಾಗಿರುವ ಗಾದೆಯಾಗಿದೆ. ಮನುಷ್ಯನಿಗೆ ಆಸೆ ಇರಬೇಕು. ಆಸೆ ಇಲ್ಲದೆ ಸಂತೋಷವೂ ಇಲ್ಲ, ಸಾಧನೆಯೂ ಇಲ್ಲ. ಆದರೆ ಆಸೆ ನಮ್ಮ ಸಾಮರ್ಥ್ಯದ ಮಿತಿಯೊಳಗಿರಬೇಕು. ಮಿತಿಮೀರಿದ ಆಸೆ ದುಃಖವನ್ನು, ನಷ್ಟವನ್ನೂ ಉಂಟುಮಾಡುತ್ತದೆ. ಬದುಕಿನಲ್ಲಿ ನಮ್ಮನ್ನು ನಿರಾಶವಾದಿಗಳನ್ನಾಗಿ ಮಾಡಿಬಿಡುತ್ತದೆ. ಅತಿ ಎಂಬುದು ಎಲ್ಲಿಯೂ ಒಳ್ಳೆಯದಲ್ಲ. ಸುಂದರ ಬದುಕಿಗೆ ನಾವು ಅಳವಡಿಸಿಕೊಳ್ಳಬೇಕಿರುವ ಸೂತ್ರ ಮಿತಿ ಎಂಬುದನ್ನು ಈ ಗಾದೆ ಸೂಚ್ಯವಾಗಿ ತಿಳಿಸುತ್ತದೆ. ಅತಿಯಾಸೆ ಪಟ್ಟು ನಷ್ಟಕ್ಕೀಡಾಗಿ ದುಃಖಿಗಳಾದ ಜನರನ್ನು ನಮ್ಮ ಸುತ್ತ ಮುತ್ತ ಕಾಣಬಹುದು. ಆದ್ದರಿಂದ ನಾವು ಅತಿಯಾಸೆಯನ್ನು ಬಿಟ್ಟು ಇದ್ದುದರಲ್ಲಿ, ದೊರಕಿದುದರಲ್ಲಿ ಸುಖ, ಸಂತೋಷ ಮತ್ತು ನೆಮ್ಮದಿಯನ್ನು ಕಾಣವುದು ಉತ್ತಮ.

ಕೆಳಕಂಡ ಗಾದೆಗಳನ್ನು ವಿಸ್ತರಿಸಿ ಬರೆಯಿರಿ:

1. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.
2. ದೇಶ ಸೇವೆಯೇ ಈಶ ಸೇವೆ.
3. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.
4. ಆರೋಗ್ಯವೇ ಭಾಗ್ಯ.
5. ತಾಳಿದವನು ಬಾಳಿಯಾನು.

9th_Kannada_Reader Term III.indd 172 29-01-2019 16:41:06

ಪತ್ರ ಲೇಖನ

ಹತ್ತಿರದಲ್ಲಿ ಇರುವವರೊಡನೆ ಸಂಭಾಷಣೆಯ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಆದರೆ ದೂರದಲ್ಲಿ ಅಥವಾ ಪರಸ್ಥಳದಲ್ಲಿರುವವರ ಜೊತೆಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಪತ್ರಲೇಖನ ಪ್ರಾರಂಭವಾಯಿತು. ಇತ್ತೀಚೆಗೆ ದೂರವಾಣಿ, ಎಸ್.ಎಂ.ಎಸ್., ಇ–ಅಂಚೆ ಮುಂತಾದ ಆಧುನಿಕ ಸೌಲಭ್ಯಗಳಿದ್ದರೂ ಪತ್ರ ವ್ಯವಹಾರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪತ್ರಗಳಲ್ಲಿ 'ಖಾಸಗಿ ಪತ್ರ' ಹಾಗೂ 'ವ್ಯವಹಾರಿಕ ಪತ್ರ' ಎಂಬುದಾಗಿ ಎರಡು ವಿಧಗಳಿವೆ. ಅವುಗಳ ರಚನಾ ಕ್ರಮವನ್ನು ನಿಮಗಿಲ್ಲಿ ಪರಿಚಯಿಸಲಾಗಿದೆ.

ಖಾಸಗಿ ಪತ್ರ / ವೈಯಕ್ತಿಕ ಪತ್ರ

ವೈಯಕ್ತಿಕ ಪತ್ರಗಳನ್ನು ಬಂಧುಗಳಿಗೆ, ಸ್ನೇಹಿತರಿಗೆ ಬರೆಯುತ್ತೇವೆ. ಈ ಪತ್ರಗಳಲ್ಲಿ ಆರೋಗ್ಯ, ವಿದ್ಯಾಭ್ಯಾಸ, ದುಡಿಮೆ, ಹಣಕಾಸಿನ ಸ್ಥಿತಿಗತಿ, ಕಷ್ಟಸುಖ, ಹಬ್ಬಹರಿದಿನಗಳು, ಮದುವೆ ಮತ್ತಿತರೆ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯಗಳಾಗುತ್ತವೆ.

ವ್ಯವಹಾರಿಕ ಅಥವಾ ಮನವಿ ಪತ್ರ

ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ನಗರಸಭೆ, ಪಂಚಾಯಿತಿಗಳು, ಗ್ರಂಥಾಲಯ, ಉದ್ಯಮಿಗಳು, ಸರ್ಕಾರಿ ಕಛೇರಿ ಇತ್ಯಾದಿ ಸಂಸ್ಥೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳ ಜೊತೆ ನಡೆಸುವ ಪತ್ರ ವ್ಯವಹಾರಗಳನ್ನು 'ವ್ಯವಹಾರಿಕ ಪತ್ರಗಳು' ಅಥವಾ 'ಮನವಿ ಪತ್ರಗಳು' ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಎಲ್ಲಾ ಪತ್ರಗಳು ವಿಳಾಸ, ದಿನಾಂಕ, ದೂರವಾಣಿ ಸಂಖ್ಯೆ, ಸಂಬೋಧನೆ, ವಿಷಯ ವಿವರಣೆ, ಮುಕ್ತಾಯದ ಭಾಗ, ಪತ್ರ ಬರೆದವರ ಸಹಿ, ಹೊರ ವಿಳಾಸ ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುತ್ತವೆ.

ಖಾಸಗಿ ಪತ್ರ / ವೈಯಕ್ತಿಕ ಪತ್ರ

ದಿನಾಂಕ: 05–05–2018

ಕೀರ್ತಿಕುಮಾರ
ಒಂಬತ್ತನೆಯ ತರಗತಿ,
ಸರಕಾರಿ ಪ್ರೌಢಶಾಲೆ,
ಶ್ರೀರಂಗಪಟ್ಟಣ – 571 438.

ತೀರ್ಥರೂಪರವರಿಗೆ ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ. ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೆಂದರೆ, ಜೂನ್ 10ನೇ ತಾರೀಖಿನ ಒಳಗಾಗಿ ವಾರ್ಷಿಕ ಪರೀಕ್ಷೆಯ ಶುಲ್ಕ 150/– (ನೂರ ಐವತ್ತು ಮಾತ್ರ) ರೂಪಾಯಿಗಳನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳುಹಿಸಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗ

ಕೀರ್ತಿಕುಮಾರ

ಇವರಿಗೆ:
ಶ್ರೀ ಸಿದ್ದಪ್ಪ,
ಮನೆ ಸಂಖ್ಯೆ 54, 1ನೇ ಮುಖ್ಯ ರಸ್ತೆ,
ಕುವೆಂಪುನಗರ, ಮೈಸೂರು – 573 201

9th_Kannada_Reader Term III.indd 173 29-01-2019 16:41:06

ವ್ಯವಹಾರಿಕ ಅಥವಾ ಮನವಿ ಪತ್ರ

ಇವರಿಂದ,

ದಿನಾಂಕ ೦೫–೦೫–೨೦೧೮

ಶ್ರೀ ಸಂಗಮೇಶ,
ನೇತಾಜಿ ಬೀದಿ,
ತಾಳವಾಡಿ ತಾ॥
ಈರೋಡು ಜಿಲ್ಲೆ.

ಇವರಿಗೆ,

ಜಿಲ್ಲಾಧಿಕಾರಿಗಳು,
ಈರೋಡು
ಈರೋಡು ಜಿಲ್ಲೆ 638461

ಮಾನ್ಯರೇ,

ವಿಷಯ: ನೇತಾಜಿ ಬೀದಿಗೆ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ನೇತಾಜಿ ಬೀದಿಯಲ್ಲಿ ಸುಮಾರು 60 ಮನೆಗಳಿದ್ದು ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್‌ವೆಲ್ ಹಾಕಿಸಿ, ನಲ್ಲಿಯ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಸಂಗಮೇಶ)

ಸ್ಥಳ: ತಾಳವಾಡಿ

9th_Kannada_Reader Term III.indd 174 29-01-2019 16:41:06

Kannada Reader - Class 9
Text Book Development Team

Reviewer
Dr. TAMIL SELVI
Professor and Head
Department of Kannada
University of Madras,
Chennai – 600 005.

Co-ordinator
Mr. K. CHANDRASEKARAN
Lecturer, DIET, Chennai - 600 005.

Authors
Mr. K. KUMAR ACHAR
P.G. Asst. in Kannada
Karnataka Sangha Hr. Sec. School
T.Nagar, Chennai - 600 017.

Mr. C. SADASHIVA MURTHY
P.G. Asst. in Kannada
Govt. Hr. Sec. School
Thalavadi, Erode Dt. 638 461.

Mr. N.BASAVARAJU
B.T. Asst. in Kannada
Govt. Hr. Sec. School
Thalavadi, Erode Dt. 638 461

Mr. JOHNSON SUKUMAR
B.T. Asst. in Kannada
Govt. Hr. Sec. School
Panaka Halli
Thalavadi, Erode Dt. 638 461

Mr. T.R. KANNAN
B.T. Asst. in Kannada
Govt. Hr. Sec. School
Madhagondapalli, Krishnagiri Dt. 635 114

Mr. K. ANTHONY MUTHU
B.T. Asst. in Kannada
Govt. Hr. Sec. School
Thalavadi, Erode Dt. 638 461.

Art and Design Team

Illustration
Gandi Rajan
S.V. Gokulakrishnan
S. Gowtham
K. Dhanas Deepak Rajan
K. Nalan Nancy Rajan

Layout
Gopu Rasuvel
Yogesh
Madhan
Adison Raj
Prasanth

Wrapper Design
Kathir Arumugam

QC
Manohar Radhakrishnan

Co-ordination
Ramesh Munisamy

This book has been printed on 80 G.S.M.
Elegant Maplitho paper.

Printed by offset at:

9th_Kannada_Reader Term III.indd 175 29-01-2019 16:41:06

NOTES

9th_Kannada_Reader Term III.indd 176 29-01-2019 16:41:06

NOTES

9th_Kannada_Reader Term III.indd 177 29-01-2019 16:41:06

NOTES

9th_Kannada_Reader Term III.indd 178 29-01-2019 16:41:06

NOTES

9th_Kannada_Reader Term III.indd 179 29-01-2019 16:41:06

NOTES

9th_Kannada_Reader Term III.indd 180 29-01-2019 16:41:06